ಮಂಗಳೂರು
ಮಂಗಳವಾರ, 19 ಮೇ 2026
ಸಂಪುಟ 48, ಸಂಚಿಕೆ 61, ಪುಟಗಳು 12+6
ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ರಾಜ್ಯ ಸರ್ಕಾರಕ್ಕೆ 3 ವರ್ಷ
ಇಂದು ಸಾಧನೆಯ ಸಂಭ್ರಮ
• ಪುಟ ೩

ಕಿರುಸುದ್ದಿ

ಮರುಮೌಲ್ಯಮಾಪನ : ಬಲ್ಲಾಡಿಯ ಪ್ರತೀಕ್ಷಾ ಕುಲಾಲ್ ಹೆಬ್ರಿ ತಾಲೂಕಿಗೆ ಪ್ರಥಮ

ಹೆಬ್ರಿ: 2025–26 ನೆ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮರುಮೌಲ್ಯಮಾಪನದ ನಂತರ ಗಣಿತದಲ್ಲಿ 7 ಅಂಕಗಳನ್ನು ಹೆಚ್ಚುಪಡೆದು ಒಟ್ಟು 611 ಅಂಕಗಳನ್ನು ಗಳಿಸಿ 97.76 % ಫಲಿತಾಂಶದೊಂದಿಗೆ ಪ್ರತೀಕ್ಷಾ ಕುಲಾಲ್ ಹೆಬ್ರಿ ತಾಲೂಕಿಗೆ ದ್ವಿತೀಯ ಸ್ಥಾನ ಹಾಗೂ ಕನ್ನಡ ಮಾಧ್ಯಮದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.



ಅಲ್ಲದೆ ಕಾರ್ಕಳ ಶಿಕ್ಷಣ ವಲಯದಲ್ಲಿ ಕನ್ನಡ ಮಾಧ್ಯಮದಲ್ಲಿ ತೃತೀಯ ಸ್ಥಾನವನ್ನು ಪಡೆದಿದ್ದಾಳೆ. ಮುದ್ರಾಡಿ ವಿದ್ಯಾಸಾಗರ ಎಜುಕೇಶನ್ ಟ್ರಸ್ಟ್ ವತಿಯಿಂದ ನಡೆಸಲ್ಪಡುವ ಎಂಎನ್ ಡಿಎಸ್‌ಎಂ ಅನುದಾನಿತ ಪ್ರೌಢಶಾಲೆಯ ಕನ್ನಡ ಮಾಧ್ಯಮದ ವಿದ್ಯಾರ್ಥಿನಿಯಾಗಿರುವ ಈಕೆಯು ಬಡ ಕೂಲಿ ಕಾರ್ಮಿಕರಾದ ಬಲ್ಲಾಡಿ ಎಲ್ಸ್ ಬೆಟ್ಟು ಜಯ ಕುಲಾಲ್ ಮತ್ತು ಸುಧಾ ಕುಲಾಲ್ ದಂಪತಿಯ ಪುತ್ರಿ.

ಮರುಮೌಲ್ಯಮಾಪನ: ಧನ್ಯಶ್ರೀ ಜೋಗಿ ಶಾಲೆಯಲ್ಲೆ ಪ್ರಥಮ



ಕೋಟ: ಇಲ್ಲಿನ ಕೋಟದ ವಿವೇಕ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ಧನ್ಯಶ್ರೀ ಜೋಗಿ ಗಣಿತ ಪರೀಕ್ಷೆಯ ಮರು ಮೌಲ್ಯಮಾಪನ 13 ಹೆಚ್ಚುವರಿ ಅಂಕ ಪಡೆದುಕೊಂಡರು. ಹಾಗೆಯೇ ಒಟ್ಟು ಅಂಕದಲ್ಲಿ 607 ಪಡೆದು ವಿವೇಕ ಬಾಲಕಿಯರ ಪ್ರೌಢಶಾಲೆಗೆ ಪ್ರಥಮ ಸ್ಥಾನವನ್ನು ಪಡೆದಿದ್ದಾಳೆ.

ಸ್ನೇಹಿತೆಯ ಮದುವೆಗೆ ತೆರಳಿದ್ದ ಯುವತಿ ನಾಪತ್ತೆ

ಕುಂಬಳೆ: ಸ್ನೇಹಿತೆಯ ಮದುವೆಗೆ ಹೋದ ಯುವತಿ ಮರಳಿ ಬಂದಿಲ್ಲ ಎಂದು ಆಕೆಯ ತಾಯಿ ಕುಂಬಳೆ ಪೊಲೀಸರಿಗೆ ದೂರು ನೀಡಿದ್ದಾರೆ. ಸೀತಾಂಗೋಳಿ ಪೆರ್ಣೆ ಎಡನಾಡಿನ ಕರುಣಾಕರ ಎಂಬವರ ಪತ್ನಿ ವನಿತಾ ಎಂಬವರು ಈ ಕುರಿತು ದೂರು ನೀಡಿದ್ದು, ಅದರಂತೆ ಕೇಸು ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಮೇ 6ರಂದು ಮಧ್ಯಾಹ್ನ 1ಗಂಟೆಗೆ ಸ್ನೇಹಿತೆಯ ಮದುವೆಗೆಂದು ತಿಳಿಸಿ ಪುತ್ರಿ ಕಾವ್ಯಾ (19) ಮನೆಯಿಂದ ತೆರಳಿದ್ದರು. ಆದರೆ ಮದುವೆ ಕಳೆದ 10 ದಿನಗಳಾದರೂ ಮರಳಿಲ್ಲ ಎಂದು ತಾಯಿ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ತಳ್ಳಾಟ ನೂಕಾಟದಲ್ಲಿ ವ್ಯಕ್ತಿ ಸಾವು: ನಿವೃತ್ತ ಪೊಲೀಸ್ ಸಿಬ್ಬಂದಿ ಪೊಲೀಸ್ ವಶಕ್ಕೆ

ಕುಶಾಲನಗರ: ಹಣಕಾಸಿನ ವಿಚಾರದಲ್ಲಿ ಸಂಬಂಧಿಕರ ನಡುವೆ ನಡೆದ ತಳ್ಳಾಟ ನೂಕಾಟದಲ್ಲಿ ತಲೆಗೆ ಘಾಸಿಗೊಂಡು ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ಕೂಡಿಗೆಯಲ್ಲಿ ನಡೆದಿದೆ. ಶಿರಂಗಾಲದ ಗ್ರಾಮ ಪಂಚಾಯತ್‌ನ ಮೂಡಲಕೊಪ್ಪಲು ಗ್ರಾಮದ ನಿವಾಸಿ ಕೂಡಿಗೆ ಡೇರಿ ನಿವೃತ್ತ ನೌಕರ ಶಿವನಂಜಪ್ಪ (63) ಮೃತ ದುರ್ದೈವಿ. ಮೃತರ ಅಕ್ಕನ ಮಗ ನಿವೃತ್ತ ಪೊಲೀಸ್ ಸಿಬ್ಬಂದಿ ಶ್ರೀನಿವಾಸ್ ನಡುವೆ ಹಣಕಾಸಿನ ವಿಚಾರಕ್ಕೆ ನಡೆದ ಜಟಾಪಟಿ ಸಂದರ್ಭ ಕೂಡಿಗೆ ಸಮೀಪದಲ್ಲಿರುವ ಹಾರಂಗಿ ನದಿಯ ಸೇತುವೆಯ ಮೇಲಿರುವ ಕಬ್ಬಿಣದ ರಾಡುಗಳಿಗೆ ತಲೆ ಬಡಿದು ನೆಲಕ್ಕೆ ಬಿದ್ದ ಪರಿಣಾಮವಾಗಿ ಶಿವನಂಜಪ್ಪ ಅವರ ತಲೆಗೆ ಗಂಭೀರ ಘಾಸಿಯಾಗಿ ಮೃತಪಟ್ಟಿದ್ದಾರೆ. ಪ್ರಕರಣವು ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಉಡುಪಿ: ಫೀಡರ್ ಮಾರ್ಗದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಿನ್ನಲೆಯಲ್ಲಿ ಮೇ 19ರಂದು ಬೆಳಿಗ್ಗೆ 9ರಿಂದ ಸಂಜೆ 4:30ರವರೆಗೆ ಉಡುಪಿ ನಗರ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮಟ್ಟಾರ್ ಸಂತಾಪ

ಉಡುಪಿ: ಹಿರಿಯ ಕೈಗಾರಿಕೋದ್ಯಮಿ, ಸಮಾಜ ಸೇವಕರು, ಬಂಟಸಮಾಜದ ಪ್ರಮುಖರಾಗಿದ್ದ, ಮಹಾ ಪೋಷಕರಾದ ಬಾರ್ಕೂರು ಸುಧಾಕರ ಶೆಟ್ಟಿಯವರ ನಿಧನಕ್ಕೆ ಉಡುಪಿಯ ಹಿರಿಯ ನ್ಯಾಯವಾದಿ ಮತ್ತು ಕರ್ನಾಟಕ ಸರಕಾರದ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಟ್ಟಾರ್ ರತ್ನಾಕರ್ ಹೆಗ್ಡೆ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ. ಇವರ ನಿಧನದಿಂದ ಸಮಾಜಕ್ಕೆ ಅಪಾರ ನಷ್ಟ ಉಂಟಾಗಿದೆಯೆಂದು ಹೆಗ್ಡೆಯವರು ತಮ್ಮ ಸಂತಾಪ ಸೂಚಕದಲ್ಲಿ ತಿಳಿಸಿದ್ದಾರೆ.



ಕೇರಳದಲ್ಲಿ ಯುಡಿಎಫ್‌ನ ನೂತನ ಸರ್ಕಾರ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದೆ. ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರು ಪ್ರಮಾಣವಚನ ಸ್ವೀಕಾರ ಬಳಿಕ ನೆರೆದಿದ್ದ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರನ್ನೇ ಯಾಮಾರಿಸಿದ ಬುರ್ಖಾಧಾರಿಗಳು: ಯಶ್‌ಪಾಲ್ ಸುವರ್ಣ

ಉಡುಪಿ: ಬುರ್ಖಾಧಾರಿ ಮಹಿಳೆಯರು ಜಿಲ್ಲಾ ಉಸ್ತುವಾರಿ ಸಚಿವರನ್ನೇ ತಪ್ಪು ಮಾಹಿತಿ ನೀಡಿ ಯಾಮಾರಿಸಿದ್ದಾರೆ ಎಂದು ಶಾಸಕ ಯಶ್ ಪಾಲ್ ಸುವರ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ. ತನ್ನ ಸ್ವಂತ ತಾಯಿಯನ್ನೇ ನೆರೆಮನೆಯವರು ಎಂದು ಹೇಳುವ ಮೂಲಕ ತಪ್ಪು ಮಾಹಿತಿ ನೀಡುವುದು ಅಕ್ಷಮ್ಯ. ಜಿಲ್ಲೆಗೆ ಅತಿಥಿಯಾಗಿ ಆಗಮಿಸುವ ಉಸ್ತುವಾರಿ ಸಚಿವರು ಬಿಜೆಪಿ ಜನಪ್ರತಿನಿಧಿಗಳನ್ನು ಕಾಮಾಲೆ ಕಣ್ಣಿನಿಂದ ನೋಡುತ್ತಾರೆ ಹಾಗೂ ಕೋಮುವಾದಿಗಳು ಎಂಬಂತೆ ಬಿಂಬಿಸಲು ಹೊರಟಿದ್ದಾರೆ ಎಂಬುದಕ್ಕೆ ಇದೇ ಸಾಕ್ಷಿ. ಘಟನೆಯ ಸತ್ಯಾಸತ್ಯತೆ ತಿಳಿಯದೆ ಮಾಧ್ಯಮದ ಎದುರು ಬಿಜೆಪಿ ಪಕ್ಷಕ್ಕೆ ಸೌಹಾರ್ದತೆಯ ಪಾಠ ಮಾಡಲು ಹೋಗಿ ಉಸ್ತುವಾರಿ ಸಚಿವರು ಪೇಚಿಗೆ ಸಿಲುಕಿದ್ದಾರೆ ಎಂದರು.



ಈ ಘಟನೆಯ ಬಗ್ಗೆ ಉನ್ನತಮಟ್ಟದ ತನಿಖೆಯ ಅಗತ್ಯವಿದೆ. ಸ್ವಂತ ತಾಯಿಯನ್ನೇ ನೆರೆಮನೆಯವ್ರೆಂದು ಹೇಳುವ ಹಿಜಾಬ್ ಬುರ್ಖಾಧಾರಿ ಮಹಿಳೆಯರ ಮನಸ್ಥಿತಿಯನ್ನು ಜಿಲ್ಲೆಯ ಪ್ರಜ್ಞಾವಂತ ಸಮಾಜ ಗಂಭೀರವಾಗಿ ಪರಿಗಣಿಸಬೇಕಿದೆ. ಉಡುಪಿ ಜಿಲ್ಲೆಯ ಐದು ಮಂದಿ ಬಿಜೆಪಿ ಶಾಸಕರು ಜಿಲ್ಲೆಯ ಸಂಸದರು ಎಂದಿಗೂ ತಮ್ಮ ಕಚೇರಿಗೆ ಆಗಮಿಸಿದವರ ಜಾತಿ ಮತ ಕೇಳಿಲ್ಲ ಯಾವತ್ತು ತಾರತಮ್ಯ ಮಾಡಿಲ್ಲ ಎಂದರು. ಆದರೆ ರಾಷ್ಟ್ರೀಯತೆ ವಿಚಾರದಲ್ಲಿ ಮತೀಯವಾದ ಶಕ್ತಿಗಳು ಹಾಗೂ ಹಿಂದುತ್ವ ವಿರೋಧಿಗಳ ಬಗ್ಗೆ ಎಂದಿಗೂ ರಾಜಿ ಮಾಡಿಕೊಂಡಿಲ್ಲ, ಮುಂದೆಯೂ ರಾಜಿ ಮಾಡಲು ಸಿದ್ಧವಿಲ್ಲ. ಈ ಘಟನೆಯನ್ನು ಗಮನಿಸಿದಾಗ ಮುಂದಿನ ದಿನಗಳಲ್ಲಿ ಸರಕಾರಿ ಕಚೇರಿಗಳಲ್ಲಿ ಬುರ್ಖಾ ಹಾಗೂ ಹಿಜಾಬ್ ಧರಿಸುವ ವ್ಯಕ್ತಿಗಳ ಬಗ್ಗೆ ವಿಶೇಷ ನಿಗ ವಹಿಸುವ ಸನ್ನಿವೇಶ ನಿರ್ಮಾಣವಾಗಲಿದೆ. ಘಟನೆಯ ಸತ್ಯತೆ ತಿಳಿಯದೆ ಬಿಜೆಪಿ ವಿರುದ್ಧ ಅಪಮಾನಕರ ಹೇಳಿಕೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರು ತಕ್ಷಣ ಕ್ಷಮೆಯಾಚಿಸಬೇಕು. ಉಸ್ತುವಾರಿ ಸಚಿವರ ಇಂತಹ ಬೇಜವಾಬ್ದಾರಿ ಹೇಳಿಕೆಗಳು ಮುಂದುವರಿದರೆ ಜಿಲ್ಲಾ ಬಿಜೆಪಿ ವತಿಯಿಂದ ಮುಂದಿನ ಬಾರಿ ಭೇಟಿ ನೀಡಿ ಸಂದರ್ಭದಲ್ಲಿ ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಲಿದೆ ಎಂದು ಶಾಸಕರು ಎಚ್ಚರಿಸಿದ್ದಾರೆ.

ಗಿರಿಜನರ ಪಾಲಿಗೆ ಹೊಸ ಭರವಸೆಯಾದ ನಕ್ಸಲ್ ನಿಗ್ರಹ ಪಡೆ
ರಕ್ಷಕರ ಕಾಳಜಿಗೆ ಜನತೆ ಫಿದಾ!

ದಿಗಂತ ವಿಶೇಷ

ಉಡುಪಿ: ನಕ್ಸಲ್ ಪೀಡಿತ ದುರ್ಗಮ ಹಾಗೂ ಗಿರಿಜನ ಪ್ರದೇಶಗಳ ಜನರ ಆರೋಗ್ಯ ಸುಧಾರಿಸುವ ನಿಟ್ಟಿನಲ್ಲಿ ಕರ್ನಾಟಕ ನಕ್ಸಲ್ ನಿಗ್ರಹ ಪಡೆ ಆಯೋಜಿಸಿದ್ದ ಉಚಿತ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರಗಳು ಒಟ್ಟು 776 ಗಿರಿಜನರ ಪಾಲಿಗೆ ಹೊಸ ಭರವಸೆಯಾಗಿ ಮೂಡಿಬಂದಿವೆ.

ಉಡುಪಿ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಅತ್ಯಂತ ಹಿಂದುಳಿದ ಗ್ರಾಮೀಣ ಭಾಗಗಳಲ್ಲಿ ಹಂತ–ಹಂತವಾಗಿ ಈ ಬೃಹತ್ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಮೂಲಭೂತ ಸೌಕರ್ಯ ಹಾಗೂ ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಿದ್ದ ಮಲೆಕುಡಿಯ, ಹಸಲಾರು, ಗೌಡ್ಲು, ಕಾಡುಕುರುಬ, ಜೇನುಕುರುಬ, ಸೋಲಿಗ, ಎರವ ಮತ್ತು ಕುಡಿಯ ಸಮುದಾಯಕ್ಕೆ ಸೇರಿದ 776 ಜನರಿಗೆ ಈ ಶಿಬಿರಗಳು ಆಸರೆಯಾಗಿವೆ. ವಾಹನ ಸಂಚಾರವೇ ಇಲ್ಲದ ದುರ್ಗಮ ಬೆಟ್ಟ–ಗುಡ್ಡಗಳ ಹಳ್ಳಿಗಳಿಂದ ಗಿರಿಜನರನ್ನು ಶಿಬಿರಕ್ಕೆ ಕರೆತರಲು ಎಎನ್‌ಎಫ್ ತನ್ನ ಇಲಾಖೆಯ ವಾಹನಗಳನ್ನೇ ನಿಯೋಜಿಸಿ, ತಪಾಸಣೆಯ ನಂತರ ಸುರಕ್ಷಿತವಾಗಿ ಮರಳಿ ಮನೆಗೆ ತಲುಪಿಸುವ ಮೂಲಕ ಮಾನವೀಯತೆ ಮೆರೆದಿದೆ.

ರಾಜ್ಯದ ಖ್ಯಾತ ವೈದ್ಯಕೀಯ ಸಂಸ್ಥೆಗಳಾದ ಕಸ್ತೂರ್ಬಾ ವೈದ್ಯಕೀಯ ಕಾಲೇಜು (ಮಣಿಪಾಲ), ಪ್ರಸಾದ್ ನೇತ್ರಾಲಯ ಸೇರಿದಂತೆ ವಿವಿಧ ಆಸ್ಪತ್ರೆಗಳ 50 ರಿಂದ 60 ತಜ್ಞ ವೈದ್ಯರು ಶಿಬಿರದಲ್ಲಿ ಪಾಲ್ಗೊಂಡು ಕಣ್ಣು, ಹಲ್ಲು, ಹೃದಯರೋಗ, ಸ್ತ್ರೀರೋಗ ಹಾಗೂ ಕ್ಯಾನ್ಸರ್ ಸ್ಕ್ರೀನಿಂಗ್ ಸೇರಿದಂತೆ ಸಮಗ್ರ ಚಿಕಿತ್ಸೆ ನೀಡಿದ್ದಾರೆ.

ಶಿಬಿರದಲ್ಲಿ 499 ಜನರಿಗೆ ನೇತ್ರ ತಪಾಸಣೆ ನಡೆಸಿ ಉಚಿತ ಕನ್ನಡಕ ಹಾಗೂ 6 ಜನರಿಗೆ ಉಡುಪಿಯಲ್ಲಿ ಯಶಸ್ವಿ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಸಲಾಗಿದೆ. ಅಲ್ಲದೆ 714 ಜನರಿಗೆ ಸಾಮಾನ್ಯ ರೋಗಗಳ ತಪಾಸಣೆ ನಡೆಸಿ ಉಚಿತ ಔಷಧಿ ವಿತರಿಸಲಾಗಿದೆ.





ಆರೋಗ್ಯದ ಬೆಳಕು

ಕೇವಲ ಶಿಬಿರ ನಡೆಸುವುದಷ್ಟೇ ಅಲ್ಲದೆ, ಮುಂದಿನ ಉನ್ನತ ಚಿಕಿತ್ಸೆ ಅಥವಾ ಶಸ್ತ್ರಚಿಕಿತ್ಸೆಯ ಅಗತ್ಯವಿರುವ ಗಿರಿಜನರನ್ನು ಎಎನ್‌ಎಫ್ ಪಡೆ ನಿರಂತರವಾಗಿ ಫಾಲೋ–ಅಪ್ ಮಾಡುತ್ತಿದ್ದು, ಪಾಲುದಾರ ಆಸ್ಪತ್ರೆಗಳ ಮೂಲಕ ಸಂಪೂರ್ಣ ಉಚಿತ ಮುಂದುವರಿದ ಚಿಕಿತ್ಸೆ ಸಿಗುವಂತೆ ನೋಡಿಕೊಳ್ಳುತ್ತಿದೆ. ನಕ್ಸಲ್ ನಿಗ್ರಹ ಪಡೆಯ ಈ ಅಪೂರ್ವ ಜನಪರ ಕಾರ್ಯವು ಗಿರಿಜನರ ಬದುಕಿನಲ್ಲಿ ಆರೋಗ್ಯದ ಬೆಳಕು ಮೂಡಿಸಿದೆ.

ಮೇ 22ರಂದು ತುಳು ಸಿನೆಮಾ ಗಜಾನನ ಕ್ರಿಕೆಟರ್ಸ್ ತೆರೆಗೆ

ಮಂಗಳೂರು: ಪ್ರಜ್ವಲ್ ಫಿಲಂಸ್ ಲಾಂಛನದಲ್ಲಿ ತಯಾರಾದ ಪ್ರಜ್ವಲ್ ಶೆಟ್ಟಿ ನಿರ್ಮಾಣ ಹಾಗೂ ಕೀರ್ತನ್ ಭಂಡಾರಿ ನಿರ್ದೇಶನದ 'ಗಜಾನನ ಕ್ರಿಕೆಟರ್ಸ್ (ಜಂತೊಟ್ಟು ಸಿನ್ಸ್ 1983)' ತುಳು ಚಲನಚಿತ್ರವು ಮೇ 22 ರಂದು ಕರಾವಳಿ ಜಿಲ್ಲೆಯಾದ್ಯಂತ ತೆರೆಕಾಣಲಿದೆ.

ಮಂಗಳೂರು, ಸುರತ್ಕಲ್, ಪಡುಬಿದ್ರೆ, ಉಡುಪಿ, ಕುಂದಾಪುರ, ಮಣಿಪಾಲ ಕಾರ್ಕಳ, ಪುತ್ತೂರು, ಬೆಳ್ತಂಗಡಿ, ದೇರಳಕಟ್ಟೆ ಮೊದಲಾದ ಕಡೆಗಳಲ್ಲಿ ಸಿನಿಮಾ ಬಿಡುಗಡೆಗೊಳ್ಳಲಿದೆ.

ಇದು ತುಳು ಭಾಷೆಯಲ್ಲಿನ ದೊಡ್ಡ ಬಜೆಟ್ ಚಿತ್ರವಾಗಿದ್ದು, ಕ್ರಿಕೆಟ್ ಮತ್ತು ಆಟಗಾರರ ಬದುಕಿನ ಹಿನ್ನಲೆ ಆಧಾರಿತ ಕತೆ ಹೊಂದಿದೆ. ಚಿತ್ರದಲ್ಲಿ ಹಾಸ್ಯ, ಪ್ರೇಮಪೂರಿತ ಭಾವನೆಗಳು ಮತ್ತು ಸಮಾಜಮುಖಿ ಸಂದೇಶವಿರುವ ಬಿಗು ಕತೆ ಒಳಗೊಂಡಿದೆ.

ಕೀರ್ತನ್ ಭಂಡಾರಿ ಅವರು ಕಥೆ, ಚಿತ್ರಕಥೆ ಬರೆದು ಮೊದಲ ಬಾರಿಗೆ ನಿರ್ದೇಶನ ಮಾಡಿದ್ದಾರೆ. ಮಂಗಳೂರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಚಿತ್ರೀಕರಣ ನಡೆದಿದೆ. ಈ ಚಿತ್ರದಲ್ಲಿ ನಿರ್ಮಾಪಕರಾದ ಪ್ರಜ್ವಲ್ ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.



ಚಿತ್ರದ ತಾರಾಗಣದಲ್ಲಿ ವಿನೀತ್ ಕುಮಾರ್, ನವೀನ್ ಡಿ. ಪಡೀಲ್, ಅರವಿಂದ ಬೋಳಾರ್, ಭೋಜರಾಜ್ ವಾಮಂಜೂರು, ದೀಪಕ್ ರೈ ಪಾಣಾಜೆ, ಪ್ರಕಾಶ್ ತುಮಿನಾಡು, ಉಮೇಶ್ ಮಿಜಾರು, ಅನ್ವಿತಾ ಸಾಗರ್, ಸಮತಾ ಅಮೀನ್, ಸರ್ವೋತ್ತಮ ಶೆಟ್ಟಿ ಅಬುದಾಭಿ, ವಾಲ್ಟರ್ ನಂದಳಿಕೆ, ಪ್ರಸನ್ನ ಶೆಟ್ಟಿ ಬೈಲೂರು, ಸಂದೀಪ್ ಶೆಟ್ಟಿ ಮಾಣಿಬೆಟ್ಟು, ಪುಷ್ಪರಾಜ್ ಬೊಳ್ಳಾರು, ರೂಪ ವರ್ಕಾಡಿ, ಲಂಚುಲಾಲ್, ಸಚಿನ್ ಮಾಡ, ಜೇಮ್ಸ್ ಮೆಂಡೋನ್ಸಾ, ಕರಣ್ ಪೂಜಾರಿ ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ.

ವಿನುತ್ ಕೆ. ಸುವರ್ಣ ಅವರ ಛಾಯಾಗ್ರಹಣ, ಸುಜಯ್ ಶಿವರಾಮ್ ಹಾಗೂ ಕೌಶಿಕ್ ಭಂಡಾರಿ ಅವರ ಸಂಕಲನ ಇದೆ. ಗೀತಾ ಸಾಹಿತ್ಯವನ್ನು ಕೀರ್ತನ್ ಭಂಡಾರಿ, ಸೃಜನ್ ಮಾನವ್, ಶ್ರೀನಿಧಿ ಶೆಟ್ಟಿ ರಚಿಸಿದ್ದಾರೆ.

ಸಹ ನಿರ್ಮಾಪಕರು: ರೋಹನ್ ಪಿರೇರ ವಾಮಂಜೂರು ಮತ್ತು ಸಂತೋಷ್ ಲಾಡ್, ಸಂಗೀತ: ಸೃಜನ್ ಕುಮಾರ್ ತೋನ್ಸೆ. ಚಿತ್ರದ ಟೀಸರ್ ಮತ್ತು ಹಾಡು ಬಿಡುಗಡೆಗೊಂಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ.

ಉಜಿರೆಯ ರುಡ್ ಸೆಟ್‌ನಲ್ಲಿ ಟಿ.ವಿ ಟೆಕ್ನಿಷಿಯನ್ ತರಬೇತಿ ಸಮಾರೋಪ



ಬೆಳ್ತಂಗಡಿ: ಇಂದಿನ ಮತ್ತು ಮುಂದಿನ ದಿನಗಳಲ್ಲಿ ಕೌಶಲ್ಯಕ್ಕೆ ಹೆಚ್ಚಿನ ಮಹತ್ವವಿದೆ. ತಾಂತ್ರಿಕ ಜ್ಞಾನ ಹೊಂದಿದ ಯುವಕರಿಗೆ ಉತ್ತಮ ಅವಕಾಶಗಳು ಲಭ್ಯವಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್, ಮುಂಬೈಯ ವಿಭಾಗೀಯ ಮಹಾ ಪ್ರಬಂಧಕಿ ಕರ್ಪಗಮ್ ಹೇಳಿದರು.

ಅವರು ಉಜಿರೆಯ ರುಡ್ ಸೆಟ್ ಸಂಸ್ಥೆಯಲ್ಲಿ ನಡೆದ ಟಿ.ವಿ ಟೆಕ್ನಿಷಿಯನ್ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಪ್ರಮಾಣಪತ್ರ ವಿತರಿಸಿದರು.

ತರಬೇತಿಗಾರರು ತಮ್ಮ ಕೌಶಲ್ಯವನ್ನು ನಿರಂತರವಾಗಿ ನವೀಕರಿಸಿಕೊಂಡು ಪ್ರಾಮಾಣಿಕತೆ ಮತ್ತು ಶಿಸ್ತಿನೊಂದಿಗೆ ಕಾರ್ಯನಿರ್ವಹಿಸಿದರೆ ಜೀವನದಲ್ಲಿ ಯಶಸ್ಸು ಸಾಧಿಸಬಹುದು ಎಂದರು. ತಿಳಿಸಿದರು.

ರುಡ್‌ಸೆಟಿ ಸಂಸ್ಥೆಯ ನಿರ್ದೇಶಕ ಅಜಯ್ ಸ್ವಾಗತಿಸಿ, ತರಬೇತಿ ಕಾರ್ಯಕ್ರಮದ ಸಂಕ್ಷಿಪ್ತ ಅವಲೋಕನವನ್ನು ನೀಡಿದರು ಹಾಗೂ ತರಬೇತಿಯ ಮಹತ್ವವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕಿ ಮಧುರಿ ಉಪಸ್ಥಿತರಿದ್ದರು.

ಹಿರಿಯ ಉಪನ್ಯಾಸಕರಾದ ಅಬ್ರಹಾಂ ಜೇಮ್ಸ್ ಪಿ.ವಿ.ಕಾರ್ಯಕ್ರಮ ನಿರ್ವಹಿಸಿದರು. ಹಿರಿಯ ಉಪನ್ಯಾಸಕ ಕೆ. ಕರುಣಾಕರ ಜೈನ್ ಅವರು ಧನ್ಯವಾದಗಳನ್ನು ಅರ್ಪಿಸಿದರು.

ಪ್ರಭಾ ಹಾಗೂ ಪೂಜಾ ಪ್ರಾರ್ಥನೆ ನೆರವೇರಿಸಿದರು. ತರಬೇತುದಾರೆ ಬಸಯ್ಯ ಮತ್ತು ಸಾಂಡ್ರ ಡಿ'ಸೋಜಾ ತಮ್ಮ ತರಬೇತಿ ಅನುಭವಗಳನ್ನು ಹಂಚಿಕೊಂಡರು.

ಕುಕ್ಕೆ: ಕುಮಾರಧಾರಾ ಪಾರ್ಕಿಂಗ್ ವ್ಯವಸ್ಥೆ ಕುರಿತು ಸಮಾಲೋಚನಾ ಸಭೆ
ಭಕ್ತರ ಅನುಕೂಲತೆಗೆ ಸೂಕ್ತ ವ್ಯವಸ್ಥೆ ಅತ್ಯಗತ್ಯ

ಸುಬ್ರಹ್ಮಣ್ಯ: ರಾಜ್ಯದ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಕುಕ್ಕೆ ಸುಬ್ರಹ್ಮಣ್ಯದ ಕುಮಾರಧಾರ ಸ್ನಾನಘಟ್ಟದ ಸಮಗ್ರ ಅಭಿವೃದ್ಧಿ, ಮಳೆಗಾಲದಲ್ಲಿ ಭಕ್ತರ ಸುರಕ್ಷತೆಗೆ ಅಗತ್ಯ ಕ್ರಮ, ವಾಹನ ನಿಲುಗಡೆ ವ್ಯವಸ್ಥೆ ಹಾಗೂ ಸ್ವಚ್ಛತಾ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕು ಎಂಬ ಆಗ್ರಹ ಇಲ್ಲಿನ ಸ್ನಾನಘಟ್ಟದ ಪಾರ್ಕಿಂಗ್ ವ್ಯವಸ್ಥೆ ಕುರಿತಾಗಿ ನಡೆದ ಸಮಾಲೋಚನಾ ಸಭೆಯಲ್ಲಿ ಕೇಳಿಬಂತು.

ಮೂಲಸೌಕರ್ಯ ಬೇಕು

ಸಭೆಯಲ್ಲಿ ಕೆಡಿಪಿ ಸದಸ್ಯ ಶಿವರಾಮ ರೈ ಮಾತನಾಡಿ, ಕುಮಾರಧಾರ ಸ್ನಾನಘಟ್ಟದಲ್ಲಿ ಪ್ರತಿನಿತ್ಯ ಸಾವಿರಾರು ಭಕ್ತರು ಆಗಮಿಸುತ್ತಿದ್ದು, ಅಗತ್ಯ ಮೂಲ ಸೌಕರ್ಯಗಳ ಕೊರತೆಯಿಂದ ಸಾರ್ವಜನಿಕರು ಸಮಸ್ಯೆ ಅನುಭವಿಸುತ್ತಿದ್ದಾರೆ. ಸ್ನಾನಘಟ್ಟದ ಬಳಿ ಸ್ವಚ್ಛತೆ, ವಾಹನ ನಿಲುಗಡೆ ಹಾಗೂ ಭಕ್ತರ ಅನುಕೂಲಕ್ಕೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕಿದೆ ಎಂದರು.

ಸಲಹೆ ಸೂಚನೆ

ಬಸ್ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸುವುದು, ರಸ್ತೆ ಬದಿಯ ಜಾಗವನ್ನು ಪಾರ್ಕಿಂಗ್‌ಗೆ ಬಳಸಿಕೊಳ್ಳುವುದು, ಮಳೆಗಾಲದಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳುವುದು ಸೇರಿದಂತೆ ಹಲವು ವಿಷಯಗಳನ್ನು ಸಭೆಯ ಗಮನಕ್ಕೆ ತಂದರು. ಸಭೆಯಲ್ಲಿ ಉಪಸ್ಥಿತರಿದ್ದ ಹಲವರು ಸಲಹೆ ಸೂಚನೆಗಳನ್ನು ನೀಡಿದರು.

ಪೊಲೀಸ್ ಇಲಾಖೆಯಿಂದ ಸಹಕಾರ

ಸುಬ್ರಹ್ಮಣ್ಯ ಪೊಲೀಸ್ ಠಾಣೆಯ ಠಾಣಾಧಿಕಾರಿ ಆಂಜನೇಯ ರೆಡ್ಡಿ ಮಾತನಾಡಿ, ಪಾರ್ಕಿಂಗ್ ವ್ಯವಸ್ಥೆ ಸುಧಾರಣೆಗೆ ಪೊಲೀಸ್ ಇಲಾಖೆ ಸಂಪೂರ್ಣ ಸಹಕಾರ ನೀಡಲಿದೆ ಎಂದರು. ಇತ್ತೀಚೆಗೆ ಸುಬ್ರಹ್ಮಣ್ಯದಲ್ಲಿ ನಡೆದ ದನ ಕಳ್ಳತನ ಪ್ರಕರಣವನ್ನು ಉಲ್ಲೇಖಿಸಿದ ಅವರು, ದೇವಸ್ಥಾನದ ಸುತ್ತಮುತ್ತ ರಸ್ತೆಗಳಲ್ಲಿ ಸಂಚರಿಸುವ ದನ–ಕರುಗಳ ರಕ್ಷಣೆಗೆ ಪಂಚಾಯತ್ ಹಾಗೂ ದೇವಸ್ಥಾನ ಆಡಳಿತ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು. ಭಕ್ತರ ದಟ್ಟಣೆ ಸಂದರ್ಭ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ವಾಹನ ಸಂಚಾರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಶ್ರೀಕಾಂತ ಪಿ., ಸಹಾಯಕ ಇಂಜಿನಿಯರ್ ಪ್ರಮೋದ್ ಕುಮಾರ್, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಸಹಾಯಕ ಕಾರ್ಯನಿರ್ವಹಣಾಧಿಕಾರಿ ಯೇಸು ರಾಜ್, ಪಂಚಾಯತ್ ಕಾರ್ಯದರ್ಶಿ ಮೋನಪ್ಪ ಡಿ., ಗ್ರಾಮ ಲೆಕ್ಕಾಧಿಕಾರಿ ಸಂತೋಷ್ ಉಪಸ್ಥಿತರಿದ್ದರು.



ಸಭಾ ನಿರ್ಣಯ

ಸಭೆಯಲ್ಲಿ ಸ್ನಾನಘಟ್ಟ ಹಾಗೂ ಸುತ್ತಮುತ್ತ ಸೂಚನಾ ಫಲಕ ಅಳವಡಿಕೆ, ರಸ್ತೆ ಬದಿಯಲ್ಲಿ ಮಣ್ಣು ಹಾಸಿ ವಾಹನ ನಿಲುಗಡೆ ವ್ಯವಸ್ಥೆ ಕಲ್ಪಿಸುವುದು, ರಸ್ತೆ ಅಗಲಗೊಳಿಸುವುದು, ಕುಮಾರಧಾರ ಸೇತುವೆ ಬಳಿ ವೇಗಮಿತಿ ಫಲಕ ಅಳವಡಿಕೆ, ಮಳೆಗಾಲದಲ್ಲಿ ಸುರಕ್ಷತಾ ಬೇಲಿ ನಿರ್ಮಾಣ, ಶೌಚಾಲಯ ವ್ಯವಸ್ಥೆ, ಗೋಪುರ ಸಮೀಪ ಬಸ್ ನಿಲ್ದಾಣ ನಿರ್ಮಾಣ, ಫುಟ್‌ಪಾತ್‌ನಲ್ಲಿ ವಾಹನ ನಿಲುಗಡೆ ತಡೆ ಹಾಗೂ ಬೀದಿ ದೀಪಗಳ ದುರಸ್ತಿ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳಲು ಸಭೆಯಲ್ಲಿ ನಿರ್ಣಯಿಸಲಾಯಿತು.



ಮಂಗಳೂರು
ಮಂಗಳವಾರ, 19 ಮೇ 2026
ಸಂಪುಟ 48, ಸಂಚಿಕೆ 61, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೀಟ್: ಇನ್ನೋರ್ವ ಆರೋಪಿ ಬಂಧನ | ೦೭
ಸರ್ಕಾರದಿಂದ ಎಸ್ಮಾ ಜಾರಿ ಎಚ್ಚರಿಕೆ | ೦೫
ಮಾತುಕತೆ ಮೂಲಕ ಸಂಘರ್ಷಕ್ಕೆ ಪರಿಹಾರ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ತದಿಗೆ, ನಕ್ಷತ್ರ: ಮೃಗಶಿರೆ

ದಿನದ ಮಾತು

ಮಗನನ್ನು ಸಜ್ಜನರು ಮೆಚ್ಚಿಕೊಂಡರೆ ಮಾತ್ರ ಅಂದೇ ತಂದೆಗೆ ನಿಜವಾದ ಪುತ್ರೋತ್ಸವ

▲ಸುಮತಿ ಶತಕ

ಜ್ಞಾನದ ಶಾಪ ನಿವಾರಣೆಗೊಂದು ವರ ಇಲ್ಲಿದೆ

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಎಲ್ಲ ಹೈಕೋರ್ಟ್‌ಗಳಲ್ಲಿ ವರ್ಚುವಲ್ ವಿಚಾರಣೆ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿಯಿಂದ ಹೆಚ್ಚುತ್ತಿರುವ ವೆಚ್ಚ ಹಾಗೂ ಇಂಧನ ಬಳಕೆ ಯನ್ನು ಕಡಿಮೆ ಮಾಡುವ ಉದ್ದೇಶದಿಂದ ದೇಶದ ಎಲ್ಲಾ ಹೈಕೋರ್ಟ್ ಗಳಲ್ಲಿ ಪ್ರತಿ ಸೋಮವಾರ ಮತ್ತು ಶುಕ್ರವಾರ ವರ್ಚುವಲ್ ವಿಚಾರಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮನವಿ ಮಾಡಿದ್ದಾರೆ.

• ಪುಟ ೭

ಇಸ್ರೇಲ್‌ಗೆ ಅಮೆರಿಕದ ಭಾರೀ ಶಸ್ತ್ರಾಸ್ತ್ರ ರವಾನೆ

• **ಟೆಲ್ ಅವಿವ್:** ಜರ್ಮನಿಯಲ್ಲಿರುವ ಅಮೆರಿಕದ ಸೈನಿಕ ನೆಲೆಗಳಿಂದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಹೊತ್ತ ಹಲವು ಅಮೆರಿಕನ್ ವಿಮಾನಗಳು ಸೋಮವಾರ ಇಸ್ರೇಲ್‌ನ ಟೆಲ್ ಅವಿವ್ ನಗರಕ್ಕೆ ಆಗಮಿಸಿವೆ ಎಂದು ವರದಿಯಾಗಿದೆ. ಈ ಬೆಳವಣಿಗೆ ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆಯನ್ನು ಹುಟ್ಟುಹಾಕಿದೆ.

• ಪುಟ ೭

ಪಾಕಿಸ್ತಾನದಲ್ಲಿನ ಇಮ್ರಾನ್ ಖಾನ್ ಸರಕಾರ ಪದಚ್ಯುತಿಗೂ ಅಮೆರಿಕ ಷಡ್ಯಂತ್ರ ಕಾರಣ!

• **ಇಸ್ಲಾಮಾಬಾದ್:** ಬಾಂಗ್ಲಾದಲ್ಲಿ ಶೇಖ್ ಹಸೀನಾ ಸರಕಾರವನ್ನು ಉರುಳಿಸುವಲ್ಲಿ ಅಮೆರಿಕದ ಪಾತ್ರ ಕುರಿತ ಆರೋಪ ಇನ್ನೂ ಹಸಿಯಾಗಿರುವಂತೆಯೇ,ಪಾಕಿಸ್ತಾನದಲ್ಲಿನ ಇಮ್ರಾನ್ ಖಾನ್‌ಸರಕಾರದ ಪದಚ್ಯುತಿಗೂ ಅಮೆರಿಕ ಬೆಂಬಲಿತ ಷಡ್ಯಂತ್ರ ನಡೆದಿತ್ತು ಎಂಬುದೀಗ ಬಯಲಿಗೆ ಬಂದಿದೆ.ಉನ್ನತ ಮಟ್ಟದ ವರ್ಗೀಕೃತ ಪಾಕಿಸ್ತಾನಿ ರಾಜತಾಂತ್ರಿಕ ಟೆಲಿಗ್ರಾಮ್ ಒಂದು ಬಹಿರಂಗಗೊಂಡ ಬಳಿಕ ಈ ಅಂಶ ಬೆಳಕಿಗೆ ಬಂದಿದೆ. ಇಮ್ರಾನ್ ಖಾನ್ ಸರಕಾರವನ್ನು ಉರುಳಿಸಲು ನಡೆದ ದಂಗೆಯಲ್ಲಿ ಅಮೆರಿಕದ ಶಾಮೀಲಾತಿ ಇದೆ ಎಂಬುದಕ್ಕೆ 2022ರ ಮಾ.7ರ ರಹಸ್ಯ ರಾಜತಾಂತ್ರಿಕ ಸುಳಿವೊಂದನ್ನು ಸಾಕ್ಷಿಯಾಗಿ ಬೊಟ್ಟು ಮಾಡಲಾಗುತ್ತಿದೆ.

• ಪುಟ ೫



ಪ್ರಗತಿಯತ್ತ ಕರ್ನಾಟಕ ಸರ್ಕಾರದ ಸಾರ್ಥಕ ಸೇವೆಯ ಸಮರ್ಪಣೆ

ಇಂದು ಸಾಧನೆಯ ಸಂಭ್ರಮ

- ಸಚಿವ ಡಾ.ಜಿ. ಪರಮೇಶ್ವರ ಉಸ್ತುವಾರಿ
- ಖುದ್ದಾಗಿ ವ್ಯವಸ್ಥೆ ಪರಿಶೀಲಿಸಿದ ಪರಂ
- ಬೃಹತ್ ಪೆಂಡಾಲ್, ಆಸನಗಳ ವ್ಯವಸ್ಥೆ
- ವಿಶಾಲ ಎಲ್‌ಇಡಿ ಪರದೆಗಳ ಅಳವಡಿಕೆ

• **ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೇ 20ಕ್ಕೆ ಮೂರು ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಮಂಗಳವಾರ (ಮೇ 19) ತುಮಕೂರು ನಗರದಲ್ಲಿ ಕಾಂಗ್ರೆಸ್ ಸರ್ಕಾರದ ವತಿಯಿಂದ ಪ್ರಗತಿಯತ್ತ ಕರ್ನಾಟಕ ಸಾರ್ಥಕ ಸೇವೆಯ ಸಮರ್ಪಣೆ ಕಾರ್ಯಕ್ರಮ ಹಾಗೂ ಸಾಧನಾ ಸಮಾವೇಶ ನಡೆಯಲಿದೆ.

ರಾಜ್ಯ ಸರ್ಕಾರಕ್ಕೆ 3 ವರ್ಷ

ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ರಾಜ್ಯ ಸರ್ಕಾರದ ಸಾಧನಾ ಸಮಾವೇಶಕ್ಕೆ ಬೃಹತ್ ವೇದಿಕೆ ಸೇರಿದಂತೆ ಜರ್ಮನ್ ಟೆಂಟ್ ಗಳನ್ನು ಹಾಕಲಾಗಿದೆ. ಸಮಾವೇಶಕ್ಕೆ ಆಗಮಿಸುವ ಲಕ್ಷಾಂತರ ಫಲಾನುಭವಿಗಳು, ಅಧಿಕಾರಿಗಳು, ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ ವ್ಯವಸ್ಥೆ ಮಾಡಲಾಗಿದೆ. ಬೃಹತ್ ಪೆಂಡಾಲ್, ಆಸನಗಳ ವ್ಯವಸ್ಥೆ ಹಾಗೂ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ.

ಕಾಂಗ್ರೆಸ್ ಸರ್ಕಾರದ 3 ವರ್ಷದ ಸಾಧನೆಯ ಸಮಾವೇಶವನ್ನು ಕಲ್ಪತರುನಾಡಿನಲ್ಲಿ ನಡೆಸಲು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಟೊಂಕಕಟ್ಟಿ ನಿಂತಿದ್ದು, ಸಮಾವೇಶಕ್ಕೆ ಆಗಮಿಸುವ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರುಗಳು, ಸಂಸದರು, ಶಾಸಕರುಗಳು, ಅಧಿಕಾರಿಗಳು ಹಾಗೂ ಫಲಾನುಭವಿಗಳಿಗೆ ಕಿಂಚಿತ್ತೂ ಲೋಪವಾಗದಂತೆ ಅಗತ್ಯ ವ್ಯವಸ್ಥೆ ಗಳನ್ನು ಮಾಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಅಲ್ಲದೆ ಖುದ್ದಾಗಿ ವ್ಯವಸ್ಥೆಗಳ ಮೇಲುಸ್ತುವಾರಿ ಮಾಡುತ್ತಿದ್ದಾರೆ.





1.40 ಲಕ್ಷ ಫಲಾನುಭವಿಗಳಿಗೆ ಸವಲತ್ತು ವಿತರಣೆ

ತುಮಕೂರು ಜಿಲ್ಲೆಯು 10 ತಾಲ್ಲೂಕು, 11 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಹಾಗೂ 27 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ರಾಜ್ಯದ 2ನೇ ಅತಿದೊಡ್ಡ ಜಿಲ್ಲೆಯಾಗಿದ್ದು, ತುಮಕೂರು ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ ಕೈಗೊಳ್ಳಲಾಗಿರುವ ಕಂದಾಯ ಇಲಾಖೆಯ ಬಹುಮುಖ್ಯ ಯೋಜನೆಗಳಾದ ಇ-ಪೌತಿ ಯೋಜನೆಯಲ್ಲಿ 81,523 ಫಲಾನುಭವಿಗಳು, ಹೊಸ ಕಂದಾಯ ಗ್ರಾಮ ರಚನೆ ಯೋಜನೆಯಲ್ಲಿ 20,666 ಫಲಾನುಭವಿಗಳು, ದರಖಾಸ್ತು ಪೋಡಿ ಯೋಜನೆಯಲ್ಲಿ 6,301 ಫಲಾನುಭವಿಗಳು ಹಾಗೂ ವಿವಿಧ ಪಿಂಚಣಿ ಯೋಜನೆಗಳ 31,848 ಫಲಾನುಭವಿಗಳು ಸೇರಿ ಒಟ್ಟು ಸುಮಾರು 1.40 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ/ಸವಲತ್ತು ಗಳನ್ನು ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

600 ಹುದ್ದೆಗಳ ನೇಮಕಾತಿ ಆದೇಶ ಪತ್ರ ವಿತರಣೆ

ತುಮಕೂರು ಜಿಲ್ಲೆಯ ಕಂದಾಯ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಒಟ್ಟು 1,52,492 ಫಲಾನುಭವಿಗಳಿಗೆ ಹಕ್ಕು ಪತ್ರ/ಆದೇಶ ಪತ್ರಗಳನ್ನು ವಿತರಣೆ ಮಾಡಲಾಗುತ್ತಿದೆ. ರಾಜ್ಯದಲ್ಲಿಯೇ ದೊಡ್ಡ ಸಂಖ್ಯೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಒಟ್ಟು 600 ಹುದ್ದೆಗಳ ನೇಮಕಾತಿ ಆದೇಶವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

> ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಮೇ 20ಕ್ಕೆ ಮೂರು ವರ್ಷಗಳು ತುಂಬಲಿವೆ. ಈ ನೆನಪಿಗಾಗಿ ರಾಜ್ಯ ಸರ್ಕಾರ ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳನ್ನು ಜನತೆಗೆ ಸಮರ್ಪಣೆ ಮಾಡುವ ವಿಶೇಷ ಕಾರ್ಯಕ್ರಮ ಸಾಧನೆಯ ಸೇವೆಗಳ ಸಮರ್ಪಣೆಯನ್ನು ಮಂಗಳವಾರ ತುಮಕೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.
>
> ■ **ಡಾ.ಜಿ. ಪರಮೇಶ್ವರ್,** ಗೃಹ,ಉಸ್ತುವಾರಿ ಸಚಿವ

ಕಂದಾಯ ಇಲಾಖೆ ಸಾಧನೆಯಲ್ಲಿ ಗಿನ್ನಿಸ್

• **ತುಮಕೂರು:** ತುಮಕೂರು ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ ಅಭೂತಪೂರ್ವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಮಂಗಳವಾರ ನಡೆಯುವ ಸಾಧನಾ ಸಮಾವೇಶದಲ್ಲಿ 1.40 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ಸವಲತ್ತು ವಿತರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಗೃಹಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದ್ದಾರೆ. ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಸೋಮವಾರ ಪೂರ್ವ ಸಿದ್ಧತೆ ಪರಿಶೀಲಿಸಿದ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಈ ಸಾಧನೆಯಲ್ಲಿ ತುಮಕೂರು ಜಿಲ್ಲೆ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದು, ಗಿನ್ನಿಸ್ ವರ್ಲ್ಡ್ ಬುಕ್ ಆಫ್ ರೆಕಾರ್ಡ್ ದಾಖಲೆ ಸೇರಿದೆ. ಸಾಧನಾ ಸಮಾವೇಶ ಕಾರ್ಯಕ್ರಮದಲ್ಲಿ ಈ ಸಾಧನೆಯ ಪ್ರಶಸ್ತಿಯನ್ನು ಪ್ರದಾನ ಮಾಡಲು ಇಂಗ್ಲೆಂಡ್‌ನಿಂದ ಗಿನ್ನಿಸ್ ಸಂಸ್ಥೆಯವರು ಆಗಮಿಸಲಿದ್ದಾರೆ ಎಂದರು.


ನುಡಿದಂತೆ ನಡೆದ ಸರ್ಕಾರ

ಮೂರು ವರ್ಷಗಳ ಹಿಂದೆ ನಡೆದ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ನನ್ನ ಅಧ್ಯಕ್ಷತೆಯಲ್ಲಿ ಪಕ್ಷದ ಚುನಾವಣಾ ಪ್ರಣಾಳಿಕೆ ಸಿದ್ಧಪಡಿಸಿತ್ತು. ಐದು ಗ್ಯಾರಂಟಿಗಳೂ ಸೇರಿದಂತೆ ಆದ್ಯತಾ ವಿಷಯಗಳನ್ನು ರಾಜ್ಯದ ಜನತೆಗೆ ಆಶ್ವಾಸನೆ ನೀಡಿ ಚುನಾವಣೆ ಗೆದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ರಚನೆಗೊಂಡ ಸರ್ಕಾರ ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಎಲ್ಲ ಐದೂ ಗ್ಯಾರಂಟಿಗಳನ್ನೂ ಸಮರ್ಪಕವಾಗಿ ಅನುಷ್ಠಾನಗೊಳಿಸಿದ್ದಲ್ಲದೆ ರಾಜ್ಯವನ್ನು ಸರ್ವಾಂಗೀಣ ಅಭಿವೃದ್ಧಿ ಪಥದತ್ತ ಕೊಂಡೊಯ್ಯಲಾಗಿದೆ. ಈ ಮೂಲಕ ನಮ್ಮ ಸರ್ಕಾರ ನುಡಿದಂತೆ ನಡೆದುಕೊಂಡಿದೆ ಎಂದು ಹೇಳಿದರು.

ಶಾಶ್ವತ ಶಾಂತಿ, ಅಭಿವೃದ್ಧಿ ಖಚಿತಕ್ಕೆ ಸೂಕ್ತ ಕ್ರಮ: ಅಮಿತ್ ಶಾ

ಭದ್ರತಾ ಸಮಸ್ಯೆಗಳಿಂದ ದೇಶ ಮುಕ್ತ

• **ರಾಯ್ಪುರ:** ಭಾರತ ಈಗ ನಕ್ಸಲಿಸಂ, ಜಮ್ಮು -ಕಾಶ್ಮೀರದಲ್ಲಿ ಭಯೋತ್ಪಾದನೆ ಮತ್ತು ಈಶಾನ್ಯದಲ್ಲಿ ಬಂಡಾಯದಂತಹ ಮೂರು ಪ್ರಮುಖ ಆಂತರಿಕ ಭದ್ರತಾ ಸಮಸ್ಯೆಗಳಿಂದ ಮುಕ್ತವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.



ಮಾವೋವಾದಿಗಳ ಹಿಂದಿನ ಭದ್ರಕೋಟೆಯಾದ ಜಗದಲ್ಪುರ್, ಬಸ್ತರ್‌ನಲ್ಲಿ ಮಾತನಾಡಿದ ಶಾ, ಈ ಪ್ರದೇಶದಲ್ಲಿ ಶಾಶ್ವತ ಶಾಂತಿ ಮತ್ತು ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಪೂರ್ಣ ಬದ್ಧತೆಯಿಂದ ಕೆಲಸ ಮಾಡುತ್ತಿವೆ. ಮುಂದಿನ ಐದು ವರ್ಷಗಳಲ್ಲಿ ಇದು ದೇಶದ ಅತ್ಯಂತ ಅಭಿವೃದ್ಧಿ ಹೊಂದಿದ ಬುಡಕಟ್ಟು ಪ್ರದೇಶವಾಗಿ ಹೊರಹೊಮ್ಮಲಿದೆ ಎಂದು ಹೇಳಿದರು.ಮಾರ್ಚ್‌ನಲ್ಲಿ ದೇಶವನ್ನು ಮಾವೋವಾದಿ ಹಿಂಸಾಚಾರದಿಂದ ಮುಕ್ತವೆಂದು ಘೋಷಿಸಿದ ನಂತರ ಮೊದಲ ಬಾರಿಗೆ ಛತ್ತೀಸ್‌ಗಢಕ್ಕೆ ಮೂರು ದಿನಗಳ ಪ್ರವಾಸದಲ್ಲಿರುವ ಶಾ, ಶರಣಾದ ಸುಮಾರು 3,000 ನಕ್ಸಲರನ್ನು ಸ್ವೀಕರಿಸುವಂತೆ ಮತ್ತು ಅವರನ್ನು ರಾಷ್ಟ್ರೀಯ ಮುಖ್ಯವಾಹಿನಿಗೆ ಸೇರಿಸಿಕೊಳ್ಳಲು ಸಹಾಯ ಮಾಡುವಂತೆ ಬಸ್ತರ್ ಜನರನ್ನು ಒತ್ತಾಯಿಸಿದ್ದಾರೆ.

➡ಪುಟ ೪

ಕೇಂದ್ರ ವಲಯದ ಮಂಡಳಿ ಸಭೆ

ಬಸ್ತರ್ ಜಿಲ್ಲೆಯ ಪ್ರಧಾನ ಕಚೇರಿಯಾದ ಜಗದಲ್ಪುರದಲ್ಲಿ ಮಂಗಳವಾರ ನಡೆಯುವ 26ನೇ ಕೇಂದ್ರ ವಲಯ ಮಂಡಳಿ ಸಭೆಯ ಅಧ್ಯಕ್ಷತೆಯನ್ನು ಸಚಿವರು ವಹಿಸಲಿದ್ದು, ಇದರಲ್ಲಿ ಛತ್ತೀಸ್‌ಗಢ, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ಉತ್ತರಾಖಂಡದ ನಾಲ್ವರು ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ.

ಕೇರಳದ ಮುಖ್ಯಮಂತ್ರಿಯಾಗಿ ವಿ.ಡಿ.ಸತೀಶನ್ ಪ್ರಮಾಣ

ಬಸ್ ಉಚಿತ ಪ್ರಯಾಣ ಘೋಷಣೆ

• **ತಿರುವನಂತಪುರಂ:** ವಡಕ್ಕೇರಿ ದಾಮೋದರ ಮೆನನ್ ಸತೀಶನ್ ಅವರು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರದ ನೇತೃತ್ವ ವಹಿಸಿ, ಕೇರಳದ 16ನೇ ಮುಖ್ಯಮಂತ್ರಿಯಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ಇಲ್ಲಿನ ಸೆಂಟ್ರಲ್ ಸ್ಟೇಡಿಯಂನಲ್ಲಿ ಸತೀಶನ್ ತಮ್ಮ 20 ಮಂದಿ ಸಂಪುಟ ಸಚಿವರ ಸಹಿತವಾಗಿ ಪ್ರಮಾಣವಚನ ಸ್ವೀಕರಿಸಿದ್ದು, ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಪ್ರಮಾಣವಚನ ಬೋಧಿಸಿದರು.



ಸಿಪಿಎಂ ನೇತೃತ್ವದ ಎಡರಂಗವನ್ನು ಅಧಿಕಾರದಿಂದ ಇಳಿಸಿ ಅಧಿಕಾರಕ್ಕೇರಿರುವ ಯುಡಿಎಫ್‌ನ ನೂತನ ಸರಕಾರದಲ್ಲಿ ಕೆಲವು ಅನುಭವಿ ಮತ್ತು ಹಲವು ಹೊಸ ಮುಖಗಳ ಸೇರ್ಪಡೆಯಾಗಿದ್ದು, ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧಿಯಾಗಿದ್ದ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರು ನೂತನ ಸರಕಾರದಲ್ಲಿ ಗೃಹಖಾತೆ ಪಡೆದಿದ್ದಾರೆ.

ಈ ಸಂದರ್ಭ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಗಾಂಧಿ ಕುಟುಂಬದ ರಾಹುಲ್ ಗಾಂಧಿ, ಪ್ರಿಯಾಂಕಾ ವಾದ್ರ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಮುಸ್ಲಿಂ ಲೀಗ್ ನಾಯಕ ಪಾಣಕ್ಕಾಡ್ ತಂಙಳ್, ಕರ್ನಾಟಕದ ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತೆಲಂಗಾಣದ ಸಿಎಂ ರೇವಂತ್ ರೆಡ್ಡಿ, ಮಾಜಿ ಮುಖ್ಯಮಂತ್ರಿ ಹಾಗೂ ಎಡರಂಗ ನಾಯಕ ಪಿಣರಾಯಿ ವಿಜಯನ್, ಕೇರಳ ರಾಜ್ಯ ಬಿಜೆಪಿ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಮುಂತಾದ ಪ್ರಮುಖರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

➡ಪುಟ ೪

ಹೊಸ ಕಲ್ಯಾಣ ಯೋಜನೆಗಳಿಗೆ ಪಶ್ಚಿಮ ಬಂಗಾಳ ಸಂಪುಟ ಅಸ್ತು

- ಧಾರ್ಮಿಕ ಮುಖಂಡರ ಗೌರವಧನ ರದ್ದು
- ಅಗ್ನಿಮಿತ್ರ ಪಾಲ್ ಮಾಹಿತಿ

• **ಕೋಲ್ಕತಾ:** ಇಮಾಮ್‌ಗಳು, ಮುಯೆಜ್ಜಿನ್‌ಗಳು ಮತ್ತು ಪುರೋಹಿತರಿಗೆ ಧಾರ್ಮಿಕ ವರ್ಗೀಕರಣದ ಆಧಾರದ ಮೇಲೆ ನೀಡಲಾಗುತ್ತಿದ್ದ ಆರ್ಥಿಕ ನೆರವನ್ನು ಈ ವರ್ಷದ ಜೂನ್ ನಿಂದ ಸ್ಥಗಿತಗೊಳಿಸಲು ಪಶ್ಚಿಮ ಬಂಗಾಳ ಸಚಿವ ಸಂಪುಟ ಸೋಮವಾರ ನಿರ್ಧರಿಸಿದೆ.

ಈ ಗೌರವಧನಕ್ಕಾಗಿ ನೀಡಲಾಗುತ್ತಿದ್ದ ರಾಜ್ಯ ಬಜೆಟ್ ಅನುದಾನವನ್ನು ರದ್ದುಗೊಳಿಸಲಾಗುವುದು, ಎಂದು ಮಹಿಳಾ, ಮಕ್ಕಳ ಮತ್ತು ಸಾಮಾಜಿಕ ಕಲ್ಯಾಣ ಸಚಿವೆ ಅಗ್ನಿಮಿತ್ರ ಪಾಲ್ ತಿಳಿಸಿದ್ದಾರೆ.

➡ಪುಟ ೪

ಜಂಟಿ ಸಂಸದೀಯ ಅಧ್ಯಯನ ಸಮಿತಿ ಸಂವಾದ

ಶೀಘ್ರ ಒಂದು ರಾಷ್ಟ್ರ ಒಂದು ಚುನಾವಣೆ ಜಾರಿಯಾಗಲಿ

• **ಬೆಂಗಳೂರು:** ಸಮಯ, ಹಣ ಮತ್ತು ಶಕ್ತಿಯ ಉಳಿತಾಯ ಆಗಲಿರುವ ಒಂದು ರಾಷ್ಟ್ರ ಒಂದು ಚುನಾವಣೆಯನ್ನು ಶೀಘ್ರ ಜಾರಿಗೆ ತರಬೇಕು ಎಂದು ರಾಜ್ಯದ ಹಲವು ಪದ್ಮ ಪ್ರಶಸ್ತಿ ಪುರಸ್ಕೃತರು ಒಕ್ಕೊರಲಿನಿಂದ ಒತ್ತಾಯಿಸಿದ್ದಾರೆ.

ಸಂವಿಧಾನ (129ನೇ ತಿದ್ದುಪಡಿ) ಮಸೂದೆ, 2024 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು (ತಿದ್ದುಪಡಿ) ಮಸೂದೆ, 2024 ಕುರಿತ ಜಂಟಿ ಸಂಸದೀಯ ಅಧ್ಯಯನ ಸಮಿತಿಯು ಸೋಮವಾರ ಬೆಂಗಳೂರಿನ ಖಾಸಗಿ ಹೋಟೆಲ್ ನಲ್ಲಿ ಏರ್ಪಡಿಸಿದ ಒಂದು ರಾಷ್ಟ್ರ ಒಂದು ಚುನಾವಣೆ ಕುರಿತ ಸಂವಾದದಲ್ಲಿ ಅವರು ತಮ್ಮ ಅಭಿಪ್ರಾಯ ಮಂಡಿಸಿದರು.

ಒಂದು ರಾಷ್ಟ್ರ ಒಂದು ಚುನಾವಣೆಯ ಅನುಷ್ಠಾನದಿಂದ ಆಡಳಿತಕ್ಕೆ ಚುನಾವಣಾ ವೆಚ್ಚದ ಹೊರೆ ಕಡಿಮೆಯಾಗಲಿದೆ. ಸಮಯ, ಹಣದ ಜೊತೆಗೆ ಶಕ್ತಿಯ ಉಳಿತಾಯವೂ ಆಗಲಿದೆ.



ಒಂದು ದೇಶ ಒಂದು ಚುನಾಚಣೆಯು ಈ ಹಿಂದೆಯೂ ದೇಶದಲ್ಲಿ ಜಾರಿಯಲ್ಲಿತ್ತು. ಅದನ್ನೀಗ ಮರು ಜಾರಿಗೆ ಕ್ರಮ ತೆಗೆದುಕೊಳ್ಳುತ್ತಿರುವುದು ಸಂತಸ ತಂದಿದೆ. ಆದರೆ, ಇದರಲ್ಲಿ ಎರಡು ಕಡೆ ಚುನಾವಣೆಗೆ ಸ್ಪರ್ಧಿಸಿ, ಎರಡೂ ಕಡೆ ಗೆದ್ದರೆ ಮತ್ತೆ ಉಪ ಚುನಾವಣೆ ನಡೆಸುವ ವೆಚ್ಚವನ್ನು ಎರಡು ಕಡೆ ಗೆದ್ದಿರುವ ಅಭ್ಯರ್ಥಿಯೇ ಭರಿಸುವಂತೆ ನಿಯಮ ರೂಪಿಸಬೇಕು ಎಂದು ಆಗ್ರಹಿಸಿದರು.

➡ಪುಟ ೪

ಸಾಕಾನೆಗಳ ಕಾದಾಟ: ಚೆನ್ನೈ ಮಹಿಳೆ ಸಾವು

• **ಮಡಿಕೇರಿ/ಕುಶಾಲನಗರ:** ಎಲಿಫೆಂಟ್ ಬಾತಿಂಗ್ ಸಂದರ್ಭ ಆನೆಯ ಅಡಿಗೆ ಬಿದ್ದು ಮಹಿಳೆಯರೊಬ್ಬರು ಸಾವಿಗೀಡಾಗಿ, ಆಕೆಯ ಪತಿ ಗಾಯಗೊಂಡ ಘಟನೆ ದುಬಾರೆ ಸಾಕಾನೆ ಶಿಬಿರದಲ್ಲಿ ಸೋಮವಾರ ನಡೆದಿದೆ. ಚೆನ್ನೈ ಮೂಲದ ಜಿನ್ನು (33) ಎಂಬುವರೇ ಸಾವಿಗೀಡಾದವರಾಗಿದ್ದು, ಆಕೆಯ ಪತಿ ಜೋಯಲ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಚೆನ್ನೈನ ಪಲ್ಲಾವರಂ ಮೂಲದ ಜೋಯಲ್ ಹಾಗೂ ಜಿನ್ನು ಕೊಡಗು ಜಿಲ್ಲೆಗೆ ಪ್ರವಾಸಕ್ಕೆಂದು ಆಗಮಿಸಿದ್ದು, ಸೋಮವಾರ ದುಬಾರೆ ಸಾಕಾನೆ ಶಿಬಿರಕ್ಕೆ ಭೇಟಿ ನೀಡಿದ್ದರು. ಶುಲ್ಕ ಪಡೆದು ಪ್ರವಾಸಿಗರಿಗೆ ಸಾಕಾನೆಗಳ ಸ್ನಾನ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು.



➡ಪುಟ ೪

ಹೇಳಿಕೆ ಬಗ್ಗೆ ಪ್ರಧಾನಿ ಸ್ಪಷ್ಟನೆ ನೀಡಲಿ

ಬೆಂಗಳೂರು: ನಿರಂತರ ಯುದ್ಧಗಳು ಮತ್ತು ಜಾಗತಿಕ ಅಸ್ಥಿರತೆಯು ದಶಕಗಳ ಅಭಿವೃದ್ಧಿಯನ್ನು ಹಿಮ್ಮೆಟ್ಟಿಸಬಹುದು ಮತ್ತು ದೊಡ್ಡ ಜನಸಂಖ್ಯೆಯನ್ನು ಮತ್ತೆ ಬಡತನಕ್ಕೆ ತಳ್ಳಬಹುದು ಎನ್ನುವ ಬಗ್ಗೆ ಪ್ರಧಾನಿ ನರೇಂದ್ರ ಅವರು ಸ್ಪಷ್ಟನೆ ನೀಡಬೇಕು ಎಂದು ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಒತ್ತಾಯಿಸಿದ್ದಾರೆ.




ಸದಾಶಿವನಗರದ ನಿವಾಸದಲ್ಲಿ ಸೋಮವಾರ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಪ್ರಧಾನ ಮಂತ್ರಿಗಳು ಯಾವ ಅರ್ಥದಲ್ಲಿಬಡತನದ ಬಗ್ಗೆ ಹೇಳಿದ್ದಾರೆ ಹಾಗೂ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಜನರಿಗೆ ಮಾಹಿತಿ ಕೊಡಬೇಕು ಎಂದು ಒತ್ತಾಯಿಸುತ್ತೇನೆ ಎಂದರು. ರಾಹುಲ್ ಗಾಂಧಿ ಯವರು ಏನೇ ಮಾತಾಡಿದ್ರು ಕೂಡ ಆರೋಪಗಳನ್ನು ಮಾಡುತ್ತಾರೆ. ಭಾರತೀಯರ ಪರಿಸ್ಥಿತಿ ಇಂತಹ ಶೋಚನೀಯ ಸ್ಥಿತಿಗೆ ಹೋಗಿದೆಯೇ ಅನ್ನೋದನ್ನು ಕೂಡ ನಾವು ಚಿಂತನೆ ಮಾಡಬೇಕಾಗಿದೆ. ನನ್ನ ಪ್ರಕಾರ ಶೋಚನೀಯ ಪರಿಸ್ಥಿತಿಗೆ ನಾವ್ಯಾರು ಕೂಡ ಹೋಗಿಲ್ಲ. ಅವರು ಕೊರೋನಾ ಸಂದರ್ಭದಲ್ಲಿ ಪ್ರಧಾನಿ ಕೊಟ್ಟ ಕರೆಗೆ ಈ ರಾಷ್ಟ್ರದ ಜನ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ರಾಹುಲ್ ಗಾಂಧಿ ವಿದೇಶದಲ್ಲಿ ಮಾತನಾಡಿದಾಗ ದೇಶದ್ರೋಹಿ ಎನ್ನುತ್ತಾರೆ. ಸ್ವತಃ ಪ್ರಧಾನಮಂತ್ರಿಗಳೇ ವಿದೇಶಿ ನೆಲದಲ್ಲಿ ನಿಂತು ಬಡತನ ಎದುರಾಗಿದೆ ಅಂತ ಮಾತನಾಡಿದ್ದಾರೆ ಎಂದಾಗ, ಯಾವ ದೃಷ್ಟಿಕೋನದಲ್ಲಿ ಹೇಳಿದ್ದಾರೆ ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು ಎಂದರು.

ಕ್ಷಮೆ ಯಾಚಿಸಲಿ

ಸಮೃದ್ಧವಾಗಿದ್ದ, ಶಕ್ತಿಯುತವಾಗಿದ್ದ ಇಡೀ ವಿಶ್ವದಲ್ಲೇ ಬಲಿಷ್ಠವಾದ ಆರ್ಥಿಕ ವ್ಯವಸ್ಥೆ ಹಾಳಾಗಿದೆ ಅಂದರೆ ಅದಕ್ಕೆ ಪ್ರಧಾನ ಮಂತ್ರಿಗಳೇ ಕಾರಣ. ಅವರು ಯಾವ ಅರ್ಥದಲ್ಲಿ ಮಾತನಾಡಿದ್ದಾರೆ ಎಂದು ಸ್ಪಷ್ಟನೆ ನೀಡಬೇಕು ಹಾಗೂ ಈ ದೇಶದ ಜನರ ಕ್ಷಮೆ ಯಾಚನೆ ಮಾಡಬೇಕು ಎಂದು ಆಗ್ರಹಿಸಿದರು.

ರಾಮ ಬಾಣ



ರಾಜ್ಯದಲ್ಲಿ ಸಾಕಷ್ಟು ತೈಲ ಸಂಗ್ರಹ

ಬೆಂಗಳೂರು: ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಸಾಕಷ್ಟು ದಾಸ್ತಾನು ಲಭ್ಯವಿದೆ ಎಂದು ಕರ್ನಾಟಕದ ತೈಲ ಉದ್ಯಮದ ರಾಜ್ಯ ಮಟ್ಟದ ಸಂಯೋಜಕರಾದ ಸಿದ್ಧಾರ್ಥ್ ಅಗರ್‌ವಾಲ್ ತಿಳಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಅವರು, ರಾಜ್ಯದ ಎಲ್ಲಾ ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ ಕಂಪನಿಗಳ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ಸಾಕಷ್ಟಿದ್ದು, ಸಂಪೂರ್ಣವಾಗಿ ಲಭ್ಯವಿದೆ.ಆದ್ದರಿಂದ ಸಾರ್ವಜನಿಕರು ಆತಂಕದಿಂದ ಇಂಧನ ಖರೀದಿಸದಂತೆ ಮನವಿ ಮಾಡಿದ್ದಾರೆ.



ಟರ್ಮಿನಲ್‌ಗಳು ಮತ್ತು ಡಿಪೋಗಳಿಂದ ಹಿಡಿದು ಸ್ಥಳೀಯ ಚಿಲ್ಲರೆ ಮಾರಾಟ ಮಳಿಗೆಗಳ ವರೆಗಿನ ಸಂಪೂರ್ಣ ಇಂಧನ ಪೂರೈಕೆ ಸರಪಳಿಯು ಯಾವುದೇ ಅಡೆತಡೆಯಿಲ್ಲದೆ, ಸಾಮಾನ್ಯ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇಂಧನ ಪೂರೈಕೆ ಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ ಮತ್ತು ರಾಜ್ಯಾದ್ಯಂತ ಮರುಪೂರಣ ಕಾರ್ಯಾಚರಣೆಗಳು ಸುಗಮವಾಗಿ ಸಾಗುತ್ತಿವೆ. ಎಲ್ಲಾ ಚಿಲ್ಲರೆ ಮಾರಾಟ ಮಳಿಗೆಗಳು ಸಾಮಾನ್ಯವಾಗಿ ಕಾರ್ಯ ನಿರ್ವಹಿಸುತ್ತಿವೆ ಮತ್ತು ಕರ್ನಾಟಕದ ಗ್ರಾಹಕರ ದೈನಂದಿನ ಇಂಧನ ಅಗತ್ಯಗಳನ್ನು ಪೂರೈಸಲು ಸಂಪೂರ್ಣವಾಗಿ ಸಜ್ಜಾಗಿವೆ ಎಂದು ತಿಳಿಸಿದ್ದಾರೆ.

ಕರ್ನಾಟಕದ ಜನರಿಗೆ ನಿರಂತರ ಇಂಧನ ಪೂರೈಕೆಯನ್ನು ಖಚಿತಪಡಿಸಲು ತೈಲ ಮಾರುಕಟ್ಟೆ ಕಂಪನಿಗಳು ಸಂಪೂರ್ಣವಾಗಿ ಬದ್ಧವಾಗಿವೆ ಮತ್ತು ಸಿದ್ಧವಾಗಿವೆ. ಅದರಂತೆ, ಸಾರ್ವಜನಿಕರು ಆತಂಕದಿಂದ ಇಂಧನ ಖರೀದಿಸುವುದು ಅಥವಾ ಅತಿಯಾಗಿ ಇಂಧನ ವನ್ನು ಸಂಗ್ರಹಿಸಿಟ್ಟುಕೊಳ್ಳುವುದನ್ನು ಮಾಡ ಬಾರದು. ಸಾರ್ವಜನಿಕರು ನಿಶ್ಚಿಂತರಾಗಿರಲು ಮತ್ತು ತಮ್ಮ ಸಾಮಾನ್ಯ ಇಂಧನ ಬಳಕೆಯನ್ನು ಮುಂದುವರಿಸಲು ಸಲಹೆ ನೀಡಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಸಮಾಜ ಕೇವಲ ಕಾನೂನಿನ ಆಧಾರದ ಮೇಲೆ ನಡೆಯುವುದಿಲ್ಲ. ಅದು ಪರಸ್ಪರ ನಂಬಿಕೆ, ಸಹಾನುಭೂತಿ ಮತ್ತು ಆಪ್ತ ಭಾವನೆಯ ಮೇಲೆ ನಿಂತಿದೆ –ಮೋಹನ್ ಭಾಗ್ವತ್

– ಎಲ್ಲೋ ನೆರೆ ಬಂದಾಗ, ನೆರೆ ಮನೆಗೆ ಬೆಂಕಿ ಬಿದ್ದಾಗ, ಯಾರಿಗೋ ಕ್ಯಾನ್ಸರ್ ಆದಾಗ, ಭೀಕರ ಭೂಕಂಪವಾದಾಗ, ರಸ್ತೆ ಅಪಘಾತಗಳಂತಹ ಘಟನೆಗಳು ಜರಗಿದಾಗ ಅವರಿಗೆ ಸಹಕಾರ ಮಾಡಬೇಕೆಂದು ಕಾನೂನು ಪುಸ್ತಕದಲ್ಲಿ ಬರೆದಿಲ್ಲ, ಆದರೂ ಕಾನೂನನ್ನು ಮೀರಿ ಸಹಕಾರ ಮಾಡುತ್ತೇವೆ!

ದಿನ ಭವಿಷ್ಯ

ಮೇಷ ಇಂದು ಹೆಚ್ಚು ಎಚ್ಚರ ಮತ್ತು ಕುಶಲತೆಯಿಂದ ನಿಮ್ಮ ಕಾರ್ಯವ್ಯವಹಾರ ನಡೆಸಿ. ವಿರೋಧಿಗಳು ನಿಮ್ಮ ವಿರುದ್ಧ ಮಸಲತ್ತು ನಡೆಸುತ್ತಾರೆ.

ವೃಷಭ ನಿಮ್ಮ ಮಾತು ವಿವಾದ ಸೃಷ್ಟಿಸಬಹುದು. ಮಿತಮಾತು ಒಳಿತು. ನಿಮ್ಮ ಕಾರ್ಯದ ಬಗ್ಗೆ ಶ್ಲಾಘನೆ ಕೂಡಾ ಪಡೆಯುವಿರಿ. ಕೌಟುಂಬಿಕ ಸಾಮರಸ್ಯ.

ಮಿಥುನ ದಂಪತಿ ಮಧ್ಯೆ ಕಲಹ ನಡೆದೀತು. ಪರಸ್ಪರ ಸಹಕಾರ ಅವಶ್ಯ. ವೃತ್ತಿಯಲ್ಲಿ ನಿಮ್ಮ ಗುರಿ ಸಾಧನೆಗೆ ಕೆಲವು ಅಡ್ಡಿ. ಕೆಲವರ ಅಸಹಕಾರ.

ಕಟಕ ನಿಮ್ಮೆಡೆಗೆ ಬರುವ ಅವಕಾಶ ಸರಿಯಾಗಿ ಬಳಸಿಕೊಳ್ಳಿ. ವ್ಯವಹಾರ ಸುಗಮ. ಕೆಲವರ ಜತೆ ಸಂಘರ್ಷ ನಡೆದೀತು. ತಾಳ್ಮೆಯ ನಡೆ ಅವಶ್ಯ.

ಸಿಂಹ ಸಹೋದ್ಯೋಗಿ ನಿಮ್ಮ ಜತೆ ಕಾರಣವಿಲ್ಲದೆ ಜಗಳ ತೆಗೆಯಬಹುದು. ಖರ್ಚು ಹಠಾತ್ತಾಗಿ ಏರಿಕೆ. ಪ್ರಯಾಣದಲ್ಲಿ ವಿಳಂಬ, ಕಿರಿಕಿರಿ ಉಂಟಾದೀತು.

ಕನ್ಯಾ ಕೆಲದಿನಗಳ ಒತ್ತಡ ನಿವಾರಣೆ. ಕೆಲಸ ಸರಾಗ. ಹಣಕಾಸು ಅಡ್ಡಿ ಪರಿಹಾರ. ಬಂಧುಗಳ ಜತೆಗಿನ ಭೇಟಿ ಫಲಪ್ರದ. ಕೌಟುಂಬಿಕ ಸಹಕಾರ ಹೆಚ್ಚಲಿದೆ.

ತುಲಾ ಆರ್ಥಿಕ ಚಿತ್ರಣ ತುಸು ಬದಲಾಗಲಿದೆ. ಆತ್ಮೀಯರ ಜತೆ ವ್ಯವಹಾರದಲ್ಲಿ ಸಂಘರ್ಷ ಉಂಟಾಗಲಿದೆ. ಎಚ್ಚರದ ಹೆಜ್ಜೆ ಇಡುವುದೊಳಿತು.

ವೃಶ್ಚಿಕ ಎಂದಿಗಿಂತ ಭಿನ್ನ ದಿನ. ಬಂಧುಗಳ ಆಗಮನದಿಂದ ಖುಷಿ. ಉದ್ಯೋಗದಲ್ಲಿ ಉನ್ನತಿ. ಆರ್ಥಿಕ ಪರಿಸ್ಥಿತಿ ತೃಪ್ತಿಕರ ಬೆಳವಣಿಗೆ.

ಧನು ಹರ್ಷದ ದಿನ. ಅನ್ಯರು ನಿಮಗೆ ಗೌರವ ಸಲ್ಲಿಸುವ ಸಾಧನೆ ತೋರುವಿರಿ. ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ಲಭಿಸಲಿದೆ.

ಮಕರ ನಿಮಗೆ ಆನಂದ ತೋರುವ ವ್ಯಕ್ತಿಗಳನ್ನು ಒಲಿಸಲು ಹೋಗದಿರಿ. ಕಡೆಗಣಿಸಿಬಿಡಿ. ಆರ್ಥಿಕ ಪರಿಸ್ಥಿತಿ ಉತ್ತಮ. ವ್ಯವಹಾರದಲ್ಲಿ ಪ್ರಗತಿ.

ಕುಂಭ ನಿಮ್ಮ ಕೆಲಸ ಪ್ರಗತಿ ನಿಧಾನಗತಿ ತೋರಲಿದೆ. ಅಪೇಕ್ಷಿತ ಫಲ ಸಿಗದು. ಸಣ್ಣದೊಂದು ವಿಷಯ ನಿರಂತರ ಕೊರಗು ಉಂಟುಮಾಡುವುದು.

ಮೀನ ಇಂದು ನಿರೀಕ್ಷಿತ ಫಲ ದೊರಕದು. ಸ್ವಲ್ಪ ಮಟ್ಟಿನ ನಿರಾಶೆ ಎದುರಿಸುವಿರಿ. ಆತ್ಮೀಯರು ಮುನಿಸು ತೋರಿಯಾರು. ತಾಳ್ಮೆಯಿಂದ ವ್ಯವಹರಿಸಿ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 9,0,5,2

ನಮ್ಮ ಭವಿಷ್ಯ–ನಮ್ಮ ಊರು ಘೋಷವಾಕ್ಯ | ಮಕ್ಕಳಿಂದ ಪ್ರತಿಭಟನೆ

ಅಣು ವಿದ್ಯುತ್‌ಗೆ ಖಂಡನೆ

ಜಿ. ನಾಗೇಶ್ ಸಾಗರ

ಸಾಗರ: 'ನಮ್ಮ ಭವಿಷ್ಯ–ನಮ್ಮ ಊರು ಘೋಷ ವಾಕ್ಯದಡಿ ಅವಿನಹಳ್ಳಿ ಹೋಬಳಿ ಮಕ್ಕಳು ನಮ್ಮ ಭಾಗಕ್ಕೆ ಅಣು ಸ್ಥಾವರ ಬೇಡ ಎಂದು ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು. ಇದೇ ಸಂದರ್ಭದಲ್ಲಿ ಗ್ರಾಮ ಎದುರು ರಸ್ತೆ ತಡೆ ನಡೆಸಿ ಗಮನ ಸೆಳೆದ ಮಕ್ಕಳು ನಮ್ಮೂರಿಗೆ ಅಣು ವಿದ್ಯುತ್ ಸ್ಥಾವರ ಮಾಡಿ ನಮ್ಮನ್ನೂ ಸಂತ್ರಸ್ತರನ್ನಾಗಿ ಮಾಡಬೇಡಿ. ನಮ್ಮೂರಿನಲ್ಲಿ ಅಣು ಸ್ಥಾವರ ಮಾಡಲು ಬಿಡುವುದಿಲ್ಲ ಎಂದು ಸಂಕಲ್ಪ ಕೈಗೊಂಡರು.

ಬೇಸೂರು ಅಣು ವಿದ್ಯುತ್ ಸ್ಥಾವರ ವಿರೋಧ ಹೋರಾಟ ಬೇರೆ ಬೇರೆ ಹಂತಕ್ಕೆ ಪರಿವರ್ತನೆ ಮಾಡಿದ್ದು, ಮಲೆನಾಡು ಅಣು ವಿದ್ಯುತ್ ಸ್ಥಾವರ ವಿರೋಧಿ ವೇದಿಕೆ ಹೆಸರಿನಲ್ಲಿ ಹೋರಾಟದ ಮಗ್ಗುಲು ಬದಲಾಯಿಸಿದ್ದು ನಿರಂತರ ಹೋರಾಟದ ಸಂಕಲ್ಪ ಕೈಗೊಳ್ಳಲಾಗಿದೆ. ಪರಿಸರವಾದಿಗಳು, ಸಾಮಾಜಿಕ ಹೋರಾಟ ಗಾರರು, ರೈತ ಸಂಘಗಳು, ಪ್ರಗತಿಪರ ಚಿಂತಕರು ಹೋರಾಟಕ್ಕೆ ಬೆಂಬಲ ನೀಡಿರುವ ಬೆನ್ನಲ್ಲೆ ಇದೀಗ ಅವಿನಹಳ್ಳಿ ಹೋಬಳಿ ಭಾಗದ 200ಕ್ಕೂ ಹೆಚ್ಚು ಮಕ್ಕಳು ಸೋಮವಾರ ಅಣು ವಿದ್ಯುತ್ ಸ್ಥಾವರ ಕೈಬಿಡಿ ಎಂದು ಬೀದಿಗೆ ಇಳಿದಿದ್ದಾರೆ.

ನಮ್ಮನ್ನು ಸಂತ್ರಸ್ತರನ್ನಾಗಿ ಮಾಡಬೇಡಿ: ಈಗಾಗಲೆ ನಮ್ಮ ಮುತ್ತಾತ ಶರಾವತಿ ಹಿನ್ನೀರಿನ ಲಿಂಗನಮಕ್ಕಿಯಲ್ಲಿ ಅಣೆಕಟ್ಟು ನಿರ್ಮಿಸಲು ಭೂಮಿ ಕೊಟ್ಟಿದ್ದಾರೆ. ನೀರು ವ್ಯಾಪಿಸಿದ್ದರಿಂದ ನಮ್ಮ ಹಿರಿಯರು ಇಲ್ಲಿ ಬಂದು ನೆಲೆ ಕಂಡುಕೊಂಡಿದ್ದರು. ಇಲ್ಲಿ ನಮ್ಮ ತೋಟ, ಮನೆ, ಶಾಲೆ, ಆಸ್ಪತ್ರೆ, ನಾವಾಡುವ ಆಟದ ಮೈದಾನ, ನಾವು ಪೂಜಿಸುವ ದೇವರು ಇದೆ. ನಾವು ವಾಸಿಸುವ ಮನೆ, ಉಳುಮೆ ಮಾಡುವ ಭೂಮಿಗೆ ಈತನಕ ಹಕ್ಕು ಸಿಕ್ಕಿಲ್ಲ. ನಮ್ಮ ಮುತ್ತಜ್ಜ, ಅಜ್ಜ, ಇದೀಗ ತಂದೆ ಭೂಮಿ ಹಕ್ಕು ಪಡೆಯಲು ಬೀದಿಗೆ ಇಳಿದು ಹೋರಾಟ ಮಾಡುತ್ತಿದ್ದಾರೆ. ಇಂದಿಗೂ ನಮಗೆ ಭೂಮಿಹಕ್ಕು ಸಿಕ್ಕಿಲ್ಲ ಎಂದು ಹಿರಿಯರು ಹೇಳುತ್ತಿದ್ದಾರೆ. ಇಂತಹ ಹೊತ್ತಿನಲ್ಲಿ ಅಣು ವಿದ್ಯುತ್ ಸ್ಥಾವರದಂತಹ ಮತ್ತೊಂದು ಒಕ್ಕಲೆಬ್ಬಿಸುವ ಯೋಜನೆ ನಮ್ಮೂರಿಗೆ ಬೇಡ. ನಮ್ಮನ್ನು ಮತ್ತೊಮ್ಮೆ ಸಂತ್ರಸ್ತರನ್ನಾಗಿ ಮಾಡಬೇಡಿ. ಅಣು ವಿದ್ಯುತ್ ಸ್ಥಾವರದ ಮಾರಕತೆ ನಾವು ಓದಿ ತಿಳಿದುಕೊಂಡಿದ್ದೇವೆ. ಅದನ್ನು ನಮ್ಮೂರಿಗೆ ತಂದು ಸ್ಥಾಪನೆ ಮಾಡಿ ನಮ್ಮೂರನ್ನು ಸ್ಮಶಾನ, ಕಾಯಿಲೆಯ ಗೂಡು ಮಾಡಬೇಡಿ ಎಂದು ಮಕ್ಕಳು ಅಂಗಲಾಚಿದರು.



25 ಕಿ.ಮೀ. ಪಾದಯಾತ್ರೆ

ಅಣು ವಿದ್ಯುತ್ ಸ್ಥಾವರ ವಿರೋಧಿ ಹೋರಾಟ ತೀವ್ರ ಸ್ವರೂಪ ಪಡೆದು ಕೊಂಡಿದ್ದು ಮೇ 20ರಂದು ಬೇಸೂರು ಬಸವಣ್ಣ ದೇವಸ್ಥಾನದಿಂದ ಸಾಗರ ಉಪವಿಭಾಗಾಧಿಕಾರಿಗಳ ಕಚೇರಿವರೆಗೆ ಬೆಳಗ್ಗೆ 8ರಿಂದ 25 ಕಿ.ಮೀ. ಪಾದಯಾತ್ರೆ ನಡೆಸಲಾಗುತ್ತಿದೆ. ಮೇ 21ರಿಂದ 26ರವರೆಗೆ ಉಪವಿಭಾಗಾಧಿಕಾರಿಗಳ ಕಚೇರಿ ಎದುರು ನಿರಂತರ ಪ್ರತಿಭಟನೆ ನಡೆಸಲಾಗುತ್ತದೆ. ಮೇ 27ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಾವಿರಾರು ಜನರು ಯೋಜನೆ ವಿರೋಧಿಸಿ ಬೃಹತ್ ಪ್ರತಿಭಟನೆ ಮಾಡುತ್ತಿದ್ದೇವೆ ಎಂದು ಹೋರಾಟ ಸಮಿತಿ ಅಧ್ಯಕ್ಷ ಬೇಸೂರು ಇಂದೂಧರ ತಿಳಿಸಿದ್ದಾರೆ.

ನಮ್ಮ ಭವಿಷ್ಯ ಗಮನಿಸಿ

ವಿದ್ಯಾರ್ಥಿಗಳಾದ ವರ್ಷ, ಸೌಜನ್ಯ, ಕೀರ್ತಿ, ಸಾನ್ವಿ ಇನ್ನಿತರರು ಮಾತನಾಡಿ, ನಮ್ಮೂರಿನ ಪರಿಸರವನ್ನು ನಮ್ಮ ಹಿರಿಯರು ರಕ್ಷಣೆ ಮಾಡಿಕೊಂಡು ಬರುತ್ತಿದ್ದಾರೆ. ಏಕಾಏಕಿ ಇಲ್ಲಿ ಮಾರಕವಾದ ಅಣು ವಿದ್ಯುತ್ ಸ್ಥಾವರ ಮಾಡಲು ಬಂದಿರುವುದನ್ನು ನಾವು ಸಹಿಸುವುದಿಲ್ಲ. ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳು ನಮ್ಮೂರಿಗೆ ಅಣು ಸ್ಥಾವರ ಮಾಡುವುದನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದರು.

ಕಸ್ಟೋಡಿಯಲ್ ಡೆತ್‌ಗೆ ಶಾಶ್ವತ ಕಡಿವಾಣಕ್ಕೆ ಕ್ರಮ

ಬೆಂಗಳೂರು: ಪೊಲೀಸ್ ಕಸ್ಟಡಿಯಲ್ಲಿ ರುವಾಗ ಆರೋಪಿಗಳ ಮೇಲೆ ನಡೆಯುವ ದೌರ್ಜನ್ಯ ಹಾಗೂ ಕಸ್ಟೋಡಿಯಲ್ ಡೆತ್ (ವಶದಲ್ಲಿ ಸಾವು) ಪ್ರಕರಣಗಳಿಗೆ ಶಾಶ್ವತ ಕಡಿವಾಣ ಹಾಕಲು ರಾಜ್ಯ ಪೊಲೀಸ್ ಇಲಾಖೆ ಕಠಿಣ ನಿಯಮಗಳನ್ನು ಜಾರಿಗೊಳಿಸಿದೆ.

ಸೂಕ್ಷ್ಮ ಪ್ರಕರಣಗಳ ತನಿಖಾ ಅವಧಿಯಲ್ಲಿ ಸ್ಥಳೀಯ ಪೊಲೀಸರಿಂದ ನಡೆಯಬಹುದಾದ ತನಿಖಾ ವೈಫಲ್ಯ, ಕರ್ತವ್ಯ ಲೋಪ ಹಾಗೂ ಸಾಕ್ಷ್ಯನಾಶದ ಯತ್ನಗಳನ್ನು ಸಂಪೂರ್ಣವಾಗಿ ತಡೆಯುವ ಸಲುವಾಗಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ ಅವರು ಕಟ್ಟುನಿಟ್ಟಿನ ಮಾರ್ಗಸೂಚಿಯನ್ನು ಹೊರಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪೊಲೀಸ್ ಕಸ್ಟಡಿಯಲ್ಲಿ ಆರೋಪಿಗಳ ಮೇಲೆ ದೌರ್ಜನ್ಯ ಎಸಗುವ ಮತ್ತು ಲಾಕಪ್ ಡೆತ್ ಆಗುವ ಪ್ರಕರಣಗಳಲ್ಲಿ ಸ್ಥಳೀಯ ತನಿಖಾ ಅಧಿಕಾರಿಗಳು ತನಿಖೆಯ ವೇಳೆ ಲೋಪ ಎಸಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿತ್ತು. ಎಫ್‌ಐಆರ್ ದಾಖಲಿಸುವುದು, ಸ್ಥಳ ಮಹಜರು ಮಾಡುವುದು ಸೇರಿದಂತೆ ಪ್ರಮುಖ ಸಾಕ್ಷ್ಯಾಧಾರಗಳನ್ನು ಕಲೆ ಹಾಕುವಲ್ಲಿ ಸ್ಥಳೀಯ ತನಿಖಾಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದರು. ಇದು ಮುಂದಿನ ದಿನಗಳಲ್ಲಿ ಪ್ರಕರಣ ಸಿಐಡಿ ತನಿಖೆಗೆ ವರ್ಗಾವಣೆಯಾದಾಗ ತನಿಖೆಯ ದಿಕ್ಕು ತಪ್ಪಿಸಲು ಕಾರಣವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಇಡೀ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಲು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಅಡಿಯಲ್ಲಿ ಈ ಹೊಸ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ಇಲಾಖೆ ಹೊರಡಿಸಿದೆ.

ವಿಡಿಯೋ ರೆಕಾರ್ಡಿಂಗ್ ಕಡ್ಡಾಯ: ಪೊಲೀಸ್ ಕಸ್ಟಡಿಯಲ್ಲಿ ದೌರ್ಜನ್ಯ ನಡೆದ ತಕ್ಷಣವೇ ಸ್ಥಳೀಯ ಠಾಣಾಧಿಕಾರಿಗಳು ಯಾವುದೇ ವಿಳಂಬವಿಲ್ಲದೆ ಕಡ್ಡಾಯವಾಗಿ ಎಫ್‌ಐಆರ್ ದಾಖಲಿಸಬೇಕು ಮತ್ತು ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ತಕ್ಷಣವೇ ವರದಿ ಸಲ್ಲಿಸಬೇಕಾಗುತ್ತದೆ. ದೌರ್ಜನ್ಯ ಅಥವಾ ಸಾವು ಸಂಭವಿಸಿದ ತಕ್ಷಣವೇ ಸಂಬಂಧಪಟ್ಟ ಪೊಲೀಸ್ ಠಾಣೆಯ ಸಿಸಿಟಿವಿ ದೃಶ್ಯಾವಳಿಗಳನ್ನು ವಶಪಡಿಸಿ ಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.

ನಿಯಮ ಮೀರುವ ಅಧಿಕಾರಿಗಳ ವಿರುದ್ಧ ಕ್ರಮ

ಪೊಲೀಸ್ ಇಲಾಖೆಯ ಘನತೆಗೆ ಧಕ್ಕೆ ತರುವ ಇಂತಹ ಪ್ರಕರಣಗಳ ತನಿಖಾ ಅವಧಿಯಲ್ಲಿ ಯಾವುದೇ ಹಂತದಲ್ಲೂ ನಿಯಮ ಉಲ್ಲಂಘನೆಯಾದರೆ ಅಥವಾ ಸ್ಥಳೀಯ ಪೊಲೀಸರು ಪ್ರಭಾವ ಬೀರಲು ಯತ್ನಿಸಿದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ನಿಯಮ ಮೀರುವ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಮತ್ತು ಶಿಸ್ತು ಕ್ರಮ ಜರುಗಿಸುವುದಾಗಿ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಆದೇಶದ ಮೂಲಕ ಎಚ್ಚರಿಕೆ ನೀಡಿದ್ದಾರೆ.

ಹೊಸ ಕಲ್ಯಾಣ ಯೋಜನೆಗಳಿಗೆ ಪಶ್ಚಿಮ ಬಂಗಾಳ ಸಂಪುಟ ಅಸ್ತು

ಪುಟ 1 ➡ ಹಿಂದಿನ ಸರ್ಕಾರ ಮಾರ್ಚ್‌ನಲ್ಲಿ ಗೌರವಧನವನ್ನು 500 ರೂ.ಹೆಚ್ಚಳ ಮಾಡಿದ್ದರಿಂದ, ನೋಂದಾಯಿತ ಇಮಾಮ್‌ಗಳಿಗೆ ಮಾಸಿಕ 3,000 ರೂ. ಹಾಗೂ ಮುಯೆಜ್ಜಿನ್ ಮತ್ತು ಪುರೋಹಿತರಿಗೆ 2,000 ರೂ.ಸಿಗುತ್ತಿತ್ತು. ಆದರೆ, ವಿದ್ಯಾರ್ಥಿವೇತನ ಯೋಜನೆಗಳು ಹಿಂದಿನಂತೆಯೇ ಮುಂದುವರಿಯಲಿವೆ.

ಸಮಾಜ ಕಲ್ಯಾಣ ಯೋಜನೆಗಳು: ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ, ಜೂನ್ 1 ರಿಂದ ಮಹಿಳೆಯರಿಗೆ ಮಾಸಿಕ 3,000 ರೂ. ಆರ್ಥಿಕ ನೆರವು ನೀಡುವ 'ಅನ್ನಪೂರ್ಣ' ಯೋಜನೆಗೆ ಅನುಮೋದನೆ ನೀಡಲಾಗಿದೆ. ಪ್ರಸ್ತುತ 'ಲಕ್ಷ್ಮೀರ್ ಭಂಡಾರ್' ಯೋಜನೆ ಅಡಿಯಲ್ಲಿ ನೆರವು ಪಡೆಯುತ್ತಿರುವವರು ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಸ್ವಯಂ ಚಾಲಿತವಾಗಿ ಈ ಯೋಜನೆಗೆ ಅರ್ಹರಾಗಲಿದ್ದು, ಹೊಸದಾಗಿ ಅರ್ಜಿ ಸಲ್ಲಿಸಲು ವೆಬ್ ಪೋರ್ಟಲ್ ಪ್ರಾರಂಭಿಸಲಾಗುವುದು.

ಸಿಎಎ ಅಡಿಯಲ್ಲಿ ಪೌರತ್ವಕ್ಕೆ ಅರ್ಜಿ ಸಲ್ಲಿಸಿದವರು ಮತ್ತು ಮತದಾರರ ಪಟ್ಟಿಗೆ ಹೆಸರು ಸೇರಿಸಲು ನ್ಯಾಯಾಧಿಕರಣವನ್ನು ಸಂಪರ್ಕಿಸಿದ ಮಹಿಳೆಯರೂ ಈ ಯೋಜನೆಗೆ ಅರ್ಹರಾಗಿರುತ್ತಾರೆ. ಇದರೊಂದಿಗೆ ಜೂನ್ 1 ರಿಂದ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೂ ಸಂಪುಟ ಒಪ್ಪಿಗೆ ನೀಡಿದೆ.

ಹಿಂದುಳಿದ ವರ್ಗಗಳ ಪಟ್ಟಿ ರದ್ದು

ಕಲ್ಕತ್ತಾ ಹೈಕೋರ್ಟ್‌ನ ಮೇ 22, 2024ರ ತೀರ್ಪಿಗೆ ಅನುಗುಣವಾಗಿ, ರಾಜ್ಯದ ಪ್ರಸ್ತುತ ಇತರ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯನ್ನು ಸಚಿವ ಸಂಪುಟ ರದ್ದುಗೊಳಿಸಿದೆ. ಈ ಪಟ್ಟಿಯಲ್ಲಿ ಈ ಹಿಂದೆ 77 ಸಮುದಾಯಗಳನ್ನು ಸೇರಿಸಲಾಗಿದ್ದು, ಅದರಲ್ಲಿ 75 ಮುಸ್ಲಿಂ ಸಮುದಾಯಗಳಾಗಿದ್ದವು. ಒಬಿಸಿಗೆ ಅರ್ಹತೆ ನಿರ್ಧರಿಸಲು ಹೊಸ ಸಮಿತಿ ರಚಿಸಲಾಗುವುದು. ಇದಲ್ಲದೆ, ಸರ್ಕಾರಿ ನೌಕರರು ಮತ್ತು ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳ ವೇತನ ಪರಿಷ್ಕರಣೆಗಾಗಿ 7 ನೇ ರಾಜ್ಯ ವೇತನ ಆಯೋಗವನ್ನು ರಚಿಸಲು ಸಂಪುಟ ಅನುಮೋದನೆ ನೀಡಿದೆ, ಆದರೆ ತುಟ್ಟಿಭತ್ಯೆ (ಡಿಎ) ಹೆಚ್ಚಳದ ಕುರಿತು ಸಭೆಯಲ್ಲಿ ಚರ್ಚಿಸಲಾಗಿಲ್ಲ.

ಭದ್ರತಾ ಸಮಸ್ಯೆಗಳಿಂದ ದೇಶ ಮುಕ್ತ

ಪುಟ 1 ➡ ಭಾರತವು ನಕ್ಸಲ್ ಮುಕ್ತವಾಗಿರುವುದರಿಂದ ಇಂದು ದೇಶಕ್ಕೆ ದೊಡ್ಡ ದಿನವಾಗಿದೆ. ಹಲವಾರು ಭದ್ರತಾ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ನಂತರ ಇದು ಸಾಧಿಸಲಾದ ಕನಸಾಗಿತ್ತು ಎಂದು ಬಸ್ತರ್ ಅಕಾಡೆಮಿ ಆಫ್ ಡ್ಯಾನ್ಸ್, ಆರ್ಟ್ ಅಂಡ್ ಲಿಟರೇಚರ್ (ಬದಲ್) ಕ್ಯಾಂಪಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾ ಹೇಳಿದರು. 2014ರಲ್ಲಿ ಮೋದಿ ಸರ್ಕಾರ ಅಧಿಕಾರ ವಹಿಸಿಕೊಂಡಾಗ, ಜಮ್ಮು –ಕಾಶ್ಮೀರ, ಈಶಾನ್ಯ ರಾಜ್ಯಗಳು ಮತ್ತು ಎಡಪಂಥೀಯ ಉಗ್ರವಾದದಲ್ಲಿ ಸವಾಲುಗಳು (ಆಂತರಿಕ ಭದ್ರತೆಗೆ ಸಂಬಂಧಿಸಿದ) ಇದ್ದವು. ದೇಶವು ಈ ಮೂರು ಸಮಸ್ಯೆಗಳಿಂದ ಮುಕ್ತವಾಗಿದೆ ಎಂದು ನಾನು ಈಗ ಹೇಳಬಲ್ಲೆ ಎಂದು ಶಾ ಹೇಳಿದರು

ಶೀಘ್ರ ಒಂದು ರಾಷ್ಟ್ರ ಒಂದು ಚುನಾವಣೆ ಜಾರಿಯಾಗಲಿ

ಪುಟ 1 ➡ ವಿದ್ವ ಪುರಸ್ಕೃತರಾದ ವಸಂತ ಶಾಸ್ತ್ರಿ, ಕೆ. ವೆಂಕಟೇಶ್, ಡಾ. ವಿಜಯಲಕ್ಷ್ಮಿ ದೇಶಮಾನೆ, ಕೆ.ಎಸ್. ಜಯಲಕ್ಷ್ಮೀ, ರಿಕ್ಕಿ ಕೇಜ್ ಸಹಿತ ಅನೇಕ ಜನ ಪದ್ಮ ಪುರಸ್ಕೃತರು ಪಾಲ್ಗೊಂಡು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ದೇಶದಲ್ಲಿ ಒಂದು ವರ್ಷಕ್ಕೆ 5–6 ವಿಧಾನಸಭೆ ಚುನಾವಣೆಗಳು ನಡೆಯುತ್ತವೆ. ಇದರಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವಿವಿಧ ವಲಯಗಳ ಜನರ ಮೇಲೆ ಪರಿಣಾಮ ಬೀರುತ್ತಿದೆ. ಒಂದು ರಾಜ್ಯದಲ್ಲಿ ಚುನಾವಣೆ ನಡೆದಾಗ, ಇತರ ರಾಜ್ಯಗಳ ಮೇಲೂ ಅದರ ಪರಿಣಾಮ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆ ಜಾರಿಯಾದಾಗ ಶಿಕ್ಷಕರು, ಆರಕ್ಷಕರು, ಇತರ ಚುನಾವಣಾ ಸಿಬ್ಬಂದಿಯ ಹೊರೆ ಕಡಿಮೆಯಾಗುತ್ತದೆ. ಕಾರ್ಮಿಕರು, ವಲಸಿಗರು ಸೇರಿದಂತೆ ದೇಶಾದ್ಯಂತ ಎಲ್ಲರಿಗೂ ಮತದಾನದ ಅವಕಾಶ ದೊರೆಯಬೇಕು ಎನ್ನುವುದು ಈ ಸಮಿತಿಯ ಉದ್ದೇಶ. ಹಾಗಾಗಿ ಚುನಾವಣೆಯನ್ನು ಒಂದು ಹಂತ ಅಥವಾ ಹಲವು ಹಂತಗಳಲ್ಲಿ ನಡೆಸಿದಾಗ ಎಲ್ಲರಿಗೂ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿದೆ ಎಂದು ಸಮಿತಿ ಅಧ್ಯಕ್ಷ ಪಿ.ಪಿ. ಚೌಧರಿ ಸಂವಾದದಲ್ಲಿ ಹೇಳಿದರು. ಚುನಾವಣೆ ಸುರಕ್ಷಿತವಾಗಿ ನಡೆಯುವುದಕ್ಕೆ ಚುನಾವಣಾ ಆಯೋಗ, ಗೃಹ ಸಚಿವಾಲಯ, ಇವಿಎಂ ಯಂತ್ರಗಳ ಸಿದ್ಧತೆ, ಅಂಚೆ ಮತಗಳು ಹೀಗೆ ವಿವಿಧ ರೀತಿಯ ಸಹಯೋಗ ಅವಶ್ಯ. ಸಮಿತಿಯ ಪ್ರಸ್ತಾವನೆಗಳು ಎಲ್ಲರಿಗೂ ತೃಪ್ತಿಕರವಾದಾಗ ಒಂದು ರಾಷ್ಟ್ರ ಒಂದು ಚುನಾವಣೆ ಅನುಷ್ಠಾನವೂ ಸುಲಭವಾಗುತ್ತದೆ. ಇದರಿಂದ ಚುನಾವಣೆಯ ವೆಚ್ಚವನ್ನೂ ದೊಡ್ಡ ಪ್ರಮಾಣದಲ್ಲಿ ತಗ್ಗಿಸಬಹುದು ಎಂದರು.

ಅಭಿಪ್ರಾಯ ಸಂಗ್ರಹ

ಜಂಟಿ ಸದನ ಸಮಿತಿಯು ಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಪೊಲೀಸ್ ಇಲಾಖೆ ಮುಖ್ಯಸ್ಥರು, ಹಣಕಾಸು ಇಲಾಖೆ, ಗೃಹ, ಶಿಕ್ಷಣ, ಪ್ರವಾಸೋದ್ಯಮ, ಕೃಷಿ ಇಲಾಖೆ, ಕೈಗಾರಿಕೆ, ಆರೋಗ್ಯ, ಕಾರ್ಮಿಕ ಇಲಾಖೆ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಎಚ್‌ಎಎಲ್, ಬಿಇಎಲ್, ಬಿಇಎಂಎಲ್, ಬಿಎಚ್‌ಇಎಲ್, ಕೆಐಒಸಿಎಲ್, ಕೆಪಿಸಿಎಲ್, ಐಟಿಐ ಲಿಮಿಟೆಡ್, ಐಐಎಂ, ನ್ಯಾಷನಲ್ ಸ್ಕೂಲ್ ಪ್ರತಿನಿಧಿಗಳಿಂದಲೂ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಒಂದೇ ಬಾರಿಗೆ ದೇಶದಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಆಗುವ ಸಾಧಕ–ಬಾಧಕಗಳನ್ನು ಸಮಿತಿ ಸಂಗ್ರಹಿಸಿತು.

ಸಾಕಾನೆಗಳ ಕಾದಾಟ: ಚೆನ್ನೈ ಮಹಿಳೆ ಸಾವು

ಪುಟ 1 ➡ ಅದರಂತೆ ಜೋಯಲ್ ದಂಪತಿ ಸೋಮವಾರ ಆನೆಗೆ ಸ್ನಾನ ಮಾಡಿಸುವಾಗ ಸಾಕಾನೆಗಳೆರಡರ ನಡುವೆ ಕಾದಾಟ ನಡೆದಿದೆ. ಈ ಸಂದರ್ಭ ಕಾಡಾನೆಯೊಂದು ಮಹಿಳೆಯ ಮೈಮೇಲೆ ಬಿದ್ದಿದೆ. ಪರಿಣಾಮವಾಗಿ ಅವರು ಸ್ಥಳದಲ್ಲೇ ಸಾವಿಗೀಡಾದರೆ, ಪತಿ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಿರ್ದಿಷ್ಟ ಅಂತರ ಕಾಯ್ದುಕೊಳ್ಳಲು ಕ್ರಮವಹಿಸಿ

ಆನೆಗಳು ಸೇರಿದಂತೆ ವನ್ಯಜೀವಿಗಳನ್ನು ಎಷ್ಟೇ ಪಳಗಿಸಿದ್ದರೂ, ಪ್ರಾಣಿಗಳ ಸ್ವಭಾವವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟಸಾಧ್ಯವಾಗಿದ್ದು, ಅವು ಯಾವಾಗ ಯಾವ ರೀತಿ ವರ್ತಿಸುತ್ತವೆ ಎಂದು ಊಹಿಸುವುದೂ ಕಷ್ಟವಾಗುತ್ತದೆ. ಹೀಗಾಗಿ ಆನೆಗಳ ಸೊಂಡಿಲು ಮುಟ್ಟುವುದು, ಪಕ್ಕದಲ್ಲಿ ನಿಂತು ಫೋಟೋ ತೆಗೆಸಿಕೊಳ್ಳುವುದು, ಪ್ರವಾಸಿಗರಿಗೆ ಆನೆ ಮೈ ತೊಳೆಯಲು ಅವಕಾಶ ನೀಡುವುದು, ಅವರಿಂದ ಬೆಲ್ಲ, ಬಾಳೆಹಣ್ಣು ಇತ್ಯಾದಿ ಆಹಾರ ತಿನ್ನಿಸುವುದನ್ನು ನಿರ್ಬಂಧಿಸಲು ಕ್ರಮ ವಹಿಸುವಂತೆ ಮತ್ತು ವನ್ಯಜೀವಿಗಳಿಂದ ಪ್ರವಾಸಿಗರು ನಿರ್ದಿಷ್ಟ ಅಂತರ ಕಾಯ್ದುಕೊಳ್ಳುವಂತೆ ಕ್ರಮ ವಹಿಸುವಂತೆ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಸಮಗ್ರ ತನಿಖೆಗೆ ಸಚಿವ ಸೂಚನೆ

ಮಡಿಕೇರಿ/ ಕುಶಾಲನಗರ: ಯಾರೂ ಊಹಿಸದ ರೀತಿಯಲ್ಲಿ ದುಬಾರೆ ಆನೆ ಶಿಬಿರದಲ್ಲಿ ದುರ್ಘಟನೆ ನಡೆದಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಇಂತಹ ಅಚಾತುರ್ಯಗಳು ಮರುಕಳಿಸದ ರೀತಿಯಲ್ಲಿ ಕ್ರಮ ವಹಿಸಲು ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ಕೊಡಗು ಜಿಲ್ಲೆಯ ದುಬಾರೆ ಶಿಬಿರದಲ್ಲಿ ಎರಡು ಸಾಕಾನೆಗಳ ಕಾದಾಟದ ವೇಳೆ ಅನಿರೀಕ್ಷಿತವಾಗಿ ಆಯ ತಪ್ಪಿ ಬಿದ್ದ ಆನೆಯ ಕೆಳಗೆ ಸಿಲುಕಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ಸಚಿವರು ಸಂತಾಪ ಸೂಚಿಸಿದ್ದಾರೆ. ಇದು ಅತ್ಯಂತ ಆಘಾತಕಾರಿ ಘಟನೆ, ಆನೆಗಳನ್ನು ಸ್ನಾನ ಮಾಡಿಸುವಾಗ ನದಿಯ ಬಳಿ ನಿಂತು ನೋಡುತ್ತಿದ್ದ ತಮಿಳುನಾಡಿನ ಪ್ರವಾಸಿ ಮಹಿಳೆ ಈ ಅಪಘಾತದಂತಹ ಘಟನೆಯಲ್ಲಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಮಗೆ ತಿಳಿಸಿದ್ದು, ಇದು ಅತ್ಯಂತ ನೋವಿನ ಸಂಗತಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಸಚಿವರು ಪ್ರಾರ್ಥಿಸಿದ್ದಾರೆ. ಸಾಕಾನೆಗಳಾದ ಕಂಚನ್ ಮತ್ತು ಮಾರ್ತಾಂಡ ಆನೆಗಳು ಸ್ನಾನ ಮಾಡಿಸುತ್ತಿದ್ದ ವೇಳೆ ಪರಸ್ಪರ ಕಾದಾಟ ನಡೆಸಿದ್ದು, ಮಾವುತರು ನಿಯಂತ್ರಿಸುತ್ತಿದ್ದರೂ ಮುನ್ನುಗ್ಗಿದ ಕಂಜನ್ ಆನೆ, ಮಾರ್ತಾಂಡ ಆನೆಗೆ ಗುದ್ದಿದೆ. ಮಾರ್ತಾಂಡ ಆಯ ತಪ್ಪಿ ಕೆಳಗೆ ಬಿದ್ದಾಗ, ಈ ಮಹಿಳೆ ಆನೆಯ ಕೆಳಗೆ ಸಿಲುಕಿ ಮೃತಪಟ್ಟಿದ್ದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಬಸ್ ಉಚಿತ ಪ್ರಯಾಣ ಘೋಷಣೆ

ಪುಟ 1 ➡ ಒಂದೂವರೆ ಗಂಟೆಕಾಲ ನಡೆದ ಪ್ರಮಾಣವಚನದ ಬೆನ್ನಿಗೇ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರ ಅಧ್ಯಕ್ಷತೆಯಲ್ಲಿ ಸಂಪುಟ ಸಭೆ ನಡೆದು ಕೆಎಸ್ಆರ್‌ಟಿಸಿ (ಕೇರಳ ಸಾರಿಗೆ) ಬಸ್ಸುಗಳಲ್ಲಿ ಜೂ.15ರಿಂದ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ , ಹಿರಿಯ ನಾಗರಿಕರಿಗಾಗಿ ಇಲಾಖೆ ರಚನೆ ಮತ್ತು ಆಶಾ ಕಾರ್ಯಕರ್ತೆಯರ ಗೌರವಧನವನ್ನು 3000ರೂ.ಗಳಿಗೆ ಹೆಚ್ಚಿಸಲು ಅಂಗೀಕಾರ ನೀಡಲಾಯಿತು. ಯುಡಿಎಫ್ ಚುನಾವಣೆಯ ಸಮಯದಲ್ಲಿ ನೀಡಿದ ಇತರ ಭರವಸೆಗಳಲ್ಲಿ ಕಾಲೇಜು ಹೆಣ್ಣುಮಕ್ಕಳಿಗೆ ತಿಂಗಳಿಗೆ 1000ರೂ., ಕಲ್ಯಾಣ ಪಿಂಚಣಿ 3000ರೂ.ಗೆ ಹೆಚ್ಚಳ, ಪ್ರತಿ ಕುಟುಂಬಕ್ಕೆ 25ಲ.ರೂ.ಗಳ ವಿಮಾ ಸೌಲಭ್ಯ, ಯುವ ಉದ್ಯಮಿಗಳಿಗೆ 5ಲ.ರೂ.ವರೆಗೆ ಬಡ್ಡಿರಹಿತ ಸಾಲ ನೀಡಿಕೆ ಸೇರಿದ್ದು , ಈ ಬಗ್ಗೆ ಯಾವುದೇ ನಿರ್ಧಾರ ಪ್ರಕಟಿಸಿಲ್ಲ. ಈ ಭರವಸೆಗಳನ್ನು ಹಂತಹಂತವಾಗಿ ಜಾರಿಗೊಳಿಸಲಾಗುವುದು ಎಂದು ಸತೀಶನ್ ಹೇಳಿದರು.

ಅಂಗನವಾಡಿ ಸಹಾಯಕರ ಮಾಸಿಕ ಸಂಭಾವನೆ 1000 ರೂ.ಗಳ ಹೆಚ್ಚಳ, ಶಾಲೆಗಳ ಬಿಸಿಯೂಟದ ಸಿಬ್ಬಂದಿಗೆ ತಿಂಗಳಿಗೆ ಹೆಚ್ಚುವರಿಯಾಗಿ 1000 ರೂ., ಪೂರ್ವ ಪ್ರಾಥಮಿಕ ಶಿಕ್ಷಕಿಯರು ಮತ್ತು ಆಯಾಗಳ ಗೌರವ ಧನವನ್ನು 1000 ರೂ.ಗಳಷ್ಟು ಹೆಚ್ಚಿಸಲಾಗುವುದು ಎಂದೂ ಅವರು ತಿಳಿಸಿದರು.

ರಾಜ್ಯದಲ್ಲಿ ಆರ್ಥಿಕ ಸಂಕಷ್ಟ: ಹಿಂದಿನ ಎಲ್‌ಡಿಎಫ್ ಸರಕಾರ ರಾಜ್ಯದ ಆರ್ಥಿಕ ಸ್ಥಿತಿಯನ್ನು ವಿಷಮ ಸ್ಥಿತಿಗೆ ತಳ್ಳಿರುವುದಾಗಿ ಯುಡಿಎಫ್ ಆರೋಪಿಸಿದ್ದು, ಇದೀಗ ರಾಜ್ಯದ ಹಣಕಾಸು ಸ್ಥಿತಿಗತಿ ಮತ್ತು ಸರಕಾರಿ ಬೊಕ್ಕಸದ ಕುರಿತಂತೆ ಶ್ವೇತಪತ್ರ ಬಿಡುಗಡೆಗೊಳಿಸಲಾಗುವುದು ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ನೂತನ ವಿಧಾನಸಭೆಯ ಅಧಿವೇಶನ ಮೇ 21 ಮತ್ತು 22ರಂದು ನಡೆಯಲಿದ್ದು, ಅಲ್ಲಿ ವಿಧಾನಸಭಾಧ್ಯಕ್ಷರ ಚುನಾವಣೆ ಮತ್ತು ನೂತನ ಶಾಸಕರು ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದೂ ಅವರು ಪ್ರಕಟಿಸಿದರು. ಮೇ 29ರಂದು ರಾಜ್ಯಪಾಲರು ಸದನವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಸಂಪುಟ ಸಭೆಯಲ್ಲಿ ಕೈಗೊಳ್ಳಲಾದ ಇನ್ನೊಂದು ನಿರ್ಧಾರದಂತೆ, ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಅಂಗರಕ್ಷಕರಿಂದ ಇಬ್ಬರು ಯುವಕಾಂಗ್ರೆಸ್ ಕಾರ್ಯಕರ್ತರ ಮೇಲೆ ನಡೆದ ಹಲ್ಲೆ (2023ರಲ್ಲಿ ಆಲಪ್ಪುಳದಲ್ಲಿ ನಡೆದ ನವಕೇರಳ ಯಾತ್ರೆಯ ವೇಳೆ)ಯ ಬಗ್ಗೆ ಮರುತನಿಖೆಗೆ ವಿಶೇಷ ತನಿಖಾ ತಂಡ ರಚಿಸಲಾಗುವುದು ಎಂದು ತಿಳಿಸಲಾಗಿದೆ.

ದೇವರ ಹೆಸರಲ್ಲಿ ಪ್ರಮಾಣ: ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು (ಪರಾವೂರ್ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ) ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಪ್ರಮಾಣವಚನಕ್ಕಾಗಿ ಅವರ ಪೂರ್ಣ ಹೆಸರನ್ನು ಕೂಗುತ್ತಿದ್ದಂತೆಯೇ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಬೆಂಬಲಿಗರು ಹರ್ಷೋದ್ಗಾರಗೈದರು. ಈ ಬಾರಿಯ ಚುನಾವಣೆಯಲ್ಲಿ 140 ಸದಸ್ಯಬಲದ ವಿಧಾನಸಭೆಯಲ್ಲಿ ಯುಡಿಎಫ್ 102 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿದ್ದರೆ, ಆಡಳಿತದಲ್ಲಿದ್ದ ಎಲ್‌ಡಿಎಫ್ 35 ಸ್ಥಾನಗಳೊಂದಿಗೆ ಹೀನಾಯ ಸೋಲುಂಡಿದೆ. ಬಿಜೆಪಿ ಇದೇ ಮೊದಲ ಬಾರಿಗೆ 3 ಸದಸ್ಯರೊಂದಿಗೆ ವಿಧಾನಸಭೆಯನ್ನು ಪ್ರವೇಶಿಸುತ್ತಿದೆ.

ನೂತನ ಸಚಿವರು: ರಮೇಶ್ ಚೆನ್ನಿತ್ತಲ, ಕೆ.ಮುರಳೀಧರನ್, ಎ.ಪಿ.ಅನಿಲ್ ಕುಮಾರ್, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಸನ್ನಿ ಜೋಸೆಫ್, ಮುಸ್ಲಿಂ ಲೀಗಿನ ಕುಂಞಾಲಿಕುಟ್ಟಿ , ಆರ್‌ಎಸ್‌ಪಿ ನಾಯಕ ಶಿಬು ಬೇಬಿ ಜಾನ್ , ಕೇರಳ ಕಾಂಗ್ರೆಸ್ ನಾಯಕ ಮಾನ್ಸ್ ಜೋಸೆಫ್, ಕೇರಳ ಕಾಂಗ್ರೆಸ್ (ಜಾಕೋಬ್)ನ ಅನೂಪ್ ಜಾಕೋಬ್, ಸಿಎಂಪಿ ನಾಯಕ ಸಿ.ಪಿ.ಜಾನ್ , ಎನ್.ಶಂಸುದ್ದೀನ್, ವಿಷ್ಣುನಾಥ್, ಬಿಂದುಕೃಷ್ಣ, ರೋಜಿ ಎಂ.ಜಾನ್, ಎಂ.ಲಿಜು, ಕೆ.ಎಂ.ಶಾಜಿ, ವಿ.ಇ.ಅಬ್ದುಲ್ ಗಫೂರ್, ಟಿ.ಸಿದ್ದಿಕಿ, ಕೆ.ಎ.ತುಳಸಿ, ಒ.ಜೆ.ಜನೀಶ್ ಅವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು."ಟೀಮ್ ಯುಡಿಎಫ್"ಘೋಷಣೆ ಮುಗಿಲುಮುಟ್ಟಿತ್ತು.

3 ಸಾವಿರ ಬಸ್‌ಗಳ ಸೌಲಭ್ಯ | ಉಪಾಹಾರ ವ್ಯವಸ್ಥೆ | ಅಧಿಕಾರಿಗಳ ನಿಯೋಜನೆ | ವಾಹನಗಳ ಮೇಲೆ ಜಿಪಿಎಸ್‌ನಿಗಾ

ತುಮಕೂರಲ್ಲಿಂದು ಸರ್ಕಾರದ ಸಾಧನೆಯ ಸಂಭ್ರಮ



ತುಮಕೂರು: ಮಂಗಳವಾರ ನಗರದಲ್ಲಿ ನಡೆಯಲಿರುವ ಸಾಧನೆಯ ಸೇವೆಗಳ ಸಮರ್ಪಣೆ ಕಾರ್ಯಕ್ರಮಕ್ಕೆ ಕಂದಾಯ ಇಲಾಖೆ ಹಾಗೂ ಪಂಚಾಯಿತಿ ಹಂತದಲ್ಲಿ ಎಲ್ಲಾ ತಾಲೂಕುಗಳಿಂದ ಸುಮಾರು 3,000 ಬಸ್‌ಗಳಲ್ಲಿ ಫಲಾನುಭವಿಗಳು ಆಗಮಿಸುತ್ತಿದ್ದಾರೆ. ಹಾಗಾಗಿ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ.ಪರಮೇಶ್ವರ ತಿಳಿಸಿದರು.

ಸೋಮವಾರ ಕಾರ್ಯಕ್ರಮ ನಡೆಯಲಿರುವ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿನ ಪೂರ್ವ ಸಿದ್ಧತೆ ಪರಿಶೀಲಿಸಿದ ನಂತರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಬಸ್ ಹೊರಡುವ ಜಾಗದಲ್ಲಿಯೇ ಫಲಾನುಭವಿಗಳಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಫಲಾನುಭವಿಗಳನ್ನು ಸುರಕ್ಷತೆಯಿಂದ ಕರೆತರಲು ಮತ್ತು ವಾಪಸ್ ಕರೆದುಕೊಂಡು ಹೋಗಲು ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಬಸ್ ಹೊರಡುವ ಜಾಗದಿಂದ ಜಿಪಿಎಸ್ ವ್ಯವಸ್ಥೆ ಮೂಲಕ ಮಾರ್ಗದ ಮೇಲೆ ನಿಗಾವಹಿಸಲು ಸೂಚಿಸಲಾಗಿದೆ. ಜಿಲ್ಲೆಯಾದ್ಯಂತ ಸುಮಾರು 1,52,000ಕ್ಕೂ ಹೆಚ್ಚು ಫಲಾನುಭವಿ ಗಳೇ ಇದ್ದು, ಒಟ್ಟು ಸುಮಾರು 2 ಲಕ್ಷಕ್ಕೂ ಹೆಚ್ಚಿನ ಜನರು ಈ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದು ಸಚಿವರು ವಿವರಿಸಿದರು. ಶಾಸಕ ಎಚ್.ವಿ.ವೆಂಕಟೇಶ್, ಗ್ಯಾರಂಟಿ ಸಮಿತಿಯ ಜಿಲ್ಲಾ ಅಧ್ಯಕ್ಷ ಚಂದ್ರಶೇಖರ್ ಗೌಡ, ಬಿಎಟಿಸಿ ಉಪಾಧ್ಯಕ್ಷ ನಿಕೇತ್ ರಾಜ್ ಎಂ., ಡಿಸಿ ಶುಭ ಕಲ್ಯಾಣ್ ಇದ್ದರು.

ಪ್ರತಿಪಕ್ಷದ ಮುಖಂಡರು ಭಾಗಿ

ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಎಲ್ಲಾ ಸಚಿವರಿಗೆ, ಶಾಸಕರಿಗೆ ಖುದ್ದು ಆಹ್ವಾನ ನೀಡಲಾಗಿದೆ. ಅಲ್ಲದೆ, ಪ್ರತಿಪಕ್ಷ ನಾಯಕರೂ, ಸಂಸದರೂ, ನಿಗಮ ಮಂಡಳಿ ಅಧ್ಯಕ್ಷರು, ಉಪಾಧ್ಯಕ್ಷರು, ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಚಿವರು ತಿಳಿಸಿದರು.

ಕೈ ಸರ್ಕಾರಕ್ಕೆ 3 ವರ್ಷ

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೇ 20 ಕ್ಕೆ ಮೂರು ವರ್ಷ ಪೂರ್ಣಗೊಳ್ಳಲಿದೆ. ಹಿನ್ನೆಲೆಯಲ್ಲಿ ಇಡೀ ಜಿಲ್ಲಾಡಳಿತದ ಅಧಿಕಾರಿಗಳು ಕಳೆದ 15 ದಿನಗಳಿಂದಲೇ ಸರ್ಕಾರದ ಸಾಧನಾ ಸಮಾವೇಶವನ್ನು ಅದ್ದೂರಿಯಾಗಿ ಹಾಗೂ ಯಶಸ್ವಿಯಾಗಿ ನಡೆಸಲು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ತುಮಕೂರು ನಗರದ ಪ್ರಮುಖ ರಸ್ತೆಗಳಲ್ಲಿ ಈಗಾಗಲೇ ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಹಾಗೂ ಸಾಧನೆಗಳ ಪಟ್ಟಿಯನ್ನೊಳಗೊಂಡ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಸಚಿವರುಗಳ ಭಾವಚಿತ್ರ ಇರುವ ಫ್ಲೆಕ್ಸ್, ಕಟೌಟ್‌ಗಳು ರಾರಾಜಿಸುತ್ತಿವೆ. ಸಮಾವೇಶಕ್ಕೆ ಫಲಾನುಭವಿಗಳನ್ನು ಕರೆತರಲು ಕಂದಾಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಸಮಾವೇಶಕ್ಕೆ ಆಗಮಿಸುವ ಫಲಾನುಭವಿಗಳಿಗೆ ಊಟ, ಕುಡಿಯುವ ನೀರಿನ ವ್ಯವಸ್ಥೆ ಸಹ ಮಾಡಲಾಗಿದೆ.



15 ಅಂಬುಲೆನ್ಸ್‌ಗಳ ವ್ಯವಸ್ಥೆ

ಸುರಕ್ಷತೆ ದೃಷ್ಟಿಯಿಂದ ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ ಹಾಗೂ ಕಾರ್ಯಕ್ರಮದ ಸ್ಥಳದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ 15 ಅಂಬುಲೆನ್ಸ್‌ಗಳನ್ನು ನುರಿತ ವೈದ್ಯಕೀಯ ಸಿಬ್ಬಂದಿಗಳೊಂದಿಗೆ ನಿಯೋಜನೆ ಮಾಡಲಾಗಿದೆ. ಅಗ್ನಿನಂದಕ ವಾಹನಗಳನ್ನು ನಿಯೋಜನೆ ಮಾಡಲಾಗಿದೆ. ಕಾರ್ಯಕ್ರಮದ ಸ್ಥಳದಲ್ಲಿ ಆಯಾ ಗ್ಯಾಲರಿಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು ಮತ್ತು ಮಜ್ಜಿಗೆಯ ವ್ಯವಸ್ಥೆಯನ್ನು ಮಾಡಲಾಗಿದ್ದು, ಅದರ ನಿರ್ವಹಣೆಗಾಗಿ ವಿವಿಧ ಜಿಲ್ಲಾ/ತಾಲೂಕು ಮಟ್ಟದ ಅಧಿಕಾರಿ/ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ ಎಂದು ವಿವರಿಸಿದರು.

ತಾಲೂಕುವಾರು ವಿವಿಧ ಯೋಜನೆಗಳ ಫಲಾನುಭವಿಗಳ ವಿವರ

ಕ್ರ. ಸಂ.	ತಾಲೂಕು	ಇ-ಪೌತಿ	ಕಂದಾಯ ಗ್ರಾಮ	ದರಖಾಸ್ತು ಪೋಡಿ	ಪಿಂಚಣಿ ಯೋಜನೆ	ಒಟ್ಟು
01	ñÜáÊÜáPÜãÃÜá	5641	1368	50	4516	11575
02	WÜá¹o	7828	4743	809	2314	15694
03	PÜá~WÜÇ...	9110	648	529	3610	13897
04	£±ÜoãÃÜá	8872	1239	853	3618	14582
05	ñÜbÃÜáÊæàPæÃæ	7322	2671	744	2478	13215
06	bPÜRÝåPÜUÜÚÛ	9556	1980	446	2218	14200
07	ÊÜá«ÜáXÄ	9563	2307	273	3814	15957
08	ÎÃÝ	10582	1891	1908	3239	17623
09	±ÝÊÜWÜvÜ	5028	2049	435	2919	10430
10	PæãÃÜoWæÃæ	8018	1770	254	3123	13165
	Joár	81523	20666	6301	31848	140338

2ಲಕ್ಷ ಜನ ಬರುವ ನಿರೀಕ್ಷೆ

ಫಲಾನುಭವಿಗಳನ್ನು ಸುರಕ್ಷತೆಯಿಂದ ಕರೆತರಲು ಮತ್ತು ವಾಪಸ್ ಕರೆದುಕೊಂಡು ಹೋಗಲು ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಬಸ್ ಹೊರಡುವ ಜಾಗದಿಂದ ಜಿಪಿಎಸ್ ವ್ಯವಸ್ಥೆ ಮೂಲಕ ಮಾರ್ಗದ ಮೇಲೆ ನಿಗಾವಹಿಸಲು ಸೂಚಿಸಲಾಗಿದೆ. ಜಿಲ್ಲೆಯಾದ್ಯಂತ ಸುಮಾರು 1,52,000ಕ್ಕೂ ಹೆಚ್ಚು ಫಲಾನುಭವಿಗಳೇ ಇದ್ದು, ಒಟ್ಟು ಸುಮಾರು 2 ಲಕ್ಷಕ್ಕೂ ಹೆಚ್ಚಿನ ಜನರು ಈ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದು ಸಚಿವರು ವಿವರಿಸಿದರು.



1.40 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ, ಸವಲತ್ತು, ಆದೇಶ ಪತ್ರಗಳ ವಿತರಣೆ

ರಾಜ್ಯದಲ್ಲಿ ಒಂದು ಜಿಲ್ಲೆಯ ಹಂತದಲ್ಲಿ ಅತಿ ಹೆಚ್ಚು ಕಂದಾಯ ಇಲಾಖೆಯ ಫಲಾನುಭವಿಗಳನ್ನು ಹೊಂದಿರುವ ಜಿಲ್ಲೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಹಿಂದೆ ಹಾವೇರಿ ಮತ್ತು ಹೊಸಪೇಟೆಯಲ್ಲಿ ರಾಜ್ಯ ಮಟ್ಟದಲ್ಲಿ ಕಂದಾಯ ಇಲಾಖೆಯ ಸವಲತ್ತುಗಳ ವಿತರಣಾ ಸಮಾರಂಭಗಳನ್ನು ಆಯೋಜನೆ ಮಾಡಲಾಗಿತ್ತು. ಈಗ ತುಮಕೂರು ನಗರದಲ್ಲಿ ಕಂದಾಯ ಇಲಾಖೆಯ ವಿವಿಧ ಯೋಜನೆಗಳ 1.40 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ/ಸವಲತ್ತು/ಆದೇಶ ಪತ್ರಗಳನ್ನು ವಿತರಣೆ ಮಾಡಲು ರಾಜ್ಯಮಟ್ಟದ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರ ಜತೆಗೆ ತುಮಕೂರು ಜಿಲ್ಲಾ ವ್ಯಾಪ್ತಿಯ ಇತರೆ ಇಲಾಖೆಗಳ ವಿವಿಧ ಯೋಜನೆಯ ಸುಮಾರು 70 ಸಾವಿರ ಅರ್ಹ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಣೆ ಮಾಡಲಾಗುವುದು ಹಾಗೂ ಅಂದಾಜು ರೂ. 500.00 ಕೋಟಿ ರೂ.ಮೊತ್ತದ ತುಮಕೂರು ಜಿಲ್ಲಾ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಕೆಲವು ಪೂರ್ಣಗೊಂಡ ಕಾಮಗಾರಿಗಳ ಲೋಕಾರ್ಪಣೆಯೂ ನಡೆಯಲಿದೆ. ಉದ್ಘಾಟನೆ ಹಾಗೂ ನೂತನ ಕಾಮಗಾರಿಗಳಿಗೆ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಂಟಿಯಾಗಿ ನೆರವೇರಿಸಲಿದ್ದಾರೆ.



ಪೊಲೀಸ್ ಬಂದೋಬಸ್ತ್

3 ವರ್ಷದ ಸಾಧನಾ ಸಮಾವೇಶ ವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲು ಸರ್ಕಾರ ನಿರ್ಧರಿಸಿರುವ ಹಿನ್ನೆಲೆಯಲ್ಲಿ, ಮುಖ್ಯಮಂತ್ರಿಯಾದಿಯಾಗಿ ಎಲ್ಲಾ ಸಚಿವರು, ಶಾಸಕರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಅಲ್ಲದೇ ಒಂದೂವರೇ ಲಕ್ಷಕ್ಕೂ ಹೆಚ್ಚು ಜನರು ಸೇರುವ ಹಿನ್ನೆಲೆಯಲ್ಲಿ ತುಮಕೂರು ನಗರಾದ್ಯಂತ ಈಗಾಗಲೇ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಗಿದೆ. ಅಲ್ಲದೇ, ಹೊರ ಜಿಲ್ಲೆಗಳಿಂದಲೂ ಪೊಲೀಸ್ ಸಿಬ್ಬಂದಿ ಬಂದಿಳಿದಿದ್ದಾರೆ.

ಕಿರುಸುದ್ದಿ

ಕೆಪಿಸಿಸಿ ಕಚೇರಿಯಲ್ಲಿ ಗಲಾಟೆ

ಬೆಂಗಳೂರು: ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ಮತ್ತು ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಬೆಂಬಲಿಗರ ನಡುವೆ ಸೋಮವಾರ ಕೆಪಿಸಿಸಿ ಕಚೇರಿಯಲ್ಲಿ ಗಲಾಟೆ ನಡೆದಿದ್ದು, ಉಪಾಧ್ಯಕ್ಷೆ ದೀಪಿಕಾ ರೆಡ್ಡಿ, ಬಿಂದುಗೌಡ ಸೇರಿದಂತೆ 15 ಪದಾಧಿಕಾರಿಗಳನ್ನು ವಜಾ ಮಾಡಿದ್ದೆ ಗಲಾಟೆಗೆ ಕಾರಣವಾಗಿದೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಪ್ರತಿಭಟನೆ ನಡೆಸಲು ಕೆಪಿಸಿಸಿ ಕಚೇರಿಯಲ್ಲಿ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಇಬ್ಬರು ಬೆಂಬಲಿಗರ ನಡುವೆ ತೀವ್ರ ವಾಗ್ವಾದ, ತಳ್ಳಾಟ ನೂಕಾಟ ನಡೆದು ಕೊನೆಗೆ ಪರಿಸ್ಥಿತಿ ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿತು. ಹುದ್ದೆ ತಡೆಹಿಡಿದಿದ್ದು ಕಾನೂನು ಬಾಹಿರ ಹಾಗೂ ಪ್ರತೀಕಾರದ ಕ್ರಮ. ಇದು ಶಿಸ್ತಿನ ಕ್ರಮವಲ್ಲ, ವೈಯಕ್ತಿಕ ಸೇಡು. ಸ್ತ್ರೀ ದ್ವೇಷದ ಪಿತೂರಿ ಮತ್ತು ಸೇಡಿನ ರಾಜಕೀಯಕ್ಕೆ ಮೌನವಾಗುವುದಿಲ್ಲ. ಕಾಂಗ್ರೆಸ್ ಪಕ್ಷ ಹಾಗೂ ಹೈಕಮಾಂಡ್ ಮೇಲಿನ ನಿಷ್ಠೆ ಅಚಲ ಎಂದು ದೀಪಿಕಾ ರೆಡ್ಡಿ ಮಾಧ್ಯಮ ಹೇಳಿಕೆ ನೀಡಿದ್ದಾರೆ.

ಸಿಇಟಿ: ದಾಖಲೆ ಪರಿಶೀಲನೆಗೆ ಮೇ 21ರವರೆಗೆ ಕಾಲಾವಕಾಶ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಿ, ಇನ್ನೂ ದಾಖಲೆ ಪರಿಶೀಲನೆ ಮಾಡಿಕೊಳ್ಳದ ಅಭ್ಯರ್ಥಿಗಳು ಅಗತ್ಯ ಮೂಲ ದಾಖಲೆಗಳ ಸಮೇತ ಹತ್ತಿರದ ಸರ್ಕಾರಿ ಪಿಯು ಕಾಲೇಜುಗಳಿಗೆ ಮೇ 21ರೊಳಗೆ ಹೋಗಿ ಪರಿಶೀಲನೆ ಮಾಡಿಸಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೂಚಿಸಿದೆ. ಅಭ್ಯರ್ಥಿಗಳ ಕ್ಲೇಮ್ಸ್ ಸರ್ಟಿಫಿಕೇಟ್‌ನಲ್ಲಿ ಕ್ಲೇಮ್ಸ್ ನಾಟ್ ವೆರಿಫೈಯ್ಡ್ ಎಂದು ಮುದ್ರಿತವಾಗಿದ್ದಲ್ಲಿ ಅಂತಹವರು ಮಾತ್ರ ಸರ್ಕಾರಿ ಪಿಯು ಕಾಲೇಜಿಗೆ ಹೋಗಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಈ ಹಿಂದೆ ಅವಕಾಶ ನೀಡಿದ್ದಾಗಲೂ ಕೆಲವು ಅಭ್ಯರ್ಥಿಗಳು ತಮ್ಮ ಕಾಲೇಜುಗಳಲ್ಲಿ ದಾಖಲೆ ಪರಿಶೀಲನೆ ಮಾಡಿಕೊಂಡಿರುವುದಿಲ್ಲ. ಹೀಗಾಗಿ ಮತ್ತೊಮ್ಮೆ ಅವಕಾಶ ನೀಡಲಾಗಿದೆ. ಕ್ಲೇಮ್ಡ್ ಮತ್ತು ವೆರಿಫೈಯ್ಡ್ ಎಂದು ಅರ್ಜಿಯಲ್ಲಿ ಮುದ್ರಿತವಾಗಿರುವವರು ದಾಖಲೆ ಪರಿಶೀಲನೆಗೆ ಹೋಗುವ ಅಗತ್ಯ ಇರುವುದಿಲ್ಲ ಎಂದು ತಿಳಿಸಿದ್ದಾರೆ. ಕನ್ನಡ ಮಾಧ್ಯಮ ವ್ಯಾಸಂಗ, ಗ್ರಾಮೀಣ ವ್ಯಾಸಂಗ, ಭಾಷಾ ಅಲ್ಪಸಂಖ್ಯಾತ, ಧಾರ್ಮಿಕ ಅಲ್ಪಸಂಖ್ಯಾತ ಮೀಸಲಾತಿ ಕ್ಲೇಮ್ ಮಾಡಿ, ಕ್ಲೇಮ್ಸ್ ಸರ್ಟಿಫಿಕೇಟ್‌ನಲ್ಲಿ ನಾಟ್ ವೆರಿಫೈಯ್ಡ್ ಎಂದು ಮುದ್ರಿತವಾಗಿರುವವರು ಮಾತ್ರ ಕಾಲೇಜುಗಳಿಗೆ ಹೋಗಿ ಪರಿಶೀಲನೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಸಿಎಂ ಬದಲಾವಣೆಗೆ ಶೀಘ್ರ ತೆರೆ: ಜಾರಕಿಹೊಳಿ

ಬೆಳಗಾವಿ: ರಾಜ್ಯ ರಾಜಕಾರಣದಲ್ಲಿ ತಲ್ಲಣ ಸೃಷ್ಟಿಸಿರುವ ಸಚಿವ ಕೆ.ಎನ್.ರಾಜಣ್ಣ ಅವರ 'ಮುಂದಿನ ಸಿಎಂ ಪರಮೇಶ್ವರ್' ಎಂಬ ಹೇಳಿಕೆಗೆ ಹೈಕಮಾಂಡ್ ಮಟ್ಟದಲ್ಲೇ ಶೀಘ್ರದಲ್ಲಿ ತೆರೆ ಬೀಳಲಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಸೋಮವಾರ ಬೆಳಗಾವಿ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಾಜಿ ಸಚಿವ ರಾಜಣ್ಣ ಅವರ ಮುಂದಿನ ಸಿಎಂ ಪರಮೇಶ್ವರ ಆಗಲಿ ಎಂಬ ಹೇಳಿಕೆಗೆ ಆದಷ್ಟು ಬೇಗ ದೆಹಲಿಯಿಂದ ಬುಲಾವ್ ಬರಲಿದ್ದು, ಈ ವಿಚಾರಗಳು ಅಲ್ಲಿ ಚರ್ಚೆಯಾಗಿ ಶೀಘ್ರದಲ್ಲೇ ತೆರೆ ಬೀಳಲಿದೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

ವಂಚನೆ ಪ್ರಕರಣ: 10 ದಿನ ಸಿಐಡಿ ಕಸ್ಟಡಿಗೆ ಶಿವಾನಂದ ನೀಲಣ್ಣವರ

ಬೆಳಗಾವಿ: ಬಹುಕೋಟಿ ಹಗರಣದ ಕಿಂಗ್‌ಪಿನ್ ಶಿವಾನಂದ ನೀಲಣ್ಣವರನನ್ನು ನ್ಯಾಯಾಲಯ 10 ದಿನ ಸಿಐಡಿ ಕಸ್ಟಡಿಗೆ ಒಪ್ಪಿಸಿದೆ. ವಿಚಾರಣೆ ವೇಳೆ ಕೋರ್ಟ್ ಹಾಲ್‌ನಲ್ಲಿ ನ್ಯಾಯಾಧೀಶರು ಹಾಗೂ ಆರೋಪಿ ನಡುವೆ ಮಹತ್ವದ ಸಂಭಾಷಣೆ ನಡೆದಿದ್ದು, ಸದ್ಯ ಆರೋಪಿಯನ್ನು ಹೆಚ್ಚಿನ ವಿಚಾರಣೆಗಾಗಿ ಬೆಂಗಳೂರಿಗೆ ಶಿಫ್ಟ್ ಮಾಡಲಾಗುತ್ತಿದೆ.

ಬೆಳಗಾವಿಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗಂಗಾಧರ್ ಕೆ.ಎನ್. ಅವರು ಈ ಮಹತ್ವದ ಆದೇಶ ಹೊರಡಿಸಿದ್ದಾರೆ. ಸುಮಾರು 35 ಸಾವಿರ ಹೂಡಿಕೆದಾರರ 1 ಸಾವಿರ ಕೋಟಿ ರೂಪಾಯಿ ಹಗರಣ ಇದಾಗಿದ್ದು, ರಾಜ್ಯ ಹಾಗೂ ಹೊರ ರಾಜ್ಯಗಳಿಗೂ ತೆರಳಿ ತನಿಖೆ ನಡೆಸಬೇಕಿರುವುದರಿಂದ ಕಸ್ಟಡಿಗೆ ನೀಡುವಂತೆ ಸಿಐಡಿ ಅಧಿಕಾರಿಗಳು ಕೋರಿದ್ದರು.

ಇದೇ ವೇಳೆ ಆರೋಪಿ ತನಗೆ ಶುಗರ್ ಮತ್ತು ಹಾರ್ಟ್ ಪ್ರಾಬ್ಲಮ್ ಇರುವುದಾಗಿ ಹೇಳಿಕೊಂಡಾಗ ವೈದ್ಯಕೀಯ ವ್ಯವಸ್ಥೆ ಕಲ್ಪಿಸಲು ನ್ಯಾಯಾಧೀಶರು ಸೂಚಿಸಿದರು.

ಇನ್ನು 35 ಸಾವಿರ ಜನರಿಗೆ ಹಣ ಬೇಕಿಲ್ಲ ನಾನು ಬೇಕಾಗಿದ್ದೇನೆ ಎಂದ ಆರೋಪಿಗೆ ತಿರುಗೇಟು ನೀಡಿದ ನ್ಯಾಯಾಧೀಶರು, ಅಮಾಯಕ ಜನರ ರಕ್ಷಣೆ ಮಾಡುವುದು ಸರ್ಕಾರದ ಜವಾಬ್ದಾರಿ. ಸಾಕಷ್ಟು ಜನ ಹಣ ತಗೊಂಡು ಓಡಿ ಹೋಗಿದ್ದಾರೆ. ಇತಿಹಾಸದಿಂದ ಪಾಠ ಕಲಿಯಲು ಈ ಕಾನೂನು ತಂದಿದ್ದಾರೆ. ಧರ್ಮೋ ರಕ್ಷತಿ ರಕ್ಷಿತಃ ಎಂದು ಶ್ಲೋಕದ ಉದಾಹರಣೆ ನೀಡಿ ಬುದ್ಧಿವಾದ ಹೇಳಿದರು. ಕೊನೆಗೆ ಕೋರ್ಟ್ ಹಾಲ್‌ನಿಂದ ಹೊರ ಬರುತ್ತಿದ್ದಂತೆ ಸಹೋದರನನ್ನು ಕಂಡು ಶಿವಾನಂದ ನೀಲಣ್ಣವರ ಕಣ್ಣೀರು ಹಾಕಿದ್ದಾರೆ.

ಸಿಐಡಿ ಡಿಜಿಪಿ ಭೀಮಾಶಂಕರ ಗುಳೇದ್ ನೇತೃತ್ವದ ತಂಡ ಈಗಾಗಲೇ ಪ್ರಾಥಮಿಕ ತನಿಖೆ ಮುಗಿಸಿದ್ದು, ಮಾಳಮಾರುತಿ ಪೊಲೀಸರು ಕಲೆ ಹಾಕಿದ್ದ ಎಲ್ಲ



- 35 ಸಾವಿರ ಹೂಡಿಕೆದಾರರ 1 ಸಾವಿರ ಕೋಟಿ ರೂಪಾಯಿ ಹಗರಣ
- ಆರೋಪಿಗೆ ವೈದ್ಯಕೀಯ ವ್ಯವಸ್ಥೆ ಕಲ್ಪಿಸಲು ನ್ಯಾಯಾಧೀಶರ ಸೂಚನೆ

ಮಹತ್ವದ ದಾಖಲೆಗಳೊಂದಿಗೆ ಆರೋಪಿಯನ್ನು ಸೋಮವಾರ ಬೆಂಗಳೂರಿಗೆ ಕರೆದೊಯ್ದು ತೀವ್ರ ವಿಚಾರಣೆ ನಡೆಸಲಿದೆ.

ಹೂಡಿಕೆದಾರರ ಹಣ ನೀಡಲು ರೆಡಿ ಇದ್ದಾರೆ ಎಂಬ ಆರೋಪಿ ಪರ ವಕೀಲರ ವಾದವನ್ನು ಸದ್ಯಕ್ಕೆ ಆಲಿಸಲು ನ್ಯಾಯಾಧೀಶರು ನಿರಾಕರಿಸಿದ್ದರು. ಇನ್ನೊಂದೆಡೆ, ಆರೋಪಿ ಪರ ವಕೀಲರಾದ ಮಂಜುನಾಥ ಜಿ.ಎಲ್. ಅವರು, ಇದು ಕೇವಲ ತಾಂತ್ರಿಕ ಕಾರಣಗಳಿಗಾಗಿ ಆರ್‌ಬಿಐ ಗೈಡ್‌ಲೈನ್ಸ್ ಉಲ್ಲಂಘನೆಯಾಗಿದೆ ಎಂದು ಪೊಲೀಸರೆ, ದಾಖಲಿಸಿರುವ ಸುಮೋಟೋ ಕೇಸ್ ಆಗಿದೆ. ಗ್ರಾಹಕರು ಯಾರೂ ದೂರು ನೀಡಿಲ್ಲ. ಯಾರೂ ಆತಂಕಪಡುವ ಅಗತ್ಯವಿಲ್ಲ. ವಿರೋಧಿಗಳು ತಪ್ಪು ಮಾಹಿತಿ ಹರಡುತ್ತಿದ್ದು ಈಗಾಗಲೇ ಬೇಲ್‌ಗಾಗಿ ಅರ್ಜಿ ಸಲ್ಲಿಸಿದ್ದೇವೆ'ಎಂದು ಶಿವಾನಂದ ನೀಲಣ್ಣವರ ಪರ ವಕೀಲರು ಹೇಳಿದರು.

ಸಾರಿಗೆ ನೌಕರರ ವಿರುದ್ಧ ಸರ್ಕಾರ ಎಸ್ಮಾ ಜಾರಿ ಎಚ್ಚರಿಕೆ

ನೌಕರರ ಬೇಡಿಕೆ ಈಡೇರಿಸುವಲ್ಲಿ ಸರ್ಕಾರ ಯಶಸ್ವಿ

ರಾಜ್ಯ ಸರ್ಕಾರವು 2025 ಏ.1ರಿಂದ ಜಾರಿಗೆ ಬರುವಂತೆ ಶೇ.12.50 ವೇತನ ಪರಿಷ್ಕರಣೆಗೆ ರಾಜ್ಯ ಸರ್ಕಾರವು ಅನುಮೋದನೆ ನೀಡಿದೆ. 38 ತಿಂಗಳ ಪೈಕಿ 26 ತಿಂಗಳ ಹಿಂಬಾಕಿ ಮೊತ್ತ 1271.92 ಕೋಟಿ ರೂ. ಪಾವತಿಸಲು ಸರ್ಕಾರ ಅನುಮೋದಿಸಿದ್ದು, ಇದರನ್ವಯ ಮೊದಲ ಕಂತಿನ 450 ಕೋಟಿ ರೂ. ಬಿಡುಗಡೆಗೊಳಿಸಿದೆ ಆ ಮೂಲಕ ಸಾರಿಗೆ ನೌಕರರ ಬೇಡಿಕೆ ಈಡೇರಿಸಿ, ಪ್ರತಿಭಟನೆ ತಡೆಯುವ ಕೆಲಸವನ್ನು ಮಾಡಿದೆ.

- ವೇತನ ಪರಿಷ್ಕರಣೆಗಾಗಿ ನಾಳೆ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾದ ಸಂಘಟನೆಗಳು



ಬೆಂಗಳೂರು: ವೇತನ ಪರಿಷ್ಕರಣೆ ಹಾಗೂ ಹಿಂಬಾಕಿ ಮೊತ್ತ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೇ 20 ರಿಂದ ಅನಿರ್ಧಿಷ್ಟಾವಧಿ ಪ್ರತಿಭಟನೆ ಮುಂದಾಗಿದ್ದ ಕ.ರಾ.ರ.ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನೌಕರರ ವಿರುದ್ಧ ರಾಜ್ಯ ಸರ್ಕಾರವು ಎಸ್ಮಾ ಜಾರಿ ಮಾಡುವ ಮೂಲಕ ಎಚ್ಚರಿಕೆ ನೀಡಿದೆ.

ರಾಜ್ಯ ರಸ್ತೆ ಸಾರಿಗೆ ನಿಗಮಗಳ ರಾಜ್ಯದ ಜನಸಾಮಾನ್ಯರಿಗೆ ಸಮರ್ಪಕವಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಒದಗಿಸುವ ಮಹತ್ವದ ಜವಾಬ್ದಾರಿ ಹೊಂದಿದ್ದು, ಅದಕ್ಕನುಗುಣವಾಗಿ ಸಾರಿಗೆ ನಿಗಮಗಳ ಸೇವೆಯನ್ನು ಕರ್ನಾಟಕ ಅಗತ್ಯ ಸೇವಾ ನಿರ್ವಹಣಾ ಕಾಯಿದೆ –2013 (ಎಸ್ಮಾ) ಅಧಿಸೂಚನೆಯನ್ನು ರಾಜ್ಯ ಸರ್ಕಾರವು ಹೊರಡಿಸಿದೆ. ಅದರನ್ವಯ ರಸ್ತೆ ಸಾರಿಗೆ ನಿಗಮದ ನೌಕರರು ಯಾವುದೇ ಮುಷ್ಕರ ಹೂಡುವಂತೆ ಪ್ರಚೋದಿಸುವಂತಿಲ್ಲ ಹಾಗೂ ಬೆಂಬಲವನ್ನು ವ್ಯಕ್ತಪಡಿಸುವಂತಿಲ್ಲ. ಇದರೊಂದಿಗೆ ಕರ್ತವ್ಯಕ್ಕೆ ಗೈರುಹಾಜರಾಗುವ ನೌಕರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಕೆಲಸ ಮಾಡದಿದ್ದರೆ ವೇತನವಿಲ್ಲ: ಮುಷ್ಕರದ ಅವಧಿಯಲ್ಲಿ ಕೆಲಸಕ್ಕೆ ಗೈರಾಗುವ ನೌಕರರ ವಿರುದ್ಧ ಕೆಲಸ ಮಾಡದಿದ್ದಾಗ ವೇತನವಿಲ್ಲ. ಮೇ 20ರಿಂದ ಜಾರಿಗೆ ಬರುವಂತೆ ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದು. ಮುಷ್ಕರದ ಅವಧಿಯಲ್ಲಿ ಕರ್ತವ್ಯಕ್ಕೆ ಗೈರಾಗುವ ನೌಕರರ ಪಟ್ಟಿಯನ್ನು ಘಟಕವಾರು ಹಾಗೂ ವರ್ಗವಾರು ಸಿದ್ಧಪಡಿಸಿ, ನೌಕರರ ವೇತನ ಕಡಿತಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಿತವ್ಯಯ ಕಳಕಳಿ ಕೈಗೆ ಅರ್ಥವಾಗಿಲ್ಲ

ಬೆಂಗಳೂರು: ಮಿತವ್ಯಯದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಕಳಕಳಿಯನ್ನು ಇಡೀ ದೇಶವೇ ಅರ್ಥ ಮಾಡಿಕೊಂಡಿದೆ. ಕಾಂಗ್ರೆಸ್ ಪಕ್ಷಕ್ಕೆ ಅರ್ಥವಾಗದಿರುವುದು ದುರದೃಷ್ಟಕರ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.



ನಗರದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ನರೇಂದ್ರ ಮೋದಿ ಅವರ ಕಾಳಜಿ, ಕಳಕಳಿಯನ್ನು ಅರ್ಥೈಸಿಕೊಂಡು ಜವಾಬ್ದಾರಿಯುತವಾಗಿ ವರ್ತಿಸಿ ಸಾರ್ವಜನಿಕರಲ್ಲಿ ತಿಳಿವಳಿಕೆ ಮೂಡಿಸಬೇಕಿದ್ದ ಪ್ರತಿಪಕ್ಷವು ಸಣ್ಣತನದಿಂದ ಅಪಪ್ರಚಾರದಲ್ಲಿ ನಿರತವಾಗಿದೆ ಎಂದರು. ಮುನ್ನೆಚ್ಚರಿಕೆಯ ದೃಷ್ಟಿಯಿಂದ ಪ್ರಧಾನಿಗಳು ಒಂದು ವರ್ಷ ಕಾಲ ಚಿನ್ನ ಖರೀದಿಸದೆ ಆದಷ್ಟು ಮಿತವ್ಯಯ ಪಾಲಿಸಿ ಎಂದು ಹೇಳಿರುವುದು ರಾಷ್ಟ್ರದ ಹಿತದೃಷ್ಟಿಯಿಂದ ಸರಿ ಇದೆ. ಭವಿಷ್ಯದಲ್ಲಿ ರಾಷ್ಟ್ರವು ಆರ್ಥಿಕ ಸಂಕಷ್ಟಕ್ಕೆ ಸಿಲುಕಬಾರದು ಎನ್ನುವ ಏಕೈಕ ಉದ್ದೇಶದಿಂದ ಪ್ರಧಾನಿಗಳು ಪ್ರಜೆಗಳಲ್ಲಿ ಮನವಿ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷವು ಇದರಲ್ಲಿ ಹುಳುಕು ಹುಡುಕುವುದು ಸರಿಯಲ್ಲ ಎಂದರು.

ಪ್ರಧಾನಿಗಳ ಹಿತವಚನವನ್ನು ಪ್ರಜೆಗಳೆಲ್ಲರೂ ಒಪ್ಪಿದ್ದಾರೆ. ಆದರೆ ವಿಪಕ್ಷಗಳು ಮಾತ್ರ ವಿರೋಧಿಸುತ್ತಿವೆ. ನಿಜಕ್ಕೂ ಇದು ವಿಪರ್ಯಾಸ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿದ್ದಿದ್ದರೆ ಏನು ಮಾಡುತ್ತಿತ್ತು? ಸುಖಾಸುಮ್ಮನೆ ರಾಜಕೀಯ ಉದ್ದೇಶದಿಂದ ಟೀಕೆ ಮಾಡುವುದು ಸರಿಯಲ್ಲ. ಕಾಂಗ್ರೆಸ್ ನಾಯಕರು ಸಣ್ಣ ಬುದ್ಧಿಯನ್ನು ಬಿಡಬೇಕು ಎಂದು ತರಾಟೆಗೆ ತೆಗೆದುಕೊಂಡರು. ದೇವೇಗೌಡರು ರಾಜ್ಯಸಭೆ ಸದಸ್ಯರಾಗಿ ಮುಂದುವ ರಿಯುವ ವಿಚಾರದ ಬಗ್ಗೆ ಮಾಧ್ಯಮಗಳಲ್ಲಿ ಚರ್ಚೆ ಆಗುತ್ತಿರುವುದನ್ನು ಗಮನಿಸಿದ್ದೇನೆ ಎಂದರು.

ಇಮ್ರಾನ್ ಖಾನ್ ಸರಕಾರ ಪದಚ್ಯುತಿಗೂ ಅಮೆರಿಕ ಷಡ್ಯಂತ್ರ ಕಾರಣ!

ಪುಟ ೩ ➡ ಅಮೆರಿಕ ಮತ್ತು ಇರಾನ್ ನಡುವಣ ಬಿಕ್ಕಟ್ಟು ಮುಂದುವರಿದಿರುವಂತೆಯೇ ಪಾಕಿಸ್ತಾನ ಉಭಯ ದೇಶಗಳ ನಡುವೆ ಮಧ್ಯವರ್ತಿಯ ಪಾತ್ರ ವಹಿಸುತ್ತಿರುವುದನ್ನು ಬೊಟ್ಟುಮಾಡಲಾಗುತ್ತಿರುವಂತೆಯೇ ಈ ಅಂಶವೀಗ ಗಮನ ಸೆಳೆಯುತ್ತಿದೆ.

ಪಾಕಿಸ್ತಾನಕ್ಕೆ ಮಹತ್ವದ ಪಾತ್ರ ಲಭಿಸಿದೆ ಎಂಬ ಪ್ರಚಾರ ನಡೆದಿದ್ದರೂ, ಟ್ರಂಪ್ ಮತ್ತು ಇರಾನ್ ನಾಯಕತ್ವ ತಮ್ಮ ತಮ್ಮ ಪಟ್ಟುಗಳಿಗೆ ಅಂಟಿಕೊಂಡಿದ್ದು, ಅಮೆರಿಕ ಇದೀಗ ಇರಾನ್ ವಿರುದ್ಧ ಭಾರೀ ದಾಳಿಗೆ ಯೋಜನೆ ಸಿದ್ಧಪಡಿಸುತ್ತಿದೆ ಎಂದು ವರದಿಗಳು ತಿಳಿಸಿವೆ.

ಪಾಕಿಸ್ತಾನದಲ್ಲಿ ಇಮ್ರಾನ್ ಖಾನ್ ಸರಕಾರವನ್ನು ಉರುಳಿಸಿ ಅವರ ವಿರೋಧಿ ಶೆಹಬಾಜ್ ಶರೀಫ್ ಸರಕಾರವನ್ನು ಅಧಿಕಾರಕ್ಕೆ ತರಲಾಗಿತ್ತು. ಪಾಕ್ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಮತ್ತು ಇಮ್ರಾನ್ ಖಾನ್ ನಡುವೆ ಇದ್ದ ಚಿಕ್ಕಾಟಗಳನ್ನು ಗಮನಿಸಿದಾಗ ಪಾಕಿಸ್ತಾನದ ಇಮ್ರಾನ್ ಖಾನ್ ಸರಕಾರದ ಪತನದಲ್ಲಿ ಅಮೆರಿಕದ ಕೈವಾಡಕ್ಕೆ ಈಗ ಇನ್ನಷ್ಟು ಪುಷ್ಟಿ ಲಭಿಸುತ್ತಿದೆ.

ಅಮೆರಿಕಕ್ಕೆ ಪಾಕಿಸ್ತಾನಿ ರಾಯಭಾರಿಯಾಗಿದ್ದ ಅಸಾದ್ ಮಜೀದ್ ಖಾನ್, ಅಮೆರಿಕದ ಸಹಾಯಕ ವಿದೇಶಾಂಗ ಕಾರ್ಯದರ್ಶಿ (ದಕ್ಷಿಣ ಮತ್ತು ಮಧ್ಯ ಏಶ್ಯಾ)ಡೊನಾಲ್ಡ್ ಲೂ ಜೊತೆಗಿನ ಭೋಜನದ ಬಳಿಕ ಪಾಕಿಸ್ತಾನಕ್ಕೆ ಕಳುಹಿಸಿದ ತಂತಿ ಸಂದೇಶ (0678)ಈ ನಿಟ್ಟಿನಲ್ಲಿ ಈಗ ತೀವ್ರ ಚರ್ಚೆಗೀಡಾಗಿದೆ.ಈ ದಾಖಲೆ ಹೇಳುವಂತೆ, ಲೂ ಅವರು ಇಮ್ರಾನ್ ಖಾನ್‌ರ ವಿದೇಶಾಗ ನೀತಿಯ ನಿಲುವಿನ ಬಗ್ಗೆ, ಅದರಲ್ಲೂ ವಿಶೇಷವಾಗಿ ರಶ್ಯಾ-ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿ ಅಮೆರಿಕಕ್ಕೆ ಪ್ರತಿಕೂಲವಾಗಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು.ಪಾಕಿಸ್ತಾನ ಉಕ್ರೇನ್ ವಿಷಯದಲ್ಲಿ ತಟಸ್ಥ ನೀತಿ ಹೊಂದಿಲ್ಲ. ಒಂದು ವೇಳೆ ಇಮ್ರಾನ್ ಖಾನ್ ಸರಕಾರವನ್ನು ಸಂಸತ್ತಿನಲ್ಲಿ ಅವಿಶ್ವಾಸ ಮತದ ಮೂಲಕ ಪದಚ್ಯುತಿಗೊಳಿಸಿದರೆ ಅಮೆರಿಕದ ಕಳವಳಗಳು ತಿಳಿಯಾಗಲು ಸಾಧ್ಯ ಎಂದೂ ಲೂ ಹೇಳಿದ್ದರು.

ಪ್ರಧಾನಿ ಖಾನ್ ವಿರುದ್ಧದ ಅವಿಶ್ವಾಸ ಮತ ಯಶಸ್ವಿಯಾದಲ್ಲಿ ಅಮೆರಿಕ ಎಲ್ಲವನ್ನೂ ಕ್ಷಮಿಸಲು ಸಾಧ್ಯವಿದೆ ಎಂದು ನಾನು ಭಾವಿಸುತ್ತೇನೆ. ಖಾನ್‌ರಿಂದ ರಶ್ಯಾಕ್ಕೆ ಭೇಟಿನೀಡುವನಿರ್ಧಾರವನ್ನು ಉಲ್ಲೇಖಿಸಲಾಗಿದ್ದು, ಇದರ ಹೊರತಾಗಿ ಮುಂದುವರಿದದ್ದೇ ಆದರೆ ಪರಿಸ್ಥಿತಿ ಕಠಿಣವಾದೀತು ಎಂಬ ಸಂದೇಶವನ್ನೂ ನೀಡಲಾಗಿತ್ತು.ಈ ಮೂಲಕ ಇಮ್ರಾನ್‌ಖಾನ್ ಪುತಿನ್ ಮತ್ತು ರಶ್ಯಾ ಪರವಾದ ನಿಲುವು ತಳೆದಿರುವುದಕ್ಕೆ ಅಮೆರಿಕ ತೀವ್ರ ಅಸಮಾಧಾನಗೊಂಡಿರುವುದನ್ನು ಇದು ಸಾಕ್ಷೀಕರಿಸುತ್ತದೆ .ಲೂ ಇಂತಹ ಬಲವಾದ ನಿಲುವನ್ನು ವ್ಯಕ್ತಪಡಿಸಬೇಕಾದರೆ ಅದು ಶ್ವೇತಭವನ(ಅಮೆರಿಕದ ಅಧ್ಯಕ್ಷರ ನಿವಾಸ)ದ ಅಂಗೀಕಾರ ಪಡೆದೇ ತಳೆದಿರುವಂತಹದ್ದು ಎಂಬುದು ಸ್ಪಷ್ಟ. ಇದು ಪಾಕಿಸ್ತಾನದ ಆಂತರಿಕ ರಾಜಕೀಯ ಬೆಳವಣಿಗೆಗಳ ಹಿಂದಿರುವ ಕೈಗಳ ಬಗೆಗೆ ಬೊಟ್ಟು ಮಾಡುತ್ತದೆ.

ಈ ತಂತಿ ಸಂದೇಶವನ್ನು "ರಹಸ್ಯ" ಮತ್ತು "ಹೊರಗಡೆ ಪ್ರಸರಣಕ್ಕಿಲ್ಲ " ಎಂದು ಒತ್ತಿ ಹೇಳಲಾಗಿದ್ದು, ಇದನ್ನು ಪಾಕಿಸ್ತಾನದ ಉನ್ನತ ಆಡಳಿತಾತ್ಮಕ (ಪ್ರಧಾನಿ ಕಚೇರಿ, ವಿದೇಶಾಂಗ ಕಾರ್ಯದರ್ಶಿ)ಮತ್ತು ಸೇನಾ ನಾಯಕತ್ವ(ಸೇನಾ ಮುಖ್ಯಸ್ಥ ಮತ್ತು ಐಎಸ್‌ಐ ನಾಯಕತ್ವ)ದ ಜೊತೆ ಹಂಚಿಕೊಳ್ಳಲಾಗಿತ್ತು ಎಂದು ವರದಿ ಸೂಚಿಸುತ್ತದೆ.

ಈ ಬೆಳವಣಿಗೆಯ ಬಳಿಕ ಅಂದರೆ ಈ ತಂತಿ ಸಂದೇಶ ರವಾನೆಯಾದ ಸರಿ ಒಂದು ತಿಂಗಳ ಬಳಿಕ ಅಂದರೆ 2022ರ ಏ.9ರಂದು ಪಾಕಿಸ್ತಾನಿ ಸಂಸತ್ತಿನಲ್ಲಿ ಅವಿಶ್ವಾಸ ಗೊತ್ತುವಳಿಯೊಂದರ ಮೂಲಕ ಇಮ್ರಾನ್‌ಖಾನ್ ಅವರನ್ನು ಅಧಿಕಾರದಿಂದ ಪದಚ್ಯುತಿಗೊಳಿಸಲಾಗಿತ್ತು. ಅನಂತರ ಅವರನ್ನು ವಿಚಾರಣೆಗೊಳಪಡಿಸಿ 2023ರಿಂದ ಜೈಲು ಕಂಬಿ ಎಣಿಸುವಂತೆ ಮಾಡಲಾಗಿದ್ದು, ಈಗ ಅವರು ಏಕಾಂತ ಜೈಲುವಾಸದಲ್ಲಿದ್ದಾರೆ.ಇಮ್ರಾನ್ ಖಾನ್ ಮತ್ತು ಅವರ ತೆಹ್ರೀಕ್ ಇ ಇನ್ಸಾಫ್ ಪಕ್ಷವು , ವಿದೇಶಿ ಶಕ್ತಿದಗಳು ಮತ್ತು ಪಾಕಿಸ್ತಾನಿ ಸೇನಾ ನಾಯಕತ್ವ ಒಂದಾಗಿ ಈ ಸಂಚು ನಡೆಸಿದ್ದಾಗಿ ಆರೋಪಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು.

ರಾಷ್ಟ್ರದ ನಾಯಕತ್ವದ ವಿರುದ್ಧ ದೇಶದೊಳಗಿನ ಅತೃಪ್ತ ಮತ್ತು ವಿಚ್ಛಿದ್ರಕಾರಿ ಶಕ್ತಿಗಳನ್ನು ಬಳಸಿಕೊಂಡು ಸರಕಾರಗಳನ್ನು ಪತನಗೊಳಿಸುವ ಷಡ್ಯಂತ್ರವನ್ನು ಅಮೆರಿಕ ನಡೆಸುತ್ತಲೇ ಬಂದಿದ್ದು, ಬಾಂಗ್ಲಾ ಬಳಿಕ ಪಾಕಿಸ್ತಾನದ ವಿದ್ಯಮಾನಗಳಿಗೆ ಈಗ ಹೊಸ ಸಾಕ್ಷ್ಯ ಸಿಕ್ಕಿದಂತಾಗಿದೆ.

ಎಚ್ಡಿ ದೇವೇಗೌಡರಿಗೆ ಗಣ್ಯರ ಶುಭಾಶಯ

ಬೆಂಗಳೂರು: 94ನೇ ವರ್ಷಕ್ಕೆ ಪದಾರ್ಪಣೆ ಮಾಡಿರುವ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರಿಗೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ರಾಜ್ಯ ಮತ್ತು ರಾಷ್ಟ್ರೀಯ ನಾಯಕರು ಹಾಗೂ ಗಣ್ಯರು ಶುಭಾಶಯ ಕೋರಿದ್ದಾರೆ.



ಸಾರ್ವಜನಿಕ ಜೀವನದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿರುವ ದೇವೇಗೌಡರು ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ನೀತಿ ಸಂಬಂಧಿತ ವಿಷಯಗಳ ಕುರಿತು ಅವರ ಆಳವಾದ ತಿಳುವಳಿಕೆ ಮತ್ತು ಅತೀ ಹಿಂದುಳಿದವರ ಸೇವೆಯತ್ತ ಇರುವ ಅವರ ಸಮರ್ಪಣಾಭಾವ ಎಲ್ಲರಿಗೂ ಪ್ರೇರಣೆಯಾಗಿದೆ. ಅವರಿಗೆ ದೀರ್ಘಾಯುಷ್ಯ ಹಾಗೂ ಉತ್ತಮ ಆರೋಗ್ಯ ದೊರಕಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಎಕ್ಸ್‌ನಲ್ಲಿ ಶುಭಾಶಯ ತಿಳಿಸಿದ್ದಾರೆ. ಸೋಮವಾರ ಪದ್ಮನಾಭನಗರ ನಿವಾಸಕ್ಕೆ ಆಗಮಿಸಿದ ಪಕ್ಷದ ಮುಖಂಡರು, ಕಾರ್ಯಕರ್ತರು ದೇವೇಗೌಡರನ್ನು ಭೇಟಿಯಾಗಿ ಹುಟ್ಟುಹಬ್ಬದ ಶುಭಾಶಯ ತಿಳಿಸಿದರು. ಪುತ್ರ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಕುಟುಂಬಸ್ಥರು ಆಶೀರ್ವಾದ ಪಡೆದು ಶುಭಾಶಯ ತಿಳಿಸಿದರು.

ಸಂಪಾದಕೀಯ

ಎಸ್‌ಐಆರ್: ವೃಥಾ ವಿರೋಧ ಬೇಡ

ಬಿಹಾರ, ಪಶ್ಚಿಮಬಂಗಾಳ, ತಮಿಳ್ನಾಡುಗಳ ಬಳಿಕ ಇನ್ನೀಗ ಕರ್ನಾಟಕವೂ ಸೇರಿದಂತೆ 16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್ ಐಆರ್) ನಡೆಯಲಿದೆಯೆಂದು ಚುನಾವಣಾ ಆಯೋಗವು ಪ್ರಕಟಿಸಿದೆ. ಮತದಾರ ಪಟ್ಟಿಯಲ್ಲಿ ಕಾಲಕಾಲಕ್ಕೆ ಇಂತಹ ಪರಿಷ್ಕರಣೆ ನಡೆಯುವುದು ಸಂವಿಧಾನಬದ್ಧವೇ ಆಗಿದ್ದರೂ ಕೆಲವರು ಈ ಪ್ರಕ್ರಿಯೆ ಕುರಿತಂತೆ ವೃಥಾ ವಿರೋಧ ವ್ಯಕ್ತಪಡಿಸುತ್ತಿರುವುದು ಹಾಗೂ ಅದನ್ನು ದುರುದ್ದೇಶಪೂರಿತವೆಂದು ಬಣ್ಣಿಸುವುದು ಕಂಡುಬರುತ್ತಿದೆ. ಮೃತಪಟ್ಟವರ ಮತ್ತು ನಕಲಿ ಮತದಾರರ



ಹೆಸರುಗಳನ್ನು ತೆಗೆದುಹಾಕುವುದು, ಒಂದಕ್ಕೊಂದು ಹೆಚ್ಚು ಕ್ಷೇತ್ರಗಳಲ್ಲಿ ಒಬ್ಬರ ಹೆಸರಿದ್ದರೆ ಅದನ್ನು ಸರಿಪಡಿಸುವುದು, ಅಕ್ರಮವಾಗಿ ನೆಲೆಸಿರುವ ವಿದೇಶಿಯರನ್ನು ಪಟ್ಟಿಯಿಂದ ತೆಗೆಯುವುದು ಮೊದಲಾದ ಸದುದ್ದೇಶಗಳನ್ನು ಈ ಎಸ್‌ಐಆರ್ ಹೊಂದಿದೆ.ಚುನಾವಣೆಯು ಸರಕಾರ ರಚನೆಯಲ್ಲಿ ಪ್ರಧಾನ ಪಾತ್ರ ವಹಿಸುವುದರಿಂದ ಅಸಲಿ ಮತದಾರರಷ್ಟೇ ಸರಕಾರ ರಚಿಸುವ ಹಕ್ಕು ಹೊಂದಿರುವುದು ನ್ಯಾಯವಾಗಿದೆ ಕೂಡಾ. ಆದರೆ ಕೆಲವು ಸಮುದಾಯದವರು, ರಾಜಕೀಯ ಪಕ್ಷಗಳು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಅನವಶ್ಯ ಹುಳುಕು ಹುಡುಕುತ್ತಿರುವುದು, ಈ ಪ್ರಕ್ರಿಯೆಯೇ ರಾಜಕೀಯ ಪ್ರೇರಿತವೆಂದು ಜರೆಯುವುದು ಕಂಡುಬರುತ್ತಿದ್ದು ಇದು ಖಂಡಿತಕ್ಕೂ ಸಲ್ಲುವ ನಡೆಯಲ್ಲ.

ಬಿಹಾರ ಮತ್ತು ಪಶ್ಚಿಮಬಂಗಾಳಗಳಲ್ಲಿ ಚುನಾವಣಾ ಪೂರ್ವದಲ್ಲಿ ಎಸ್‌ಐಆರ್ ನಡೆದಿದ್ದುದರಿಂದ ಅನವಶ್ಯ ವಿವಾದ ಸೃಷ್ಟಿಸಲಾಗಿತ್ತು. ಅದು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿದೆಯೆಂದು ಆರೋಪಿಸಲಾಗಿತ್ತು. ಈ ಕುರಿತಂತೆ ನ್ಯಾಯಾಲಯದ ಮೆಟ್ಟಿಲನ್ನೂ ಏರಲಾಗಿತ್ತು. ಆದರೆ ನ್ಯಾಯಾಲಯವು ಈ ಪ್ರಕ್ರಿಯೆಗೆ ಅಭ್ಯಂತರ ಹೇಳಿರಲಿಲ್ಲ, ಕೆಲವು ನಿಯಮಾವಳಿಗಳನ್ನು ಪಾಲಿಸಬೇಕೆಂದು ಸೂಚನೆ ನೀಡಿತ್ತಷ್ಟೆ. ಅಂತಹ ನಿಯಮಾವಳಿಗಳಿಗೆ ಅನುಸಾರವಾಗಿಯೇ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ ನಡೆಯುತ್ತಿದೆ. ಈ ಪ್ರಕ್ರಿಯೆಯು ಪ್ರಾಮಾಣಿಕವಾಗಿ ಮತ್ತು ಪಾರದರ್ಶಕವಾಗಿ ನಡೆಯುವ ನಿಟ್ಟಿನಲ್ಲಿ ಕೂಡಾ ಚುನಾವಣಾ ಆಯೋಗವು ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಅದರಂತೆ ಕರ್ನಾಟಕದಲ್ಲಿ ಮುಂದಿನ ದಿನಗಳಲ್ಲಿ ಬಿಎಲ್‌ಒಗಳು ಮನೆಮನೆಗೆ ಭೇಟಿ ನೀಡಿ ಮತದಾರರ ಮಾಹಿತಿ ಸಂಗ್ರಹಿಸಲಿದ್ದಾರೆ. ಆ ಸಂದರ್ಭದಲ್ಲಿ ಅವರೊಂದಿಗೆ ಸಹಕರಿಸುವುದು, ಪೂರಕ ನೈಜ ಮಾಹಿತಿಗಳನ್ನು ನೀಡುವುದು ಪ್ರತಿಯೊಬ್ಬ ಮತದಾರರ ಕರ್ತವ್ಯವಾಗಿದೆ. ಕರಡು ಪಟ್ಟಿ ಮತ್ತು ಅಂತಿಮ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಿದ್ದರೆ ಅದಕ್ಕೆ ಆಕ್ಷೇಪ ಸಲ್ಲಿಸಲೂ ಅವಕಾಶವಿದೆ. ಹಾಗಾಗಿ ಎಸ್‌ಐಆರ್ ಬಗ್ಗೆ ಅನವಶ್ಯ ಗುಲ್ಲೆಬ್ಬಿಸದೆ ಅದರ ಯಶಸ್ಸಿಗೆ ಪ್ರಾಮಾಣಿಕವಾಗಿ ಸಹಕರಿಸುವುದು ಮಾಡಬೇಕಾದ ಕೆಲಸವಾಗಿದೆ.

ಜ್ಞಾನದ ಶಾಪ ನಿವಾರಣೆಗೊಂದು ವರ ಇಲ್ಲಿದೆ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ನಮ್ಮ ಜೀವನವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದರೆ ಅದರಲ್ಲಿ ನಾವು ಎರಡು ಭಾಗಗಳನ್ನು ಕಲಿಯುವುದರಲ್ಲೂ, ಇನ್ನೊಂದು ಭಾಗವನ್ನು ಏನೂ ಮಾಡದೇ ಸುಮ್ಮನೇ ಕಳೆಯುವುದರಲ್ಲೂ, ಇನ್ನೊಂದು ಭಾಗವನ್ನು ನಾವು ಕಲಿತದ್ದನ್ನು ಬೇರೆಯವರಿಗೆ ಬೇರೆ ಬೇರೆ ರೀತಿಯಲ್ಲಿ ವಿವರಿಸುವುದರಲ್ಲೂ ಕಳೆಯುತ್ತೇವೆ. ನಾವು ಏನಾದರೂ ಮಾಡುತ್ತಿರುವಾಗಲೂ ಅದು ಕಲಿಕೆಯೆಂಬ ಮೊದಲೆರಡು ಭಾಗಕ್ಕೇ ಸೇರುತ್ತದೆ. ಅದಾಗಲೇ ನೂರು ಬಾರಿ ಮಾಡಿರುವ ಕ್ರಿಯೆಯನ್ನೇ ನೂರಾ ಒಂದನೇ ಬಾರಿ ಮಾಡುವಾಗ, ನಮ್ಮ ಮೆದುಳು 'ಇದನ್ನು ಹಿಂದಿನ ಬಾರಿಗಿಂತ ಹೆಚ್ಚು ಸುಲಭವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುವುದು ಹೇಗೆ' ಎಂದು ಕಲಿಯುತ್ತಲೇ ಇರುತ್ತದೆ. ಆದ್ದರಿಂದ ಕ್ರಿಯೆಯೂ ಕೂಡಾ ಕಲಿಕೆಯೇ. ಇದರಿಂದಲೇ ಪರಿಣತಿ ಎಂಬುದು ಸಾಧ್ಯವಾಗುವುದು. ವೈಜ್ಞಾನಿಕ ಅಧ್ಯಯನಗಳ ಪ್ರಕಾರ ನಮ್ಮ ಮೆದುಳು ಈ ಕಲಿಕೆಯನ್ನು ಬಹಳ ಸಂತೋಷದಿಂದಲೇ ಮಾಡುತ್ತದಂತೆ. ಏನನ್ನೂ ಮಾಡದೇ ಸುಮ್ಮನಿರುವುದನ್ನೂ ಸಹ ಯಾವುದೇ ಗೊಣಗಾಟವಿಲ್ಲದೇ ಮಾಡುತ್ತದಂತೆ. ಆದರೆ ಹೆಚ್ಚಿನವರಿಗೆ ಕೊನೆಯ ಭಾಗ ಅಂದರೆ 'ತಮಗೆ ತಿಳಿದದ್ದನ್ನು ಬೇರೆಯವರಿಗೆ ತಿಳಿಸುವ' ಕೆಲಸ ಮಾತ್ರ ಬಹಳ ಕಷ್ಟವೆನಿಸುತ್ತದೆ.

ನಿಮಗೆ ಯಾವಾಗಲಾದರೂ ಬೇರೆಯವರೊಂದಿಗೆ ಮಾತನಾಡುವಾಗ ಇಷ್ಟು ವಯಸ್ಸಿನವನಾಗಿ, ಇಂತಹ ಪ್ರಶ್ನೆ ಕೇಳ್ತಾನಲ್ಲ. ಇದು ಪ್ರೈಮರಿ ಸ್ಕೂಲಿನ ಮಕ್ಕಳೂ ಯೋಚಿಸಬಹುದಾದ ವಿಚಾರ ಅಂತಲೋ, ಎರಡು ಮಕ್ಕಳ ತಾಯಿಯಾಗಿ, ಈಕೆಗೆ ನಾನು ಮಕ್ಕಳೊಂದಿಗೆ ನಿಧಾನಕ್ಕೆ ಯಾಕೆ ಮಾತನಾಡಬೇಕು ಅಂದರೆ ಅರ್ಥವೇ ಆಗುತ್ತಿಲ್ಲವಲ್ಲ! ಅಂತಲೋ ಅಥವಾ ಹೇಳೋಕೆ ಈತ ನನ್ನ ಬಾಸ್. ನನಗಿಂತ ಏಳುವರ್ಷ ಹೆಚ್ಚಿನ ಅನುಭವ ಕೂಡಾ ಇದೆ. ಆದರೂ ಇಂತಹಾ ನಿರ್ಧಾರ ತಗೊಳ್ತಾ ಇದ್ದಾನಲ್ಲ! ಏನು ಹೇಳಬೇಕು ಇವನ ಬುದ್ಧಿಗೆ ಅನ್ನಿಸಿದ್ದಿದೆಯಾ? ಇವರೇ ಮಂದಬುದ್ಧಿಯವರಾ, ಅಥವಾ ಮನುಷ್ಯನಿಗೆ ಇಷ್ಟಾದರೂ ಗೊತ್ತಿರಬೇಕು ಅನ್ನೋ ನನ್ನ ನಿರೀಕ್ಷೆಗಳೇ ತಪ್ಪಾ!? ಅಂತಾ ಅನಿಸಿದ್ದರೆ, ಬೇಸರ ಪಡಬೇಡಿ. ಈ ರೀತಿ ಆಗುವುದು ಬಹಳ ಸಹಜ ಅಂತ ವಿಜ್ಞಾನಿಗಳು ಹೇಳುತ್ತಾರೆ.

ನೀವು ಅವೆಂಜರ್ಸ್ ಎಂಬ ಹಾಲಿವುಡ್ ಚಿತ್ರಸರಣಿ ನೋಡಿದ್ದರೆ, ನಿಮಗೆ ಚಿತ್ರದ ಮುಖ್ಯ ನಾಯಕರಲ್ಲೊಬ್ಬನಾದ ಟೋನಿ ಸ್ಟಾರ್ಕ್ ಅಲಿಯಾಸ್ ಐರನ್ ಮ್ಯಾನ್ ಹಾಗೂ ಚಿತ್ರದ ಮುಖ್ಯ ವಿಲನ್ ಆದ ಥಾನೋಸ್ ಬಗ್ಗೆ ತಿಳಿದಿರುತ್ತದೆ. ಇವೆರಡೂ ಪಾತ್ರಗಳು ಮೊದಲ ಬಾರಿಗೆ ಬೇಟಿಯಾಗಿ, ತನ್ನನ್ನು ಪರಿಚಯಿಸಿಕೊಳ್ಳುವಾಗ ಥಾನೋಸ್ "You are not the only one curse with knowledge" ಎಂಬ ಮಾತನ್ನು ಹೇಳುತ್ತಾನೆ. ಟೋನಿ ಭೂಮಿಯ ಮೇಲೆ ವಾಸವಿರುವ ಜೀವಿಗಳಲ್ಲಿ ಅತ್ಯಂತ ಬುದ್ಧಿವಂತರಲ್ಲೊಬ್ಬ. ಭೂಮಿಯ ಮೇಲೆ ವಿಜ್ಞಾನದ ವಿಚಾರದಲ್ಲಿ ಆತ ಪರಮಜ್ಞಾನಿಯೇ ಹೌದು. ಅದೇ ರೀತಿ ಭೂಮಿಯಿಂದ ಕೋಟ್ಯಂತರ ಜ್ಯೋತಿರ್ವರ್ಷಗಳ ದೂರದಲ್ಲಿರುವ ಟೈಟಾನ್ ಗ್ರಹದ ವಾಸಿಯಾದ ಥಾನೋಸ್ ಕೂಡಾ ಜಗತ್ತಿನ ಬಗ್ಗೆ ಅಪಾರ ಜ್ಞಾನ ಹೊಂದಿರುವವನು. ಅವನ ಜ್ಞಾನ ವಿಜ್ಞಾನಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ತನ್ನ ಗ್ರಹ ಸುಭಿಕ್ಷವಾಗಿ ಉಳಿಯಬೇಕಾದರೆ ಅದರಲ್ಲಿನ ಜನಸಂಖ್ಯೆ ಅರ್ಧಕ್ಕಿಳಿಯಬೇಕು ಎಂಬುದನ್ನು ಕಂಡುಕೊಂಡ ಥಾನೋಸ್, ಅದನ್ನು ಸಾಕಾರಗೊಳಿಸಿ, ಆಮೇಲೆ ಅದೇ ತತ್ವವನ್ನು ಇಡೀ ಜಗತ್ತಿಗೇ ಅನ್ವಯಿಸುತ್ತಾ ಬೇರೆ ಬೇರೆ ಗ್ರಹಗಳನ್ನು ಆಕ್ರಮಿಸಿಕೊಂಡು ತನ್ನ ಶಕ್ತಿಯಿಂದ ಗೆದ್ದು, ಜನಸಂಖ್ಯೆಯನ್ನು ಅರ್ಧಕ್ಕಿಳಿಸುತ್ತಾ ಇರುತ್ತಾನೆ. ನಾನು ಆತನ ಜ್ಞಾನವೊಂದು ಶಾಪ ಎಂಬ ಮಾತಿಗೆ ಗೊಂದಲಕ್ಕೊಳಗಾಗಿದ್ದೆ. ಅಜ್ಞಾನದಿಂದಲೇ ತೊಂದರೆಗಳ ಉಗಮ ಹಾಗೂ ಜ್ಞಾನವೊಂದೇ ಆ ತೊಂದರೆಗಳನ್ನು ನಿವಾರಿಸುವ ದಾರಿಯೆಂದಾದ ಮೇಲೆ, ಜ್ಞಾನ ಶಾಪ ಹೇಗೆ ಆನ್ನೋದು ನನಗೆ ಬಹಳ ತಲೆ ತಿಂದ ವಿಷಯ.

ಆದರೆ ನಿಜಕ್ಕೂ ಜ್ಞಾನ ಶಾಪವೇ ಹೌದು. ತತ್ವಶಾಸ್ತ್ರ ಮತ್ತು ಮನೋವಿಜ್ಞಾನದಲ್ಲಿ 'ಜ್ಞಾನದ ಶಾಪ' (Curse of Knowledge) ಎಂಬ ಒಂದು ಪೂರ್ವಗ್ರಹವೇ ಇದೆ. ಒಂದು ವಿಚಾರದ ಬಗ್ಗೆ ನಿಮಗೆ ಬಹಳಷ್ಟು ತಿಳಿದುಬಂದಾಗ, 'ಅದನ್ನು ತಿಳಿಯದೇ ಇರುವುದು ಹೇಗೆ' ಎಂಬುದನ್ನೇ ನಿಮ್ಮ ಮೆದುಳು ಮರೆತುಬಿಡುತ್ತದೆ. ಕಾರು ಓಡಿಸುವುದನ್ನು ಕಲಿಯುವ ಮುನ್ನ ನಿಮಗೆ ಅದರ ಮಾಹಿತಿಯೇ ಇಲ್ಲದಿದ್ದಾಗ, ನಿಮ್ಮ ಮೆದುಳು ಆಕ್ಸಲರೇಟರ್, ಬ್ರೇಕ್, ಕ್ಲಚ್ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನೇ ತಿಳಿಯದೇ ಹಾಯಾಗಿರುತ್ತದೆ. ಒಂದು ಬಾರಿ ಡ್ರೈವಿಂಗ್ ಕಲಿತಾದ ಮೇಲೆ, ಕಾರನ್ನು ಒಂದು ಐದು ಹತ್ತು ವರ್ಷ ಓಡಿಸಿಯಾದ ಮೇಲೆ, ಆ ಕಲಿಕೆ ನಿಮ್ಮ ಮೆದುಳಿನ ಅವಿಭಾಜ್ಯ ಅಂಗವೇ ಆಗಿ ಹೋದ ಮೇಲೆ, ನಿಮ್ಮ ಹೆಂಡತಿಗೋ, ಮಕ್ಕಳಿಗೋ ವಾಹನ ಓಡಿಸುವುದನ್ನು ಕಲಿಸುವಾಗ ಅಥವಾ ನಿಮ್ಮ ಪಕ್ಕದಲ್ಲೇ ಗಾಡಿ ಓಡಿಸುತ್ತಿರುವವ ಇಂಡಿಕೇಟರ್ ಇಲ್ಲದೇ ನಿಮ್ಮ ಲೇನಿಗೆ ಬಂದರೆ, ಒಂದೇ ಬಾರಿಗೆ ಬ್ರೇಕ್ ಹಾಕಿದಾಗ ನಿಮಗೆ ಇಷ್ಟೂ ಗೊತ್ತಾಲ್ವಾ!? ಯಾರ್ರೀ ಲೈಸೆನ್ಸ್ ಕೊಟ್ಟವರು ನಿಮಗೆ ಅಂತಾ ಹೇಳುವಷ್ಟು ಸಿಟ್ಟುಕ್ಕುವುದು. ಯಾಕೆಂದರೆ ನಿಮ್ಮ ಮೆದುಳಿಗೆ ಮೆದುಳಲ್ಲಿ ಈ ಮಾಹಿತಿ ಇಲ್ಲದಿರುವುದು ಎಂಬ ಪರಿಸ್ಥಿತಿಯೇ ಅರ್ಥವಾಗುವುದು ನಿಂತುಹೋಗಿದೆ! ನಿಮ್ಮ ಮೆದುಳು ಈಗ 'ಇಷ್ಟು ಸರಳ ವಿಚಾರ ನನಗೆ ಗೊತ್ತಿದೆ ಎಂದ ಮೇಲೆ, ವಾಹನ ಓಡಿಸುತ್ತಿರುವ ಉಳಿದವರಿಗೂ ಗೊತ್ತಿರಲೇಬೇಕು' ಎಂಬ ಜ್ಞಾನದಿಂದ ಶಾಪಗ್ರಸ್ಥವಾಗಿದೆ.

ಇನ್ನು ಕೆಲವರು ತಾವು ವಾಹನ ಓಡಿಸುವಾಗ ಯಾರಾದರೂ ಪಾದಚಾರಿಗಳೋ, ದನ ನಾಯಿಗಳೋ ಅಡ್ಡಬಂದರೆ, ಅವಕ್ಕೂ ಕೂಡಾ ನನ್ನ ಕಾರು ಬರ್ತಿರೋದು ಕಾಣ್ತಿಲ್ಲವಾ? ಕಣ್ಣಿದ್ದ ಮೇಲೆ ಪಕ್ಕಕ್ಕೆ ಸರಿದು ನಿಲ್ಲಬೇಕು ತಾನೇ!? ಎಂದು ಬೈಯ್ಯುವುದುಂಟು. ಅಂದರೆ ಅವರ ಮೆದುಳು 'ನನ್ನ ಬಳಿ ವಾಹನ ಇದೆ, ಹಾಗೂ ನನಗೆ ವಾಹನ ಓಡಿಸುವುದು ಗೊತ್ತಿದೆ. ಆದ್ದರಿಂದ ಅವರ ಬಳಿ ವಾಹನ ಇಲ್ಲದಿದ್ದರೂ ರಸ್ತೆಯ ನಿಯಮಗಳ ಬಗ್ಗೆ ತಿಳಿದಿರಬೇಕು' ಎಂಬ ನಿರೀಕ್ಷೆಗೆ ಹಾಗೂ ನಿರ್ಧಾರಕ್ಕೆ ಬಂದಾಗಿದೆ. ಇದೇ ಕಾರಣಕ್ಕೆ ಎಷ್ಟೋ ಬಾರಿ ಶಿಕ್ಷಕರು ಕೆಲ ಪಾಠಗಳನ್ನು ಬಹಳ ವೇಗವಾಗಿ ಓಡಿಸಿ ಪಾಠ ಮಾಡುವುದು. ಮ್ಯಾನೇಜರುಗಳು ತಮ್ಮ ಕೈಕೆಳಗೆ ಕೆಲಸ ಮಾಡುವವರಿಗೆ ಪೂರ್ತಿ ಮಾಹಿತಿ ಕೊಡದೆಯೇ ಕೆಲಸ ಮಾಡು ಎನ್ನುವುದು. ಮಕ್ಕಳು ಕೆಲ ಸರಳ ಪ್ರಶ್ನೆಗಳನ್ನು ಕೇಳಿದಾಗ ಪೋಷಕರು ಸಿಟ್ಟಾಗುವುದು. ಯಾಕೆಂದರೆ ಅವರ ಪ್ರಕಾರ 'ಇದು ಅತ್ಯಂತ ಸರಳ ವಿಚಾರ. ಇದೂ ಗೊತ್ತಿಲ್ಲದಿದ್ದರೆ ಹೇಗೆ?' ಇದೇ ಜ್ಞಾನದ ಶಾಪ ಅಥವಾ Curse of Knowledge.

ಹಾಗಂತಾ ಇದು ದುರಹಂಕಾರವಲ್ಲ. ನಮ್ಮ ಮೆದುಳು ಕೆಲಸ ಮಾಡುವ ರೀತಿಯೇ ಹಾಗೆ. ಅದರ ವೈರಿಂಗ್ ಆಗಿರುವುದೇ 'ಈ ಕೆಲಸವನ್ನು ಅತ್ಯಂತ ಕಡಿಮೆ ಸಮಯದಲ್ಲಿ, ಅತ್ಯಂತ ದಕ್ಷತೆಯಿಂದ ಮಾಡುವುದು ಹೇಗೆ' ಎನ್ನುವುದರ ಸುತ್ತ. ಹಾಗಾಗಿಯೇ ಒಂದು ಬಾರಿ ಒಂದು ಕೆಲಸವನ್ನು ಕಲಿತ ಮೇಲೆ, ಪ್ರತಿಬಾರಿಯೂ ಆ ಕೆಲಸವನ್ನು ಮಾಡುವಾಗ ನಮ್ಮ ಮೆದುಳು ಅದನ್ನು ಮತ್ತೆ ಮತ್ತೆ ಕಲಿಯುತ್ತಾ, ತನ್ನನ್ನು ಹಾಗೂ ನಮ್ಮ ಅಂಗಾಂಗಳನ್ನು ಆ ಕೆಲಸಕ್ಕೆ ತೀರಾ ಯಾಂತ್ರಿಕವಾಗಿ ಒಗ್ಗಿಸಿಬಿಡುತ್ತದೆ. ಈ ಪ್ರಕ್ರಿಯೆಯಲ್ಲಿ ಮುಳುಗಿಹೋದ ಮೆದುಳು ಪರಿಣತಿಯನ್ನೇನೋ ಪಡೆಯುತ್ತದೆ, ಆದರೆ ಅದನ್ನು ನಾನು ಹೇಗೆ ಕಲಿತೆ ಎನ್ನುವ ದಾರಿಯನ್ನೇ ಮರೆತುಬಿಡುತ್ತದೆ. ಟೈಪ್-ರೈಟರುಗಳು ಕೀಬೋರ್ಡನ್ನೇ ನೋಡದೇ ಟೈಪಿಸುತ್ತಾರಲ್ಲ, ಅವರ ಬಳಿ ಟಿಇದನ್ನು ಹೇಗೆ ಸಾಧಿಸಿದೆ ಎಂದು ಒಮ್ಮೆ ಕೇಳಿ ನೋಡಿ. ಯಾವುದೇ ದೊಡ್ಡ ಉತ್ತರವಿಲ್ಲದೇ, ಹಾಗೇ ಕಲಿತುಬಿಟ್ಟೆ ಎಂದು ನಕ್ಕು ಸುಮ್ಮನಾಗುತ್ತಾರೆ. ಆದರೆ, ಆ ಕಲಿಕೆಯ ಹಿಂದೆ ಒಂದಲ್ಲಾ ಒಂದು ತಂತ್ರವನ್ನು ಅವರೂ ಬಳಸಿರುತ್ತಾರೆ. ಆದರೆ ಇದನ್ನು ಕಲಿಯಬೇಕಾಗಿದ್ದೇ ಹೀಗೆ ಎಂಬ ಸಾಲಿಗೆ ಒಗ್ಗಿಹೋದ ಅವರ ಮೆದುಳು, ಅದನ್ನೊಂದು ವಿಶೇಷ ತಂತ್ರವೆಂದು ಒಪ್ಪಿಕೊಳ್ಳಲಿಕ್ಕೇ ತಯಾರಿರುವುದಿಲ್ಲ.

ಇದೇ ಕಾರಣಕ್ಕೆ, ಬೇರೆಯವರು 'ಇದನ್ನು ನನಗೂ ಹೇಳಿಕೊಡು' ಎಂದಾಗ ಹೆಚ್ಚಿನವರು ಮುಖ್ಯವಾದ ಹಂತಗಳನ್ನೇ ಮರೆತು 'ಅದು ಗೊತ್ತಲ್ಲಾ, ಅದನ್ನ ಹೀಗೆ ಮಾಡಿ, ಇದನ್ನ ಹೀಗೆ ಮಾಡಿ, ಅಲ್ಲಿರುವ ಅದನ್ನ ಎಳೆದು ತಂದರೆ' ಆಗಿ ಹೋಯ್ತು ಎಂದುಬಿಡುತ್ತಾರೆ. ಆ ಪ್ರತಿಯೊಂದು ಅದು, ಇದು, ಅಲ್ಲಿರುವ, ಹೀಗೆ ಇವೆಲ್ಲವನ್ನೂ ತಿಳಿಯಲಿಕ್ಕೆ ಬೇರೆ ಬೇರೆ ತಂತ್ರಗಳಿವೆ ಎಂಬುದು ಕ್ಷಣಕ್ಕೆ ತಲೆಗೆ ಹೊಳೆಯುವುದೇ ಇಲ್ಲ. ಆ ವಿಷಯವನ್ನೂ ಇನ್ನೂ ಕಲಿಯುತ್ತಿರುವ ಇನ್ನೊಬ್ಬರ ದೃಷ್ಟಿಕೋನದಿಂದ ನೋಡಲಿಕ್ಕೇ ಸಾಧ್ಯವಾಗುವುದೇ ಇಲ್ಲ. ನನಗೆ ಯಾರಾದರೂ ಏನನ್ನಾದರೂ ಕೇಳಿದಾಗ ನಾನು ಅವರ ವಯಸ್ಸನ್ನು ಅರ್ಧಕ್ಕೆ ಇಳಿಸಿ, ಆ ವಯೋಮಾನದವರಿಗೆ ಹೇಗೆ ವಿವರಿಸಬಹುದೋ ಹಾಗೆ ವಿವರಿಸುತ್ತೇನೆ. ನನ್ನ ಗೆಳೆಯ ಇರಾನ್-ಇಸ್ರೇಲ್ ಯುದ್ಧದ ಬಗ್ಗೆ ಏನಾದರೂ ಕೇಳಿದರೆ, ನಾನು ನನ್ನ ಮುಂದೆ ಇಪ್ಪತ್ತು ವರ್ಷದ ಕಾಲೇಜು ಹುಡುಗ ಕುಳಿತಿದ್ದಾನೆ ಎಂದುಕೊಂಡು '1979ರಲ್ಲಿ ಏನಾಯ್ತು ಗೊತ್ತಾ' ಅಂತಲೇ ಶುರುಮಾಡ್ತೀನಿ. ಕೆಲವು ವಿಚಾರಗಳಲ್ಲಂತೂ ಇನ್ನೂ ಕೆಳಗಿನ ವಯೋಮಾನಕ್ಕೆ ಇಳಿಸಬೇಕು. ನನ್ನ ಅಪ್ಪನಿಗೂ ನನ್ನ ಮಗಳಿಗೂ ಇಂಟರ್ನೆಟ್ ಬಗ್ಗೆ ವಿವರಿಸಬೇಕೆಂದರೆ ನಾನು ಐದುವರ್ಷದ ಮಗುವಿಗೆ ವಿವರಿಸುವಂತೆಯೇ ವಿವರಿಸಬೇಕು. ದೊಡ್ಡ ವಿಷಯವನ್ನು ಸಣ್ಣ ಸಣ್ಣ ಮೂರ್ನಾಲ್ಕು ವಿಚಾರಗಳಾಗಿ ಬೇರ್ಪಡಿಸಿ ವಿವರಿಸಿ, ಆಮೇಲೆ ಆ ಎಲ್ಲಾ ಭಾಗಗಳನ್ನು ಇನ್ನೊಂದು ಸಾಲಿನಿಂದ ಹೊಲಿದು ಪೂರ್ಣವಾಗಿ ವಿವರಿಸಿ ನೋಡಿ. ಆದರ ನಂತರ ನಿಧಾನಕ್ಕೆ ಕ್ಲಿಷ್ಟತೆಯನ್ನು ಹೆಚ್ಚಿಸುತ್ತಾ ಹೋಗಬಹುದು. ಇದರಿಂದ ನಿಮಗಿರುವ ಜ್ಞಾನದ ಶಾಪವನ್ನು ನೀಗಿಸಿಕೊಂಡು, ಇನ್ನೊಬ್ಬರಿಗೆ ಜ್ಞಾನದ ವರವನ್ನು ನೀವು ಕೊಡಬಹುದು.

ಖಾಲಿ ಕೈಯಲ್ಲಿ ಹೋಗಬಾರದು

ಅಗ್ನಿಹೋತ್ರ ಗೃಹಂ ಕ್ಷೇತ್ರಂ ಗರ್ಭಿಣೀಂ ವೃದ್ಧ ಬಾಲಕೌ ।
ರಿಕ್ತಹಸ್ತೇನ ನೋಪೇಯಾತ್ ರಾಜಾನಾಂ ದೇವತಾಂ ಗುರುಮ್ ॥ - ಮಹಾಭಾರತ

ಅಗ್ನಿಹೋತ್ರ ಗೃಹಕ್ಕೆ (ತೀರ್ಥ) ಕ್ಷೇತ್ರಕ್ಕೆ, ಗರ್ಭಿಣಿಯ ಬಳಿಗೆ, ವೃದ್ಧರ ಮತ್ತು ಬಾಲಕರ, ದೇವರು ಮತ್ತು ಗುರುಗಳ ಹತ್ತಿರಕ್ಕೆ ಬರಿಗೈಯಿಂದ ಬರಬಾರದು- ಎಂಬುದು ಶ್ಲೋಕಾರ್ಥ.



ಮೊದಲು ತುಂಬಾ ಇತ್ತು, ಈಗಲೂ ಈ ಪದ್ಧತಿಯಿದೆ. ಅದೆಂದರೆ ಕೆಲವರನ್ನು ಕಾಣಲು ಹೋಗುವಾಗ, ಕೆಲವು ಕಡೆ ಹೋಗುವಾಗ ಬರಿಗೈಯಲ್ಲಿ ಹೋಗಬಾರದು ಎಂಬುದಾಗಿ. ನಾವೆಲ್ಲ ಚಿಕ್ಕವರಿರುವಾಗ ಮನೆಗೆ ಬರುವ ನೆಂಟರಿಷ್ಟರು ಪೆಪ್ಪರ್‌ಮೆಂಟ್, ಬಿಸ್ಕಿಟ್ ಅಥವಾ ಮನೆಯಲ್ಲಿ ಮಾಡಿದ ಸಿಹಿತಿಂಡಿಯನ್ನೋ ತಂದು ಮಕ್ಕಳಿಗೆ ಕೊಡುತ್ತಿದ್ದರು.

ದೇವಸ್ಥಾನದಲ್ಲೋ, ಮನೆಯಲ್ಲೊ, ಮಠದಲ್ಲೋ ಪೂಜೆ ಸಮಾರಾಧನೆ ನಡೆಯುತ್ತಿದ್ದರೆ ಮನೆಯಿಂದ ಹೂ, ತೆಂಗಿನಕಾಯಿ ತೆಗೆದುಕೊಂಡು ಹೋಗುತ್ತಿದ್ದರು. ಈಗಲೂ ಕೂಡ ಆ ಪದ್ಧತಿಯನ್ನು ಕಾಣುತ್ತೇವೆ. ಕೆಲವಷ್ಟು ಪದ್ಧತಿ ದೂರಾಗಿದೆ. ಹಲವಷ್ಟು ಅಲ್ಪಸ್ವಲ್ಪವಾದರೂ ಇಂದಿಗೂ ಉಳಿದುಕೊಂಡಿವೆ.

ಈ ಬಗೆಯ ಆಚರಣೆಯಲ್ಲಿ ಉದಾತ್ತ ಭಾವನೆಯಿದೆ. ದೇವಸ್ಥಾನಕ್ಕೆ ಕೊಂಡೊಯ್ಯುವಾಗ ಹೂ, ಹಣ್ಣು ಎಂದು ಕರೆಸಿಕೊಳ್ಳುವ ವಸ್ತು ದೇವರಿಗೆ ಸಮರ್ಪಿಸಿ ಹಿಂದಿರುಗಿ ಪಡೆಯುವಾಗ ಪ್ರಸಾದ ಎಂದು ಕರೆಸಿಕೊಳ್ಳುತ್ತದೆ. ಪವಿತ್ರವೆನಿಸುತ್ತದೆ. ಅದನ್ನು ಕಣ್ಣಿಗೆ ಒತ್ತಿಕೊಂಡು ಮುಡಿಯುತ್ತೇವೆ. ಭಕ್ತಿಯಿಂದ ಪ್ರಸಾದವೆಂದು ಸೇವಿಸುತ್ತೇವೆ. ದೇವರಿಗೆ ಸಮರ್ಪಿಸುವುದರಿಂದ ಅದರ ಬಗೆಗಿರುವ ನಮ್ಮ ಚಿಂತನೆಯಲ್ಲಿ ಬದಲಾಗುತ್ತದೆ.

ಅಗ್ನಿಹೋತ್ರ, ಹೋಮ, ಹವನ ನಡೆಯುವ ಸ್ಥಳಕ್ಕೆ ಹೋಗುವಾಗ ಅವುಗಳಿಗೆ ಪೂರಕವಾದ ವಸ್ತುಗಳನ್ನು ಒಯ್ಯಬೇಕು. ಭಗವತ್ ಕಾರ್ಯದಲ್ಲಿ ನಮ್ಮದಾದ ಕಿಂಚಿತ್ ಕೊಡುಗೆಯಿಂದ ನೆಮ್ಮದಿ ದೊರೆಯುತ್ತದೆ. ಗುರುಗಳ ಬಗ್ಗೆ ಅಪಾರ ಗೌರವ. 'ಹರ ಮುನಿದರೂ ಗುರು ಕಾಯ್ವ' ಎಂಬ ನಂಬಿಕೆ. ಗುರುಗಳ ದರ್ಶನಕ್ಕೆ ಹೋಗುವಾಗ ಏನನ್ನಾದರೂ ಒಯ್ಯಬೇಕು. ಗುರುಗಳು ಅದನ್ನು ಫಲಮಂತ್ರಾಕ್ಷತೆ ರೂಪದಲ್ಲಿ ನೀಡುತ್ತಾರೆ.

ಇನ್ನು ಗರ್ಭಿಣಿ, ವೃದ್ಧರು, ರೋಗಿಗಳು, ಬಾಲಕರು, ಇರುವಲ್ಲಿಗೆ ಹೋಗುವಾಗಲೂ ಬರಿಗೈಯಲ್ಲಿ ಹೋಗಬಾರದು. ಅವರಿಗೂ ಪೂರಕವಾದ ವಸ್ತುವನ್ನು ಒಯ್ಯಬೇಕು. ಇದು ಶಿಷ್ಟಾಚಾರ. ನಾವು ತುಂಬಾ ಒಯ್ಯಬೇಕಿಲ್ಲ ಅಥವಾ ಏನನ್ನೂ ಒಯ್ಯದಿದ್ದರೂ ಏನೂ ಹೇಳುವುದಿಲ್ಲ. ಇವೆಲ್ಲವೂ ಒಳ್ಳೆಯ ಸಂಸ್ಕಾರದ ದ್ಯೋತಕ. ಸತ್ ಸಂಪ್ರದಾಯ ಸಭ್ಯತೆಯ ಲಕ್ಷಣ.

ಇಂತಹ ಪದ್ಧತಿ ಒಳ್ಳೆಯ ಸಂಸ್ಕಾರವನ್ನು ಸೂಚಿಸುತ್ತದೆ. ಅವರಿಗೇನೋ ಕಡಿಮೆಯಿದೆ ಎಂಬ ಕಾರಣಕ್ಕಾಗಿ ಅಲ್ಲ. ಇದೊಂದು ಸನಾತನ ಪರಂಪರೆಯ ಆಚರಣೆ.

ಮಕ್ಕಳಿರುವ ಮನೆಗೆ ತಿಂಡಿ ಒಯ್ದಾಗ ಮಕ್ಕಳು ನಮ್ಮನ್ನು ಪ್ರೀತಿಸುತ್ತಾರೆ. ನಾವು ನೀಡಿದ ಸಿಹಿಯಿಂದ ಸಂತೋಷಪಡುತ್ತಾರೆ. ಇವೆಲ್ಲವೂ ಸಂಬಂಧವನ್ನು ಬೆಸೆಯುವ, ಸಮಷ್ಟಿಯನ್ನು ಎತ್ತಿ ಹಿಡಿಯುವ, ಸಂಸ್ಕಾರವನ್ನು ಅನಾವರಣಗೊಳಿಸುವ ಕ್ರಮ. ಇದನ್ನು ನಾವು ರೂಢಿಸಿಕೊಂಡರೆ ಒಳ್ಳೆಯದು.

ಮಮತಾ ಬ್ಯಾನರ್ಜಿ ಅಧಃಪತನಕ್ಕೆ ಗೋವು ಕಾರಣ

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ ಹೊಸ ಅಲೆ ಎದ್ದಿರುವುದು ಅತಿ ಸ್ಪಷ್ಟವಾಗಿದೆ. ಅಲ್ಲಿಯ ಜನ ಹದಿನೈದು ವರ್ಷಗಳ ಹಿಂದಿನ ಹಿಂದೂ ವಿರೋಧಿ ಸರ್ಕಾರವನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಹದಿನೈದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ಮಮತಾ ಬ್ಯಾನರ್ಜಿಯೇ ಸೋಲುವುದರೊಂದಿಗೆ ವಿಧಾನಸಭೆ ಪ್ರವೇಶವನ್ನು ಕಳೆದುಕೊಂಡಿದ್ದಾರೆ. ಒಂದರ್ಥದಲ್ಲಿ ಹಿಂದೂಗಳು ದೇಶದಲ್ಲೇ ಮೊದಲ ಬಾರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಮತಾ ಸರ್ಕಾರವನ್ನು ತಿರಸ್ಕರಿಸಿ ಭಾಜಪವನ್ನು ಬಿಗಿದಪ್ಪಿಕೊಂಡಿದ್ದಾರೆ. ಹಿಂದೂಗಳು ಅಲ್ಲಿ ಬದುಕುವುದೇ ಕಷ್ಟ ಎಂಬಂತಹ ಸ್ಥಿತಿ ನಿರ್ಮಾಣವಾಗಿತ್ತು. ಮುಂದಾಗುವ ಅನಾಹುತದಕಲ್ಪನೆಅಲ್ಲಿಯಪ್ರತಿಯೊಬ್ಬಹಿಂದೂವಿಗೂಮನವರಿಕೆಯಾಗಿತ್ತು. ಈ ಬಾರಿ ಭಾಜಪಾ ಅಲ್ಲಿ ಬರದೇ ಹೋಗಿದ್ದರೆ ಬಹುಶಃ ಪಶ್ಚಿಮ ಬಂಗಾಳ ಈ ದೇಶದಿಂದ ವಿಭಜನೆಯಾಗಿ ಹೋಗುತ್ತಿತ್ತು ಎಂಬೆಲ್ಲಾ ಮಾತುಗಳು ಬಲವಾಗಿ ಕೇಳಿ ಬಂದಿತ್ತು. ಮುಖ್ಯವಾಗಿ ಮಮತಾರ ಅಧಃಪತನಕ್ಕೆ ಗೋವಿನ ಶಾಪವೂ ಕಾರಣ ಎಂಬ ಮಾತು ಸಹ ಹರಿದಾಡಿತ್ತು. ಇದಕ್ಕೆ ಕಾರಣವನ್ನು ಹುಡುಕುತ್ತಾ ಹೊರಟಾಗ ಎರಡು ದಶಮಾನಗಳ ಹಿಂದಿನ ಚಿತ್ರಣ ತೆರೆದುಕೊಳ್ಳುತ್ತದೆ.

ಒಮ್ಮೆಸ್ವರ್ಗೀಯಸ್ವದೇಶಿ ಚಳುವಳಿಯ ಹರಿಕಾರರಾದ ರಾಜೀವ್ ದೀಕ್ಷಿತರು ಗೋಹತ್ಯೆ ನಿಷೇಧದ ವಿಧೇಯಕ ಸಂಸತ್ತಿನಲ್ಲಿ ಮಂಡನೆಯಾಗುತ್ತಿರುವುದನ್ನು ಅರಿತು ವಿಧೇಯಕದ ಮೇಲೆ ನಡೆಯಲಿರುವ ಚರ್ಚೆಯನ್ನು ಸಮೀಪದಿಂದ ನೋಡಲು ಅಲ್ಲಿಗೆ ಧಾವಿಸಿದ್ದರು. ಯಾವ್ಯಾವ ಸಂಸದರು ಏನೇನು ಈ ವಿಧೇಯಕದ ಕುರಿತಂತೆ ಮಾತನಾಡುತ್ತಾರೆ, ಯಾರೆಲ್ಲಾ ಬೆಂಬಲಿಸುತ್ತಾರೆ ಮತ್ತು ಯಾರೆಲ್ಲಾ ವಿರೋಧಿಸುತ್ತಾರೆ ಎಂಬುದನ್ನು ಗಮನಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ಅಂದು ಎಂದಿನಂತೆ ಗೋಹತ್ಯಾ ನಿಷೇಧ ವಿಧೇಯಕ ಮಂಡನೆಯಾಯಿತು. ಇದ್ದ ಬಹುತೇಕ ಸಂಸದರು ಗೋಹತ್ಯಾ ನಿಷೇಧ ಕಾನೂನು ಜಾರಿಯಾಗಬೇಕೆಂದು ಆಗ್ರಹಿಸಿದರು. ಮುಸ್ಲಿಂ ಸಂಸದರಾಗಿದ್ದ ಜಿ.ಎಂ. ಬನತ್‌ವಾಲ ಈ ಮಸೂದೆ ಜಾರಿಯಾಗುವುದಾದರೆ ಮೊದಲ ಮತ ನನ್ನದೆ ಎಂಬುದಾಗಿ ಘೋಷಿಸಿದರು. ಇವರಂತೆ ಅಲ್ಲಿದ್ದ ಎಲ್ಲಾ ಮುಸ್ಲಿಂ ಸಂಸದರು ಸಹ ಗೋಹತ್ಯಾ ನಿಷೇಧದ ವಿಧೇಯಕಕ್ಕೆ ನಮ್ಮ ವಿರೋಧವಿಲ್ಲ, ಇದಕ್ಕೆ ಸಂಬಂಧಿಸಿದಂತೆ ಕಠಿಣ ಕಾನೂನು ಜಾರಿಯಾಗಬೇಕು ಎಂಬುದಾಗಿ ಆಗ್ರಹಿಸಿದರು. ಪರಿಸ್ಥಿತಿ ಹೀಗಿರುವಾಗ ಒಂದು ಹೆಣ್ಣು ಧ್ವನಿ ಮಾತ್ರ ಎದ್ದು ನಿಂತು ತೀವ್ರ ವಿರೋಧವನ್ನು ವ್ಯಕ್ತಪಡಿಸಿತು. ಆ ಧ್ವನಿಯೇ ಇಂದು ಪಶ್ಚಿಮ ಬಂಗಾಳದಲ್ಲಿ ಸೋತು ಸುಣ್ಣವಾಗಿರುವ ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕಿಯಾಗಿರುವ ಮಮತಾ ಬ್ಯಾನರ್ಜಿ.

ಅಂದು ಆಕೆ ಸಂಸತ್ತಿನಲ್ಲಿ ಎದ್ದು ನಿಂತು ಗೋಮಾಂಸ ತಿನ್ನುವುದು ನನ್ನ ಮೂಲಭೂತ ಹಕ್ಕು. ಹೀಗಾಗಿ ಗೋಹತ್ಯಾ ನಿಷೇಧ ಕಾನೂನು ಜಾರಿಯಾಗಲು ನನ್ನ ವಿರೋಧವಿದೆ ಎಂದು ಹೇಳುತ್ತಾ, ಈ ಹಿಂದೆ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶದ ಪ್ರತಿಯನ್ನು ಹಿಡಿದು ಅದರಲ್ಲಿ ಹೇಳಲಾಗಿದ್ದ ಕಸಾಯಿಗಳ ಮೂಲಭೂತ ಹಕ್ಕಿನ ಕುರಿತಂತೆ ಮಾತನಾಡುತ್ತಾ, ಗೋಹತ್ಯಾ ನಿಷೇಧ ಕಾನೂನು ಜಾರಿಯಾದಲ್ಲಿ ನ್ಯಾಯಾಂಗದ ಉಲ್ಲಂಘನೆಯಾಗುತ್ತದೆ ಎಂಬುದಾಗಿ ವಾದಿಸತೊಡಗಿದರು. ಹೀಗಾಗಿ ಮತ್ತೊಮ್ಮೆ ಗೋಹತ್ಯಾ ನಿಷೇಧದ ವಿಧೇಯಕ ನೆಲ ಕಚ್ಚುವಂತಾಯಿತು.

ಈ ದೇಶದಲ್ಲಿ ಗೋಹತ್ಯಾ ನಿಷೇಧ ಕಾನೂನು ಜಾರಿಯಾಗಲೇಬೇಕೆಂದು ಇಚ್ಚಿಸಿದ ಪ್ರಧಾನಿಗಳಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಸಹ ಒಬ್ಬರು. ಇವರು ಅಂದು ಬೆಳಗ್ಗೆ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಿ, ಸಂಜೆಗೆ ಅದನ್ನು ಹಿಂಪಡೆಯಲು ಬಲವಾದ ಕಾರಣವಿತ್ತು. ಅಂದು ವಾಜಪೇಯಿ ಯವರಿಗೆ ದೇಶದ ಎರಡು ರಾಜಕೀಯ ಪಕ್ಷಗಳಾದ ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗು ದೇಶಂ ಹಾಗೂ ಮಮತಾ ಬ್ಯಾನರ್ಜಿ ನೇತೃತ್ವದ ತೃಣ ಮೂಲ ಕಾಂಗ್ರೆಸ್ ಬೆಂಬಲವನ್ನು ಸೂಚಿಸಿದ್ದವು. ಅಂದು ಈ ಎರಡು ಪಕ್ಷದ ಮುಖಂಡರು ಗೋಹತ್ಯಾ ನಿಷೇಧದ ವಿಧೇಯಕ ಸಂಸತ್ತಿನಲ್ಲಿ ಮಂಡನೆಯಾಗಿ ಚರ್ಚೆಯಾದಲ್ಲಿ ತಾವು ನೀಡಿದ ಬೆಂಬಲವನ್ನು ಹಿಂಪಡೆದು, ಸರ್ಕಾರವನ್ನು ಉರುಳಿಸುತ್ತೇವೆ ಎಂಬುದಾಗಿ ಹೇಳಿದ್ದುದು ವಿಧೇಯಕ ಮಂಡನೆಗೆ ಅಡ್ಡಿಯಾಗಿತ್ತು.

ಅಂದು ವಿಧೇಯಕವನ್ನು ವಿರೋಧಿಸಿದ್ದ ಮಮತಾ ಬ್ಯಾನರ್ಜಿಯನ್ನು "ನೀವೊಬ್ಬ ಬಂಗಾಳಿ ಬ್ರಾಹ್ಮಣರಾಗಿದ್ದು ಬಹಳ ದಿನಗಳಿಂದ ಚರ್ಚೆಯಲ್ಲಿರುವ ಈ ವಿಧೇಯಕವನ್ನು ಏಕೆ ವಿರೋಧಿಸಿದಿರಿ" ಎಂಬುದಾಗಿ ಪತ್ರಕರ್ತರು ಪ್ರಶ್ನಿಸಿದ್ದರು. ಅದಕ್ಕೆ ಆಕೆ ಎಂದಿನಂತೆ, ಗೋಮಾಂಸ ತಿನ್ನುವುದು ನನ್ನ ಮೂಲಭೂತ ಹಕ್ಕು, ಹೀಗಾಗಿ ನಾನು ವಿರೋಧಿಸಿದೆ ಎಂಬ ಸೊಕ್ಕಿನ ಉತ್ತರವನ್ನು ನೀಡಿದ್ದರು. ಈ ಕಾರಣದಿಂದಲೇ ಅಂದು ಪ್ರಧಾನಿಯಾಗಿದ್ದ ವಾಜಪೇಯಿಯವರು ಸರ್ಕಾರವನ್ನು ಉಳಿಸುವ ಉದ್ದೇಶದಿಂದ ಬೆಳಗ್ಗೆ ಮಂಡನೆ ಮಾಡಿದ್ದ ಈ ವಿಧೇಯಕವನ್ನು ಸಂಜೆ ಚರ್ಚೆ ಮಾಡದೆಯೇ ಹಿಂಪಡೆದಿದ್ದರು.

ಇದೆಲ್ಲವನ್ನುಸೂಕ್ಷ್ಮವಾಗಿಗಮನಿಸಿದ್ದರಾಜೀವ್ ದೀಕ್ಷಿತರುಅಂದುಪ್ರಧಾನಿ ಯಾಗಿದ್ದ ವಾಜಪೇಯಿಯವರಿಗೆ ಪತ್ರವೊಂದನ್ನು ಬರೆದು, ನೀವು ಅಂದು ಸಂಸತ್ತಿನಲ್ಲಿ ಗೋಹತ್ಯಾ ನಿಷೇಧದ ವಿಧೇಯಕವನ್ನು ಜಾರಿಗೆ ತರಬೇಕಿತ್ತು. ಸರ್ಕಾರ ಬಿದ್ದು ಹೋದರೂ ಪರವಾಗಿರಲಿಲ್ಲ. ನೀವು ಮುಂದಿನ ಸಲ ಭಾರೀಬಹುಮತದಿಂದಚುನಾಯಿತರಾಗಿಅಧಿಕಾರಕ್ಕೆಬರುತ್ತಿದ್ದಿರಿ. ಏಕೆಂದರೆ ಗೋಹತ್ಯೆ ಎಂಬುದು ಎಂಬತ್ತು ಕೋಟಿ ಭಾರತೀಯರ ಹೃದಯಕ್ಕೆ ಸಂಬಂಧಿಸಿದ ಮತ್ತು ಹೃದಯದೊಂದಿಗೆ ಬೆಸೆಯಲ್ಪಟ್ಟ ವಿಚಾರವಾಗಿದೆ ಎಂಬುದಾಗಿ ತಿಳಿಸಿದ್ದರು. ನಂತರ ಸಾಕಷ್ಟು ಬಾರಿ ಈ ಕುರಿತಂತೆ ಯೋಚಿಸಿದಾಗ ಅವರಿಗೆ ಅರಿವಾದದ್ದೇನೆಂದರೆ ಕೆಲವೊಂದು ಗೋಮುಖ ವ್ಯಾಘ್ರಗಳಿಂದ ಈ ವಿಧೇಯಕಕ್ಕೆ ತಡೆಯಾಗುತ್ತಿದೆ. ಹೀಗೆ ಸಮಾಜದಲ್ಲಿ ಎರಡೆರಡು ಮುಖವನ್ನು ಹೊತ್ತು ತಿರುಗುತ್ತಿರುವ ಇಂತಹವರನ್ನು ಮೊದಲು ಹುಡುಕುವುದರೊಂದಿಗೆ ಈ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕು. ಮುಂದಾದರೂ ಒಂದು ದಿನ ಈ ಸಮಸ್ಯೆಗೆ ಪರಿಹಾರವನ್ನು ಹುಡುಕಲೇ ಬೇಕಿದೆ. ಹೇಗೆ ಭಾರತ ಪಾಕಿಸ್ತಾನದ ವಿಭಜನೆ ಪರಿಹಾರವಾಯಿತೋ, ಹೇಗೆ ಚೀನಾದೊಂದಿಗಿನ ಗಡಿ ವಿವಾದ ಪರಿಹಾರವಾಯಿತೋ ಹಾಗೆಯೇ ಇದಕ್ಕೂ ಒಂದು ದಿನ ಪರಿಹಾರ ಸಿಗಲಿದೆ. ಕೋಟಿ ಕೋಟಿ ಭಾರತೀಯರ ಅಂತಃಕರಣದ ಕೂಗು ಒಂದು ದಿನ ಕೊನೆಯಾಗಲಿದೆ ಎಂಬುದಾಗಿ ಯೋಚಿಸಿ ಮುಂದಿನ ಕಾರ್ಯಯೋಜನೆಗೆ ಸಿದ್ಧರಾಗಿದ್ದರು.

ಈ ದೇಶದಲ್ಲಿ ಗೋಹತ್ಯೆ ಎಂಬುದು ನಿರಂತರವಾಗಿ ನಡೆಯುತ್ತಲೇ ಇರಬೇಕು ಎಂಬುದರ ಹಿಂದೆ ಬಹುದೊಡ್ಡ ಷಡ್ಯಂತ್ರವಿರುವುದಂತೂ ಸತ್ಯ. ಹಿಂದಿನಿಂದಲೂ ಸಂಸತ್ತಿನಲ್ಲಿ ಗೋಹತ್ಯಾ ನಿಷೇಧ ವಿಧೇಯಕ ಮಂಡನೆಯಾಗಿ ವಾದ ವಿವಾದಗಳು ನಡೆದು ಒಂದಲ್ಲ ಒಂದು ಅಚ್ಚರಿಯ ಘಟನೆ ಘಟಿಸಿ ವಿಧೇಯಕ ನಂತರ ಬಿದ್ದು ಹೋಗುವುದು ಸಾಮಾನ್ಯ ಸಂಗತಿಯಾಗಿದೆ. ಹೀಗೆ ಗೋಹತ್ಯಾ ನಿಷೇಧ ವಿಧೇಯಕಕ್ಕೆ ತಡೆಯಾಗುವ ಸಾಕಷ್ಟು ಗೋಮುಖ ವ್ಯಾಘ್ರಗಳ ಸಾಲಿನಲ್ಲಿ ಈ ಮಮತಾ ಸಹ ಒಬ್ಬರಷ್ಟೇ.

ಅಂದು ಮಾಡಿದ ಆ ತಪ್ಪನ್ನು ಆಕೆ ಸರಿಪಡಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ಮತ್ತು ಸಂದರ್ಭಗಳು ಕೂಡಿ ಬಂದಿದ್ದವು. ಆದರೂ ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ, ಅಧಿಕಾರಕ್ಕಾಗಿ ಕೋಟ್ಯಂತರ ಅಮಾಯಕ ಮೂಕ ಜೀವಿಗಳ ಸಾವಿಗೆ ಈಕೆಯೇ ಕಾರಣರಾಗಿದ್ದು ದುರಂತ. ಎಲ್ಲೋ ದೇಶದ ಮೂಲೆಯಲ್ಲಿ ಹುಟ್ಟಿದ ಗೋವುಗಳು ಪಶ್ಚಿಮ ಬಂಗಾಳದ ಗಡಿಯಿಂದ ಬಾಂಗ್ಲಾಗೆ ರಫ್ತಾಗುವುದರೊಂದಿಗೆ ಬಾಂಗ್ಲಾದ ಆರ್ಥಿಕ ಸ್ಥಿತಿ ಭದ್ರವಾಗುವಂತಾಯಿತು. ಹಾಗೆಯೇ ಚರ್ಮ ಮತ್ತು ಮೂಳೆಯ ರಫ್ತಿನಲ್ಲಿ ಉತ್ತುಂಗಕ್ಕೇರುವಂತಾಯಿತು. ಒಂದು ಹೇಳಿಕೆಯ ಪ್ರಕಾರ ಈಕೆಯ ಆಡಳಿತಾವಧಿಯಲ್ಲಿ ಪ್ರತಿನಿತ್ಯ ಏನಿಲ್ಲವೆಂದರೂ ಐವತ್ತು ಸಾವಿರದಿಂದ ಒಂದು ಲಕ್ಷಕ್ಕೂ ಹೆಚ್ಚು ಗೋವುಗಳು ನಿರಾಯಾಸವಾಗಿ ಈ ದೇಶದ ಗಡಿಯನ್ನು ದಾಟಿ ಬಾಂಗ್ಲಾ ಪ್ರಯಾಣಿಸುತ್ತಿದ್ದವಂತೆ. ಇದರಲ್ಲಿ ಸಣ್ಣ ಸಣ್ಣ ಅಧಿಕಾರಿಗಳಿಂದ ಹಿಡಿದು ದೊಡ್ಡ ದೊಡ್ಡ ರಾಜಕೀಯ ನಾಯಕರೇ ನೇರವಾಗಿ ಶಾಮಿಲಾಗಿದ್ದರಂತೆ. ಬಾಂಗ್ಲ ವಲಸಿಗರಿಗೆ ಇದೊಂದು ಹಣ ಮಾಡುವ ದೊಡ್ಡ ದಂಧೆಯಾಗಿ ಅವರ ದುಷ್ಟ ಸಂತಾನಗಳು ದುಪ್ಪಟ್ಟಾಗಲು ಇದು ಸಹಕಾರಿಯಾಯಿತಂತೆ. ಮುಖ್ಯವಾಗಿ ಈ ದಂಧೆಯಿಂದ ಬರುತ್ತಿದ್ದ ಹಣದ ಒಂದಷ್ಟು ಪಾಲು ಚುನಾವಣಾ ಖರ್ಚಿಗಾಗುತ್ತಿತ್ತಂತೆ. ಇದೇ ಹಣದಲ್ಲಿ ಈಕೆ ಪ್ರತಿಯೊಂದು ಚುನಾವಣೆಯಲ್ಲೂ ಗೆದ್ದು ಬರುತ್ತಿದ್ದರಂತೆ. ಎಂತಹ ವಿಪರ್ಯಾಸವಲ್ಲವೇ?

ಈಗ ಬಂದಿರುವ ಹೊಸ ಸರ್ಕಾರ ಮೊದಲಿಗೆ ಬಹುಸಂಖ್ಯಾತ ಹಿಂದೂಗಳ ಭಾವನೆಗೆ ಬೆಲೆ ಕೊಡುತ್ತಾ ಈಕೆಯ ಎಲ್ಲಾ ಅಕ್ರಮ ಚಟುವಟಿಕೆಗಳಿಗೆ ಬ್ರೇಕ್ ಹಾಕಬೇಕಿದೆ. ಗೋಸಂಪತ್ತು ಈ ದೇಶದ ಗಡಿ ದಾಟದಂತೆ ಎಚ್ಚರ ವಹಿಸ ಬೇಕಿದೆ. ಎಲ್ಲಿಯವರೆಗೆಂದರೆ ಈ ದೇಶದ ಒಂದೇ ಒಂದು ಗೋವು ಸಹ ಬಾಂಗ್ಲಾ ಗಡಿ ದಾಟದಂತೆ ನೋಡಿಕೊಳ್ಳಬೇಕಿದೆ. ಈ ರೀತಿ ಮಾಡಿದ್ದೇ ಆದಲ್ಲಿ ಗೋ ಸಂಪತ್ತು ಇಲ್ಲಿಯೇ ಉಳಿಯುವುದರಿಂದ ಇಲ್ಲಿಯ ಆರ್ಥಿಕ ಸ್ಥಿತಿ ಸುಧಾರಿಸುವುದರೊಂದಿಗೆ ಬಾಂಗ್ಲಾದ ಆರ್ಥಿಕ ಸ್ಥಿತಿ ಇನ್ನಷ್ಟು ಹದಗೆಡಲಿದೆ. ಆಗಷ್ಟೇ ಪಾಕಿಸ್ತಾನದಂತೆ ಬಾಂಗ್ಲಾ ಸಹ ದಿವಾಳಿಯಾಗುವ ಸಾಧ್ಯತೆ ದಟ್ಟವಾಗಿದೆ. ಇದನ್ನೇ ಅಲ್ಲವೇ ನಾವು ನೀವುಗಳು ಬಹು ಆತುರದಿಂದ ಕಾಯುತ್ತಿರುವುದು!

ಜಾಗತಿಕ ವ್ಯವಸ್ಥೆ ಕಂಗೆಡಿಸುತ್ತಿರುವ ಟ್ರಂಪ್-ಕ್ಸಿ

ಜಗತ್ತಿನ ಇನ್ನಿತರ ಶಕ್ತಿಗಳ ಜತೆ ವೇದಿಕೆ ಹಂಚಿಕೊಳ್ಳಲು ಅಮೆರಿಕ ಮತ್ತು ಚೀನಾ ಎರಡೂ ಈಗ ನಿರಾಸಕ್ತಿ ಹೊಂದಿವೆ.

▸ ರಾಮ್ ಮಾಧವ್

ಜಗತ್ತಿನಲ್ಲಿ ಈಗ ಉಂಟಾಗುತ್ತಿರುವ ಬದಲಾವಣೆಗಳನ್ನು ಗಮನಿಸಿದರೆ ವಿಶ್ವವು ಮತ್ತೆ ದ್ವಿ-ಧ್ರುವೀಯ ವ್ಯವಸ್ಥೆ ಯತ್ತ ಮರಳುತ್ತಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಇತ್ತೀಚೆಗೆ ಅಮೆರಿಕದ ಅಧ್ಯಕ್ಷ ಟ್ರಂಪ್ ಚೀನಾಕ್ಕೆ ನೀಡಿದ ಭೇಟಿಗೆ ಜಾಗತಿಕವಾಗಿ ಕೊಡಲಾದ ಮಹತ್ವ ಕೂಡಾ ಜಾಗತಿಕ ವ್ಯವಸ್ಥೆ ಬದಲಾಗುತ್ತಿರುವುದರ ಸಂಕೇತ ನೀಡಿದೆ.

1991ರಲ್ಲಿ ಸೋವಿಯತ್ ಒಕ್ಕೂಟದಲ್ಲಿ ಕಮ್ಯುನಿಸ್ಟ್ ವ್ಯವಸ್ಥೆಯು ಕುಸಿದಾಗ ಜಗತ್ತು ಅಮೆರಿಕ ನೇತೃತ್ವದ ಏಕಧ್ರುವ ವ್ಯವಸ್ಥೆಗೆ ಮರಳುತ್ತದೆಂದು ಅಮೆರಿಕದ ಕೆಲವು ಚಿಂತಕರು ಕನಸು ಕಂಡಿದ್ದರು. 'ಜಗತ್ತಿಗೆ ಇನ್ನು ಮುಂದೆ ಪ್ರಗತಿಗೆ ಒಂದೇ ದಾರಿಯಿರುವುದು, ಅದು ಅಮೆರಿಕನ್ ಮಾದರಿಯ ಉದಾರವಾದಿ ಪ್ರಜಾತಾಂತ್ರಿಕ ದಾರಿ' ಎಂದು ರಾಜಕೀಯ ಪಂಡಿತ ಫ್ರಾನ್ಸಿಸ್ ಫುಕುಯಾಮ ಬರೆದಿದ್ದರು.ಆದರೆ ಅವರ ರಾಜಕೀಯ ಗುರುವಾದ ಸ್ಯಾಮುಯೆಲ್ ಹಂಟಿಗ್ಟನ್ ಎರಡು ವರ್ಷಗಳ ಬಳಿಕ ಬರೆದ ಖ್ಯಾತ 'ದಿ ಕ್ಲ್ಯಾಶ್ ಆಫ್ ಸಿವಿಲೈಸೇಷನ್ಸ್' ಪುಸ್ತಕದಲ್ಲಿ 'ನಾಗರಿಕ ಸಂಘರ್ಷ ಇನ್ನೂ ಮುಂದುವರಿಯಲಿದೆ. ಅಮೆರಿಕಕ್ಕೆ ಇನ್ನಿತರ ಪ್ರಾದೇಶಿಕ ಶಕ್ತಿಗಳು ಸವಾಲೊಡ್ಡಲಿವೆ' ಎಂದು ಬರೆದಿದ್ದರು. ಅವರ ಮಾತು ತಪ್ಪಾಗಲಿಲ್ಲ. ಕೆಲ ಸಮಯದಲ್ಲೇ ಇಸ್ಲಾಮಿಕ್ ಜಗತ್ತು ಅಮೆರಿಕದ ಸಾರ್ವಭೌಮತ್ವಕ್ಕೆ ಸವಾಲೊಡ್ಡಿತು. ಇಸ್ಲಾಮಿಕ್ ಭಯೋತ್ಪಾದಕರು ಪದೇಪದೇ ಅಮೆರಿಕದ ಗುರಿಗಳ ಮೇಲೆ ದಾಳಿ ನಡೆಸಿದರು.

21ನೇ ಶತಮಾನದ ಆರಂಭದಲ್ಲಿ ಕೆಲವಾರು ಮಧ್ಯಮ ಶಕ್ತಿಗಳು ಮತ್ತು ಪುಟ್ಟ ರಾಷ್ಟ್ರಗಳು ಕೂಡಾ ಗುಂಪುಗಳನ್ನು ಸೃಷ್ಟಿಸಿಕೊಂಡು ಜಗತ್ತಿನಲ್ಲಿ ಪ್ರಮುಖ ಪಾತ್ರ ವಹಿಸತೊಡಗಿದವು. ಇದರಿಂದಾಗಿ ಜಗತ್ತು ಬಹುಧ್ರುವೀಯ ವ್ಯವಸ್ಥೆಯೆಡೆಗೆ ಸಾಗುತ್ತಿರುವ ಸಂಕೇತ ತೋರಿಬಂತು. ಅಮೆರಿಕದ ಪಾರಮ್ಯಕ್ಕೆ ಸವಾಲು ತೋರಿಬಂತು. ಪ್ರಾದೇಶಿಕತೆ ಮತ್ತು ಸ್ಥಳೀಯ ವಿಷಯಗಳೇ ಜಾಗತಿಕ ಆಗುಹೋಗುಗಳಲ್ಲಿ ಪ್ರಮುಖ ಪಾತ್ರ ವಹಿಸುವುದೆಂದು ಕೆಲವರು ಪ್ರತಿಪಾದಿಸತೊಡಗಿದರು. ಆದರೆ ಅಮೆರಿಕದ ಕೆಲವು ಚಿಂತಕರು ಇದನ್ನು ತಿರಸ್ಕರಿಸತೊಡಗಿದರು. ಅಮೆರಿಕದ ಪಾರಮ್ಯವನ್ನು ಯಾರೂ ಪ್ರಶ್ನಿಸಲು ಸಾಧ್ಯವಿಲ್ಲ ಎಂಬುದು ಅವರ ವಾದವಾಗಿತ್ತು. ಯಾವುದೇ ದೇಶವೂ ಅಮೆರಿಕದ ಆರ್ಥಿಕ ಶಕ್ತಿ, ತಂತ್ರಜ್ಞಾನ ಮತ್ತು ಮಿಲಿಟರಿ ಶಕ್ತಿಯನ್ನು ಸರಿಗಟ್ಟಲು ಸಾಧ್ಯವಿಲ್ಲ ಎಂಬುದು ಅವರ ವಾದವಾಗಿತ್ತು. ಆದರೆ ಕಳೆದೆರಡು ದಶಕಗಳಲ್ಲಿ ಉಂಟಾಗಿರುವ



ಕೆಲವಾರು ಬೆಳವಣಿಗೆಗಳು ಹಾಗೂ ಇತ್ತೀಚಿನ ಇರಾನ್ ಸಮರವು 'ಶಕ್ತಿಯುತ ರಾಷ್ಟ್ರಗಳೇ ಯಾವತ್ತೂ ಸಫಲತೆ ಸಾಧಿಸುತ್ತವೆ ಎನ್ನುವಂತಿಲ್ಲ' ಎಂಬುದನ್ನು ಸಾಬೀತುಪಡಿಸಿದವು.ಹಲವಾರು ಮಧ್ಯಮ ಶಕ್ತಿಯ ರಾಷ್ಟ್ರಗಳಾದ ಭಾರತ, ರಷ್ಯಾ, ಬ್ರೆಜಿಲ್, ಟರ್ಕಿ, ಫ್ರಾನ್ಸ್ ಮತ್ತು ದ. ಆಫ್ರಿಕಾ ಹಾಗೂ ಏಷಿಯಾನ್, ಐರೋಪ್ಯ ಒಕ್ಕೂಟ, ಕ್ವಾಡ್ ಕೂಟ ಮತ್ತು ಬ್ರಿಕ್ಸ್ ಮೊದಲಾದ ಕೂಟಗಳು ಜಾಗತಿಕ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸತೊಡಗಿದವು. ಜಗತ್ತು ಬಹುಧ್ರುವೀಯ ವ್ಯವಸ್ಥೆಯನ್ನು ಅಪ್ಪಿಕೊಳ್ಳತೊಡಗಿತು.

ಈ ಚಿತ್ರಣ ಕೂಡಾ ಈಗ ಬದಲಾಗುತ್ತಿದೆ. ಎರಡು ಸೂಪರ್ ಪವರ್‌ಗಳಾದ ಅಮೆರಿಕ ಮತ್ತು ಚೀನಾಗಳು ಈಗ ಜಾಗತಿಕ ವ್ಯವಹಾರವನ್ನು ತಾವೇ ನಿಯಂತ್ರಿಸಲು ಯತ್ನಿಸುತ್ತಿವೆ.ಚೀನಾ ಈಗ ಅಮೆರಿಕದ ಪಾರಮ್ಯಕ್ಕೆ ಪ್ರಬಲ ಸವಾಲು ಒಡ್ಡಬಲ್ಲ ಶಕ್ತಿಯಾಗಿ ಬೆಳೆದಿದೆ ಎಂಬ ಅರಿವು ಕಳೆದ 15 ವರ್ಷಗಳಲ್ಲಿ ಅಮೆರಿಕಕ್ಕೆ ಉಂಟಾಗತೊಡಗಿದೆ. ಆರಂಭದಲ್ಲಿ ಅಮೆರಿಕದ ಅಧ್ಯಕ್ಷರಾದ ಬಿಲ್ ಕ್ಲಿಂಟನ್ ಮತ್ತು ಜಾರ್ಜ್ ಬುಷ್ ಚೀನಾದೊಂದಿಗೆ ಹೆಚ್ಚು ಸಹಕಾರ, ವ್ಯವಹಾರ ನಡೆಸಿದರು. ಅಮೆರಿಕದ ಸಖ್ಯದೊಂದಿಗೆ ಚೀನಾ ಕೂಡಾ ಪ್ರಜಾತಾಂತ್ರಿಕ, ಲಿಬರಲ್ ಮತ್ತು ಹೊಣೆಯರಿತ ರಾಷ್ಟ್ರವಾಗಿ ಬದಲಾಗಬಹುದು ಎಂಬುದು ಅವರ ನಿರೀಕ್ಷೆಯಾಗಿತ್ತು. ಅವರಿಬ್ಬರು ಹಲವಾರು ಬಾರಿ ಚೀನಾಕ್ಕೆ ಭೇಟಿ ಕೊಟ್ಟಿದ್ದರು. ಆದರೆ ಚೀನಾ ಅಮೆರಿಕದ ಹಾದಿಯನ್ನು ತುಳಿಯುವುದಿಲ್ಲ, ಬದಲಾಗಿ ಅಮೆರಿಕಕ್ಕೆ ಪ್ರತಿರೋಧ ಶಕ್ತಿಯಾಗಿ ಬೆಳೆಯುತ್ತಿದೆ ಎಂಬುದು ತಿಳಿಯಲು ಹೆಚ್ಚು ಕಾಲ ಬೇಕಾಗಲಿಲ್ಲ.

2013ರಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ತಮ್ಮ ಅಧಿಕಾರ ಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಂಡ ಬಳಿಕ ಚೀನಾ ಜಾಗತಿಕ ಸೂಪರ್ ಪವರ್ ಆಗುವ ಮಹತ್ವಾಕಾಂಕ್ಷೆ ಹೊಂದಿರುವುದು ನಿಚ್ಚಳವಾಯಿತು. ತಂತ್ರಜ್ಞಾನ, ರಕ್ಷಣೆ ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ಚೀನಾ ಅದ್ಭುತ ಪ್ರಗತಿ ಸಾಧಿಸತೊಡಗಿತು. ಹಲವಾರು ಕ್ಷೇತ್ರಗಳಲ್ಲಿ ಅಮೆರಿಕಕ್ಕೆ ಸರಿಸಮನಾಗಿ ಬೆಳೆಯತೊಡಗಿತು. "ಚೀನಾ ಈಗ ಅಮೆರಿಕದ ಸಮಾನವಾಗಿ ಬೆಳೆದಿದೆ" ಎಂಬ ಸಂದೇಶವನ್ನು ಜಿನ್‌ಪಿಂಗ್ ಹಲವಾರು ಜಾಗತಿಕ ವೇದಿಕೆಗಳಲ್ಲಿ ರವಾನಿಸತೊಡಗಿದ್ದಾರೆ.

ಜಿನ್‌ಪಿಂಗ್ ಇತ್ತೀಚಿನ ದಿನಗಳಲ್ಲಿ ಅಮೆರಿಕ ಮತ್ತು ಚೀನಾದ ಸಂಬಂಧವನ್ನು 'ದೈತ್ಯ ನೌಕೆ'ಗೆ ಹೋಲಿಸಲಾರಂಭಿಸಿದ್ದಾರೆ. ಹಲವಾರು ಸಂದರ್ಭಗಳಲ್ಲಿ ಅವರು ಇದನ್ನು ಪುನರುಚ್ಚರಿಸಿದ್ದಾರೆ. ಜಾಗತಿಕ ಕೋಲಾಹಲದ ಸಾಗರದಲ್ಲಿ ಅಮೆರಿಕ ಮತ್ತು ಚೀನಾದ ಸಂಬಂಧವು ಈ ದೈತ್ಯ ನೌಕೆಯನ್ನು ಸುರಕ್ಷಿತವಾಗಿ ದಡ ಸೇರಿಸಬಲ್ಲದು ಎಂಬುದು ಅವರ ಮಾತಿನ ಅರ್ಥ. ಇತ್ತ ಟ್ರಂಪ್ ಕೂಡಾ ಹಲವಾರು ಸಂದರ್ಭಗಳಲ್ಲಿ 'ಜಿ-2' ದೇಶಗಳ ಕುರಿತಂತೆ ಮಾತನಾಡತೊಡಗಿದ್ದಾರೆ. ಅವರ ಪ್ರಕಾರ ಜಿ-2 ರಾಷ್ಟ್ರಗಳೆಂದರೆ ಅಮೆರಿಕ ಮತ್ತು ಚೀನಾ. ಈ ಎರಡು ದೇಶಗಳು ಶೀಘ್ರದಲ್ಲೇ ಸಹಕಾರಕ್ಕಾಗಿ ಕೈಜೋಡಿಸಲಿವೆ ಎಂಬಂತಹ ಸಂದೇಶವನ್ನು ಅವರೂ ರವಾನಿಸಲಾರಂಭಿಸಿದ್ದಾರೆ.

ಈ ಎಲ್ಲ ಬೆಳವಣಿಗೆಗಳಿಂದಾಗಿ ಜಗತ್ತಿನ ಇನ್ನಿತರ ಶಕ್ತಿಗಳ ಜತೆ ವೇದಿಕೆ ಹಂಚಿಕೊಳ್ಳಲು ಅಮೆರಿಕ ಮತ್ತು ಚೀನಾ ಎರಡೂ ಈಗ ನಿರಾಸಕ್ತಿ ಹೊಂದಿವೆ. ಅಮೆರಿಕಕ್ಕೆ ಕ್ವಾಡ್, ನ್ಯಾಟೋ ಕುರಿತು ಆಸಕ್ತಿ ಕುಂದಿದೆ. ಚೀನಾವು ಜಿ-20, ಬ್ರಿಕ್ಸ್‌ನಂತಹ ವೇದಿಕೆಯನ್ನು ಕಡೆಗಣಿಸುತ್ತಿದೆ.ಜಿ20, ಬ್ರಿಕ್ಸ್‌ನಲ್ಲಿ ಭಾರತವು ನಾಯಕತ್ವ ಹೊಂದಿರುವುದೂ ಚೀನಾಕ್ಕೆ ಸಹ್ಯವಾಗುತ್ತಿಲ್ಲ.

ಇವೆಲ್ಲವೂ ಜಗತ್ತು ಬಹುಧ್ರುವೀಯ ವ್ಯವಸ್ಥೆಯಿಂದ ದ್ವಿ-ಧ್ರುವೀಯ ವ್ಯವಸ್ಥೆಯೆಡೆಗೆ ಸಾಗುತ್ತಿರುವ ಸಂಕೇತಗಳನ್ನು ನೀಡುತ್ತಿವೆ. ದಶಕಗಳ ಹಿಂದಿನ ಹಳೆಯ ಜಾಗತಿಕ ವ್ಯವಸ್ಥೆ ಮರುಕಳಿಸುತ್ತಿರುವಂತಿದೆ.

ನಾರ್ವೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಕರೆ

ಮಾತುಕತೆ ಮಾರ್ಗ ಬಿಕ್ಕಟ್ಟಿಗೆ ಪರಿಹಾರ

ಓಸ್ಲೋ: ಪಶ್ಚಿಮ ಏಷ್ಯಾ ಬಿಕ್ಕಟ್ಟು ಮತ್ತು ಉಕ್ರೇನ್ ಸಂಘರ್ಷವನ್ನು ಕೇವಲ ಮಿಲಿಟರಿ ಕ್ರಮಗಳಿಂದ ಬಗೆಹರಿಸಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ, ಇವುಗಳಿಗೆ ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಶಾಂತಿಯುತ ಪರಿಹಾರ ಕಂಡುಕೊಳ್ಳುವಂತೆ ಸೋಮವಾರ ಕರೆ ನೀಡಿದ್ದಾರೆ.

ನಾರ್ವೆ ಪ್ರಧಾನಿ ಜೋನಾಸ್ ಗಹರ್ ಸ್ಟೋರ್ ಅವರೊಂದಿಗೆ ನಡೆಸಿದ ದ್ವಿಪಕ್ಷೀಯ ಮಾತುಕತೆಯ ನಂತರ ಮೋದಿ ಮಾತನಾಡಿದರು. ಉಭಯ ದೇಶಗಳು ಜಾಗತಿಕ ನಿಯಮ ಆಧಾರಿತ ವ್ಯವಸ್ಥೆಯನ್ನು ಬೆಂಬಲಿಸಲು ಒಪ್ಪಿಕೊಂಡಿದ್ದು, ಅಂತಾರಾಷ್ಟ್ರೀಯ ಸವಾಲುಗಳನ್ನು ಎದುರಿಸಲು ಜಾಗತಿಕ ಸಂಸ್ಥೆಗಳಲ್ಲಿ ರಚನಾತ್ಮಕ ಸುಧಾರಣೆಗಳನ್ನು ತರಲು ನಿರ್ಧರಿಸಿವೆ. ಇದರೊಂದಿಗೆ, ಕಡಲ ಭದ್ರತೆ, ಸಾಗರ ಆರ್ಥಿಕತೆ ಮತ್ತು ಸಾಮರ್ಥ್ಯ ವೃದ್ಧಿಯಲ್ಲಿ ಪರಸ್ಪರ ಸಹಕಾರ ಹೆಚ್ಚಿಸಲು ಭಾರತದ ನೇತೃತ್ವದ 'ಇಂಡೋ-ಪೆಸಿಫಿಕ್ ಸಾಗರಗಳ ಯೋಜನೆ'ಗೆ (ಐಪಿಓಐ) ಸೇರಲು ನಾರ್ವೆ ನಿರ್ಧರಿಸಿದೆ.

ಭಯೋತ್ಪಾದನೆ ನಿರ್ಮೂಲನೆಗೆ ಸಂಕಲ್ಪ: ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಉಭಯ ನಾಯಕರು ಬದ್ಧತೆ ಪ್ರಕಟಿಸಿದರು. ಕಳೆದ ವರ್ಷ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನರು ಮೃತಪಟ್ಟಾಗ ಭಾರತದ ಪರವಾಗಿ ನಿಂತಿದ್ದಕ್ಕಾಗಿ ಮೋದಿ ನಾರ್ವೆಗೆ ಕೃತಜ್ಞತೆ ಸಲ್ಲಿಸಿದರು. ನಾಲ್ಕು ರಾಷ್ಟ್ರಗಳ ಯುರೋಪ್ ಪ್ರವಾಸದ ಭಾಗವಾಗಿ ಮೋದಿ ಸೋಮವಾರ ಸ್ವೀಡನ್‌ನಿಂದ ಓಸ್ಲೋಗೆ ಆಗಮಿಸಿದ್ದಾರೆ.

ಮೋದಿಗೆ ನಾರ್ವೆಯ ಅತ್ಯುನ್ನತ ಗೌರವ



ಮೋದಿ ಅವರಿಗೆ ನಾರ್ವೆಯ ಅತ್ಯುನ್ನತ ನಾಗರಿಕ ಗೌರವವಾದ 'ಗ್ರ್ಯಾಂಡ್ ಕ್ರಾಸ್ ಆಫ್ ದಿ ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್' ಪ್ರಶಸ್ತಿ ನೀಡಿ ಗೌರವಿಸಲಾಗಿದ್ದು, ಇದು ಅವರ 32ನೇ ಅಂತಾರಾಷ್ಟ್ರೀಯ ಗೌರವವಾಗಿದೆ. ಈ ಪ್ರಶಸ್ತಿ, ನಾರ್ವೆಯ ಹಿತಾಸಕ್ತಿಗಳು ಮತ್ತು ಅಂತಾರಾಷ್ಟ್ರೀಯ ಸಂಬಂಧಗಳನ್ನು ವೃದ್ಧಿಸುವಲ್ಲಿ ನೀಡಿದ ಅಸಾಧಾರಣ ಸೇವೆಯನ್ನು ಗುರುತಿಸಿ ನೀಡಲಾಗುತ್ತದೆ. 43 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ನಾರ್ವೆಗೆ ಭೇಟಿ ನೀಡುತ್ತಿರುವುದು ಇದೇ ಮೊದಲ ಬಾರಿಯಾಗಿದ್ದು, ಮೋದಿ ಅವರ ಚೊಚ್ಚಲ ಪ್ರವಾಸ ಇದಾಗಿದೆ. ಇದಕ್ಕೂ ಒಂದು ದಿನ ಮುಂಚಿತವಾಗಿ ಮೋದಿ, ಸ್ವೀಡನ್‌ನ ಅತ್ಯುನ್ನತ ಗೌರವವಾದ 'ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್ ಡಿಗ್ರಿ ಕಮಾಂಡರ್ ಗ್ರ್ಯಾಂಡ್ ಕ್ರಾಸ್' ಪ್ರಶಸ್ತಿಯನ್ನೂ ಸ್ವೀಕರಿಸಿದ್ದರು.

ಇಂದು ಭಾರತ-ನಾರ್ಡಿಕ್ ಶೃಂಗ

ಓಸ್ಲೋದಲ್ಲಿ ಮೇ 19ರಂದು ನಡೆಯಲಿರುವ 3ನೇ ಭಾರತ-ನಾರ್ಡಿಕ್ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಭಾಗವಹಿಸಲಿದ್ದಾರೆ. ಅಲ್ಲಿ ಅವರು ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳು, ರಾಷ್ಟ್ರಗಳ ನಡುವಿನ ಸಹಕಾರಗಳ ಕುರಿತು ಅಲ್ಲಿನ ಉನ್ನತ ಮಟ್ಟದ ಅಧಿಕಾರಿಗಳ ಜತೆ ಚರ್ಚಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ, ಪ್ರಧಾನಿ ಮೋದಿ ಅವರು ನಾರ್ವೆ ಪ್ರಧಾನಿಯೊಂದಿಗೆ ಭಾರತ - ನಾರ್ವೆ ವ್ಯವಹಾರ ಮತ್ತು ಸಂಶೋಧನಾ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಶೃಂಗಸಭೆಯು ವ್ಯಾಪಾರ, ಶುದ್ಧ ಇಂಧನ, ತಂತ್ರಜ್ಞಾನ, ನಾವೀನ್ಯತೆ ಮತ್ತು ಸುಸ್ಥಿರ ಅಭಿವೃದ್ಧಿಯಂತಹ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸುವ ನಿರೀಕ್ಷೆಯಿದೆ.



ರೈಲ್ವೆ ಸಚಿವಾಲಯದಿಂದ ಮುಂಬೈ -ಅಹಮದಾಬಾದ್ ನಡುವೆ ಚಲಿಸುವ ದೇಶದ ಮೊದಲ ಬುಲೆಟ್ ರೈಲಿನ ಮೊದಲ ಚಿತ್ರ ಅನಾವರಣ.

ನಕಲಿ ಮರ!

- ಭೋಪಾಲ್‌ನ ಆಲ್ಗೀ ಟ್ರೀ 25 ನೈಸರ್ಗಿಕ ಮರಗಳಂತೆ ಕೆಲಸ ಮಾಡುತ್ತದೆ.
- ಈ ವ್ಯವಸ್ಥೆ ವಾರ್ಷಿಕವಾಗಿ 1.5 ಟನ್ ಕಾರ್ಬನ್ ಡೈಆಕ್ಸೈಡ್ ಹೀರಿಕೊಳ್ಳುತ್ತದೆ.
- ಸೌರಶಕ್ತಿ ಚಾಲಿತ ಈ ಘಟಕ, ಪಿಎಂ 2.5 ಕಣಗಳನ್ನು ಶೇ.45-55ರಷ್ಟು ಕಡಿಮೆ ಮಾಡುತ್ತದೆ.
- ಈ ಲಂಬ ರಚನೆ, ನೀರು ಮತ್ತು ಸೂಕ್ಷ್ಮ ಪಾಚಿಗಳ ದ್ಯುತಿಸಂಶ್ಲೇಷಣೆಯನ್ನು ಬಳಸುತ್ತದೆ.
- ಈ ತಂತ್ರಜ್ಞಾನ, ನೈಸರ್ಗಿಕ ಕಾಡುಗಳಿಗೆ ಪರ್ಯಾಯವಲ್ಲ, ಪೂರಕವಷ್ಟೇ

ಭೋಪಾಲ್‌ನಲ್ಲಿ ಭಾರತದ ಮೊದಲ ಪಾಚಿ ಮರ ಅನಾವರಣ



ನಗರ ಪ್ರದೇಶಗಳಲ್ಲಿನ ಮಾಲಿನ್ಯ ನಿಯಂತ್ರಿಸಲು ಮತ್ತು ವಾಯು ಗುಣಮಟ್ಟ ಸುಧಾರಿಸಲು ಭಾರತದ ಮೊದಲ "ಪಾಚಿ ಮರ"ವನ್ನು (ಆಲ್ಗೀ ಟ್ರೀ) ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಅನಾವರಣಗೊಳಿಸಲಾಗಿದೆ. ಇದು ಕಾರ್ಬನ್ ಡೈ ಆಕ್ಸೈಡ್ ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುವ ಆಧುನಿಕ ಜೈವಿಕ-ಎಂಜಿನಿಯರಿಂಗ್ ರಚನೆ. ಭವಿಷ್ಯದ ತಂತ್ರಜ್ಞಾನದಂತಿರುವ ಈ ಹಸಿರು-ತಂತ್ರಜ್ಞಾನದ ಆವಿಷ್ಕಾರ, ಬರೋಬ್ಬರಿ 25 ನೈಸರ್ಗಿಕ ಮರಗಳು ನಿರ್ವಹಿಸುವ ಕೆಲಸವನ್ನು ಏಕಾಂಗಿಯಾಗಿ ಮಾಡುತ್ತದೆ ಎಂದು ವರದಿಯಾಗಿದ್ದು, ಕಾಡುಗಳನ್ನು ಬೆಳೆಸಲು ಸ್ಥಳಾವಕಾಶದ ಕೊರತೆ ಎದುರಿಸುತ್ತಿರುವ ನಗರಗಳಿಗೆ ಇದು ಆಶಾಕಿರಣವಾಗಲಿದೆ ಎನ್ನಲಾಗಿದೆ.

ನಗರ ಮಾಲಿನ್ಯ ನಿಯಂತ್ರಣಕ್ಕೆ ರಾಮಬಾಣ!

ತಾಂತ್ರಿಕ ವೈಶಿಷ್ಟ್ಯಗಳು ಮತ್ತು ಪರಿಸರದ ಮೇಲಿನ ಪ್ರಭಾವ

ಭೋಪಾಲ್‌ನಲ್ಲಿ ಅಳವಡಿಸಲಾಗಿರುವ ಈ ಒಂದು ಘಟಕ, ವಾರ್ಷಿಕವಾಗಿ ಸುಮಾರು 1.5 ಟನ್ ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಸುಮಾರು 1 ಟನ್ ಆಮ್ಲಜನಕವನ್ನು ಉತ್ಪಾದಿಸುತ್ತದೆ. ಸಂಪೂರ್ಣವಾಗಿ ಸೌರಶಕ್ತಿಯಿಂದ ಕಾರ್ಯನಿರ್ವಹಿಸುವ ಈ ಕಡಿಮೆ-ಇಂಧನ ಪರಿಸರ ವ್ಯವಸ್ಥೆ, ಸುತ್ತಮುತ್ತಲಿನ ಗಾಳಿಯನ್ನು ನಿರಂತರವಾಗಿ ಸಂಸ್ಕರಿಸಿ ಧೂಳು ಮತ್ತು ಕಣಗಳನ್ನು ಹಿಡಿದಿಟ್ಟುಕೊಳ್ಳುತ್ತದೆ. ಈ ತಂತ್ರಜ್ಞಾನ 15 ಮೀಟರ್ ವ್ಯಾಪ್ತಿಯಲ್ಲಿ ಪಿಎಂ 2.5 ಕಣಗಳನ್ನು ಶೇ.45ರಿಂದ 55ರಷ್ಟು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಗಿಡಗಳನ್ನು ನೆಟ್ಟು ಬೆಳೆಸಲು ಸ್ಥಳಾವಕಾಶವಿಲ್ಲದ ಜನದಟ್ಟಣೆಯ ರಸ್ತೆಬದಿಗಳು ಮತ್ತು ಸಾರ್ವಜನಿಕ ಸ್ಥಳಗಳಿಗೆ ಈ ವ್ಯವಸ್ಥೆ ಹೆಚ್ಚು ಪ್ರಾಯೋಗಿಕವಾಗಿದೆ.

ಜೈವಿಕ-ಎಂಜಿನಿಯರಿಂಗ್ ವ್ಯವಸ್ಥೆ

ಹೆಸರೇ ಸೂಚಿಸುವಂತೆ ಇದು ಕೇವಲ ಮರವಲ್ಲ, ಬದಲಿಗೆ ನೀರು ಮತ್ತು ಸೂಕ್ಷ್ಮ ದರ್ಶಕೀಯ ಪಾಚಿಗಳಿಂದ (ಮೈಕ್ರೋ ಆಲ್ಗೀ) ತುಂಬಿದ ಲಂಬವಾದ ಜೈವಿಕ-ಎಂಜಿನಿಯರಿಂಗ್ ರಚನೆ. ಇದನ್ನು ಜೀವಂತ ವಾಯು ಸಂಸ್ಕಾರಕ (ಏರ್ ಪ್ಯೂರಿಫೈಯರ್) ಎಂದೂ ಕರೆಯಬಹುದು. ಕಲುಷಿತ ಗಾಳಿಯನ್ನು ಈ ವ್ಯವಸ್ಥೆ ತನ್ನೊಳಗೆ ಎಳೆದುಕೊಳ್ಳುತ್ತದೆ, ಅಲ್ಲಿರುವ ಸೂಕ್ಷ್ಮ ಪಾಚಿಗಳು ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಳ್ಳುತ್ತವೆ. ನಂತರ ದ್ಯುತಿಸಂಶ್ಲೇಷಣೆ ಪ್ರಕ್ರಿಯೆಯ ಮೂಲಕ ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ. ಈ ಮೂಲಕ ಮಾಲಿನ್ಯವನ್ನು ಉಸಿರಾಡಿ, ಶುದ್ಧ ಗಾಳಿಯನ್ನು ಹೊರಬಿಡುವ ಮೂಲಕ ಸ್ಥಳೀಯ ವಾಯು ಗುಣಮಟ್ಟವನ್ನು ಸುಧಾರಿಸುತ್ತದೆ.

ತಯಾರಿ, ಬಳಕೆ ಅನುಮೋದನೆ

ಈ ಸಾಧನದ ಬಾಹ್ಯ ರಚನೆಯನ್ನು ನಗರದ ಕಠಿಣ ಹವಾಮಾನವನ್ನು ತಡೆದುಕೊಳ್ಳುವ ಸಲುವಾಗಿ ಉತ್ತಮ ಗುಣಮಟ್ಟದ ಸ್ಟೇನ್‌ಲೆಸ್ ಸ್ಟೀಲ್, ಪ್ಲೆಕ್ಸಿ ಗ್ಲಾಸ್ ಅಥವಾ ಬಲವರ್ಧಿತ ಗಾಜಿನಂತಹ ಬಾಳಿಕೆ ಬರುವ ಸಾಮಗ್ರಿಗಳಿಂದ ತಯಾರಿಸಲಾಗುತ್ತದೆ. ಇದರ ಒಳಭಾಗದಲ್ಲಿ ನೀರಿನ ಪಂಪ್, ಸೌರಶಕ್ತಿ ಚಾಲಿತ ವಿದ್ಯುತ್ ವ್ಯವಸ್ಥೆ ಮತ್ತು ಸಿಹಿನೀರಿನ ಏಕಕೋಶೀಯ ಸೂಕ್ಷ್ಮ ಪಾಚಿಗಳನ್ನು ಅಳವಡಿಸಲಾಗಿರುತ್ತದೆ. ಈ ವ್ಯವಸ್ಥೆಯನ್ನು ಪ್ರಸ್ತುತ ಪ್ರಾಯೋಗಿಕ ಹವಾಮಾನ ತಂತ್ರಜ್ಞಾನ ಮತ್ತು ಪೈಲಟ್ ಯೋಜನೆ ಎಂದು ಪರಿಗಣಿಸಲಾಗಿದೆ. ನಿರ್ದಿಷ್ಟ ಮುನ್ಸಿಪಲ್ ವಲಯಗಳಲ್ಲಿ ಇದನ್ನು ಅಳವಡಿಸಲು ಸ್ಥಳೀಯ ಸರ್ಕಾರಗಳು ಬೆಂಬಲ ನೀಡಿದ್ದರೂ, ಇದು ಇನ್ನೂ ನೈಜ ಪರಿಸ್ಥಿತಿಯಲ್ಲಿ ಅದರ ಕಾರ್ಯನಿರ್ವಹಣೆಯ ಪರೀಕ್ಷೆಯ ಹಂತದಲ್ಲಿದೆ.




ಅಭಿವೃದ್ಧಿ ಹೇಗಾಯಿತು?

ಲಿಕ್ವಿಡ್ ಟ್ರೀ ಅಥವಾ ಬಯೋರಿಯಾಕ್ಟರ್ ಎಂದು ಕರೆಯಲಾಗುವ ಈ ಪಾಚಿ ಮರದ ತಂತ್ರಜ್ಞಾನವನ್ನು ನಗರಾಭಿವೃದ್ಧಿ ಮತ್ತು ಜೈವಿಕ ತಂತ್ರಜ್ಞಾನವನ್ನು ಸಂಯೋಜಿಸುವ ಉದ್ದೇಶದಿಂದ ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ. ಇದರ ಮೊದಲ ಪ್ರಮುಖ ಮಾದರಿಯನ್ನು ಬೆಲ್‌ಗ್ರೇಡ್ ವಿಶ್ವವಿದ್ಯಾಲಯದ ಮಲ್ಟಿಡಿಸಿಪ್ಲಿನರಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಡಾ. ಇವಾನ್ ಸ್ಪಾಸೋಜೆವಿಕ್ ಮತ್ತು ವಿಜ್ಞಾನಿಗಳ ತಂಡ, ಲಿಕ್ವಿಡ್ 3 ಹೆಸರಿನಲ್ಲಿ ವಿನ್ಯಾಸಗೊಳಿಸಿತು. ಬಳಿಕ, ಜಾಗತಿಕವಾಗಿ ವಿವಿಧ ಪರಿಸರ ಎಂಜಿನಿಯರಿಂಗ್ ಸ್ಟಾರ್ಟ್ ಅಪ್‌ಗಳು ಮತ್ತು ಸಂಶೋಧನಾ ಸಂಸ್ಥೆಗಳು ಈ ಮೂಲ ಪರಿಕಲ್ಪನೆಯನ್ನು ಅಳವಡಿಸಿಕೊಂಡು ಪ್ರಾದೇಶಿಕ ಮಾದರಿಗಳನ್ನು ತಯಾರಿಸಿವೆ. ಭೋಪಾಲ್‌ನಲ್ಲಿ ಅಳವಡಿಸಲಾಗಿರುವ ಸಾಧನವೂ ಇದೇ ತಂತ್ರಜ್ಞಾನವನ್ನು ಆಧರಿಸಿದೆ.

ನೈಸರ್ಗಿಕ ಪರಿಸರ ವ್ಯವಸ್ಥೆಗೆ ಪೂರಕ ತಂತ್ರಜ್ಞಾನ

ಪರಿಸರ ತಜ್ಞರ ಪ್ರಕಾರ, ಇದು ಕೇವಲ ಪ್ರಾಯೋಗಿಕ ಹವಾಮಾನ ತಂತ್ರಜ್ಞಾನವಾಗಿದ್ದು, ಅಸ್ತಿತ್ವದಲ್ಲಿರುವ ನೈಸರ್ಗಿಕ ಮರಗಳಿಗೆ ಪೂರಕವಾಗಿ ಕೆಲಸ ಮಾಡಬಹುದೇ ಹೊರತು ಅವುಗಳಿಗೆ ಪರ್ಯಾಯವಲ್ಲ. ನೈಸರ್ಗಿಕ ಕಾಡುಗಳು ಮತ್ತು ನೈಜ ಮರಗಳು ಜೀವವೈವಿಧ್ಯತೆಯ ಮೇಲೆ ಹೆಚ್ಚಿನ ಪ್ರಭಾವ ಬೀರುವುದರಿಂದ ಅವುಗಳ ಸ್ಥಾನವನ್ನು ಯಾವುದೇ ಯಂತ್ರ ತುಂಬಲು ಸಾಧ್ಯವಿಲ್ಲ. ಕೃತಕ ವಿಧಾನಗಳಿಗಿಂತ ನೈಸರ್ಗಿಕ ಪರಿಸರ ವ್ಯವಸ್ಥೆಯ ಕೊಡುಗೆಯೇ ಹೆಚ್ಚು ಮಹತ್ವದ್ದು. ಮಾಲಿನ್ಯದ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಇಂತಹ ಪರಿಸರಸ್ನೇಹಿ ತಂತ್ರಜ್ಞಾನಗಳು ಶೀಘ್ರದಲ್ಲೇ ಭಾರತದ ಇತರ ನಗರಗಳಿಗೂ ವಿಸ್ತರಣೆಯಾಗುವ ಸಾಧ್ಯತೆಯಿದೆ.



ನಗರಗಳ ಹವಾಮಾನ ಸಮಸ್ಯೆಗಳಿಗೆ ಪರಿಹಾರ?

ಭಾರತದ ನಗರಗಳು ಹೆಚ್ಚುತ್ತಿರುವ ತಾಪಮಾನ, ಹದಗೆಡುತ್ತಿರುವ ವಾಯು ಗುಣಮಟ್ಟ, ಬಿಸಿಗಾಳಿ ಮತ್ತು ಕ್ಷೀಣಿಸುತ್ತಿರುವ ಹಸಿರು ಹೊದಿಕೆಯ ಸವಾಲುಗಳನ್ನು ಎದುರಿಸುತ್ತಿರುವ ಸಮಯದಲ್ಲಿ ಈ ತಂತ್ರಜ್ಞಾನ ಗಮನ ಸೆಳೆದಿದೆ. ವಾಹನಗಳ ಹೊರಸೂಸುವಿಕೆ ಮತ್ತು ನಿರ್ಮಾಣ ಚಟುವಟಿಕೆಗಳಿಂದಾಗಿ ಪಿಎಂ 2.5 ಮತ್ತು ಪಿಎಂ 10 ಮಾಲಿನ್ಯಕಾರಕಗಳ ಮಟ್ಟ ನಿರಂತರವಾಗಿ ಹೆಚ್ಚುತ್ತಿದೆ. ಇಂತಹ ದಟ್ಟಣೆಯ ಪ್ರದೇಶಗಳಲ್ಲಿ ಸಾವಿರಾರು ಮರಗಳನ್ನು ನೆಡುವುದು ಪ್ರಾಯೋಗಿಕವಲ್ಲ. ಹೀಗಾಗಿ, ಈ ಪಾಚಿ ಆಧಾರಿತ ವ್ಯವಸ್ಥೆ ಸಾಂಪ್ರದಾಯಿಕ ಹಸಿರೀಕರಣ ವಿಧಾನಗಳಿಗೆ ಪೂರಕವಾಗಿ ತಂತ್ರಜ್ಞಾನ-ಸಂಯೋಜಿತ ಪರಿಹಾರ ಒದಗಿಸುತ್ತದೆ. ಈ ನವೀನ ಶೈಲಿ ನೆಟ್ಟಿಗರಲ್ಲಿ ತೀವ್ರ ಆಸಕ್ತಿ ಕೆರಳಿಸಿದೆ.

ಕಿರುಸುದ್ದಿ

ನ್ಯಾ.ಯಶ್ವಂತ್ ವಿರುದ್ಧ ಸ್ಪೀಕರ್‌ಗೆ ವರದಿ ಸಲ್ಲಿಕೆ



ಬೆಂಗಳೂರು: ದಿಲ್ಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಯಶ್ವಂತ್ ವರ್ಮಾ ಅವರ ಮೇಲಿನ ಆರೋಪ ಗಳ ಕುರಿತು ತನಿಖೆ ನಡೆಸಲು ರಚಿಸಲಾಗಿದ್ದ ಉನ್ನತಮಟ್ಟದ ನ್ಯಾಯಮೂರ್ತಿಗಳ ತನಿಖಾ ಸಮಿತಿಯು ತನ್ನ ಸಮಗ್ರ ವರದಿಯನ್ನು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಸೋಮವಾರ ಸಂಸತ್ ಭವನದಲ್ಲಿ ಅಧಿಕೃತವಾಗಿ ಹಸ್ತಾಂತರಿಸಿದೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಹಾಗೂ ತನಿಖಾ ಸಮಿತಿಯ ಅಧ್ಯಕ್ಷರಾದ ಅರವಿಂದ್ ಕುಮಾರ್, ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯ ಮೂರ್ತಿ ಚಂದ್ರಶೇಖರ್ ಮತ್ತು ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲರಾದ ಬಿ.ವಿ. ಆಚಾರ್ಯ ಅವರು ಸಂಸತ್ ಭವನದಲ್ಲಿ ಲೋಕಸಭಾ ಸ್ಪೀಕರ್‌ರನ್ನು ಭೇಟಿ ಮಾಡಿ ಈ ವರದಿಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ತನಿಖಾ ಸಮಿತಿಯ ಕಾರ್ಯದರ್ಶಿಯಾದ ಗಣಪತಿ ಭಟ್ ಅವರು ಉಪಸ್ಥಿತರಿದ್ದರು. ನ್ಯಾಯಾಧೀಶರ (ತನಿಖೆ) ಕಾಯ್ದೆ, 1968ರ ಶಾಸನಬದ್ಧ ನಿಯಮಾವಳಿಗಳಿಗೆ ಅನುಗುಣವಾಗಿ ಈ ವರದಿಯನ್ನು ಸಿದ್ಧಪಡಿಸಲಾಗಿದ್ದು, ಮುಂಬರುವ ದಿನಗಳಲ್ಲಿ ಇದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸಲಾಗುವುದು ಎಂದು ತಿಳಿದುಬಂದಿದೆ.

ಅಫ್ಘಾನಿಸ್ತಾನದಲ್ಲಿ ಬಾಲ್ಯ ವಿವಾಹ ಕಾನೂನು ಬದ್ಧ

ಕಾಬೂಲ್: ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಸರ್ಕಾರವು ಬಾಲ್ಯವಿವಾಹವನ್ನು ಕಾನೂನುಬದ್ಧಗೊಳಿಸಿದೆ. ವಿವಾಹ, ವಿಚ್ಛೇದನ, ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಹೊಸ ಕುಟುಂಬ ಕಾನೂನನ್ನು ತಾಲಿಬಾನ್ ಸರ್ಕಾರ ಜಾರಿಗೆ ತಂದಿದೆ. ಹೊಸ ನಿಯಮದ ಪ್ರಕಾರ ಪ್ರಾಯಕ್ಕೆ ಬಂದ ಕನ್ಯೆ ವಿವಾಹ ಪ್ರಸ್ತಾಪಕ್ಕೆ ಮೌನವಾಗಿದ್ದರೆ, ಅದನ್ನು ಆಕೆಯ ಸಮ್ಮತಿ ಎಂದು ಪರಿಗಣಿಸಲಾಗುತ್ತದೆ. ಆದರೇ ಒಬ್ಬ ಹುಡುಗ ಅಥವಾ ಈ ಮೊದಲೇ ವಿವಾಹವಾಗಿದ್ದ ಮಹಿಳೆಯ ಮೌನವನ್ನು ಸಮ್ಮತಿ ಎಂದು ಪರಿಗಣಿಸಲಾಗುವುದಿಲ್ಲ.

ಮಹಾ, ಉ.ಪ್ರ.ದಲ್ಲಿ ಅಪಘಾತ: 21 ಸಾವು

ಮುಂಬೈ/ಲಖನೌ: ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ಸೋಮವಾರ ಸಂಭವಿಸಿದ ಎರಡು ಭೀಕರ ರಸ್ತೆ ಅಪಘಾತಗಳಲ್ಲಿ ಒಟ್ಟು 21 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಮುಂಬೈ-ಅಹಮದಾಬಾದ್ ಹೆದ್ದಾರಿಯಲ್ಲಿ ನಿಶ್ಚಿತಾರ್ಥ ಸಮಾರಂಭಕ್ಕೆ ತೆರಳುತ್ತಿದ್ದ ಟೆಂಪೋ ಮತ್ತು ವೇಗವಾಗಿ ಬಂದ ಕಂಟೈನರ್ ಟ್ರಕ್ ನಡುವೆ ಡಿಕ್ಕಿ ಸಂಭವಿಸಿ ಕನಿಷ್ಠ 11 ಮಂದಿ ಮೃತಪಟ್ಟಿದ್ದಾರೆ. 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಅವರನ್ನು ಕಾಸಾ ಉಪಜಿಲ್ಲಾ ಆಸ್ಪತ್ರೆ ಸೇರಿದಂತೆ ಸಮೀಪದ ವೈದ್ಯಕೀಯ ಕೇಂದ್ರಗಳಿಗೆ ದಾಖಲಿಸಲಾಗಿದೆ.

ದಹಾನು ತಾಲ್ಲೂಕಿನ ಧನಿವಾರಿ ಗ್ರಾಮದ ಬಳಿ ಈ ದುರ್ಘಟನೆ ನಡೆದಿದೆ. ಅಪಘಾತಕ್ಕೀಡಾದ ಟೆಂಪೋದಲ್ಲಿ 50ಕ್ಕೂ ಹೆಚ್ಚು ಮಂದಿ ಪ್ರಯಾಣಿಸುತ್ತಿದ್ದರು. ಡಿಕ್ಕಿಯ ತೀವ್ರತೆಗೆ ಟೆಂಪೋ ಮತ್ತು ಕಂಟೈನರ್ ಎರಡೂ ಉರುಳಿ ಬಿದ್ದಿವೆ. ಅತಿವೇಗ, ರಸ್ತೆ ಕಿರಿದಾಗಿರುವುದು ಹಾಗೂ ಚಾಲಕ ನಿಯಂತ್ರಣ ಕಳೆದುಕೊಂಡಿರುವುದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ಇನ್ನೊಂದೆಡೆ, ಉತ್ತರ ಪ್ರದೇಶದ ಲಖಿಂಪುರ್ ಖೇರಿಯಲ್ಲಿ ವ್ಯಾನ್ ಮತ್ತು ಟ್ರಕ್ ಮುಖಾಮುಖಿ ಡಿಕ್ಕಿಯಾಗಿ 10 ಮಂದಿ ಮೃತಪಟ್ಟಿದ್ದಾರೆ. ವ್ಯಾನ್‌ನಲ್ಲಿ ಪ್ರಯಾಣಿಸುತ್ತಿದ್ದ 9 ಮಂದಿ ಹಾಗೂ ಚಾಲಕ ಮೃತಪಟ್ಟಿದ್ದಾರೆ.

ಅಪಘಾತದ ಬಗ್ಗೆ ಸಂತಾಪ ಸೂಚಿಸಿರುವ ಸಿಎಂ ಯೋಗಿ ಆದಿತ್ಯನಾಥ್ ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ್ದು, ಗಾಯಾಳುಗಳಿಗೆ ತಕ್ಷಣ ಚಿಕಿತ್ಸೆ ಒದಗಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಎಲ್ಲ ಹೈಕೋರ್ಟ್‌ಗಳಲ್ಲಿ ವರ್ಚುವಲ್ ವಿಚಾರಣೆ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿಯಿಂದ ಹೆಚ್ಚುತ್ತಿರುವ ವೆಚ್ಚ ಹಾಗೂ ಇಂಧನ ಬಳಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ದೇಶದ ಎಲ್ಲಾ ಹೈಕೋರ್ಟ್‌ಗಳಲ್ಲಿ ಪ್ರತಿ ಸೋಮವಾರ ಮತ್ತು ಶುಕ್ರವಾರ ವರ್ಚುವಲ್ ವಿಚಾರಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮನವಿ ಮಾಡಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಸುಪ್ರೀಂ ಕೋರ್ಟ್ ಈಗಾಗಲೇ ಮೇ 15ರಿಂದ ವಾರದಲ್ಲಿ ಎರಡು ದಿನ ವಿಡಿಯೋ ಕಾನ್ಫರೆನ್ಸ್ ಮೂಲಕ ಅರ್ಜಿಗಳ ವಿಚಾರಣೆ ನಡೆಸಲು ನಿರ್ಧರಿಸಿದೆ ಎಂದು ತಿಳಿಸಿದರು. ಇಂಧನ ಉಳಿತಾಯದ ಭಾಗವಾಗಿ ನ್ಯಾಯಾಧೀಶರು ಕಾರ್ ಪೂಲಿಂಗ್ ವ್ಯವಸ್ಥೆ ಅನುಸರಿಸುವುದಕ್ಕೂ ಒಮ್ಮತ ವ್ಯಕ್ತಪಡಿಸಿದ್ದಾರೆ ಎಂದರು.

ಪ್ರಧಾನಿ ನರೇಂದ್ರ ಮೋದಿ ನೀಡಿರುವ ಅನಗತ್ಯ ವೆಚ್ಚ ಕಡಿತಗೊಳಿಸುವ ಕರೆಗೆ ಸ್ಪಂದಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದೆ ಸಿಜೆಐ ಸೂರ್ಯಕಾಂತ್ ಅವರು, ಸಾಧ್ಯವಾದಷ್ಟು ಬೇಗ ಎಲ್ಲಾ ಹೈಕೋರ್ಟ್‌ಗಳು ಈ ವಿಧಾನ ಅನುಸರಿಸಬೇಕು ಎಂದು ವಿನಂತಿಸಿದರು. ವಿಚಾರಣೆಯ ವೇಳೆ ಹಿರಿಯ ವಕೀಲ ಮುಕುಲ್ ರೋಹಟಗಿ, ಆನ್‌ಲೈನ್ ವಿಚಾರಣೆ ವ್ಯವಸ್ಥೆಯನ್ನು ಶ್ಲಾಘಿಸಿ, ಡಿಜಿಟಲ್ ಮೂಲಕ ನಡೆದ ವಿಚಾರಣೆಗಳು ಯಾವುದೇ ಅಡಚಣೆ ಇಲ್ಲದೆ ಸುಗಮವಾಗಿ ನಡೆದವು ಎಂದು ಹೇಳಿದರು. ನ್ಯಾಯಮೂರ್ತಿಗಳು ಸಹ ತಾಳ್ಮೆಯಿಂದ ಕಾರ್ಯನಿರ್ವಹಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು. ಇದಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಕೂಡ ಬೆಂಬಲ ವ್ಯಕ್ತಪಡಿಸಿದರು.

ಇಸ್ರೇಲ್‌ಗೆ ಅಮೆರಿಕದ ಭಾರೀ ಶಸ್ತ್ರಾಸ್ತ್ರ ರವಾನೆ

ಟೆಲ್ ಅವಿವ್: ಜರ್ಮನಿಯಲ್ಲಿರುವ ಅಮೆರಿಕದ ಸೈನಿಕ ನೆಲೆಗಳಿಂದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಹೊತ್ತ ಹಲವು ಅಮೆರಿಕನ್ ವಿಮಾನಗಳು ಸೋಮವಾರ ಇಸ್ರೇಲ್‌ನ ಟೆಲ್ ಅವಿವ್ ನಗರಕ್ಕೆ ಆಗಮಿಸಿವೆ ಎಂದು ವರದಿಯಾಗಿದೆ. ಈ ಬೆಳವಣಿಗೆ ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆಯನ್ನು ಹುಟ್ಟುಹಾಕಿದೆ.

ಅಲ್ ಜಜೀರಾ ವರದಿ ಪ್ರಕಾರ, ಇಸ್ರೇಲ್‌ನ ಚಾನೆಲ್ 13 ಈ ಮಾಹಿತಿಯನ್ನು ಬಹಿರಂಗಪಡಿಸಿದ್ದು, ಕಳೆದ 24 ಗಂಟೆಗಳಲ್ಲಿ ನಡೆದ ಈ ಸೈನಿಕ ಚಟುವಟಿಕೆ ಇರಾನ್ ವಿರುದ್ಧದ ಮುಂದಿನ ಯುದ್ಧ ಸಿದ್ಧತೆಯ ಭಾಗವಾಗಿರಬಹುದು ಎಂದು ವಿಶ್ಲೇಷಿಸಲಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ವಿರುದ್ಧ ಮತ್ತಷ್ಟು ಕಠಿಣ ಕ್ರಮ ಕೈಗೊಳ್ಳುವ ಸೂಚನೆ ನೀಡಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಮಧ್ಯಪ್ರಾಚ್ಯದಲ್ಲಿ ತಿಂಗಳುಗಳಿಂದ ಮುಂದುವರಿದಿರುವ ಸಂಘರ್ಷದ ನಡುವೆ, ಯುರೇನಿಯಂ ಸಂಗ್ರಹ, ಆರ್ಥಿಕ ನಿರ್ಬಂಧ ತೆರವು ಹಾಗೂ ಯುದ್ಧ ಅಂತ್ಯಕ್ಕೆ ಸಂಬಂಧಿಸಿದ ಮಾತುಕತೆಗಳು ಸ್ಥಗಿತಗೊಂಡಿವೆ. ಇದೇ ವೇಳೆ ಟ್ರಂಪ್ ಅವರು ಇರಾನ್‌ಗೆ ತೀವ್ರ ಎಚ್ಚರಿಕೆ ನೀಡಿದ್ದು, ಸಮಯ ವೇಗವಾಗಿ ಕಳೆಯುತ್ತಿದೆ. ಇರಾನ್ ತಕ್ಷಣ ನಿರ್ಧಾರ ಕೈಗೊಳ್ಳಬೇಕು, ಇಲ್ಲವಾದರೆ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಲಿದೆ ಎಂದು ತಮ್ಮ ಟ್ರುತ್ ಸೋಶಿಯಲ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಈ ಬೆಳವಣಿಗೆಗಳಿಂದ ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತಷ್ಟು ಉದ್ವಿಗ್ನಗೊಳ್ಳುವ ಭೀತಿ ವ್ಯಕ್ತವಾಗಿದೆ.

ನೀಟ್: ಇನ್ನೋರ್ವ ಆರೋಪಿ ಬಂಧನ

ಹೊಸದಿಲ್ಲಿ: ನೀಟ್-ಯುಜಿ 2026 ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ(ಸಿಬಿಐ) ಮಹಾರಾಷ್ಟ್ರದ ಲಾತೂರಿನ ರೇಣುಕಾಯ್ ಕೆಮಿಸ್ಟ್ರಿ ಕ್ಲಾಸ್ (ಆರ್‌ಸಿಸಿ) ಕೋಚಿಂಗ್ ಇನ್ಸ್ಟಿಟ್ಯೂಟ್ ಪ್ರಾಧ್ಯಾಪಕ ಮತ್ತು ಮಾಲೀಕ ಶಿವರಾಜ್ ಮೋಟೆಗಾಂವ್ಕರ್ ಎಂಬ ಮತ್ತೊಬ್ಬ ಪ್ರಮುಖ ಆರೋಪಿಯನ್ನು ಬಂಧಿಸಿದೆ. ಈ ಪ್ರಕರಣದಲ್ಲಿ ಇದುವರೆಗೆ ಹತ್ತು ಜನರನ್ನು ಬಂಧಿಸಲಾಗಿದೆ. ಮೋಟೆಗಾಂವ್ಕನ್ನು ಸಿಬಿಐ 10 ದಿನಗಳ ಕಸ್ಟಡಿಯನ್ನು ಕೋರಿದ್ದು, ವಿಶೇಷ ಸಿಬಿಐ ನ್ಯಾಯಾಧೀಶ ಅಜಯ್ ಗುಪ್ತಾ ಅವರು ಆರೋಪಿಯನ್ನು 9 ದಿನಗಳ ಕಸ್ಟಡಿ ವಿಚಾರಣೆಗೆ ಅನುಮತಿ ನೀಡಿದ್ದಾರೆ. ಸಿಬಿಐ ತನ್ನ ರಿಮಾಂಡ್ ಅರ್ಜಿಯಲ್ಲಿ, ಶಿವರಾಜ್ ರಘುನಾಥ್ ಮೋಟೆಗಾಂಕರ್ ನೀಟ್-ಯುಜಿ ಪರೀಕ್ಷೆಯ ಪ್ರಶ್ನೆಗಳು-2026 ಸೋರಿಕೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಇತರ ಆರೋಪಿಗಳೊಂದಿಗೆ ಪಿತೂರಿಯಲ್ಲಿ, ಅವರು ರಸಾಯನಶಾಸ್ತ್ರದ ಪ್ರಶ್ನೆಗಳನ್ನು ಮತ್ತು ಪರೀಕ್ಷೆಯ ಉತ್ತರಗಳನ್ನು ಪರೀಕ್ಷೆಗೆ ಮುಂಚಿತವಾಗಿ ಪಡೆದುಕೊಂಡಿದ್ದಾರೆ ಎಂದು ಹೇಳಿದೆ. ಈ ಬೆನ್ನಲ್ಲೇ ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಸುಧಾರಣೆಗಳನ್ನು ಪರಿಶೀಲಿಸಲು ಸಂಸದೀಯ ಸಮಿತಿಯು ಸೋಮವಾರ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮುಖ್ಯಸ್ಥರಿಗೆ ಸಮನ್ಸ್ ಜಾರಿ ಮಾಡಿದೆ.

ಗಡಿ ನುಸುಳಿದ ಉದ್ದೇಶ ಮರೆತು ಕೂದಲು ಕಸಿ ಮಾಡಿಸಿಕೊಂಡ!

ಉಗ್ರ ಮಾನಸಿಕತೆ ಬದಲಿಸಿದ ಕಾಶ್ಮೀರ

ಶ್ರೀನಗರ: ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿ ನಡೆಸಲು ಯೋಜಿಸಿ ಗಡಿ ನುಸುಳಿ ಭಾರತಕ್ಕೆ ಬಂದಿದ್ದ ಪಾಕಿಸ್ತಾನ ಉಗ್ರನೊಬ್ಬ ತಾನು ಗಡಿನುಸುಳಿ ಬಂದ ಮೂಲ ಉದ್ದೇಶವನ್ನೇ ಬದಿಗಿಟ್ಟು ಶ್ರೀನಗರದಲ್ಲಿ ಕೂದಲು ಕಸಿ(ಹೈರ್ ಟ್ರಾನ್ಸ್‌ಪ್ಲಾಂಟ್) ಮಾಡಿಸಿಕೊಂಡಿರುವ ವಿಚಿತ್ರ ಪ್ರಕರಣ ಎನ್‌ಐಎ ತನಿಖೆಯಿಂದ ಬಹಿರಂಗಗೊಂಡಿದೆ. ಈತನನ್ನು ನಿಷೇಧಿತ ಸಂಘಟನೆಯ ಉಗ್ರ ಮೊಹಮ್ಮದ್ ಉಸ್ಮಾನ್ ಜುಟ್ ಅಲಿಯಾಸ್ ಚೈನೀಸ್ ಎಂದು ಗುರುತಿಸಲಾಗಿದೆ.

ಕಳೆದ ತಿಂಗಳು ಶ್ರೀನಗರ ಪೊಲೀಸರಿಂದ ಬಂಧಿಸಲ್ಪಟ್ಟ ಉಸ್ಮಾನ್, ಜಮ್ಮು ಮತ್ತು ಕಾಶ್ಮೀರದ ಹೊರಗೆ ಸ್ಲೀಪರ್ ಸೆಲ್‌ಗಳನ್ನು ಸ್ಥಾಪಿಸುವ ಮೂಲಕ ಭಾರತದಲ್ಲಿ ಭಯೋತ್ಪಾದಕ ದಾಳಿಗಳನ್ನು ನಡೆಸುವ ಕಾರ್ಯ ತನಗೆ ವಹಿಸಲಾಗಿದೆ ಎಂದು ಎನ್‌ಐಎಯ ತನಿಖಾಧಿಕಾರಿಗಳಿಗೆ ತಿಳಿಸಿದ್ದಾನೆ. ವಿಚಾರಣೆಯ ವೇಳೆ ಉಸ್ಮಾನ್ ತಾನು ಗಡಿ ದಾಟಿದ ನಂತರ ಶ್ರೀನಗರದಲ್ಲಿ ಕೂದಲು ಕಸಿ ಮಾಡಿಸಿಕೊಂಡಿದ್ದನ್ನು ಬಹಿರಂಗಪಡಿಸಿದ್ದಾನೆ.

ತರಬೇತಿಯಲ್ಲಿ ನೀಡಿದ ಮಾಹಿತಿಗಿಂತ ಇಲ್ಲಿ ಭಿನ್ನ: ಕಾಶ್ಮೀರದ ದೈನಂದಿನ ಜೀವನದ ವಾಸ್ತವತೆಯನ್ನು ನೋಡಿದ ನಂತರ ತನ್ನ ಉದ್ದೇಶಗಳು ಸಂಪೂರ್ಣವಾಗಿ ಬದಲಾಗಿವೆ. ಇದು ಗಡಿಯಲ್ಲಿ ಲಷ್ಕರ್ ತರಬೇತಿಯ ವೇಳೆ ಆತನಿಗೆ ಹೇಳಿರುವಂತಹ ಜೀವನಶೈಲಿಗಿಂತ ಸಂಪೂರ್ಣವಾಗಿ ವಿರುದ್ಧವಾಗಿದೆ. ಆದ್ದರಿಂದ ಕೂದಲ ಕಸಿ ಕಾರ್ಯ ಮುಗಿದ ಕೂಡಲೇ ನಕಲಿ ಪಾಸ್‌ಪೋರ್ಟ್ ಮತ್ತು ಇತರ ದಾಖಲೆ ಮೂಲಕ ಪಾಕ್‌ಗೆ ಮರಳಲು ಯೋಜಿಸಿದ್ದೆ ಎಂದು ವಿಚಾರಣೆಯಲ್ಲಿ ಹೇಳಿಕೊಂಡಿದ್ದಾನೆ.

ಕಾಶ್ಮೀರ ಜೀವನ ಶೈಲಿಗೆ ಮನಸೋತ ಉಸ್ಮಾನ್



ಲಾಹೋರ್ ಮೂಲದ ಉಸ್ಮಾನ್, ಕಾಶ್ಮೀರದ ದೈನಂದಿನ ಜೀವನದ ವಾಸ್ತವತೆ ನೋಡಿದ ನಂತರ ತನ್ನ ಉದ್ದೇಶಗಳು ಸಂಪೂರ್ಣವಾಗಿ ಬದಲಾಗಿವೆ ಎಂದು ಎನ್‌ಐಎ ಅಧಿಕಾರಿಗಳಿಗೆ ತಿಳಿಸಿದ್ದಾನೆ. ಉಸ್ಮಾನ್ ಹಲವು ವರ್ಷಗಳಿಂದ ತೀವ್ರ ಕೂದಲು ಉದುರುವಿಕೆಯನ್ನು ಎದುರಿಸುತ್ತಿದ್ದ. ಇದು ಆತನ ಆತ್ಮಗೌರವದ ಮೇಲೆ ಆಳವಾದ ಪರಿಣಾಮ ಬೀರಿತ್ತು. ಕೂದಲ ಕಸಿ ಬಗ್ಗೆ ಈತ ಈ ಹಿಂದೆ ಕೇಳಿದ್ದರೂ, ಅವು ಪಶ್ಚಿಮದಲ್ಲಿ ಮಾತ್ರ ಲಭ್ಯವಿರುವ ಐಷಾರಾಮಿ ಎಂದು ಅವರು ಭಾವಿಸಿದ್ದ ಎಂದು ತನಿಖೆಯಲ್ಲಿ ಬಹಿರಂಗಗೊಂಡಿದೆ.

ಭಾರತ-ಸ್ವೀಡನ್ ನಡುವೆ ತಂತ್ರಜ್ಞಾನ ಸಹಭಾಗಿತ್ವಕ್ಕೆ ಹೊಸ ದಿಕ್ಕು

5 ವರ್ಷದಲ್ಲಿ ದ್ವಿಪಕ್ಷೀಯ ವ್ಯಾಪಾರ ದ್ವಿಗುಣ

ಗೊಥೆನ್‌ಬರ್ಗ್: ತಂತ್ರಜ್ಞಾನ, ತಂತ್ರಾತ್ಮಕ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಭಾರತ ಮತ್ತು ಸ್ವೀಡನ್ ದೇಶಗಳು ಕೃತಕ ಬುದ್ಧಿಮತ್ತೆ (ಎಐ), ಪ್ರಮುಖ ಖನಿಜಗಳು, ನವೀನತೆ, ವ್ಯಾಪಾರ ಹಾಗೂ ಸಾಂಸ್ಕೃತಿಕ ವಿನಿಮಯ ಸೇರಿದಂತೆ ಹಲವು ಕ್ಷೇತ್ರಗಳನ್ನು ಒಳಗೊಂಡ ಮಹತ್ವಾಕಾಂಕ್ಷಿ ಕಾರ್ಯತಂತ್ರದ ಮಾರ್ಗಸೂಚಿಯನ್ನು ಅನಾವರಣಗೊಳಿಸಿವೆ.

ಇಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟರ್‌ಸನ್ ದ್ವಿಪಕ್ಷೀಯ ಸಂಬಂಧಗಳನ್ನು ಪರಿಶೀಲಿಸಿ, ತಂತ್ರಾತ್ಮಕ, ಆರ್ಥಿಕ ಮತ್ತು ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸಿದರು. ಇದೇ ವೇಳೆ, ಮುಂದಿನ ಐದು ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ದ್ವಿಗುಣಗೊಳಿಸುವ ದಿಶೆಯಲ್ಲಿ ಕೆಲಸ ಮಾಡಲು ಉಭಯ ನಾಯಕರು ಒಪ್ಪಿಕೊಂಡರು.

ಹೊಸ ಒಪ್ಪಂದಗಳು ಮತ್ತು ವ್ಯಾಪಾರ: ಹೊಸ ಪಾಲುದಾರಿಕೆ, ಸ್ಥಿರತೆ ಮತ್ತು ಭದ್ರತೆ, ಮುಂದಿನ ಪೀಳಿಗೆಯ ಆರ್ಥಿಕ ಪಾಲುದಾರಿಕೆ, ಉದಯೋನ್ಮುಖ ತಂತ್ರಜ್ಞಾನಗಳು ಹಾಗೂ ಸುಸ್ಥಿರತೆ ಆಧಾರಿತ ಸಹಕಾರ ಎಂಬ ನಾಲ್ಕು ಪ್ರಮುಖ ಸ್ತಂಭಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲಿದೆ. ಕೃತಕ ಬುದ್ಧಿಮತ್ತೆ(ಎಐ), 6ಜಿ, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು



ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ವರ್ಚುವಲ್ ಜಂಟಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಸ್ಥಾಪಿಸಲು ಉಭಯ ದೇಶಗಳು ಭಾರತ-ಸ್ವೀಡನ್ ಜಂಟಿ ಆವಿಷ್ಕಾರ ಪಾಲುದಾರಿಕೆ 2.0 ಅನ್ನು ಪ್ರಾರಂಭಿಸಿವೆ. ಇದರೊಂದಿಗೆ ಕೈಗಾರಿಕೆಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಸಂಶೋಧನಾ ಸಂಸ್ಥೆಗಳನ್ನು ಜೋಡಿಸಲು ಭಾರತ-ಸ್ವೀಡನ್ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕಾರಿಡಾರ್ ಅಭಿವೃದ್ಧಿಗೂ ಅನುಮೋದನೆ ನೀಡಲಾಗಿದೆ.

ಜಾಗತಿಕ ಮತ್ತು ಪ್ರಾದೇಶಿಕ ಜಂಟಿ ಘೋಷಣೆಗಳು: ಖನಿಜ ಸಂಸ್ಕರಣಾ ಸಾಮರ್ಥ್ಯವನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಮೂಲಕ ಪೂರೈಕೆ ಸರಪಳಿಯನ್ನು ಬಲಪಡಿಸಲು ಉಭಯ ದೇಶಗಳು ಒಪ್ಪಿಕೊಂಡಿವೆ. ಜಂಟಿ ಹೇಳಿಕೆಯಲ್ಲಿ ಉಭಯ ನಾಯಕರು ಭಯೋತ್ಪಾದನೆಯನ್ನು ತೀವ್ರವಾಗಿ ಖಂಡಿಸಿದೆ.

ಕಾಲೇಜಿನಲ್ಲಿ ಸಂಪ್ರದಾಯ ದಿನಾಚರಣೆ



• **ಕುಂದಾಪುರ:** ವಿದ್ಯಾರ್ಥಿಗಳು ಪರಿಶ್ರಮದೊಂದಿಗೆ ಸತ್ಪ್ರಜ್ಞ ಬದುಕನ್ನು ರೂಪಿಸಿಕೊಳ್ಳಬೇಕು. ತಂದೆ, ತಾಯಿ, ಗುರುಗಳು ನೀಡುವ ಜೀವನ ಪಾಠವನ್ನು ಸರಿಯಾಗಿ ಅರ್ಥೈಸಿಕೊಂಡರೆ ಅದೇ ಸಂಸ್ಕೃತಿ. ಹಿರಿಯರು ಅನುಸರಿಸಿಕೊಂಡು ಬಂದಿರುವ ಬದುಕು, ಆಚಾರ-ವಿಚಾರಗಳು ಆಚರಣೆ ಸಂಪ್ರದಾಯಗಳೆಲ್ಲವೂ ಪರಿಶ್ರಮದಿಂದ ಕೂಡಿದ್ದು ಅವುಗಳು ಮುಂದಿನ ಜನಾಂಗಕ್ಕೆ ಆಸರೆಯಾಗಬೇಕು ಎಂದು ಹುಬ್ಬಳ್ಳಿಯ ಹೋಟೆಲ್ ಉದ್ಯಮಿ ರಾಜೇಂದ್ರ ವಿ. ಶೆಟ್ಟಿ ಹೇಳಿದರು.

ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾ ಸಮಿತಿ ಆಯೋಜಿಸಿದ ಸಂಪ್ರದಾಯ ದಿನಾಚರಣೆ 'ಸಂಸ್ಕೃತಿ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ರೇಷ್ಮಾ ಶೆಟ್ಟಿ, ವಿದ್ಯಾರ್ಥಿ ಕ್ಷೇಮಪಾಲನಾ ಸಮಿತಿ ಕಾರ್ಯದರ್ಶಿ ಆಕಾಶ್ ಬಿ.ಶೆಟ್ಟಿ ಉಪಸ್ಥಿತರಿದ್ದರು.

ಕಾಲೇಜಿನ ಆಡಳಿತ ಕಾಯಕ ಹಾಗೂ ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ರಕ್ಷಿತ್ ರಾವ್ ಅತಿಥಿಯನ್ನು ಪರಿಚಯಿಸಿದರು. ಸಮರ್ಥ್ ಸ್ವಾಗತಿಸಿ, ನಿರೀಕ್ಷಾ ವಂದಿಸಿದರು. ಮಿಥಿಲೇಶ್ ನಿರೂಪಿಸಿದರು.

ಇಂದು ವಿದ್ಯುತ್ ವ್ಯತ್ಯಯ

• **ಮಡಿಕೇರಿ:** ಮಗ್ಗುಲ 66/33/11 ಕೆ.ವಿ.ವೀರಾಜಪೇಟೆ ವಿದ್ಯುತ್ ವಿತರಣಾ ಉಪ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ 33ಕೆವಿ ಮೂರ್ನಾಡು ಮಾರ್ಗದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಪಾರಾಣೆ, ನಾಪೋಕ್ಲು, ಮೂರ್ನಾಡು, ಹೊದ್ದೂರು ಹಾಗೂ ಮರಗೋಡು ಫೀಡರ್ ನಲ್ಲಿ ಮೇ 19 ರಂದು ಬೆಳಗ್ಗೆ 9.30 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಪಾರಾಣೆ, ನಾಪೋಕ್ಲು, ಮೂರ್ನಾಡು, ಹಾಕತ್ತೂರು, ಹೊಸ್ಕೇರಿ, ಹೊದ್ದೂರು, ನರಿಯಂದಡ, ನಾಪೋಕ್ಲು, ಕುಂಜಿಲ, ಎಮ್ಮೆಮಾಡು, ಬಲ್ಲಮಾವಟಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚಾವಿಸನಿನಿಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಚಂದ್ರ ಅವರು ತಿಳಿಸಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

18-05-2026

ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	445 - 465
ಚೋಲ್ ಅಡಿಕೆ	:	515 - 540
ಡಬಲ್ ಚೋಲ್	:	515 - 540
ಹೊಸ ಪಟೋರ	:	345 - 395
ಹಳೆ ಪಟೋರ	:	365 - 395
ಹೊಸ ಉಳ್ಳಿ	:	140 - 295
ಹಳೆ ಉಳ್ಳಿ	:	130 - 295
ಹೊಸ ಕೋಕಾ	:	315 - 335
ಹಳೆ ಕೋಕಾ	:	315 - 335
ಹೊಸ ಕರಿಗೋಟು	:	260 - 290
ಹಳೆ ಕರಿಗೋಟು	:	260 - 290
ಹಸಿ ಕೊಕ್ಕೋ	:	70 - 105
ಒಣ ಕೊಕ್ಕೋ	:	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 690

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	256.50
ಆರ್‌ಎಸ್‌ಎಸ್ 2	-	211.00
ಸ್ಕ್ರಾಪ್ 1	-	151.50
ಸ್ಕ್ರಾಪ್ 2	-	140.00

ಜಂಟಿ ಕೃಷಿ ನಿರ್ದೇಶಕರ ಕಛೇರಿ,
ಸಾರ್ವಜನಿಕ ಕಛೇರಿಗಳ ಕಟ್ಟಡ, ಮೈಸೂರು ಜಿಲ್ಲೆ, ಮೈಸೂರು
Ph: 0821-2442239, Fax: 0821-2523700,
email: dagrmys@rediffmail.com

ಟೆಂಡರ್ ಅಧಿಸೂಚನೆ ಸಂ: ಜಂಕೃನಿ/ಮೈ/ಲೆಕ್ಕ-1/ಹೊರಗುತ್ತಿಗೆ/ಸಿಬ್ಬಂದಿ/ಇ.ಟೆಂಡರ್/2026-27 ದಿನಾಂಕ: 12-05-2026

ಇ-ಪ್ರೊಕ್ಯೂರ್‌ಮೆಂಟ್ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2026-27ನೇ ಸಾಲಿಗೆ ಈ ಕಛೇರಿ ಹಾಗೂ ಅಧೀನ ಕಛೇರಿಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳ ಸೇವೆ ಪಡೆಯುವ ನಿಮಿತ್ತ ಅರ್ಹತೆಯುಳ್ಳ ಏಜೆನ್ಸಿ/ ಸಂಸ್ಥೆಗಳಿಂದ ವೆಬ್‌ಸೈಟ್: http:kppp.karnataka.gov.in ಮೂಲಕ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ. ರೂ.3,10,000/- (ಮೂರು ಲಕ್ಷದ ಹತ್ತು ಸಾವಿರ ಮಾತ್ರ) ನ್ನು ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ಸಲ್ಲಿಸತಕ್ಕದ್ದು. ಟೆಂಡರ್ ಬಿಡ್ ಗಳನ್ನು ಇ-ಪೋರ್ಟಲ್ ನಲ್ಲಿ ಸಲ್ಲಿಸುವ ಕೊನೆಯ ದಿ: 15.06.2026 ಸಂಜೆ 5 ಗಂಟೆಯ ವರೆಗೆ. ಟೆಂಡರ್‌ಗಳನ್ನು 17.06.2026 ರ ಬೆಳಗ್ಗೆ 11 ಗಂಟೆಗೆ ತೆರೆಯಲಾಗುವುದು. ಟೆಂಡರ್ ಪ್ರಕಟಣೆಯು ಹೊರಡಿರುವ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರವನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

ಸಹಿ/– ಜಂಟಿ ಕೃಷಿ ನಿರ್ದೇಶಕರು, ಮೈಸೂರು ಜಿಲ್ಲೆ, ಮೈಸೂರು

DIPR/DDMYS/196/KSMCA/144/2026-27

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ
ಆಡಳಿತ ಕಚೇರಿ: ಮೂಡುಶೆಡ್ಡೆ, ಮಂಗಳೂರು–575028,
ದೂರವಾಣಿ: 0824–2263565 ವೆಬ್‌ಸೈಟ್: https://pilikula.karnataka.gov.in

ಸಂಖ್ಯೆ: ಪಿಎಡಿ.(1)ಸಿಆರ್.100/PBP/2025–26 ದಿನಾಂಕ: 18.05.2026

ಟೆಂಡರ್ ಪ್ರಕಟಣೆ

(through https://kppp.karnataka.gov.in)

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಜೈವಿಕ ಉದ್ಯಾನವನದಲ್ಲಿ "Renovation of Large Egret, Pelican and White Bellied Sea Eagle enclosure" ಈ ಕಾಮಗಾರಿಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹತೆ: PWD Class IV & above Civil Contractors; ಅಂದಾಜು ಮೊತ್ತ: 13.67 ಲಕ್ಷ; ಟೆಂಡರ್ ಶುಲ್ಕ– As per E-portal; ಇಎಂಡಿ ಮೊತ್ತ ರೂ.34,500.00; ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 01.06.2026 ಸಂಜೆ 5.30 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಮೇಲಿನ ದೂರವಾಣಿ ಹಾಗೂ ವೆಬ್‌ಸೈಟ್ ಮೂಲಕ ಪಡೆಯಬಹುದು.

DIPR/DK/KSMCA/228/26-27 dt.18.05.2026 — ಸಹಿ/– ಆಯುಕ್ತರು

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪುತ್ತೂರು ಉಪ ವಿಭಾಗ,
ಪುತ್ತೂರು, ಕೆ.ಎಸ್.ಆರ್.ಟಿ.ಸಿ ಬಸ್ ಸ್ಟಾಂಡ್ ಎದುರು, ನೆಲ್ಲಿಕಟ್ಟೆ, ಪುತ್ತೂರು–574201
ಇ-ಮೇಲ್: acfputtur@yahoo.co.in

ಸಂಖ್ಯೆ:ಸಅಸಂ.ಪು.ಉ: 04 :ಅವರ/2026-27 ದಿನಾಂಕ: 16-05-2026

ಸಾರ್ವಜನಿಕ ಪ್ರಕಟಣೆ

ಮಂಗಳೂರು ಸಾಮಾಜಿಕ ಅರಣ್ಯ ವಿಭಾಗದ ಪುತ್ತೂರು ತಾಲೂಕಿನ ಮೂಡೂರು ಗ್ರಾಮದ ಸ.ನಂ.142/1 (ನಕ್ಷೆಯಂತೆ142/1ಪಿ2) 4.00ಎಕರೆ ಸರಕಾರಿ ಭೂಮಿಯನ್ನು ಡ್ರೈವಿಂಗ್ ಟ್ರಾಕ್ ಮತ್ತು ಚಾಲನಾ ತರಬೇತಿ ಕೇಂದ್ರ ಸ್ಥಾಪನೆಗೆ (ಸದ್ರಿ ಸ್ಥಳದಲ್ಲಿರುವ ಅಕೇಶಿಯಾ–117, ಮ್ಯಾಂಜಿಯಂ–26 ಮತ್ತು ಮಹಾಗನಿ–04 ಒಟ್ಟು–147 ಮರಗಳನ್ನು ಕಡಿಯಲು) ಹಾಗೂ ಪುತ್ತೂರು ತಾಲೂಕಿನ ಬಜತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಬಿದಿರಾಡಿಯಲ್ಲಿರುವ ಸ.ನಂ.253/1ಪಿ2ರಲ್ಲಿ 6.20ಎಕ್ರೆ ಸ್ಥಳವನ್ನು ಡಾ|| ಬಿ.ಆರ್ ಅಂಬೇಡ್ಕರ್ ಶಾಲೆಗೆ (ಸದ್ರಿ ಸ್ಥಳದಲ್ಲಿರುವ ಅಕೇಶಿಯಾ–409, ಮ್ಯಾಂಜಿಯಂ–61, ಗಾಳಿಮರ–240 ಮತ್ತು ಮಿಶ್ರಜಾತಿ–111 ಒಟ್ಟು– 821 ಮರಗಳು) ಕಾದಿರಿಸುವ ಬಗ್ಗೆ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಪ್ರಕರಣ 8(3)(VII) ರ 50 ಕ್ಕಿಂತ ಹೆಚ್ಚು ಮರಗಳನ್ನು ಕಡಿಯಬೇಕಾದಲ್ಲಿ, ಸಾರ್ವಜನಿಕರ ಅಹವಾಲನ್ನು ಸ್ವೀಕರಿಸಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ದಿನಾಂಕ: 27–05–2026 ರ ಪೂರ್ವಾಹ್ನ 11.00 ಗಂಟೆಗೆ ವಲಯ ಅರಣ್ಯಾಧಿಕಾರಿಯವರ ಕಛೇರಿ ಆವರಣ, ಪುತ್ತೂರು (08251–298404) ಇಲ್ಲಿ ಸಾರ್ವಜನಿಕ ಅಹವಾಲು ಸಭೆಯನ್ನು ಕರೆಯಲಾಗಿದೆ. ಈ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಖುದ್ದಾಗಿ ಸಭೆಯಲ್ಲಿ ಹಾಜರಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದು ಅಥವಾ ಸದ್ರಿ ದಿನಾಂಕದ ಒಳಗಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪುತ್ತೂರು ಉಪ ವಿಭಾಗ, ಪುತ್ತೂರು ಇವರಿಗೆ ಲಿಖಿತ ರೂಪದಲ್ಲಿ ಆಕ್ಷೇಪಣೆಯನ್ನು ಸಲ್ಲಿಸಬಹುದು. ಅಲ್ಲದೆ ಈ ಕೆಳಗೆ ನೀಡಿರುವ ಇ-ಮೇಲ್ / ಅಂಚೆ ವಿಳಾಸಕ್ಕೆ ನಿಗಧಿತ ಸಮಯ ಹಾಗೂ ದಿನಾಂಕದೊಳಗೆ ಆಕ್ಷೇಪಣೆ ಸಲ್ಲಿಸಬಹುದಾಗಿದೆ. ಇ–ಮೇಲ್: acfputtur@yahoo.in

ಅಂಚೆ ವಿಳಾಸ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪುತ್ತೂರು ಉಪ ವಿಭಾಗ, ಪುತ್ತೂರು, ಕೆ.ಎಸ್.ಆರ್.ಟಿ.ಸಿ ಬಸ್ ಸ್ಟಾಂಡ್ ಎದುರು, ನೆಲ್ಲಿಕಟ್ಟೆ, ಪುತ್ತೂರು–574201

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಪುತ್ತೂರು ಉಪವಿಭಾಗ, ಪುತ್ತೂರು

DIPR/DK/KSMCA/232/26-27 dt.18.05.2026

ಪ್ರವೀಣ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ.
ಶ್ರೀ ಗಣೇಶ್ ಸಂಕೀರ್ಣ, ದರ್ಬೆ, ಪುತ್ತೂರು, ದ.ಕ. ದೂರವಾಣಿ: 08251–231889

ಸಾಲದ ಬಾಕಿಗೆ ಸಂಬಂಧ ಪಟ್ಟಂತೆ ಸ್ವಾಧೀನ ಪಡಿಸಿದ ವಾಹನದ ಹರಾಜು ಮಾರಟ ಸೂಚನೆ ಈ ಕೆಳಗೆ ಕಾಣಿಸಿದ ವಾಹನವು ಹೇಗಿದೆಯೋ ಹಾಗೆ ಯಥಾಸ್ಥಿತಿಯಲ್ಲಿ ಹರಾಜಿಗಾಗಿ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ.

ಮಾಲಿಕ ಸಾಲಗಾರ ಮತ್ತು ಜಾಮೀನುದಾರ	ವಾಹನ ನಂ.	ಮೇಕ್	ಮೋಡೆಲ್	ಬಾಕಿ ಇರುವ ಮೊತ್ತದ ಬಡ್ಡಿ
1). ಸ್ವಾದಿಕ್ ಬಿನ್. ಅಬ್ದುಲ್ ಖಾದರ್ 2) ನೆಬೀಸಾ ಕೋಂ ಅಬ್ಬಾಸ್ 3) ಮಹಮ್ಮದ್ ತಾಜುದ್ದೀನ್ ಬಿನ್. ಹನೀಫ್	KA 19 ME 7304	HYUNDAI NEW I-20(1B)ASTA DSL	2014	ರೂ. 3,91,629/– ದಿನಾಂಕ 16/05/2026 ರಂತೆ ಮತ್ತು ಮುಂದಿನ ಬಡ್ಡಿ ಮತ್ತು ಖರ್ಚು

ಸಾಲಗಾರ ಮತ್ತು ಜಾಮೀನುದಾರರಿಗೆ ಇದೆ ಸೂಚನಾ ಪತ್ರ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಿದೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 25–05–2026 ರ ಬೆಳಿಗ್ಗೆ ಗಂಟೆ 10ಕ್ಕೆ ಕಂಪೆನಿಯ ಕಾರ್ಪೋರೇಟ್ ಕಛೇರಿ, ಶ್ರೀ ಗಣೇಶ್ ಸಂಕೀರ್ಣ, ದರ್ಬೆ, ಪುತ್ತೂರುನಲ್ಲಿ ಬಹಿರಂಗ ಹರಾಜು ನಡೆಸಲಾಗುವುದು. ವಾಹನದ ವೀಕ್ಷಣೆಗಾಗಿ ಹಾಗೂ ವಿವರಗಳಿಗಾಗಿ ಪುತ್ತೂರು ಕಾರ್ಪೋರೇಟ್ ಕಛೇರಿಯನ್ನು ಸಂಪರ್ಕಿಸಬಹುದು.

ದಿನಾಂಕ :16/05/2026
ಸ್ಥಳ : ಪುತ್ತೂರು.ದ.ಕ

ಅಧಿಕೃತ ಅಧಿಕಾರಿ
ಪ್ರವೀಣ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ.

ಮಾತೃಭೂಮಿ ಸೌಹಾರ್ದ ಸಹಕಾರಿ ಸಂಘ ನಿಯಮಿತ
ನೋಂದಣಿ ಸಂಖ್ಯೆ:526/2005–06 'ಮಾತೃಧಾಮ',
ಗುರುಪುರ ಕೈಕಂಬ, ಕಿನ್ನಿಕಂಬಳ, ಮಂಗಳೂರು, ದ.ಕ.–574151
ದೂ : 7795115840, ಇ–ಮೇಲ್: mss.hr06@gmail.com,
ವೆಬ್: www.mathrubhoomisss.com

ಮುಟ್ಟುಗೋಲು ಹಾಕಿಕೊಂಡ ವಾಹನಗಳ ಹರಾಜು ನೋಟೀಸ್

ಈ ಕೆಳಕಂಡ ವಾಹನಗಳನ್ನು ಸಾಲಗಾರರು ಸಹಕಾರಿಯ ಹೆಸರಿಗೆ ಆಧಾರ ಮಾಡಿ, ಸಾಲ ಪಡೆದಿದ್ದು, ಸದ್ರಿ ಸದಸ್ಯ ಸಾಲಗಾರರು ಸಾಲ ಮರುಪಾವತಿಸದ ಕಾರಣ ವಾಹನವನ್ನು ಮುಟ್ಟುಗೋಲು ಹಾಕಿಕೊಂಡಿರುತ್ತೇವೆ. ಸದ್ರಿ ಮುಟ್ಟುಗೋಲು ಹಾಕಿರುವ ವಾಹನಗಳನ್ನು ದಿನಾಂಕ ಮೇ 25, 2026ರಂದು ಸಹಕಾರಿಯ ಕೇಂದ್ರಕಛೇರಿಯಲ್ಲಿ ಬಹಿರಂಗ ಹರಾಜು ಮೂಲಕ ಈಗಿರುವ ಸ್ಥಿತಿಯಲ್ಲಿ ವಿಲೇ ಮಾಡಲಾಗುವುದು. ವಾಹನಗಳನ್ನು ಕಛೇರಿಯ ಕೆಲಸದ ಸಮಯದಲ್ಲಿ (ಪೂರ್ವಾಹ್ನ 9:15– ಸಾಯಂಕಾಲ 5:15) ಪರಿಶೀಲಿಸಬಹುದಾಗಿದೆ.

ಕ್ರ.ಸಂ.	ವಾಹನ ನೋಂದಣಿ ಸಂಖ್ಯೆ	ವಾಹನದ ವಿವರ	ವರ್ಷ
01.	KA19HQ2030	TVS Apache RTR 160	2023

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ
[ಕೃಷ್ಣ ಕೊಂಪದವು]

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ
ಕೇಂದ್ರ ಕಚೇರಿ, ಗೋಕುಲ ರಸ್ತೆ, ಹುಬ್ಬಳ್ಳಿ–580 0030 ದೂರವಾಣಿ: 0836–2333058 ವೆಬ್‌ಸೈಟ್: nwkrtc.karnataka.gov.in

ಸಂ/ವಾಕರಸಾ/ಕೇಕ/ಹು/ಯಾಂತ್ರಿಕ/T-42/819/2026–27 ದಿನಾಂಕ:18/05/2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:05/ME/2026-27 ದಿನಾಂಕ: 18-05-2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆಯ ಮೂಲಕ

ಆಸಕ್ತ ಬಿಡ್‌ದಾರರಿಂದ (ಎರಡು ಹಂತದ ಟೆಂಡರ್ ಪದ್ಧತಿ ಮೂಲಕ) ಪೂರ್ವಾರ್ಹತಾ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸುವ ಕುರಿತು ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್ ಸಂ.	ಟೆಂಡರ್ ವಿವರಣೆ ಹಾಗೂ ಅಂದಾಜು ಮೌಲ್ಯ
1	T-42 NWKRTC/2026-27/IND0211 Dated:14.05.2026	ವಾಕರಸಾ ಸಂಸ್ಥೆಗೆ ಅಗತ್ಯವಿರುವ 5334 ಮಿಮೀ ರಿಂದ 5340 ಮಿಮೀ ವ್ಹೀಲ್ ಬೇಸ್ ಚಾಸಿಸಗಳ ಮೇಲೆ ಪೂರ್ಣ ಕವಚ ನಿರ್ಮಿತ 80 ನೂತನ BS-VI ಟೈಪ್–II NDX ಡಬಲ್ ಡೋರ್ ಬಸ್ಸುಗಳ ಸರಬರಾಜಿಗಾಗಿ. (ಅಂದಾಜು ಮೌಲ್ಯ ರೂ. 32.00 ಕೋಟಿ)

ಇ–ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 03–06–2026, 17.30 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: http://kppp.karnataka.gov.in ಮೊಬೈಲ್ ಸಂ. 7760993225/7022009931 ಸಂಪರ್ಕಿಸಬಹುದಾಗಿದೆ.

ಸಹಿ/– ಮುಖ್ಯ ಯಾಂತ್ರಿಕ ಅಭಿಯಂತರರು,
(ಟೆಂಡರ್ ಕರೆಯುವ ಪ್ರಾಧಿಕಾರ)

ಡಿಐಪಿಆರ್/ಧಾರವಾಡ/192/ಮಣಿಪಾಲ್/2026–27

ಕರ್ನಾಟಕ ಸರ್ಕಾರ (ಕರ್ನಾಟಕ ಸರ್ಕಾರದ ಸ್ವಾಯುತ್ತ ಸಂಸ್ಥೆ)
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಹಿಂದಿನ ಹೆಸರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಮುಳಗುಂದ ರಸ್ತೆ, ಮಲ್ಲಸಮುದ್ರ, ಗದಗ–582103 ದೂರವಾಣಿ ಸಂಖ್ಯೆ: 08372–200601
E-mail ID : gimsgadag@gmail.com
web : www.gimsgadag.karnataka.gov.in
File No : KHPIMS/Tender/Cost Per Test/20/2026-27
Date : 18.05.2026

ಇ–ಟೆಂಡರ ಪ್ರಕಟಣೆ

ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜೀವ ರಸಾಯನ ವಿಭಾಗಕ್ಕೆ Biochemistry Analyser Reagents Cost Per Reportable Test Reagent Rental Basis ಮುಖಾಂತರ ವೈದ್ಯಕೀಯ ಪ್ರಯೋಗ ಶಾಲಾ ಪರೀಕ್ಷೆಗಳಿಗಾಗಿ ಬಾಡಿಗೆ ಆದಾರದ ಮೇಲೆ ಸರಬರಾಜುವಿಗಾಗಿ ಕರೆದ ಟೆಂಡರ ಆಸಕ್ತಿಯುಳ್ಳ ಸಂಘ–ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ ಕರೆಯಲಾಗಿದ್ದು, ದಿನಾಂಕ : 19.05.2026 ರಿಂದ ದಿನಾಂಕ : 05.06.2026ರ ಸಾಯಂಕಾಲ 4:00 ಗಂಟೆವರೆಗೆ ಇ–ಪೋರ್ಟಾಲ್ ಸಂಖ್ಯೆ : DME/2026-27/IND2334 (https://kppp.Karnataka .gov.in/)ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/73/2026–27

ಗದಗ–ಬೆಟಗೇರಿ ನಗರಸಭೆ ಕಾರ್ಯಾಲಯ, 582101
ಜಿಲ್ಲಾ : ಗದಗ ರಾಜ್ಯ : ಕರ್ನಾಟಕ
ದೂ:08372–259932 ಇ–ಮೇಲ್ : ka.gadag.betageri.cmc@gmail.com

ನಂ.ಗಬೆನಸ/ತಾಂ.ವಿ/ವಹಿ/ಟೆಂಡರ್/2026–27 ದಿನಾಂಕ: 16–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999–2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ–ಬೆಟಗೇರಿ ನಗರಸಭೆಯ ಸನ್ 2025–26ನೇ ಸಾಲಿನ ನಗರಸಭೆ ಅನುದಾನದಲ್ಲಿ 2ನೇ ಕರೆಯ ಒಟ್ಟು 03 ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ ರೂ.39.51 ಲಕ್ಷಗಳಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ–ಸಂಗ್ರಹಣಾ ವೇದಿಕೆಯಡಿ, ಇಂಡೆಂಟ್ ನಂ:–1)DMA/2025-26/OW/WORK_INDENT-56369 (SC) (CALL-2), (2) DMA/2026-27/OW/WORK_INDENT-57192 (CALL-2) (3) DMA/2026-27/OW/WORK_INDENT-57194 (CALL-2) http://kppp.karnataka.gov.inರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ನಿಗಧಿ ಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	25-05-2026 Up to 16.00 Hours
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	26-05-2026 Up to 16.30 Hours

ಸದರಿ ಟೆಂಡರ್‌ಗೆ ಸಂಭಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ–
ಪೌರಾಯುಕ್ತರು
ಗದಗ–ಬೆಟಗೇರಿ ನಗರಸಭೆ

ವಾ.ಸಾ.ಸಂ.ಇ/ಗದಗ/69/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಟೆಂ:KW-2&4:2026-27:504 ದಿನಾಂಕ:15–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಲೆಕ್ಕ ಶೀರ್ಷಿಕೆ : 2025–26ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮೈಕ್ರೋ ಮೂಲಭೂತ ಸೌಕರ್ಯ–ಎಸ್‌ಸಿಪಿ, 2022–23ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮ್ಯಾಕ್ರೋ ಸಾಮಾಜಿಕೇತರ–ಎಸ್‌ಡಿಪಿ, 2025–26ನೇ ಸಾಲಿನ 4059–80–051–0–60–132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು ಯೋಜನೆ (ಸಿಎಂಐಡಿಪಿ), 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ /2025–26, 2024–25ನೇ ಸಾಲಿನ ಲೆಕ್ಕ ಶೀರ್ಷಿಕೆ : ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಬ್ಯಾಂಕ ಖಾತೆಯಲ್ಲಿ ಅರ್ಜಿಸಿದ ಬಡ್ಡಿ ಮೊತ್ತದ ಯೋಜನೆ ಮತ್ತು – ಸಾಮಾನ್ಯ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್‌ಡಾಕೂಮೆಂಟ್ KW-2&4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 07 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ:30601, 33710/Call-2, 35633, 35697, 35788, 35887 & 21972) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **01–06–2026** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02–06–2026** ಸಮಯ 16.30 ಗಂಟೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **06–06–2026** ಸಮಯ 16.00 ಗಂಟೆ ಕನಿಷ್ಠ ಅಂದಾಜು ಮೊತ್ತ ರೂ. **50.00** ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. **995.00** ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜನೀಯರು,
ಲೋ.ಇ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/91/ಕೆಎಸ್‌ಎಂಸಿಎ/2026–27

ಕರ್ನಾಟಕ ಸರಕಾರ
(ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ)
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ. 574238
ದೂರವಾಣಿ: 08257 – 281224, 281700

ಕೆ.ಎಸ್.ಎಸ್.ಟಿ.: ನಂ.: ತಾ.ವಿ.: 05/2026–27 ದಿನಾಂಕ: 08–05–2026

ಅಲ್ಪಾವಧಿ ಟೆಂಡರು ಪ್ರಕಟಣೆ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದಲ್ಲಿ ಸರ್ಪಸಂಸ್ಕಾರ ಸೇವೆ ನೆರವೇರಿಸುವ ಭಕ್ತಾದಿಗಳಿಗೆ ಮಾಹಿತಿ ನೀಡಲು ಸರ್ಪಸಂಸ್ಕಾರ ಯಾಗಶಾಲೆಗೆ ಧ್ವನಿವರ್ಧಕ ಅಳವಡಿಸುವ ಬಗ್ಗೆ ಅಧಿಕೃತ ವಿದ್ಯುನ್ಮಾನ ಸರಬರಾಜುದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಸೂಚನೆ: (1) ಟೆಂಡರುಗಳು ಈ ಕಛೇರಿಗೆ ತಲುಪುವ ಕೊನೆಯ ದಿನಾಂಕ: 22–05–2026 ಅಪರಾಹ್ನ 2.00 ಗಂಟೆಯ ಒಳಗೆ. (2) ಟೆಂಡರುಗಳನ್ನು ತೆರೆಯುವ ದಿನಾಂಕ: 22–05–2026 ಅಪರಾಹ್ನ 4.00 ಗಂಟೆ (3) ಬಂದ್ ಮಾಡಿದ ಕವರಿನ ಮೇಲ್ಗಡೆ "ಶ್ರೀ ದೇವಳದ ಸರ್ಪಸಂಸ್ಕಾರ ಯಾಗಶಾಲೆಗೆ ಧ್ವನಿವರ್ಧಕ ಅಳವಡಿಸುವ ಬಗ್ಗೆ ಟೆಂಡರು" ಎಂದು ನಮೂದಿಸಿರಬೇಕು. (4) ಹೆಚ್ಚಿನ ಮಾಹಿತಿಗಾಗಿ ದೇವಳದ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಹಿಂದೂ ಧಾರ್ಮಿಕ ದತ್ತಿ ಇಲಾಖೆ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

DIPR/DK/KSMCA/226/26-27 dt. 18.05.2026

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-54) ಡ್ರಾ ಮೇ 18ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BW 788952 (VAIKKOM)

Consolation Prize Rs.5,000/-
BN 788952 BO 788952 BP 788952 BR 788952
BS 788952 BT 788952 BU 788952 BV 788952
BX 788952 BY 788952 BZ 788952

2nd Prize Rs.30,00,000/- [30 Lakhs]
BO 441141 (VAIKKOM)

3rd Prize Rs.5,00,000/- [5 Lakhs]
BP 197928 (ERNAKULAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0202 0354 1210 1966 2428 4009 4896 5084 5484 5723
5811 6231 7178 7230 7556 7979 8133 8488 8561

5th Prize Rs.2,000/-
0008 0557 0603 8076 8213 8720

6th Prize Rs.1,000/-
0215 0493 0654 0805 1117 1215 1297 1400 1426 2154
3048 3350 3411 3602 4312 5359 5522 5955 7083 7316
7894 8750 9402 9410 9601

7th Prize Rs.500/-
0081 0082 0277 0349 0410 0570 0622 0802 0810 0962
0988 1015 1060 1169 1544 1735 1864 1894 1990 1993
2237 2679 2832 3035 3077 3162 3306 3447 3817 4049
4310 4378 4409 4470 4519 4655 5221 5238 5596 5855
5917 6029 6086 6117 6210 6305 6479 6578 6807 6955
7023 7074 7098 7150 7218 7413 7592 7599 7759 7833
7863 8181 8348 8363 8404 8420 8591 8708 8830 9008
9114 9442 9533 9550 9597 9618


8th Prize Rs.200/-
0148 0189 0319 0332 0347 0487 0505 0620 0772 0878
1095 1468 1564 1814 1895 1916 2053 2180 2397 2466
2809 3088 3137 3356 3619 3934 3983 3987 3994 4111
4126 4224 4347 4364 4554 4631 4661 4702 4859 4865
4942 4977 4998 5040 5074 5151 5351 5447 5503 5546
5632 5702 5737 6010 6048 6227 6302 6340 6343 6551
6601 6620 6681 6712 6726 6744 7025 7038 7188 7652
7653 7666 7899 7954 8104 8137 8262 8339 8352 8409
8478 8497 8694 8829 8888 8895 9182 9275 9319 9446
9598 9681 9692 9770

9th Prize Rs.100/-
0172 0273 0298 0503 0521 0581 0608 0648 0839 0940
0956 0995 1098 1213 1409 1484 1534 1649 1677 1679
1682 1705 1759 1908 1944 2031 2082 2085 2088 2225
2231 2271 2295 2323 2437 2457 2459 2575 2617 2631
2647 2689 2694 2698 2894 2916 2994 3152 3191 3235
3254 3313 3344 3433 3441 3489 3492 3528 3543 3563
3635 3722 3732 3748 3758 3775 3879 3969 3992 4017
4114 4142 4321 4384 4427 4450 4912 4941 5043 5071
5140 5159 5312 5485 5536 5553 5676 5777 5806 5828
5859 6096 6287 6425 6467 6473 6480 6487 6529 6533
6607 6828 6860 6908 6938 6991 7009 7300 7303 7319
7408 7439 7462 7606 7636 7685 7691 7737 7985 8015
8022 8109 8230 8275 8383 8396 8430 8481 8486 8625
8701 8880 8916 9251 9345 9514 9523 9549 9670 9693
9763 9799 9819 9941

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ
ನೋ. ಸಂ :ಆರ್.ಎಸ್. ಆರ್. ಸೌ.ಕಾ. 128–009–2001–02
ಪ್ರಧಾನ ಕಛೇರಿ: ದರ್ಬೆ, ಪುತ್ತೂರು –574202, ದ.ಕ.
ಶಾಖೆ: ಪ್ರಥಮ ಮಹಡಿ, ವಿವಾ ಕಾಂಪ್ಲೆಕ್ಸ್, ಮುಖ್ಯರಸ್ತೆ ಬೆಳ್ತಂಗಡಿ, ದ.ಕ.–574214
ಫೋನ್: 08256–232373, 9739986841

ವಾಹನ ಹರಾಜು ಪ್ರಕಟಣೆ

ಈ ಕೆಳಕಂಡ ಮಹನೀಯರು ನಮ್ಮ ಸಹಕಾರಿಯಿಂದ ವಾಹನ ಸಾಲ ಪಡೆದುಕೊಂಡು ಸಮಯಕ್ಕೆ ಸರಿಯಾಗಿ ಮರುಪಾವತಿಸದ ಕಾರಣ, ಈ ಕೆಳಗೆ ಕಾಣಿಸಿದ ವಾಹನವನ್ನು ಮುಟ್ಟುಗೋಲು ಹಾಕಲಾಗಿದ್ದು, ಸದ್ರಿ ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸಾಲವನ್ನು ದಿನಾಂಕ: 26.05.2026 ರೊಳಗಾಗಿ ಮರುಪಾವತಿಸದಿದ್ದರೆ, ಸದ್ರಿ ವಾಹನವನ್ನು ದಿನಾಂಕ 27.05.2026 ರಂದು ಸಮಯ ಬೆಳಗ್ಗೆ 11.30ಕ್ಕೆ ಬೆಳ್ತಂಗಡಿ ಶಾಖೆಯ ಆವರಣದಲ್ಲಿ ಬಹಿರಂಗ ಯಾ ನೋಟೀಸು ಕೊಡದೇನೆ ಖಾಸಗಿಯಾಗಿ "ಎಲ್ಲಿ ಹೇಗಿದೆಯೋ ಹಾಗೇ" ಯಥಾ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು.

ಕ್ರ.ಸಂ.	ವಾಹನ ಸಂಖ್ಯೆ ಮತ್ತು ವಿಧ	ಸಾಲಗಾರರ ಹೆಸರು ಮತ್ತು ವಿಳಾಸ
01	ವಾಹನ ಸಂಖ್ಯೆ: KA-70-J-8152 ವಿಧ: BAJAJ PUL-N150 (BS6) ವರ್ಷ : 2023	ಸಾಲದ ಸಂಖ್ಯೆ : 008/154/230163 ಸಾಲಗಾರರು : ಮ.ನಂ. ಎ–34444 ರಂಜಿತ್ ಬಿನ್ ಅಣ್ಣಿ ದೇವಾಡಿಗ, ಪಡೀಲು ಮನೆ, ನಾರಾವಿ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲೂಕು ದ.ಕ.–574109  ಸಹಜಮಾನ್ದಾರರು : ಮ.ನಂ. ಎ–34445 ಕಸ್ತೂರಿ ಬಿನ್. ಮೇಂಪ ದೇವಾಡಿಗ, ಪಡೀಲು ಮನೆ, ನಾರಾವಿ ಅಂಚೆ ಮತ್ತು ಗ್ರಾಮ, ಬೆಳ್ತಂಗಡಿ ತಾಲೂಕು ದ.ಕ.–574104 

ದಿನಾಂಕ 18.05.2026 ರಂತೆ ಶಾಖೆಗೆ ಬರಬೇಕಾಗಿರುವ ಒಟ್ಟು ಬಾಕಿ ಮೊತ್ತ ರೂ. 87,212.53 + ನಂತರದ ಬಡ್ಡಿ ಮತ್ತು ಇತರ ಖರ್ಚು.

(ಆಡಳಿತ ಮಂಡಳಿ ಅನುಮತಿ ಮೇರೆಗೆ)

ಸೂಚನೆ: ಸದ್ರಿ ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಯಾ ರದ್ದುಗೊಳಿಸುವ ಅಧಿಕಾರವನ್ನು ಸಹಕಾರಿಯ ಆಡಳಿತ ಮಂಡಲಿ ಕಾಯ್ದಿರಿಸಿದೆ.

ದಿನಾಂಕ: 18.05.2026
ಸ್ಥಳ: ಬೆಳ್ತಂಗಡಿ

ಸಹಿ/–
ಪ್ರಧಾನ ವ್ಯವಸ್ಥಾಪಕರು

ಪುರಸಭೆ ಕಾರ್ಯಾಲಯ, ನವಲಗುಂದ

ಕ್ರ.ಸಂ.ಪುಸನ/ಅಭಿವೃದ್ಧಿ/ಟೆಂಡರ್/ವಹಿ/2026–27/135 ದಿನಾಂಕ: 18–05–2026

ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ನವಲಗುಂದ ಪುರಸಭೆಯಿಂದ 2025–26 ನೇ ಸಾಲಿನ ಎಸ್.ಎಫ್.ಸಿ ಅನುದಾನದಡಿ(Grants for infrastructure of Upgraded ULBs and new ULBS from gps) ಇಂಡೆಂಟ್ ನಂ. **DMA/2026-27/BD/ WORK_ INDENT58205**, ಅಂದಾಜು ಮೊತ್ತ **ರೂ.712.94** ಲಕ್ಷಗಳು ನೇದ್ದರ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000 ಪ್ರಕಾರ ಆಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **19.06.2026** ರಂದು ನಿಗದಿಪಡಿಸಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

ಸೂಚನೆ: ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗಿದೆ.

ಸಹಿ / –
(ಎಸ್.ಪಿ. ಪೂಜಾರ)
ಮುಖ್ಯಾಧಿಕಾರಿ, ಪುರಸಭೆ, ನವಲಗುಂದ.

ವಾಸಾಸಂಇ/ಧಾ/ದಿಶಾ/194/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ, ಕಾರ್ಯಾಲಯ, ಅಥಣಿ – 591304, ತಾ|| ಅಥಣಿ ಜಿ|| ಬೆಳಗಾವಿ.

ಸಂಖ್ಯೆ : ಕ.ನೀ.ನಿ.ನಿ./ಪು.ಪು.ವಿ./ಟೆಂಡರ್/ಅಥಣಿ/ಬಿ.ಎಲ್.ಆಯ್.ಎಸ್/ಎಫ್.ಆಯ್.ಸಿ/2026–27/216 ದಿನಾಂಕ : 14–05–2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕ.ನೀ.ನಿ.ನಿ. ಆರ್&ಆರ್ ವಿಭಾಗ, ಅಥಣಿ, ಇವರು ಕೆ.ಪಿ.ಪಿ ಪೋರ್ಟಲ್ ಮುಖಾಂತರ ನೊಂದಾಯಿತ ಎರಡನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರು ಇವರಿಂದ 1) KPP I. NO - 4425, 2) KPP I. NO - 4426, 3) KPP I. NO - 4427, 4) KPP I. NO - 4428, 5) KPP I. NO - 4429, 6) KPP I.NO - 546 Call-2, ಕಾಮಗಾರಿಗಳಿಗೆ ಕೆ.ಡಬ್ಲ್ಯೂ–4 ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ.

ಗುತ್ತಿಗೆದಾರರು 02 – ಕವರ್ ಬಿಡ್ ಸಲ್ಲಿಕೆ ವಿಧಾನವನ್ನು ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ : https://kppp.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸುವುದು.

ಟೆಂಡರಿಗಿಟ್ಟ ಮೊತ್ತ (ಜಿ.ಎಸ್.ಟಿ. ರಹಿತ) 1) ರೂ. 415.93 ಲಕ್ಷಗಳು, 2) ರೂ. 328.87 ಲಕ್ಷಗಳು, 3) ರೂ. 391.98 ಲಕ್ಷಗಳು, 4) ರೂ. 211.55 ಲಕ್ಷಗಳು, 5) ರೂ. 279.85 ಲಕ್ಷಗಳು, 6) ರೂ. 403.09 ಲಕ್ಷಗಳು ಇರುತ್ತವೆ. ಟೆಂಡರ್ ಅವಧಿ ಮಳೆಗಾಲ ಸಹಿತ ಕ್ರ.ಸಂ. 01 ರಿಂದ 06 (06) ತಿಂಗಳು.

1) ಇ–ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 18–05–2026 10.30 ರಿಂದ ದಿನಾಂಕ : 25–05–2026 ರ ಸಂಜೆ 4.00 ರವರೆಗೆ, 2) ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ : 22–05–2026 ರ ಸಂಜೆ 4.00 ಘಂಟೆಯವರೆಗೆ, 3) ಬಿಡ್ ಪೂರ್ವ ಸಭೆಯು ಕಾ.ಇಂ. ಕ.ನೀ.ನಿ.ನಿ. ಪುವ & ಪುನಿ ವಿಭಾಗ, ಅಥಣಿ ಕಛೇರಿಯಲ್ಲಿ ಜರುಗಲಿದೆ. ದಿನಾಂಕ : 20–05–2026 ರ ಬೆಳಿಗ್ಗೆ 11.00 ಘಂಟೆಗೆ, 4) ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 18–05–2026 10.30 ರಿಂದ ದಿನಾಂಕ : 25–05–2026 ರ ಸಂಜೆ 4.00 ರವರೆಗೆ, 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 26–05–2026 ರ ಸಂಜೆ 4.30 ಘಂಟೆಗೆ, 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 29–05–2026 ರ ಬೆಳಿಗ್ಗೆ 11.00 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಛೇರಿ ದೂರವಾಣಿ ಸಂಖ್ಯೆ : 08289–285031 ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಪುವ ಮತ್ತು ಪುನಿ ವಿಭಾಗ, ಅಥಣಿ.

ಡಿಐಪಿಆರ್/ಬೆಳಗಾವಿ/267/ಮಣಿಪಾಲ್/2026–27

ಕಿರುಸುದ್ದಿ

ಸರ್ಕಾರದ ನಿರ್ಧಾರದಿಂದ ಸಮಾಜದಲ್ಲಿ ಅಶಾಂತಿ : ಸುನೀಲ್ ಕುಮಾರ್

ಉಡುಪಿ: ಶೈಕ್ಷಣಿಕ ಸಂಸ್ಥೆಗಳಲ್ಲಿ ಸಮವಸ್ತ್ರ ಸಂಹಿತೆಯನ್ನು ಗಾಳಿಗೆ ತೂರಿ, ಹಿಜಾಬ್‌ಗೆ ಅವಕಾಶ ನೀಡುವ ಕುರಿತಾದ ಸರ್ಕಾರದ ನಡೆಗಳು ಸಮಾಜದಲ್ಲಿ ಅಶಾಂತಿ ಮೂಡಿಸುತ್ತಿವೆ ಎಂದು ಬಿಜೆಪಿ ನಾಯಕ ಹಾಗೂ ಶಾಸಕ ವಿ. ಸುನಿಲ್ ಕುಮಾರ್ ಅವರು ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಇಂತಹ ನಿರ್ಧಾರಗಳು ಶೈಕ್ಷಣಿಕ ಶಿಸ್ತನ್ನು ಹಾಳುಮಾಡುತ್ತವೆ. ಈ ಹಿಂದೆ ನ್ಯಾಯಾಲಯವು ನೀಡಿದ್ದ ತೀರ್ಪನ್ನು ಉಲ್ಲೇಖಿಸಿರುವ ಅವರು, ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಚಿಹ್ನೆಗಳಿಗಿಂತ ನಿಯಮಗಳಿಗೆ ಆದ್ಯತೆ ನೀಡಬೇಕು ಎಂದಿದ್ದಾರೆ. ಕಾಂಗ್ರೆಸ್ ಪಕ್ಷವು ತುಷ್ಟೀಕರಣ ರಾಜಕಾರಣಕ್ಕಾಗಿ ಇಂತಹ ಸೂಕ್ಷ್ಮ ವಿಚಾರಗಳನ್ನು ಕೆಣಕುತ್ತಿದೆ ಮತ್ತು ವಿದ್ಯಾರ್ಥಿಗಳ ಮನಸ್ಸಿನಲ್ಲಿ ವಿಷಬೀಜ ಬಿತ್ತುತ್ತಿದೆ ಎಂದು ಅವರು ಟೀಕಿಸಿದ್ದಾರೆ. ಅಭಿವೃದ್ಧಿ ಕೆಲಸಗಳಿಗಿಂತ ಇಂತಹ ವಿವಾದಾತ್ಮಕ ವಿಷಯಗಳಿಗೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ ಎಂದು ಅವರು ಆಕ್ರೋಶ ಹೊರಹಾಕಿದ್ದಾರೆ. ಈ ವಿವಾದವು ಕೇವಲ ಬಟ್ಟೆಯ ವಿಚಾರವಲ್ಲ, ಬದಲಾಗಿ ಇದು ಶಾಲಾ-ಕಾಲೇಜುಗಳ ಪಾವಿತ್ರತೆ ಮತ್ತು ಸಮಾನತೆಯ ಪ್ರಶ್ನೆಯಾಗಿದೆ. ಪ್ರತಿಯೊಬ್ಬರೂ ಕಾನೂನಿಗೆ ಬದ್ಧರಾಗಿರಬೇಕು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ತಾರತಮ್ಯಕ್ಕೆ ಅವಕಾಶ ನೀಡಬಾರದು ಎಂದು ಸುನಿಲ್ ಕುಮಾರ್ ಅವರು ಈ ಸಂದರ್ಭದಲ್ಲಿ ಎಚ್ಚರಿಸಿದ್ದಾರೆ.

ರಾಶಿ ಹೆಗ್ಡೆ ಭರತನಾಟ್ಯ ರಂಗಪ್ರವೇಶ

ಮಂಗಳೂರು: ನಗರದ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಭಾನುವಾರ ಮೊಗರುತ್ತು ರಾಜೇಶ್ ಕುಮಾರ್ ಹೆಗ್ಡೆ ಮತ್ತು ಶುಭಾ ಹೆಗ್ಡೆ ಅವರ ಪುತ್ರಿ ರಾಶಿ ಹೆಗ್ಡೆ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ನಡೆಯಿತು. ಶರವು ಮಹಾಗಣಪತಿ ದೇವಸ್ಥಾನದ ಶಿರೀ ಶಿರೀ ಮೊಕ್ತೇಸರ ಶರವು ರಾಘವೇಂದ್ರ ಶಾಸ್ತ್ರಿ ಉದ್ಘಾಟಿಸಿದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಡಾ.ಮೋಹನ ಆಳ್ವ, ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಎ.ಬಿ ಶೆಟ್ಟಿ ಸ್ಮಾರಕ ದಂತ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲೆ ಡಾ.ಮಿತ್ರಾ ಎನ್.ಹೆಗ್ಡೆ, ಜೀವ ವಿಮಾ ನಿಗಮದ ಉಡುಪಿ ವಲಯ ವ್ಯವಸ್ಥಾಪಕ ಗಣಪತಿ ಎನ್.ಭಟ್ ಭಾಗವಹಿಸಿದ್ದರು.



ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಬೈಕೋಡಿ ಕೋಣ್ಣೂರು, 'ಶಿವ ಜ್ಯೋತಿ', ಕೋಟ್ಟೂರು ಕಂಬೋಡಿ, ಬಜಾಲು – ಕಟೀಲು ಸಾನಿಧ್ಯ ಮಹಾತ್ಮೆ.
2. ಉಡುಪ ಮಹೇಶ್, ಭಂಡಾರಿ, ಕೊಪ್ಪ ತಾಲೂಕು, ಚಿಕ್ಕಮಗಳೂರು ಜಿಲ್ಲೆ
3. ಐಕಳ ಗಣೇಶ್ ಶೆಟ್ಟಿ ಹಿತ್ತಿ, ಮಕ್ಕಳು, 'ಬ್ರಾಹ್ಮರಿ ಕೃಷ್ಣ', ನಡುಗೋಡು – ಶ್ರೀ ಕಟೀಲು ಕ್ಷೇತ್ರ ಸಂಸ್ಕೃತಿ ಸದನ.
4. ಮಮತಾ ಜೀವನ್ ಕುಮಾರ್, 'ಐಭೂಂಗಮ್', ಪುಣೆ ಓಟ – ಶ್ರೀ ಕಟೀಲು ಕ್ಷೇತ್ರ ಮಹಾತ್ಮೆ.
5. ವಿಠಲ್, ಜಯರಾಮ ಶೆಟ್ಟಿ ಮತ್ತು ಮಕ್ಕಳು, 'ನಂದಾ ನಿಲಯ', ಕೊಡಿಪ್ಪಾಡಿ ಮುಕ್ಕ, ಕಿನ್ನಿಗೋಳಿ.
6. ದಿ ಸುಮಿತ್ರಾದಾಸ ನಾಯಕ್ ಸ್ಮರಣಾರ್ಥ ಮಕ್ಕಳು, ಅರಿಯಾಲೆ, ದಾಹ್ನಾರು, ಬ್ರಹ್ಮಾವರ – ಕಟೀಲು ಪಿ.ಯು. ಕಾಲೇಜ್ ವಠಾರ.
7. ಸೌಭಾಗ್ಯ ರಾಜೇಶ್ ಕುಮಾರ್, 'ದೇವಿ ಕೃಪಾ', ಅದಿ ಜನಾರ್ಧನ ದೇವಸ್ಥಾನದ ಬಳಿ, ಶಿಮಂತೂರು.

ಶ್ರೀ ಧರ್ಮಸ್ಥಳ ಮೇಳ
ತಲ್ಲೂರು-ಗುಡ್ಡೆಯಂಗಡಿ
ಶ್ರೀಮತಿ ಮತ್ತು ಮತ್ತು ಶ್ರೀ ಶ್ರೀನಿವಾಸ ಗಾಣಿಗ ಹಾಗೂ ಮಕ್ಕಳು ವಾಸುದೇವ ಕೃಪಾ, ಕನ್ನಾಣ

ಶ್ರೀ ಪೆರ್ಡೂರು ಮೇಳ
ಕೊಡವೂರು ಶಂಕರನಾರಾಯಣ ದೇವಸ್ಥಾನ
ಶ್ವೇತಕುಮಾರ ಚರಿತ್ರೆ

ಶ್ರೀ ಹನುಮಗಿರಿ ಮೇಳ
ಮಾನ್ಯದಲ್ಲಿ

ಶ್ರೀ ಪಾವಂಜೆ ಮೇಳ
ನಾಳೆ ಉಲ್ಲಂಜೆಯಲ್ಲಿ (ಕಿನ್ನಿಗೋಳಿ)
ಕಟೀಲು ಕ್ಷೇತ್ರ ಮಹಾತ್ಮೆ



ಮಂಗಳೂರಿನ ಸಂಗೀತ ಪರಿಷತ್ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚೆನ್ನೈನ ಭರತ್ ನಾರಾಯಣ್ ಅವರಿಂದ ಸಂಗೀತ ಕಛೇರಿ ನಡೆಯಿತು. ವಯಲಿನ್‌ನಲ್ಲಿ ತಿಶೂರ್‌ನ ಆದಿತ್ಯ ಅನಿಲ್, ಮೃದಂಗದಲ್ಲಿ ಕೊಟ್ಟೆಯ ಕೃಪಾಲ್ ಸಾಯಿರಾಮ್, ಮೋರ್ಚಿಂಗ್‌ನಲ್ಲಿ ಪುತ್ತೂರಿನ ಬಾಲಕೃಷ್ಣ ಹೊಸಮನೆ ಸಾಥ್ ನೀಡಿದರು.

31 ಎಕರೆ ಪೈಸಾರಿ ಜಾಗವನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ನಿವೇಶನ ರಹಿತರಿಗೆ ಮಂಜೂರು ಮಾಡಲು ಆಗ್ರಹ

ಸೋಮವಾರಪೇಟೆ: ತಾಲ್ಲೂಕಿನ ಮಾದಾಪುರ ಗ್ರಾ.ಪಂ. ವ್ಯಾಪ್ತಿಯ ಕುಂಬೂರು ಗ್ರಾಮದ ಸರ್ವೆ ಸಂಖ್ಯೆ 125/1ರಲ್ಲಿ ಲಭ್ಯವಿರುವ 31 ಎಕರೆ ಪೈಸಾರಿ ಜಾಗವನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ನಿವೇಶನ ರಹಿತರಿಗೆ ಮಂಜೂರಾತಿ ಮಾಡಬೇಕೆಂದು ಎಂದು ಎಐಟಿಯುಸಿ ಜಿಲ್ಲಾಧ್ಯಕ್ಷ ಹಾಗೂ ಆದಿ ದ್ರಾವಿಡ ಸಮಾಜ ಸೇವಾ ಸಂಘದ ರಾಜ್ಯಾಧ್ಯಕ್ಷ ಎಚ್.ಎಂ. ಸೋಮಪ್ಪ ಆಗ್ರಹಿಸಿದರು.

ನಿವೇಶನ ಕೋರಿ ಕಳೆದ 20 ವರ್ಷಗಳಿಂದ ಅರ್ಹರು ಅರ್ಜಿ ಸಲ್ಲಿಸುತ್ತಾ ಬಂದಿದ್ದಾರೆ. ಜಿಲ್ಲೆಯಲ್ಲಿ ಇಂದಿಗೂ ಸುಮಾರು 5 ರಿಂದ 6 ಸಾವಿರ ಕೃಷಿ ಕಾರ್ಮಿಕರು ವಾಸಕ್ಕೆ ಯೋಗ್ಯವಲ್ಲದ ಲೈನ್ ಮನೆ ಹಾಗೂ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದು, ಅವರಿಗೆ ನಿವೇಶನ ಒದಗಿಸುವಂತೆ ನಿರಂತರ ಪ್ರತಿಭಟನೆಗಳ ಮೂಲಕ ಸರ್ಕಾರದ ಗಮನ ಸೆಳೆಯಲಾಗಿದ್ದರೂ ಪ್ರಯೋಜನವಾಗಿಲ್ಲ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

2024ರಲ್ಲಿ ಮಡಿಕೇರಿಯಲ್ಲಿ ನಡೆದ ಜನಸ್ಪಂದನಾ ಸಭೆಯಲ್ಲಿ ಮುಖ್ಯಮಂತ್ರಿ ಅವರಿಗೆ ಕೂಡ ಮನವಿ ಸಲ್ಲಿಸಲಾಗಿತ್ತು. ಜೊತೆಗೆ ಕಂದಾಯ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಹಾಗೂ ಜಿಲ್ಲಾಡಳಿತಕ್ಕೂ ಮನವಿ ನೀಡಿ ನಿವೇಶನ ಮಂಜೂರಾತಿಗೆ ಒತ್ತಾಯಿಸಲಾಗಿದೆ ಎಂದು ಹೇಳಿದರು.

ಮಾದಾಪುರ ಗ್ರಾ.ಪಂ ವ್ಯಾಪ್ತಿಯ 500ಕ್ಕೂ ಅಧಿಕ ಅರ್ಜಿದಾರರು ಕುಂಬೂರು ಗ್ರಾಮದ ಸರ್ವೆ ಸಂಖ್ಯೆ 125/1 ರಲ್ಲಿರುವ ಜಾಗ ನಿವೇಶನದ ರೂಪದಲ್ಲಿ ಲಭಿಸುವ ನಿರೀಕ್ಷೆಯಲ್ಲಿದ್ದಾರೆ. ಜಿಲ್ಲೆಯ ವಿವಿಧ ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರು ಈಗಾಗಲೇ ಸಂಬಂಧಿಸಿದ ಪಂಚಾಯತ್‌ಗಳಿಗೆ ಅರ್ಜಿ ಸಲ್ಲಿಸಿದ್ದು, ನಿವೇಶನ ವಿತರಿಸುವಾಗ ಅರ್ಜಿ ಸಲ್ಲಿಸಿದ ಹಿರಿತನದ ಆಧಾರದ ಮೇಲೆ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಕುಂಬೂರು ಗ್ರಾಮದ ಸರ್ವೆ ಸಂಖ್ಯೆ 125/1 ರಲ್ಲಿರುವ ಪೈಸಾರಿ ಜಾಗವನ್ನು ಮಾದಾಪುರ ಗ್ರಾ.ಪಂ ವ್ಯಾಪ್ತಿಯ ನಿವೇಶನ ರಹಿತ ಅರ್ಜಿದಾರರಿಗೆ ನೀಡಬೇಕು. ಅಲ್ಲದೆ, ಈಗಾಗಲೇ ಅಲ್ಲಿ ನೆಲೆಸಿರುವ ಸಣ್ಣ ಹಾಗೂ ಬಡ ಹಿಡುವಳಿದಾರರಿಗೆ ಹಕ್ಕುಪತ್ರ ನೀಡುವಂತೆ ಒತ್ತಾಯಿಸಿದರು.

ಜಿಲ್ಲೆಯ ಇಬ್ಬರು ಶಾಸಕರು ಮುಖ್ಯಮಂತ್ರಿ ಅವರ ಗಮನಕ್ಕೆ ವಿಷಯವನ್ನು ತಂದು, ಶೀಘ್ರವೇ ನಿವೇಶನ ರಹಿತರಿಗೆ ನಿವೇಶನ ಕಲ್ಪಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಮನವಿ ಮಾಡಿದರು.

ಸಿಡಿಲಿಗೆ ಕಾರಿಂಜ ದೇವಳಕ್ಕೆ ಹಾನಿ | ಶಾಸಕ ರಾಜೇಶ್ ನ್ಯಾಕ್ ಪರಿಶೀಲನೆ

ಪ್ರಶ್ನಾಚಿಂತನೆಗೆ ಭಕ್ತಾದಿಗಳ ಚಿತ್ತ

ಬಂಟ್ವಾಳ: ಎರಡು ದಿನಗಳ ಹಿಂದೆ ಸಿಡಿಲಾಘಾತದಿಂದ ಹಾನಿಯಾದ ಮಹೋತಭಾರ ಶ್ರೀ ಕಾರಿಂಜೇಶ್ವರ ಹಾಗೂ ಇಳಿಯೂರು ಶ್ರೀ ಮಹಾವಿಷ್ಣು ದೇವಸ್ಥಾನಗಳಿಗೆ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಅವರು ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭ ತಹಶಿಲ್ದಾರ್ ಮಂಜುನಾಥ್ ಅವರು ಜೊತೆಗಿದ್ದರು.

ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ಚರ್ಚಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತಿಹಾಸ ಪ್ರಸಿದ್ಧ ಕಾರಿಂಜ ಕ್ಷೇತ್ರದ ಮೇಲ್ಬಾಗದ ಕಲಶದ ಭಾಗಕ್ಕೆ ಸಿಡಿಲು ಬಡಿದು ಹಾನಿಯಾಗಿದೆ. ಇದನ್ನು ಶೀಘ್ರ ಸರಿಪಡಿಸಬೇಕಾಗಿರುವ ನೆಲೆಯಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕಾಗಿದ್ದು, ಇದೆಲ್ಲದಕ್ಕೆ ಪೂರಕವಾಗಿ ಪ್ರಶ್ನಾಚಿಂತನೆಯನ್ನಿರಿಸಿ ಮುಂದಿನ ಕ್ರಮಗಳ ಬಗ್ಗೆ ಅವಲೋಕಿಸಲು ಊರಿನವರು ಅಭಿಪ್ರಾಯಪಟ್ಟಿದ್ದಾರೆ ಎಂದರು.

ಸರಕಾರ ಮಟ್ಟದಲ್ಲಿ ಮಾಡಬೇಕಾದ ಕಾರ್ಯಗಳ ಬಗ್ಗೆ ಮತ್ತು ಧಾರ್ಮಿಕ ದತ್ತಿ ಇಲಾಖೆಯ ಸಚಿವರ ಜೊತೆಗೆ ಮಾತನಾಡಿ ಅನುದಾನಬಿಡುಗಡೆಗೆಪ್ರಯತ್ನಿಸುವುದಾಗಿಯು ಶಾಸಕರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕಾರಿಂಜೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ವೀರೇಂದ್ರ ಅಮೀನ್, ಸಮಿತಿಯ ಸದಸ್ಯರಾದ ಜನಾರ್ದನ ಆಚಾರ್ಯ,ರಾಧಾ ಆಚಾರ್ಯ, ಬಿಜೆಪಿ ಬಂಟ್ವಾಳ ಮಂಡಲದ ಪ್ರಧಾನ ಕಾರ್ಯದರ್ಶಿ ಸುದರ್ಶನ ಬಜ, ಮಾಧ್ಯಮ ಪ್ರಮುಖ್ ಪುರುಷೋತ್ತಮ ಶೆಟ್ಟಿ ವಾಮದಪದವು, ಬಿಜೆಪಿ ಪ್ರಮುಖರಾದ ಪ್ರಕಾಶ್ ಅಂಚನ್, ಪ್ರಣಾಮ್ ಅಜ್ಜಿಬೆಟ್ಟು , ಕಾವಳಪಡೂರು ಸೊಸೈಟಿ ಅಧ್ಯಕ್ಷ ಪ್ರಮೋದ್ ರೈ ಕಾಡಬೆಟ್ಟು , ಕಾವಳಪಡೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಲಕ್ಷ್ಮಿ ನಾರಾಯಣ ಶರ್ಮಾ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಅಜಿತ್ ಶೆಟ್ಟಿ ಕಾರಿಂಜ , ವ್ಯವಸ್ಥಾಪನ ಸಮಿತಿಯ ಮಾಜಿ ಅಧ್ಯಕ್ಷ ಜಿನರಾಜ್ ಅರಿಗ , ಮಾಜಿ ಸದಸ್ಯರದ ರಾಘವೇಂದ್ರ ನಾಯ್ಕ,ಕಾವಳಮೂಡೂರು ಬಿಜೆಪಿ ಶಕ್ತಿ ಕೇಂದ್ರ ಪ್ರಮುಖರಾದ ಜಯಪ್ರಸನ್ನ ನಿಡ್ವಾಲ್, ಸತೀಶ್ ಶೆಟ್ಟಿ ಮದ್ವ, ಚಂದಪ್ಪ ಮೂಲ್ಯ, ಮಾಜಿ ಗ್ರಾಮ ಪಂಚಾಯತ್ ಸದಸ್ಯ ಮೋಹನ್ ಆಚಾರ್ಯ, ಪ್ರಮುಖರಾದ ಗೋಪಾಲ್ ಶೆಟ್ಟಿ, ಚಂದ್ರಶೇಖರ ಶೆಟ್ಟಿ ಕುತ್ರಿಮಾರ್, ಶಾಂತಿಕ್ ಜೈನ್, ಸತೀಶ್ ಕಾರಿಂಜ, ಸಂತೋಷ್, ವಿನಯ್ ಮ್ಯಾನೇಜರ್, ಹಾಗೂ ಅರ್ಚಕ ವೃಂದದವರು ಉಪಸ್ಥಿತರಿದ್ದರು.

ಸಿಡಿಲಿನಿಂದ ಹಾನಿಯಾಗಿರುವ ದೇವರ ಗರ್ಭಗುಡಿಯ ಪ್ರಾಕಾರವನ್ನು ಶೀಘ್ರವಾಗಿ ಸರಿಪಡಿಸುವ ನಿಟ್ಟಿನಲ್ಲಿ ನಷ್ಟದ ವಿವರವನ್ನು ನೀಡಬೇಕು. ಮತ್ತು ತುರ್ತಾಗಿ ಆಗಬೇಕಿರುವ ಕಾರ್ಯಕ್ಕೆ ಕ್ರಮ ಕೈಗೊಳ್ಳಬೇಕು ಎಂದು ತಹಶೀಲ್ದಾರರಿಗೆ ಸೂಚಿಸಿದರು.



ಇಳಿಯೂರು

ಶಾಸಕರು ಇಳಿಯೂರು ಶ್ರೀ ಮಹಾವಿಷ್ಣು ದೇವಸ್ಥಾನಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸ್ಥಳೀಯರೊಂದಿಗೆ ಚರ್ಚಿಸಿದರು.

ದೇವಸ್ಥಾನದ ಗರ್ಭಗುಡಿಯ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮುಂದುವರಿಯಲು ಗ್ರಾಮಸ್ಥರ ಕೂಡುವಿಕೆಯಲ್ಲಿ ಸ್ಥಳದಲ್ಲಿ ಪ್ರಶ್ನಾಚಿಂತನೆ ನಡೆಸುವುದರ ಬಗ್ಗೆ ಚರ್ಚಿಸಿದರು.

ದೇವಸ್ಥಾನದ ಆಡಳಿತ ಸಮಿತಿ ಸಂಚಾಲಕ ಸಂಪತ್ ಕುಮಾರ್ ಶೆಟ್ಟಿ ಮುಂಡ್ರೇಲು ಗುತ್ತು, ಟ್ರಸ್ಟಿಗಳಾದ ಶಿವರಾಮ ಶೆಟ್ಟಿ, ಲಾವಣ್ಯ ಬಲ್ಲಾಳ್, ಶಿವಪ್ಪ ಪೂಜಾರಿ, ಜಯನಾಯ್ಕ್, ಲಿಂಗಪ್ಪ ಪೂಜಾರಿ, ಪ್ರಮುಖರಾದ ಸುದರ್ಶನ ಬಜ,ಪ್ರಕಾಶ್ ಅಂಚನ್, ಶಾಂತಪ್ಪ ಪೂಜಾರಿ, ಧನಂಜಯ ಶೆಟ್ಟಿ ಸರಪಾಡಿ, ಶಶಿಕಾಂತ್ ಶೆಟ್ಟಿ ಆರ್ಮುಡಿ, ರಾಮಕೃಷ್ಣ ಮಯ್ಯ, ಸುರೇಖಾ ಹೆಗ್ಡೆ, ಶಿವಪ್ಪ ಪೂಜಾರಿ ಜೇಡರಬೆಟ್ಟು, ಜಯರಾಮ ಅಡಪ ದೇಚ್ಚಾರು, ತಿಲಕ್ ಬಂಗೇರ, ಮೋನಪ್ಪ ಪೂಜಾರಿ, ಸಂಜೀವ ಪೂಜಾರಿ, ವಸಂತ ದೇಚ್ಚಾರು, ಆನಂದ ಪೂಜಾರಿ ಅಲ್ಲಂಗಾರು, ಸಂತೋಷ್ ಕುಲಾಲ್, ಸುಚಿತ್ ಕಡಮಾಜೆ ಮತ್ತಿತರರು ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಕರೆಗೆ ಓಗೊಟ್ಟ ಕಾಂಗ್ರೆಸ್ ಶಾಸಕ

ಪೊಲೀಸ್ ಪೈಲಟ್ ವಾಹನಗಳ ಬಳಕೆ ಕಡಿಮೆ ಮಾಡಲು ಪೊನ್ನಣ್ಣ ನಿರ್ಧಾರ

ಮಡಿಕೇರಿ: ಇಂಧನ ಬಳಕೆ ಮತ್ತು ವಾಯು ಮಾಲಿನ್ಯವನ್ನು ಕಡಿಮೆ ಮಾಡುವ ಪ್ರಯತ್ನಗಳ ಭಾಗವಾಗಿ ವೀರಾಜಪೇಟೆ ಶಾಸಕ ಮತ್ತು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರು ತಮಗೆ ಒದಗಿಸಲಾಗಿರುವ ಪೊಲೀಸ್ ಪೈಲಟ್ ವಾಹನಗಳ ಬಳಕೆಯನ್ನು ಕಡಿಮೆ ಮಾಡಲು ನಿರ್ಧರಿಸಿದ್ದಾರೆ.

ಕ್ಷೇತ್ರದೊಳಗೆ ಪ್ರಯಾಣಿಸುವಾಗ ಸಾಮಾನ್ಯವಾಗಿ ಒದಗಿಸಲಾಗುವ ಪೊಲೀಸ್ ಬೆಂಗಾವಲು ಪಡೆಯನ್ನು ಹಿಂತೆಗೆದುಕೊಳ್ಳುವಂತೆ ಪೊನ್ನಣ್ಣ ಅವರು ಕೊಡಗು ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರಿಗೆ ಟಿಪ್ಪಣಿ ಕಳುಹಿಸಿದ್ದಾರೆ. ದೇಶದಲ್ಲಿ ಇಂಧನ ಲಭ್ಯತೆಯ ಸುತ್ತಲಿನ ಅನಿಶ್ಚಿತತೆಯ ನಡುವೆ ಇಂಧನವನ್ನು ಸಂರಕ್ಷಿಸುವ ಅಗತ್ಯವನ್ನು ಮತ್ತು ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿರುವ ಕ್ರಮಗಳನ್ನು ಬೆಂಬಲಿಸುವಂತೆ ಅವರು ಪತ್ರದಲ್ಲಿ ಉಲ್ಲೇಖಿಸಿರುವುದಾಗಿ ಹೇಳಲಾಗಿದೆ.

ಇಂಧನ ಬಳಕೆಯನ್ನು ಕಡಿಮೆ ಮಾಡಲು ಮತ್ತು ವಿದೇಶಿ ವಿನಿಮಯವನ್ನು ಉಳಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ಮಾಡಿದ ಮನವಿಗೆ ಸ್ಪಂದಿಸಿ ಪೊನ್ನಣ್ಣ ಈ ಕ್ರಮ ಕೈಗೊಂಡಿದ್ದಾರೆ.

ಪ್ರಧಾನ ಮಂತ್ರಿಯವರ ಮನವಿಯ ನಂತರ, ದೇಶಾದ್ಯಂತ ಹಲವಾರು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸಚಿವರು ಪೈಲಟ್ ವಾಹನಗಳ ಬಳಕೆಯನ್ನು ಕಡಿಮೆ ಮಾಡಿದ್ದಾರೆ ಮತ್ತು ಅಧಿಕೃತ ಬೆಂಗಾವಲುಗಳನ್ನು ಕಡಿಮೆ ಮಾಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಸ್ವಂತ ತಾಯಿಯನ್ನೇ ನೆರೆಮನೆಯ ಮಹಿಳೆ ಎಂದು ಸುಳ್ಳು ಹೇಳಿದ ಬುರ್ಖಾಧಾರಿ ಮಹಿಳೆ: ನೀತಾ ಪ್ರಭು

ಉಡುಪಿ: ಜಿಲ್ಲಾ ಉಸ್ತುವಾರಿ ಸಚಿವರ ಮನೆಗೆ ಹಿಂದು ಮಹಿಳೆಯೊಬ್ಬರನ್ನು ಕರೆದುಕೊಂಡು ಬಂದ ಇಬ್ಬರು ಹಿಜಾಬ್ ಬುರ್ಖಾಧಾರಿ ಮಹಿಳೆಯರು ತಾವು ಹಿಂದೂ ಮಹಿಳೆಯ ನೆರೆಮನೆಯವರು, ಬಡ ಮಹಿಳೆಗೆ ಮನೆ ನಿವೇಶನ ನೀಡುವಂತೆ ಮನವಿ ಮಾಡಿದ್ದು, ಘಟನೆಯ ಸತ್ಯಾಸತ್ಯತೆ ತಿಳಿಯದೆ ಉಡುಪಿ ಬಿಜೆಪಿಗರಿಗೆ ಸಚಿವೆ ಸೌಹಾರ್ದತೆಯ ಬಗ್ಗೆ ಬಿಟ್ಟಿ ಉಪದೇಶ ನೀಡಿದ್ದಾರೆ. ಈ ಘಟನೆಯಲ್ಲಿ ಉಸ್ತುವಾರಿ ಸಚಿವರನ್ನು ಭೇಟಿಯಾಗಲು ಬಂದ ಗಿರಿಜಾ ಶೆಟ್ಟಿಗಾರ್ ಅವರನ್ನು ಇಸ್ಲಾಮಿಗೆ ಮತಾಂತರಗೊಂಡಿರುವ ಅವರ ಪುತ್ರಿಯೇ ಕರೆತಂದಿದ್ದು, ಸಚಿವರ ಮುಂದೆ ಮಾತ್ರ ತಾನು ಹಿಂದು ಮಹಿಳೆಯ ನೆರೆಮನೆಯಾಕೆ ಎಂದು ಸುಳ್ಳು ಹೇಳಿ ಉಸ್ತುವಾರಿ ಸಚಿವರನ್ನೇ ಯಾಮಾರಿಸಿದ್ದಾರೆ ಎಂದು ಉಡುಪಿ ನಗರ ಬಿಜೆಪಿ ಮಹಿಳಾ ಮೋರ್ಚದ ಅಧ್ಯಕ್ಷರಾದ ನೀತಾ ಪ್ರಭು ಹೇಳಿದ್ದಾರೆ.

ಈವರೆಗೆ ಹಿಜಾಬ್ ಬುರ್ಖಾಧರಿಸಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ವ್ಯವಸ್ಥೆಗೆ ಧಕ್ಕೆ ತರಲು ಮುಂದಾಗಿದ್ದ ಮಹಿಳೆಯರು ಇದೀಗ ಜಿಲ್ಲಾ ಉಸ್ತುವಾರಿ ಸಚಿವರನ್ನೇ ಯಾಮಾರಿಸಿದ್ದಾರೆ. ಸ್ವಂತ ತಾಯಿಯನ್ನೇ ಪ್ರಚಾರಕ್ಕಾಗಿ ನೆರೆಮನೆಯ ಮಹಿಳೆ ಎಂದು ಹೇಳುವ ವ್ಯಕ್ತಿಗಳ ಮನಸ್ಥಿತಿಯನ್ನು ಸಮಾಜ ಗಂಭೀರವಾಗಿ ಪರಿಗಣಿಸಬೇಕಿದೆ. ಇನ್ನಾದರೂ ಜಿಲ್ಲೆಗೆ ಅತಿಥಿಯಾಗಿ ಆಗಮಿಸಿ, ಜಿಲ್ಲೆಯನ್ನು ಸದಾ ನಿರ್ಲಕ್ಷ್ಯ ಮಾಡುವ ಉಸ್ತುವಾರಿ ಸಚಿವರು ತಮ್ಮ ಬಿಟ್ಟಿ ಪ್ರಚಾರದ ತೆವಲಿಗೆ ಬಿಜೆಪಿ ಪಕ್ಷವನ್ನು ಟೀಕಿಸುವ ಕೆಲಸವನ್ನು ಕೈ ಬಿಡಬೇಕು. ಇಂತಹ ಬೇಜವಾಬ್ದಾರಿ ಹೇಳಿಕೆಗಳು ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಶೋಭೆಯಲ್ಲ ಎಂದರು.

ಉಡುಪಿ ಜಿಲ್ಲೆಯ 5 ಮಂದಿ ಬಿಜೆಪಿ ಶಾಸಕರು ಹಾಗೂ ಸಂಸದರು ತಮ್ಮ ಬಳಿಗೆ ಸಮಸ್ಯೆಗಳಿಗಾಗಿ ಬರುವ ನಾಗರಿಕರೊಂದಿಗೆ ಜಾತಿ ಧರ್ಮದ ಭೇದ ಭಾವ ತೋರಿಲ್ಲ. ಕೇವಲ ರಾಷ್ಟ್ರೀಯತೆಯ ವಿರೋಧಿಗಳು, ಮತೀಯ ಶಕ್ತಿಗಳ ಬಗ್ಗೆ ಎಂದಿಗೂ ರಾಜಿಯಾಗದೇ ಕೆಲಸ ಮಾಡುವ ಬಿಜೆಪಿ ಜನಪ್ರತಿನಿಧಿಗಳ ಬಗ್ಗೆ ಉಡುಪಿಯ ಜನತೆಗೆ ಹೆಮ್ಮೆ ಇದೆ ಎಂದು ನಗರ ಮಹಿಳಾ ಮೋರ್ಚಾದ ಅಧ್ಯಕ್ಷೆ ನೀತಾ ಪ್ರಭು ಹೇಳಿದ್ದಾರೆ.

ಉಡುಪಿ ಜಿಲ್ಲೆಗೆ ಸದಾ ಅತಿಥಿಯಂತೆ ಆಗಮಿಸಿ, 3 ವರ್ಷಗಳಿಂದ ಜಿಲ್ಲೆಯ ಅಭಿವೃದ್ಧಿಗೆ ಎಳ್ಳು ನೀರು ಬಿಟ್ಟಿರುವ ಜಿಲ್ಲಾ ಉಸ್ತುವಾರಿ ಸಚಿವರು ಇಂತಹ ಅವಿವೇಕದ ಮಾತುಗಳನ್ನು ಹೇಳಿರು ವುದು ಅಕ್ಷಮ್ಯ. ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷದ ನಾಯಕರು, ಜನಪ್ರತಿನಿಧಿ ಗಳ ವಿರುದ್ಧ ಬೇಜವಾಬ್ದಾರಿ ಹೇಳಿಕೆ ಮುಂದುವರೆಸಿದರೆ ಮಹಿಳಾ ಮೋರ್ಚಾದ ವತಿಯಿಂದ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಉಗ್ರ ಹೋರಾಟ ನಡೆಸುವುದಾಗಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷರಾದ ಸಂಧ್ಯಾ ರಮೇಶ್ ಹೇಳಿದ್ದಾರೆ.



ವೃದ್ಧ ಮಹಿಳೆಗೆ ನಿವೇಶನ : ಮಾನವೀಯತೆ ಆಧಾರದಲ್ಲಿ ಸ್ಪಂದಿಸಲು ಜಿಲ್ಲಾಧಿಕಾರಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೂಚನೆ

ಉಡುಪಿ: ಮುಸ್ಲಿಂ ಮಹಿಳೆಯರ ನೆರವಿನೊಂದಿಗೆ ಮನೆ ನಿವೇಶನಕ್ಕಾಗಿ ಅರ್ಜಿ ಹಿಡಿದು ಬಂದಿದ್ದ ವೃದ್ಧ ಮಹಿಳೆ ಗಿರಿಜಾ ಶೆಟ್ಟಿಗಾರ್ ಅಹವಾಲು ಆಲಿಸಿದ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ತುರ್ತಾಗಿ ಸ್ಪಂದಿಸುವಂತೆ ಉಡುಪಿ ಜಿಲ್ಲಾಧಿಕಾರಿಗೆ ಪತ್ರ ಬರೆದು ಸೂಚಿಸಿದ್ದಾರೆ. 80 ಬಡಗಬೆಟ್ಟು ಗ್ರಾಮದ ನಿವಾಸಿ ಗಿರಿಜಾ ಶೆಟ್ಟಿಗಾರ್ ಎಂಬ ಮಹಿಳೆ ತನ್ನ ನೆರೆಮನೆಯವರೆನ್ನಲಾದ ಇಬ್ಬರು ಮುಸ್ಲಿಂ ಮಹಿಳೆಯರ ನೆರವಿನೊಂದಿಗೆ ಶನಿವಾರ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿಯಾಗಿ ಸಹಾಯ ಕೇಳಿದ್ದರು. 1990ರಲ್ಲಿ ವಸತಿ ಯೋಜನೆಯಡಿ ಮಂಜೂರಾಗಿದ್ದ 5 ಸೆಂಟ್ಸ್ ಜಾಗದ ಹಕ್ಕುಪತ್ರವಿದ್ದರೂ ಪ್ರಸ್ತುತ ಅರಣ್ಯ ಇಲಾಖೆಯು ಡೀಮ್ಡ್ ಫಾರೆಸ್ಟ್ ಎಂದು ಜಾಗದ ಸ್ವಾಧೀನಕ್ಕೆ ಆಕ್ಷೇಪಿಸುತ್ತಿರುವುದು ಮತ್ತು ಗ್ರಾಮ ಪಂಚಾಯತ್ ಮನೆ ಕಟ್ಟಲು ಪರವಾನಗಿ ನೀಡದಿರುವ ವಿಚಾರದ ಬಗ್ಗೆ ಮಹಿಳೆ ಕಷ್ಟಪಡುತ್ತಿರುವುದನ್ನು ಸಚಿವೆಗೆ ವಿವರಿಸಲಾಗಿದ್ದು, ಆಕೆಯ ಅರ್ಜಿಯನ್ನು ಲಗತ್ತಿಸಿ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ.

ಮಕ್ಕಳನ್ನು ಠಾಣೆಗೆ ಕರೆಯಿಸಿಕೊಂಡ ಶಂಕರನಾರಾಯಣ ಪೊಲೀಸರು!



ಕುಂದಾಪುರ: ತಾಲೂಕಿನ ಶಂಕರನಾರಾಯಣ ಪರಿಸರದ ಶಾಲಾ ಮಕ್ಕಳನ್ನು ಒಗ್ಗೂಡಿಸಿ ಶಂಕರನಾರಾಯಣದ ಜಿ.ಎಸ್. ಆಚಾರ್ಯ ರಂಗಮಂದಿರದಲ್ಲಿ ಬೇಸಿಗೆ ಶಿಬಿರ ನಡೆಯುತ್ತಿದ್ದು ಈ ಶಿಬಿರದ ಎಲ್ಲಾ ವಿದ್ಯಾರ್ಥಿಗಳನ್ನು ಶಂಕರನಾರಾಯಣ ಠಾಣೆಗೆ ಕರೆಸಿ ಅಧಿಕಾರಿಗಳು, ಸಿಬ್ಬಂದಿಗಳು ಮಕ್ಕಳಿಗೆ 'ತೆರೆದ ಮನೆ' ಕಾರ್ಯಕ್ರಮ ನಡೆಸಿ ಅತ್ಯಗತ್ಯ ಇರುವ ಮಾಹಿತಿಯನ್ನು ನೀಡಿದರು.

ಈ ಸಂದರ್ಭ ಠಾಣೆಯ ನಿಸ್ತಂತು (ವಯರ್‌ಲೆಸ್) ಕುರಿತು ಸೂಕ್ತ ತಿಳುವಳಿಕೆ ಹಾಗೂ ರಿವಾಲ್ವರ್ ಮತ್ತು ಬಂದೂಕುಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಯಿತು. ಮಕ್ಕಳ ಸಹಾಯವಾಣಿ 1098 ಬಗ್ಗೆ ಹಾಗೂ 112 ಅದರ ಉಪಯೋಗದ ಬಗ್ಗೆ, ಬಾಲ ಅಪರಾಧ ಪೋಕ್ಸೋ ಕಾಯ್ದೆ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಲಾಯಿತು. ಠಾಣೆಯ ಬಂದಿಖಾನೆಯನ್ನು ಪೊಲೀಸ್ ಉಪನಿರೀಕ್ಷಕರ ಕೊಠಡಿ ಠಾಣಾ ಬರಹಗಾರರ ಕೊಠಡಿ ಪರಿಚಯಿಸಲಾಯಿತು.

ಕುಂದಾಪುರ ಗ್ರಾಮಾಂತರ ವೃತ್ತ ನಿರೀಕ್ಷಕ ಸಂತೋಷ್ ಕಾಯ್ಕಿಣಿ, ಶಂಕರನಾರಾಯಣ ಪೊಲೀಸ್ ಠಾಣಾ ಕಾನೂನು ಮತ್ತು ಸುವ್ಯವಸ್ಥೆ ಪಿಎಸ್‌ಐ ಐ.ಆರ್. ಗಡ್ಡೇಕರ್, ತನಿಖಾ ವಿಭಾಗದ ಪಿಎಸ್‌ಐ ಅಕ್ಷಯ ಕುಮಾರಿ ಮತ್ತು ಎಎಸ್‌ಐ, ಸಿಬ್ಬಂದಿಗಳು ಇದ್ದರು.

ಮೂಡುಬಿದಿರೆ ಆಳ್ವಾಸ್‌ನ ಕೃಷಿ ಸಿರಿ ಸಭಾಂಗಣದಲ್ಲಿ ನಾದ ಧ್ಯಾನ ಚಕ್ರ | ಸಾವಿರಾರು ಮಂದಿ ಭಾಗಿ

ಮನಸ್ಸು, ದೇಹದ ಪ್ರಸನ್ನತೆಗೆ ಧ್ಯಾನ ಅಗತ್ಯ: ಡಾ.ಎಂ. ಮೋಹನ ಆಳ್ವ

ಮೂಡುಬಿದಿರೆ: ಪಿರಮಿಡ್ ಸ್ಪಿರಿಚುವಲ್ ಸೊಸೈಟೀಸ್ ಮೂವ್‌ಮೆಂಟ್ (ಪಿಎಸ್‌ಎಸ್‌ಎಂ), ಬೆಂಗಳೂರು ಪಿರಮಿಡ್ ವಾಲ್ಡ್ ಫೌಂಡೇಶನ್ ಹಾಗೂ ಆಳ್ವಾಸ್ ಎಜುಕೇಶನ್ ಫೌಂಡೇಶನ್ ಸಹಯೋಗದಲ್ಲಿ ಭಾನುವಾರ ನಾದ ಧ್ಯಾನ ಚಕ್ರ ಕಾರ್ಯಕ್ರಮವು ಮೂಡುಬಿದಿರೆಯ ಆಳ್ವಾಸ್ ಕ್ಯಾಂಪಸ್‌ನ ಕೃಷಿ ಸಿರಿ ಸಭಾಂಗಣದಲ್ಲಿ ನಡೆಯಿತು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ ಮೋಹನ ಆಳ್ವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಏಕಾಗ್ರತೆ ಇದ್ದರೆ ಮತ್ತು ಸಂಪೂರ್ಣ ಮನಸ್ಸು ನಮ್ಮ ನಿಯಂತ್ರಣದಲ್ಲಿದ್ದರೆ ಎಲ್ಲವನ್ನೂ ಸಾಧಿಸಲು ಸಾಧ್ಯವಿದೆ ಎಂದರು. ಮನಸ್ಸು ಮತ್ತು ದೇಹ ಪ್ರಸನ್ನವಾಗಲು ಇಂತಹ ಧ್ಯಾನ ಪ್ರಸ್ತುತ ದಿನಗಳಲ್ಲಿ ಅತ್ಯಂತ ಅಗತ್ಯವಾಗಿದೆ. ರೋಗ ಬಂದ ಮೇಲೆ ಆಲೋಚಿಸುವುದಕ್ಕಿಂತ, ರೋಗ ಬಾರದಂತೆ ನಿಯಂತ್ರಿಸಲು ಧ್ಯಾನದ ಮೂಲಕ ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಬೇಕು. ವ್ಯಕ್ತಿತ್ವ ವಿಕಸನ ಬಹಳ ಮುಖ್ಯವಾಗಿದ್ದು, ನಾದಧ್ಯಾನದಿಂದ ಅದು ಸಾಧ್ಯವಾಗುತ್ತದೆ. ಆರೋಗ್ಯ ವೃದ್ಧಿ ಹಾಗೂ ಮುಖ ಮತ್ತು ಕಣ್ಣುಗಳಲ್ಲಿ ಪ್ರಸನ್ನತೆ ಮೂಡಲು ಇಂತಹ ಧ್ಯಾನಗಳು ಸಹಕಾರಿಯಾಗಲಿವೆ. ಡಾ. ಅಯ್ಯಪ್ಪ ಪಿಂಡಿ ನೇತೃತ್ವದಲ್ಲಿ ಸಮಾನಮನಸ್ಕರು ಈ ಕಾರ್ಯಕ್ರಮಕ್ಕೆ ಆಗಮಿಸಿರುವುದರಿಂದ ಈ ಆವರಣದಲ್ಲಿ ಹೊಸ ಶಕ್ತಿ ತುಂಬಿದೆ ಎಂದು ಅಭಿಪ್ರಾಯಪಟ್ಟರು.

ಅಂತಾರಾಷ್ಟ್ರೀಯ ಧ್ಯಾನ ತರಬೇತುದಾರ ಡಾ. ಅಯ್ಯಪ್ಪ ಪಿಂಡಿ ಧ್ಯಾನದ ಮಹತ್ವ, ಮಾನಸಿಕ ನೆಮ್ಮದಿ ಮತ್ತು ಜೀವನ ಶೈಲಿಯ ಮೇಲಿನ ಪರಿಣಾಮಗಳ ಕುರಿತು ಮಾತನಾಡಿದರು. ಕಳೆದ 25 ವರ್ಷಗಳಿಂದ ಧ್ಯಾನದಿಂದ ಮನಶಾಂತಿ ಹಾಗೂ ಹೊಸ ಚೈತನ್ಯ ದೊರೆತಿದೆ ಎಂದು ಅನುಭವ ಹಂಚಿಕೊಂಡರು.

ಭಾರತಿ ಶೆಟ್ಟಿ, ಅನಿತಾ ಪಿಂಡಿ, ಡಾ.ವಿನಾಯಕ ಹೆಗ್ಡೆ, ರೇಖಾ ರವಿರಾಜ್ ಶೆಣೈ, ರೂಪಾ ಶಶಿಕಾಂತ್ ನಾಯಕ್, ಸಂಸ್ಥೆಯ ಕಾರ್ಯಕರ್ತರು ಮತ್ತು ಧ್ಯಾನ ಆಸಕ್ತರು ಉಪಸ್ಥಿತರಿದ್ದರು. ಮಮತಾ ಡಿ.ಜಿ. ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮಕ್ಕೆ ವಿವಿಧ ಭಾಗಗಳಿಂದ ಸಾವಿರಾರು ಮಂದಿ ಆಗಮಿಸಿ ಧ್ಯಾನ ಹಾಗೂ ಆಧ್ಯಾತ್ಮಿಕ ಚಟುವಟಿಕೆಯಲ್ಲಿ ಭಾಗವಹಿಸಿದರು. ಉದ್ಘಾಟನಾ ಸಮಾರಂಭದ ಬಳಿಕ ನಾದ ಧ್ಯಾನ, ಆನಾಪಾನಸತಿ ಧ್ಯಾನ, ಆಧ್ಯಾತ್ಮಿಕ ಉಪನ್ಯಾಸಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.



ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಲಕರಣೆ ವಿತರಣೆ

ಮೂಲ್ಕಿ: ಶ್ರೀ ನಾರಾಯಣ ಗುರುಗಳ ತತ್ವದಂತೆ ಹಲವು ದಶಕಗಳಿಂದ ಮೂಲ್ಕಿ ಸಂಘವು ಶಿಕ್ಷಣ ಸೌಲಭ್ಯ ಹಾಗೂ ಆರ್ಥಿಕ ಸಹಕಾರ ವಿತರಿಸುತ್ತಿದ್ದು ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯುವ ಮೂಲಕ ಸಮಾಜಕ್ಕೆ ಕೀರ್ತಿ ತರಬೇಕು ಎಂದು ಮೂಲ್ಕಿ ಕ್ಷೀರಸಾಗರ ವಿವಿದ್ದೋದೇಶ ಸಹಕಾರ ಸಂಘದ ಅಧ್ಯಕ್ಷ ಗೋಪೀನಾಥ ಪಡಂಗ ಹೇಳಿದರು.

ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಲಕರಣೆ ವಿತರಣಾ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೂಲ್ಕಿ ಸಂಘದ ಅಧ್ಯಕ್ಷ ವಾಮನ ಕೋಟ್ಯಾನ್ ನಡಿಕುದ್ರು, ಮಾತನಾಡಿ, ಸಂಘವು ಲಕ್ಷಾಂತರ ರೂ ವೆಚ್ಚದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸಹಕಾರಿ ಯೋಜನೆಗಳನ್ನು ನೀಡುತ್ತಿದ್ದು ವಿದ್ಯಾರ್ಥಿಗಳಿ ಉನ್ನತ ಶಿಕ್ಷಣ ಪಡೆದು ಉದ್ಯೋಗ ಗಳಿಸಿದ ಬಳಿಕ ತಾವು ವಿದ್ಯಾರ್ಥಿಗಳ ಶೈಕ್ಷಣಿಕ ಯೋಜನೆಗೆ ಸಹಕಾರ ನೀಡಬೇಕು ಎಂದರು.

ಈ ಸಂದರ್ಭ ಮೂರನೇ ತರಗತಿಯಿಂದ ಹತ್ತನೇ ತರಗತಿಯ ಸುಮಾರು190 ವಿದ್ಯಾರ್ಥಿಗಳಿಗೆ ರೂ 80 ಸಾವಿರ ವೆಚ್ಚದಲ್ಲಿ ಶೈಕ್ಷಣಿಕ ಸಲಕರಣೆ ನೀಡಲಾಯಿತು.

ಈ ಸಂದರ್ಭ ಆಡಳಿತ ಸಮಿತಿ ಸದಸ್ಯರು, ಪೂರ್ವಾಧ್ಯಕ್ಷರುಗಳು, ಕಟ್ಟಡ ಸಮಿತಿ, ಹಾಗೂ ವಿದ್ಯಾರ್ಥಿಗಳ ಪೋಷಕರು ಹಾಜರಿದ್ದರು.

ವಾಮನ ಕೋಟ್ಯಾನ್ ಸ್ವಾಗತಿಸಿದರು, ನರೇಂದ್ರ ಕೆರೆಕಾಡು ನಿರೂಪಿಸಿದರು, ಜಯ ಕುಮಾರ್ ಕುಬೆವೀರು ವಂದಿಸಿದರು.



ಕಿರುಸುದ್ದಿ

ಕಾರ್ಕಳ ಯಕ್ಷ ರಂಗಾಯಣ ನಿರ್ದೇಶಕರ ಸ್ಪಷ್ಟೀಕರಣ

ಕಾರ್ಕಳ: ಜಿ.ಪಂ. ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗಿದೆಯೆಂದು ಪ್ರಸ್ತಾಪಿಸಲಾಗಿತ್ತು. ಆದರೆ ಯಕ್ಷ ರಂಗಾಯಣವು ಜಿಲ್ಲಾ ಮಟ್ಟದ ಎಲ್ಲಾ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರವನ್ನು ತಪ್ಪದೆ ಪಾಲಿಸಿದೆ. ಯಕ್ಷ ರಂಗಾಯಣದ ರೆಪರ್ಟರಿ ನಾಟಕಕ್ಕೆ ಸಂಬಂಧಿಸಿದಂತೆ ಕರಪತ್ರವನ್ನು ಪ್ರಕಟಿಸಲಾಗಿದ್ದು, ಸದರಿ ಕರಪತ್ರದಲ್ಲಿ ಇಲಾಖಾ ಸಚಿವರ ಸಂದೇಶವನ್ನು ಮತ್ತು ಪ್ರದರ್ಶನಕ್ಕೆ ಸಿದ್ಧಗೊಂಡ ನಾಟಕದ ವಿವರ ಹಾಗೂ ಕಲಾವಿದರ ಮಾಹಿತಿಯನ್ನು ನೀಡಲಾಗಿದೆ. ಈ ಹಿಂದೆ 2023 ರಲ್ಲಿ ಯಕ್ಷ ರಂಗಾಯಣದಲ್ಲಿ ಸಿದ್ಧಗೊಂಡ ಮೊದಲ ನಾಟಕ 'ಅಮರಕ್ರಾಂತಿ'ಯ ಬಗ್ಗೆ ಕರಪತ್ರ ಸಿದ್ಧಪಡಿಸಲಾಗಿತ್ತು. ಅದರಲ್ಲಿ ಅಂದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ವಿ. ಸುನಿಲ್ ಕುಮಾರ್‌ರವರ ಸಂದೇಶದೊಂದಿಗೆ ಪ್ರಕಟಿಸಲಾಗಿತ್ತು. ಅದೇ ಪರಂಪರೆ ಯಕ್ಷ ರಂಗಾಯಣದಲ್ಲಿ ಮುಂದುವರಿದಿದೆ ಎಂದು ಕಾರ್ಕಳ ಯಕ್ಷ ರಂಗಾಯಣದ ನಿರ್ದೇಶಕ ಬಿ.ಆರ್. ವೆಂಕಟರಮಣ ಐತಾಳ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪ್ರಾಪ್ತ ಬಾಲಕರಿಂದ ವಾಹನ ಚಾಲನೆ : ಮಾಲೀಕರಿಗೆ ದಂಡ

ಬಂಟ್ವಾಳ: ಅಪ್ರಾಪ್ತ ಬಾಲಕರಿಗೆ ದ್ವಿಚಕ್ರ ವಾಹನ ಚಲಾಯಿಸಲು ಅವಕಾಶ ನೀಡಿದ ಎರಡು ಪ್ರತ್ಯೇಕ ಪ್ರಕರಣಗಳು ಬಂಟ್ವಾಳ ಸಂಚಾರಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ವಾಹನಗಳ ಮಾಲೀಕರಿಗೆ ದಂಡವನ್ನು ನ್ಯಾಯಾಲಯ ವಿಧಿಸಿದೆ. ಏಪ್ರಿಲ್ 6ರಂದು ಬಂಟ್ವಾಳ ಸಂಚಾರ ಠಾಣಾ ವ್ಯಾಪ್ತಿಯ ಮೆಲ್ಕಾರ್‌ನಲ್ಲಿ ದ್ವಿಚಕ್ರ ವಾಹನವನ್ನು ಹಾಗೂ ಏ.28ರಂದು ಬಿ.ಸಿ. ರೋಡ್‌ನಲ್ಲಿ ದ್ವಿಚಕ್ರ ವಾಹನವನ್ನು ಅಪ್ರಾಪ್ತ ಬಾಲಕರು ಚಾಲನೆ ಮಾಡಿರುವುದನ್ನು ಬಂಟ್ವಾಳ ಸಂಚಾರ ಠಾಣಾ ಪೊಲೀಸರು ವಾಹನ ತಪಾಸಣೆಯ ವೇಳೆ ಪತ್ತೆಹಚ್ಚಿದ್ದಾರೆ. ಈ ಹಿನ್ನೆಲೆಯಲ್ಲಿ ವಾಹನಗಳ ಮಾಲಿಕರ ವಿರುದ್ಧ ಬಂಟ್ವಾಳ ಸಂಚಾರ ಠಾಣಾ ಪೊಲೀಸರು ಎಸಿಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದರು. ನ್ಯಾಯಾಲಯವು ಎರಡೂ ವಾಹನಗಳ ಮಾಲೀಕರಿಗೆ ತಲಾ ರೂ.25,000 ದಂಡ ವಿಧಿಸಿ ಆದೇಶಿಸಿದೆ.

ನಿಧನ ಸುದ್ದಿ

ದೊಡ್ಡಮಾಣಿ ನಾರಾಯಣ ಭಟ್




ಕಾಸರಗೋಡು: ಕೂಡ್ಲು ರಾಮದಾಸನಗರ ಸಮೀಪದ ಮನ್ನಿಪ್ಪಾಡಿ ಕುಮಾರಕೃಪಾದಲ್ಲಿರುವ ದೊಡ್ಡಮಾಣಿ ನಾರಾಯಣ ಭಟ್ (80) ನಿಧನ ಹೊಂದಿದರು. ಅಸೌಖ್ಯದ ಹಿನ್ನೆಲೆಯಲ್ಲಿ ಕಾಸರಗೋಡಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಅವರು ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಮಧ್ಯಾಹ್ನ ವಿಧಿವಶರಾದರು. ಮೃತರು ಪತ್ನಿ ಚಂದ್ರಾವತಿ, ಪುತ್ರ ಡಿ.ಎನ್.ಮಹೇಶ್, ಸೊಸೆ ದಿವ್ಯಾ ಟೀಚರ್ ಅವರನ್ನು ಅಗಲಿದ್ದಾರೆ.

ಶ್ರೀನಿವಾಸ ಶೆಟ್ಟಿಗಾರ್




ಕಿನ್ನಿಗೋಳಿ : ಇಲ್ಲಿನ ಬಟ್ರಕೋಡಿಯ ಮುರತ್ತಮೇಲ್ ಮನೆತನದ ಹಿರಿಯರಾದ ಶ್ರೀನಿವಾಸ ಶೆಟ್ಟಿಗಾರ್ (85) ಸೋಮವಾರ ನಿಧನರಾದರು. ಮೃತರು ತಾಳಿಪಾಡಿ ನೇಕಾರರ ಸಂಘದಲ್ಲಿ ಉದ್ಯೋಗಿಯಾಗಿ ನಿವೃತ್ತರಾಗಿದ್ದರು. ಇಬ್ಬರು ಗಂಡು ಮಕ್ಕಳು ಹಾಗೂ ಓರ್ವ ಮಗಳನ್ನು ಅಗಲಿದ್ದಾರೆ.

ಆನಂದ ಪೂಜಾರಿ



ಉಡುಪಿ: ಬ್ರಹ್ಮಗಿರಿ ಆದರ್ಶ ಗ್ರಾಹಕರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರು, ಬನ್ನಂಜೆ ಬಿಲ್ಲವ ಸೇವಾ ಸಂಘದ ಮಾಜಿ ಅಧ್ಯಕ್ಷ ಕಿದಿಯೂರು ಆನಂದ ಪೂಜಾರಿ (64) ಅಲ್ಪಕಾಲದ ಅಸೌಖ್ಯದಿಂದ ಮೇ 17 ರಂದು ನಿಧನರಾದರು. ಕಲಾಪ್ರೇಮಿಯಾಗಿದ್ದ ಇವರು ಯಕ್ಷಗಾನ ಕಲಾರಂಗದ ಆಜೀವ ಸದಸ್ಯರಾಗಿದ್ದರು. ಪತ್ನಿ, ಮೂವರು ಪುತ್ರರು ಹಾಗೂ ಬಂಧುಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಸಂಘದ ಅಧ್ಯಕ್ಷ ಎಂ. ಗಂಗಾಧರ ರಾವ್ ಕಾರ್ಯದರ್ಶಿ ಮುರಲಿ ಕಡೆಕಾರ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಸುಂದರ ಬೆಳ್ಳಪ್ಪಾಡ



ಕುಂಬಳೆ: ಆರಿಕ್ಕಾಡಿ ಶ್ರೀ ಪಾಡಾಂಗರೆ ಭಗವತೀ ಕ್ಷೇತ್ರದ ಶ್ರೀ ಮಲಯಮ್ ಚಾಮುಂಡಿ ದೈವದ ದರ್ಶನ ಪಾತ್ರಿ, ಆರಿಕ್ಕಾಡಿ ನಿವಾಸಿ ಸುಂದರ ಬೆಳ್ಳಪ್ಪಾಡ (79) ಅಲ್ಪಕಾಲದ ಅಸೌಖ್ಯದಿಂದ ಶನಿವಾರ ಸಂಜೆ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಶ್ರೀ ಕ್ಷೇತ್ರದಲ್ಲಿ ದೈವದ ಪಾತ್ರಿಯಾಗಿ ಸುಮಾರು ನಾಲ್ಕು ದಶಕಗಳಿಂದಲೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ರುಕ್ಮಿಣಿ, ಮಕ್ಕಳಾದ ಶಿವಾನಂದ, ರವಿಚಂದ್ರ, ಚಂದ್ರಕಾಂತ ಅವರನ್ನು ಅಗಲಿದ್ದಾರೆ.



ಕಾರ್ಕಳ-ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿಯ ಬನ್ನಡ್ಕದಲ್ಲಿ ಕಲ್ಲು ಸಾಗಿಸುತ್ತಿದ್ದ ಟಿಪ್ಪರ್ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾದ ಘಟನೆ ಸೋಮವಾರ ನಡೆದಿದೆ. ಅಪಘಾತದ ಪರಿಣಾಮ ಲಾರಿಯಲ್ಲಿದ್ದ ಕಲ್ಲುಗಳು ರಸ್ತೆಯುದ್ದಕ್ಕೂ ಹರಡಿ ಕೊಂಡು ಕೆಲಕಾಲ ಸಂಚಾರಕ್ಕೆ ಅಡಚಣೆ ಉಂಟಾಯಿತು. ಶಾಸಕ ಉಮಾನಾಥ ಕೋಟ್ಯಾನ್ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ತೋಕೂರು ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ 36ನೇ ಗ್ರಾಮೀಣ ಮಟ್ಟದ ಕ್ರಿಕೆಟ್ ಪಂದ್ಯಾಟ

ಮುಲ್ಕಿ: ತೋಕೂರು ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ತೋಕೂರು ದಿ. ಬಾಬು ದೇವಾಡಿಗರ ಸ್ಮರಣಾರ್ಥ 36 ನೇ ವರ್ಷದ ಗ್ರಾಮೀಣ ಮಟ್ಟದ ಕ್ರಿಕೆಟ್ ಪಂದ್ಯಾಟ ತೋಕೂರು ಹಿಂದೂಸ್ತಾನಿ ಶಾಲಾ ಮೈದಾನದಲ್ಲಿ ಭಾನುವಾರ ನಡೆಯಿತು.

ಕ್ರಿಕೆಟ್ ಪಂದ್ಯಾಟವನ್ನು ಪಾವಂಜೆ ದೇವಾಡಿಗ ಸಮಾಜ ಸೇವಾ ಟ್ರಸ್ಟ್‌ನ ಅಧ್ಯಕ್ಷ ರಮೇಶ್ ದೇವಾಡಿಗ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯ ಪುರುಷೋತ್ತಮ ಕೋಟ್ಯಾನ್ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಮನೋಹರ ಶೆಟ್ಟಿ ಬೊಳ್ಳಾರ ಗುತ್ತು ಸೂರಿಂಜೆ, ಪಡುಪಣಂಬೂರು ಮತ್ತು ಹಳೆಯಂಗಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವಿನೋದ್ ಕುಮಾರ್ ಸಸಿಹಿತ್ಲು,, ಸ್ಪೋರ್ಟ್ಸ್ ಕ್ಲಬ್ ಸದಸ್ಯರಾದ ನಾಗೇಶ್ ಶೆಟ್ಟಿಗಾರ್ ಮತ್ತು ಮನೋಜ್ ಕುಮಾರ್, ಪಡುಪಣಂಬೂರು ಗ್ರಾ ಪಂ ನ ಮಾಜೀ ಸದಸ್ಯರುಗಳಾದ ಮೋಹನ್ ದಾಸ್, ಸಂತೋಷ್ ಕುಮಾರ್ ಪಡುಪಣಂಬೂರು ಸಹಕಾರಿ ವ್ಯವಸಾಯಿಕ ಬ್ಯಾಂಕ್ ನ ನಿರ್ದೇಶಕ ಧರ್ಮಾನಂದ ಶೆಟ್ಟಿಗಾರ್, ಕ್ಲಬ್ ನ ಗೌರವಾಧ್ಯಕ್ಷ ಯೋಗೀಶ್ ಕೋಟ್ಯಾನ್, ಅಧ್ಯಕ್ಷ ಸುರೇಶ್ ಶೆಟ್ಟಿ ಮಹಿಳಾ ಕಾರ್ಯಾಧ್ಯಕ್ಷೆ ಸುರೇಖಾ ಕಲ್ಲಾಪು, ಮಹಿಳಾ ಜೊತೆ ಕಾರ್ಯದರ್ಶಿ ಶೈಲಾ ಶೆಟ್ಟಿಗಾರ್, ಕ್ರಿಕೆಟ್ ತಂಡದ ನಾಯಕ ನೀರಜ್ ಕೊಡಿಯಾಲ್ ಉಪಸ್ಥಿತರಿದ್ದರು. ಕ್ಲಬ್‌ನ ಅಧ್ಯಕ್ಷ ಸುರೇಶ್ ಶೆಟ್ಟಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಸಂತೋಷ್ ದೇವಾಡಿಗ ವಂದಿಸಿದರು, ಕ್ರೀಡಾ ಕಾರ್ಯದರ್ಶಿ ಗೌತಮ್ ಬೆಲ್ಚಡ್, ಉಪನಾಯಕ ಸಚಿನ್ ಅಚಾರ್ಯ, ಸದಸ್ಯ ಅರ್ಫಾಜ್ ,ಸುರೇಶ್ ಲೈಟ್ ಹೌಸ್ ಪ್ರವೀಣ್ ಪಾವಂಜೆ ,ರಾಜೇಶ್, ಸಾಹಿಲ್,ಸಹಕರಿಸಿದರು. ಕ್ಲಬ್ ಗೌರವಾಧ್ಯಕ್ಷ ಪ್ರಶಾಂತ್ ಕುಮಾರ್ ಬೇಕಲ್ ಕಾರ್ಯಕ್ರಮ ನಿರೂಪಿಸಿದರು. ಪಂದ್ಯಾಟದಲ್ಲಿ ಒಟ್ಟು 19 ತಂಡಗಳು ಭಾಗವಹಿಸಿದ್ದವು.ಬಳಿಕ ಕ್ರಿಕೆಟ್ ಪಂದ್ಯಾಟ ನಡೆಯಿತು.

ಎಸ್ಸೆಸೆಲ್ಸಿ ಸಾಧಕ ವಿದ್ಯಾರ್ಥಿಗಳು, ಶಾಲೆಗಳಿಗೆ ಸನ್ಮಾನ ಸಮಾರಂಭ

ದೇಶದಲ್ಲೇ ಖ್ಯಾತಿಗಳಿಸಿದೆ ದ.ಕ





ಮಂಗಳೂರು: ಗುಣಮಟ್ಟದ ಶಿಕ್ಷಣ ವ್ಯವಸ್ಥೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯು ದೇಶದಲ್ಲಿಯೇ ಉನ್ನತ ಸ್ಥಾನಕ್ಕೇರಿದೆ ಎಂದು ಜಿಲ್ಲಾಧಿಕಾರಿ ದರ್ಶನ್ ಹೆಚ್. ವಿ. ತಿಳಿಸಿದ್ದಾರೆ.

ಅವರು ಸೋಮವಾರ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಈ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಸ್ಥಾನ ಪಡೆದ ವಿದ್ಯಾರ್ಥಿಗಳ ಹಾಗೂ ಉತ್ತಮ ಫಲಿತಾಂಶ ಪಡೆದ ಶಾಲೆಗಳಿಗೆ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಜಿಲ್ಲೆಯು ಮುಂಚೂಣಿಯಲ್ಲಿದೆ. ಅಂಕ ಗಳಿಕೆಯ ಶಿಕ್ಷಣಕ್ಕಿಂತಲೂ ಗುಣಮಟ್ಟದ ಶಿಕ್ಷಣಕ್ಕೆ ಜಿಲ್ಲೆಯು ಖ್ಯಾತಿ ಪಡೆದಿದೆ. ಇದರಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು, ಹೆತ್ತವರು, ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಪಾತ್ರವೂ ಅಪಾರವಾಗಿದೆ ಎಂದು ಅವರು ತಿಳಿಸಿದರು.

ಕೇವಲ ಮಾರ್ಕ್ಸ್ ಪಡೆಯುವುದು ಮಾತ್ರ ಶಿಕ್ಷಣವಲ್ಲ, ಮಕ್ಕಳ ಸರ್ವತೋಮುಖ ಬೆಳವಣಿಗೆಯು ಪ್ರಮುಖವಾಗಿದೆ. ಪರಿಪೂರ್ಣವಾದ ಶಿಕ್ಷಣವನ್ನು ನೀಡಲು ಪ್ರತಿಯೊಬ್ಬರು ಪ್ರಯತ್ನಿಸಬೇಕು ಎಂದು ಅವರು ಹೇಳಿದರು.

ಸನ್ಮಾನ

ಸಮಾರಂಭದಲ್ಲಿ ಈ ವರ್ಷದ ಎಸೆಸೆಲ್ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಅಂಕ ಪಡೆದ ಸರ್ಕಾರಿ ಹಾಗೂ ಅನುದಾನಿತ ಶಾಲೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಅದೇ ರೀತಿ ಶೇಕಡಾ 100 ರಷ್ಟು ಫಲಿತಾಂಶ ಪಡೆದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮುಖ್ಯೋಪಾಧ್ಯಾಯರನ್ನು ಗೌರವಿಸಲಾಯಿತು.

ಈ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲಿ ಮೊದಲ ಸ್ಥಾನಕ್ಕೇರಿದೆ. ಮುಂದಿನ ವರ್ಷವೂ ಈ ಸ್ಥಾನವನ್ನು ಉಳಿಸಿಕೊಳ್ಳುವುದು ದೊಡ್ಡ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ, ಶಿಕ್ಷಕರು, ಪಾಲಕರು ಮತ್ತು ವಿದ್ಯಾರ್ಥಿಗಳು ಪ್ರಯತ್ನಿಸಬೇಕು ಎಂದು ಅವರು ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಬಾರಿ ಮಾತನಾಡಿ, ಈ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಜಿಲ್ಲೆಯು ಫಲಿತಾಂಶದಲ್ಲಿ ಉನ್ನತ ಸ್ಥಾನಕ್ಕೇರಿರುವುದು ಮಾತ್ರವಲ್ಲದೆ ಅನುತ್ತೀರ್ಣರಾಗುವವರ ಪ್ರಮಾಣವೂ ಕಡಿಮೆಯಾಗಿದೆ. ಇದೊಂದು ಟೀಂ ವರ್ಕ್ ಆಗಿದ್ದು, ಇದರಲ್ಲಿ ಪಾಲ್ಗೊಂಡವರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಶಶಿಧರ್ ಮಾತನಾಡಿ, ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 27207 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 26772 ಉತ್ತೀರ್ಣ ಹಾಗೂ 435 ಅನುತ್ತೀರ್ಣರಾಗಿ ಶೇ.98.40 ಫಲಿತಾಂಶ ಬಂದಿದೆ. 349 ಶಾಲೆಗಳು ಶೇ.100 ಫಲಿತಾಂಶ ಪಡೆದಿದ್ದು, ಈ ಪೈಕಿ 110 ಸರಕಾರಿ, 50 ಅನುದಾನಿತ ಹಾಗೂ 189 ಅನುದಾನ ರಹಿತ ಶಾಲೆಗಳಾಗಿವೆ. 826 ವಿದ್ಯಾರ್ಥಿಗಳು 600 ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. 523 ಶಾಲೆಗಳು ಎ ಗ್ರೇಡ್ ಪಡೆದಿದೆ ಎಂದು ತಿಳಿಸಿದರು. ಮಂಗಳೂರು ಉಪ ವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಉಪಸ್ಥಿತರಿದ್ದರು.

ಬಾರಕೂರಿನ ಶೈಕ್ಷಣಿಕ ಕ್ರಾಂತಿಯ ರೂವಾರಿ, ಉದ್ಯಮಿ

ದೊಡ್ಮನೆ ಸುಧಾಕರ ಶೆಟ್ಟಿ ಇನ್ನಿಲ್ಲ

ಉಡುಪಿ: ಮುಂಬಯಿಯ ಪ್ರಸಿದ್ಧ ಉದ್ಯಮಿ ಹಾಗೂ ಬಾರಕೂರಿನ ಶೈಕ್ಷಣಿಕ ಕ್ರಾಂತಿಯ ರೂವಾರಿ ದೊಡ್ಮನೆ ಸುಧಾಕರ ಶೆಟ್ಟಿ (83) ಅವರು ಅಲ್ಪಕಾಲದ ಅಸೌಖ್ಯದಿಂದಾಗಿ ಸೋಮವಾರ ಮುಂಬಯಿಯಲ್ಲಿ ನಿಧನರಾದರು. ಮುಂಬಯಿಯಲ್ಲಿ 'ವಸುಧ ಕೆಮಿಕಲ್ಸ್' ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದ ಅವರು, ನೂರಾರು ಜನರಿಗೆ ಉದ್ಯೋಗ ಒದಗಿಸಿಕೊಟ್ಟಿದ್ದರು.

ಗ್ರಾಮೀಣ ಶಿಕ್ಷಣಕ್ಕೆ ಕೊಡುಗೆ



ಸ್ವಂತ ಊರಾದ ಬಾರಕೂರಿನ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಸಿಗಬೇಕೆಂಬ ಧ್ಯೇಯದೊಂದಿಗೆ, ಸುಮಾರು 28 ವರ್ಷಗಳ ಹಿಂದೆ ತಮ್ಮ ತಾಯಿಯ ಹೆಸರಿನಲ್ಲಿ 'ಬಾರಕೂರು ಶ್ರೀಮತಿ ರುಕ್ಮಿಣಿ ಶೆಡ್ತಿ ಸ್ಮಾರಕ ನ್ಯಾಷನಲ್ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ಇವರು ನಿರ್ಮಿಸಿದ್ದರು. ಈ ಶೈಕ್ಷಣಿಕ ಸಂಕೀರ್ಣದ ರಚನೆಗಾಗಿ ಅಂದಿನ ಕಾಲದಲ್ಲೇ ಸುಮಾರು 3 ಕೋಟಿ ರೂಪಾಯಿಗಳ ಭಾರಿ ಮೊತ್ತವನ್ನು ವ್ಯಯಿಸಿ ಸಹಸ್ರಾರು ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದರು. ಇದರೊಂದಿಗೆ, ತಾವು ಓದಿದ ಹೇರಾಡಿಯ ನ್ಯಾಷನಲ್ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯ ಉಳಿವಿಗಾಗಿ ಪ್ರತಿವರ್ಷ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಬ್ಯಾಗ್, ಶೂ ಹಾಗೂ ಕ್ರೀಡಾ ಸಾಮಗ್ರಿಗಳನ್ನು ಉಚಿತವಾಗಿ ನೀಡುತ್ತಾ ಶಾಲೆಯ ಪ್ರಗತಿಗೆ ನಿರಂತರ ನೆರವಾಗುತ್ತಿದ್ದರು.

ಬಾರಕೂರು ರೈಲು ನಿಲ್ದಾಣಕ್ಕೆ ಶ್ರಮ

ಕೇವಲ ಶಿಕ್ಷಣ ಮಾತ್ರವಲ್ಲದೆ ಊರಿನ ಅಭಿವೃದ್ಧಿಯಲ್ಲೂ ಪ್ರಮುಖ ಪಾತ್ರ ವಹಿಸಿದ್ದ ಸುಧಾಕರ ಶೆಟ್ಟಿ ಅವರು, ಬಾರಕೂರಿನಲ್ಲಿ ಕೊಂಕಣ ರೈಲ್ವೆ ನಿಲ್ದಾಣ ಸ್ಥಾಪನೆಯಾಗಲು ಹಾಗೂ ಮುಂಬಾಯಿಯ 'ಮತ್ಸ್ಯಗಂಧ' ಎಕ್ಸ್‌ಪ್ರೆಸ್ ರೈಲು ಬಾರಕೂರು ನಿಲ್ದಾಣದಲ್ಲಿ ನಿಲುಗಡೆ ಹೊಂದುವಂತೆ ಮಾಡಲು ದೆಹಲಿ ಮಟ್ಟದಲ್ಲಿ ಭಾರಿ ಶ್ರಮ ವಹಿಸಿ ಪ್ರಭಾವ ಬೀರಿದ್ದರು.

ಸುಧಾಕರ ಶೆಟ್ಟಿಯವರ ನಿಧನದ ಗೌರವಾರ್ಥವಾಗಿ ಸೋಮವಾರ ಬಾರಕೂರು ಸರಕಾರಿ ಪದವಿ ಕಾಲೇಜಿಗೆ ರಜೆ ಸಾರಲಾಗಿತ್ತು. ಇವರ ನಿಧನಕ್ಕೆ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಸಂಸದ ಕೆ. ಜಯಪ್ರಕಾಶ್ ಹೆಗ್ಡೆ, ಕುಂದಾಪುರದ ಮಾಜಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ, ಹಾಲಿ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ, ಬಾರಕೂರು ನ್ಯಾಷನಲ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಾರಕೂರು ಶಾಂತಾರಾಮ ಶೆಟ್ಟಿ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಡಾ. ಭಾಸ್ಕರ್ ಶೆಟ್ಟಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರು ಪತ್ನಿ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಹಾಗೂ ಬಂಧು-ಬಳಗವನ್ನು

4 ಕೋಟಿ ರೂ. ವೆಚ್ಚದಲ್ಲಿ ಮುಖ್ಯರಸ್ತೆ ಅಭಿವೃದ್ಧಿ: ಯಶ್‌ಪಾಲ್ ಉದ್ಘಾಟನೆ



ಉಡುಪಿ: ಅಂಬಲಪಾಡಿ, ಕಡೆಕಾರು, ಉದ್ಯಾವರ ಗ್ರಾಮ ಸಂಪರ್ಕಿಸುವ ಬಂಕೇರಕಟ್ಟ ಸೇತುವೆಯಿಂದ ಸಂಪಿಗೆ ನಗರದ ವರೆಗಿನ ಸುಮಾರು 4 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಂಡ ಮುಖ್ಯ ರಸ್ತೆಯನ್ನು ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ಉದ್ಘಾಟಿಸಿದರು.

ಬಳಿಕ ನೆರವೇರಿಸಿ ಮಾತನಾಡಿ, ಉದ್ಯಾವರ ಭಾಗದಿಂದ ರಾಷ್ಟ್ರೀಯ ಹೆದ್ದಾರಿಗೆಪರ್ಯಾಯವಾಗಿಮಲ್ಪೆಯನ್ನು ಸಂಪರ್ಕಿಸುವ ಮುಖ್ಯರಸ್ತೆಯನ್ನು ಅಭಿವೃದ್ಧಿ ಪಡಿಸುವ ಮೂಲಕ ದಿನಂಪ್ರತಿ ಸಂಚರಿಸುವ ಸಾವಿರಾರು ಜನರಿಗೆ ಇದರಿಂದ ಅನುಕೂಲವಾಗಲಿದ್ದು, ಮುಂದಿನ ದಿನಗಳಲ್ಲಿ ಇತರ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡ ಉದಯ ಕುಮಾರ್ ಶೆಟ್ಟಿ ಕಿದಿಯೂರು, ಜಗದೀಶ್ ಆಚಾರ್ಯ ಕಪ್ಪೆಟ್ಟು, ವೆಂಕಟರಮಣ ಕಿದಿಯೂರು, ಪ್ರವೀಣ್ ಶೆಟ್ಟಿ ಕಪ್ಪೆಟ್ಟು, ಗಿರೀಶ್ ಅಮೀನ್, ಅಶೋಕ್ ಪಾಲನ್, ಪ್ರಶಾಂತ್ ಸಾಲ್ಯಾನ್, ಜಯಕರ್ ಸನಿಲ್, ರಾಜೇಂದ್ರ ಪಂದುಬೆಟ್ಟು, ರಘುನಾಥ್ ಕೋಟ್ಯಾನ್, ಪ್ರದೀಪ್ ಚಂದ್ರ ಗಾಣಿಗ, ಪ್ರಮೋದ್ ಸಾಲ್ಯಾನ್, ಸುನೀಲ್ ಕಪ್ಪೆಟ್ಟು, ಸೋಮನಾಥ ಬಿ. ಕೆ., ರಾಜೇಶ್ ಸುವರ್ಣ, ಹರೀಶ್ ಪಾಲನ್, ಸುಂದರ ಪೂಜಾರಿ, ಶಶಿಧರ ಸುವರ್ಣ, ವಿನೋದಿನಿ, ಮಾಲತಿ, ವಿದ್ಯಾ, ದೀಪಾ, ಅರುಣ್, ದೀಪಕ್ ಪುತ್ರನ್, ರಾಕೇಶ ಜತ್ತನ್, ಕಿಶೋರ್ ಕುಮಾರ್, ಹರೀಶ್ ಸುವರ್ಣ, ರಮೇಶ್ ಆಚಾರ್ಯ, ಕಿರಣ್, ಗೌತಮ್, ವಿಕಾಸ್, ವಿಜಯ ಭಟ್ ಮೊದಲಾದವರು ಉಪಸ್ಥಿತರಿದ್ದರು.

'ಬಾಲವಿಕಾಸ ಶಿಬಿರ ಉದ್ಘಾಟಿಸಿ ಲಕ್ಷ್ಮೀನಾರಾಯಣ ಆಸ್ರಣ್ಣ

ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಬಿತ್ತುವ ಶಿಬಿರ



ಕಟೀಲು: ಪುನರೂರು ಪ್ರತಿಷ್ಠಾನದ ಆಶ್ರಯದಲ್ಲಿ ಹಾಗೂ ಜನವಿಕಾಸ ಸಮಿತಿ ಮೂಲ್ಕಿ ಇದರ ಸಹಕಾರದಲ್ಲಿ ಕಳೆದ 9 ವರ್ಷಗಳಿಂದ ನಿರಂತರವಾಗಿ ಮಕ್ಕಳ ಬೌದ್ಧಿಕಹಾಗೂಸಾಂಸ್ಕೃತಿಕಬೆಳವಣಿಗೆಗಾಗಿ ಆಯೋಜಿಸಲಾಗುತ್ತಿರುವ ಉಚಿತ ಬೇಸಿಗೆ ಶಿಬಿರ 'ಬಾಲವಿಕಾಸ ಶಿಬಿರ – 2026' ರ ಉದ್ಘಾಟನಾ ಸಮಾರಂಭವು ಪುನರೂರು ಶ್ರೀ ವಿಶ್ವನಾಥ ದೇವಳದಲ್ಲಿ ಜರುಗಿತು.

ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಳದ ಅನುವಂಶಿಕ ಅರ್ಚಕರಾದ ಲಕ್ಷ್ಮೀನಾರಾಯಣ ಆಸ್ರಣ್ಣರು ಜ್ಯೋತಿ ಬೆಳಗಿಸಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಮಕ್ಕಳಿಗೆ ಸಂಸ್ಕಾರ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬಾಲ್ಯದಲ್ಲೇ ಕಲಿಸುವುದು ಅತ್ಯಂತ ಅಗತ್ಯ. ಇಂತಹ ಶಿಬಿರಗಳು ಮಕ್ಕಳ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪುನರೂರು ಪ್ರತಿಷ್ಠಾನದ ಗೌರವ ಅಧ್ಯಕ್ಷರಾದ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಮಾತನಾಡಿ, ಮಕ್ಕಳಲ್ಲಿ ಶಿಸ್ತು, ಭಕ್ತಿ ಹಾಗೂ ಭಾರತೀಯ ಸಂಸ್ಕೃತಿಯ ಅರಿವು ಮೂಡಿಸುವ ಉದ್ದೇಶದಿಂದ ಈ ಶಿಬಿರವನ್ನು ಕಳೆದ 9 ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ನುರಿತ ಶಿಕ್ಷಕರಿಂದ ತರಬೇತಿ ಸುಮಾರು 94 ಶಿಬಿರಾರ್ಥಿಗಳ ಭಾಗವಹಿಸುವಿಕೆಯಿಂದ ನಡೆಯುತ್ತಿರುವ ಬಾಲವಿಕಾಸ ಶಿಬಿರ - 2026 ಮೇ 17ರಿಂದ ಮೇ 24ರವರೆಗೆ ನಡೆಯಲಿದ್ದು, ಶಿಬಿರಾರ್ಥಿಗಳಿಗೆ ಯೋಗ, ಶ್ಲೋಕ, ಅಭಿನಯ, ಮಣ್ಣಿನ ಕಲಾಕೃತಿ ರಚನೆ ಹಾಗೂ ಭಜನೆಗಳ ತರಬೇತಿಯನ್ನು ನುರಿತ ಶಿಕ್ಷಕರು ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಯುಗಪುರುಷ ಕಿನ್ನಿಗೋಳಿಯ ಪ್ರಧಾನ ಸಂಪಾದಕರಾದ ಕೊಡೆತ್ತೂರು ಭುವನಾಭಿರಾಮ ಉಡುಪ ಹಾಗೂ ಜೆ ಸಿ ಐ ಮೂಲ್ಕಿ ಶಾಂಭವಿಯ ಅಧ್ಯಕ್ಷರಾದ ಭಾಸ್ಕರ ಶೆಟ್ಟಿಗಾರ್ ಈ ಶಿಬಿರಕ್ಕೆ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಪುನರೂರು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಶ್ರೇಯಾ ಪುನರೂರು, ಜನವಿಕಾಸ ಸಮಿತಿ ಮೂಲ್ಕಿಯ ಅಧ್ಯಕ್ಷರಾದ ಸುರೇಶ್ ರಾವ್ ನೀರಳಿಕೆ, ಪದಾಧಿಕಾರಿಗಳಾದ ಗೀತಾ ಶೆಟ್ಟಿ, ಶೋಭಾ ರಾವ್ ಉಪಸ್ಥಿತರಿದ್ದರು.

ಪುನರೂರು ಪ್ರತಿಷ್ಠಾನದ ಅಧ್ಯಕ್ಷ ದೇವಪ್ರಸಾದ್ ಪುನರೂರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು, ಪ್ರಾಣೇಶ್ ಭಟ್ ದೇಂದಡ್ಕ ವಂದಿಸಿದರು, ಹಿತಾ ಉಮೇಶ್ ಕಾರ್ಯಕ್ರಮ ನಿರೂಪಿಸಿದರು.

ರಿವರ್ ರ್‍ಯಾಫ್ಟಿಂಗ್: ಫಿಟ್‌ನೆಸ್ ಪ್ರಮಾಣ ಪತ್ರ ಪಡೆದೇ ನಿರ್ವಹಣೆಗೆ ಎಡಿಸಿ ಸೂಚನೆ

ಮಡಿಕೇರಿ: ದುಬಾರೆ ಮತ್ತು ಬರಪೊಳೆಯಲ್ಲಿ ರಿವರ್ ಯಾರ್ಫ್ಟಿಂಗ್ ನಡೆಸುವವರು ಕಡ್ಡಾಯವಾಗಿ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯಿಂದ (ಜೇತ್ನ) ರ್‍ಯಾಫ್ಟ್ ಫಿಟ್ಟ್‌ನೆಸ್ ಪ್ರಮಾಣ ಪತ್ರ ಪಡೆಯುವುದರ ಜೊತೆಗೆ ಪ್ರವಾಸೋದ್ಯಮ ಇಲಾಖೆಯಿಂದ ಪರವಾನಗಿ ನವೀಕರಣ ಪತ್ರ ಪಡೆದು ರಿವರ್ ಯಾರ್ಫ್ಟಿಂಗ್ (ಜಲಸಾಹಸ ಕ್ರೀಡೆ) ನಡೆಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಸಹನಾ ಎಸ್.ಹಾದಿಮನಿ ಅವರು ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ರಿವರ್ ರ್‍ಯಾಫ್ಟಿಂಗ್ ನಿರ್ವಹಣೆ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಿವರ್ ರ್‍ಯಾಫ್ಟಿಂಗ್ ನಡೆಸುವವರು ಯಾವುದೇ ಕಾರಣಕ್ಕೂ ಅನುಮತಿ ಇಲ್ಲದೆ ಹಾಗೂ ನವೀಕರಣ ಪತ್ರ ಪಡೆಯದೆ ರಿವರ್ ರ್‍ಯಾಫ್ಟಿಂಗ್ ನಡೆಸಬಾರದು ಎಂದು ಎಚ್ಚರಿಸಿದರು. ಹಾಗೆಯೇ ರಿವರ್ ರ್‍ಯಾಫ್ಟಿಂಗ್ ನಡೆಸಲು ಬಳಸುವ ಪ್ರತಿ ಯಾರ್ಫ್ಟ್‌ಗೆ ನಿರ್ವಹಣಾ ಶುಲ್ಕವನ್ನು ಪ್ರತೀ ತಿಂಗಳು ಪಾವತಿಸುವಂತೆ ಸಹನಾ ಎಸ್.ಹಾದಿಮನಿ ಅವರು ಸೂಚಿಸಿದರು.

ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ರ್‍ಯಾಫ್ಟ್ ಗೈಡ್‌ಗಳ ಅಗತ್ಯ ತರಬೇತಿಯನ್ನು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತಾಲಯ ಹಾಗೂ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ನಿರ್ದೇಶಕರ ಕಚೇರಿಯಿಂದ ಗೈಡ್ ಪ್ರಮಾಣಪತ್ರ ಪಡೆದಿರಬೇಕು ಎಂದರು.

ರಿವರ್ ಯಾರ್ಫ್ಟಿಂಗ್ ನಡೆಯುವ ಸ್ಥಳದಲ್ಲಿ ಅಗತ್ಯ ಮೂಲ ಸೌಲಭ್ಯ ಕಲ್ಪಿಸಬೇಕು. ಕುಡಿಯುವ ನೀರು, ಶೌಚಾಲಯ, ವಾಹನ ನಿಲುಗಡೆ ಮತ್ತಿತರವನ್ನು ಗಮನಿಸಬೇಕು. ಯಾವುದೇ ಕಾರಣಕ್ಕೂ ಪ್ರವಾಸಿಗರ ಜೊತೆ ಕಿರಿಕಿರಿ ಮಾಡಿಕೊಳ್ಳಬಾರದು. ಪ್ರತಿಯೊಬ್ಬ ಸಾರ್ವಜನಿಕರ/ ಪ್ರವಾಸಿಗರ ಸುರಕ್ಷತೆ ಮತ್ತು ಸೌಜನ್ಯದ ವರ್ತನೆ ಅತೀ ಮುಖ್ಯ ಎಂದು ಸಹನಾ ಎಸ್.ಹಾದಿಮನಿ ಅವರು ಒತ್ತಿ ಹೇಳಿದರು.

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡದ ಜೇನು ಕುರುಬ ಜನಾಂಗದ ಯುವಕರಿಗೆ ರ್‍ಯಾಫ್ಟಿಂಗ್ ಸಲಕರಣೆಗಳನ್ನು ವಿತರಿಸುವ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಐಟಿಡಿಪಿ ಇಲಾಖೆ ಜೊತೆ ಚರ್ಚಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಅವರು ಸಲಹೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ಶಶಿಧರ ಅವರು,



ದುಬಾರೆಯಲ್ಲಿ 55 ರ್‍ಯಾಫ್ಟ್ ಮಾಲಕರಿದ್ದು, ರಿವರ್ ರ್‍ಯಾಫ್ಟಿಂಗ್ ನಡೆಸಲು 84 ರ್‍ಯಾಫ್ಟ್‌ಗಳಿವೆ. ಬರಪೊಳೆಯಲ್ಲಿ 4 ರ್‍ಯಾಫ್ಟಿಂಗ್ ಮಾಲಕರಿದ್ದು, 6 ರ್‍ಯಾಫ್ಟ್ ಸೇರಿ 24 ರ್‍ಯಾಫ್ಟ್‌ಗಳು ಇದ್ದು, ದುಬಾರೆ ಕಾವೇರಿ ನದಿಯಲ್ಲಿ ರಿವರ್ ರ್‍ಯಾಫ್ಟ್ ನಡೆಸಲು 46 ರ್‍ಯಾಫ್ಟ್ ಮಾಲಿಕರಿಗೆ ಹಾಗೂ ಬರಪೊಳೆ ನದಿಯಲ್ಲಿ ರಿವರ್ ರ್‍ಯಾಫ್ಟ್ ನಡೆಸಲು 4 ಮಾಲಕರಿಗೆ ಕಳೆದ ವರ್ಷ ಪರವಾನಗಿ ನೀಡಲಾಗಿದೆ. ಈ ಪರವಾನಗಿಯನ್ನು ಪ್ರಸ್ತುತ ಸಾಲಿಗೆ ನವೀಕರಿಸಲು ಜೇತ್ನದಿಂದ ರ್‍ಯಾಫ್ಟ್ ಫಿಟ್‌ನೆಸ್ ಪರಿಶೀಲಿಸಿ ಫಿಟ್‌ನೆಸ್ ವರದಿ ಸಮಿತಿಗೆ ಸಲ್ಲಿಸಿದ್ದಾರೆ ಎಂದು ಅವರು ವಿವರಿಸಿದರು.

ಫಿಟ್‌ನೆಸ್ ವರದಿಯಲ್ಲಿ ದುಬಾರೆಯ 46 ರ್‍ಯಾಫ್ಟ್ ಮಾಲಕರ ಪೈಕಿ 44 ಹಾಗೂ ಬರಪೊಳೆಯ 4 ರ್‍ಯಾಫ್ಟ್ ಮಾಲಕರು ತಮ್ಮ ರ್‍ಯಾಫ್ಟ್ ಪರಿಶೀಲನೆಗೆ ಒಳಪಡಿಸಿದ್ದಾರೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ಹೇಳಿದರು.

ಸೋಮವಾರಪೇಟೆ ತಾಲೂಕು ಹೊನ್ನಮ್ಮನ ಕೆರೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಜಲಸಾಹಸ ಕ್ರೀಡೆಗಳಾದ ಬ್ಯಾಟರಿ ಚಾಲಿತ ಬೋಟಿಂಗ್, ಕಯಾಕಿಂಗ್, ಕನೋಯಿಂಗ್‌ಗಳನ್ನು ನಡೆಸಲು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ 2 ವರ್ಷಗಳ ಅವಧಿಗೆ ಟೆಂಡರ್ ಕರೆಯಲು ಅನುಮತಿ ನೀಡಿದ್ದು, ಈಗಾಗಲೇ ಸಂಬಂಧಪಟ್ಟ ತಹಶೀಲ್ದಾರರು, ಕಾರ್ಯ ನಿರ್ವಹಣಾಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ದೇವಸ್ಥಾನದ ಆಡಳಿತ ಮಂಡಳಿಯವರಿಗೆ ಈ ಪ್ರದೇಶದಲ್ಲಿ ಜಲ ಸಾಹಸ ಕ್ರೀಡೆಗಳನ್ನು ನಡೆಸುವ ಬಗ್ಗೆ ಅಭಿಪ್ರಾಯ ನೀಡುವಂತೆ ಕೋರಲಾಗಿದೆ.

■ ಡಾ.ಸಹನಾ ಎಸ್.ಹಾದಿಮನಿ

ಹಾಗೆಯೇ ಸೋಮವಾರಪೇಟೆ ತಾಲೂಕಿನ ಕುಮಾರಳ್ಳಿ(ಬೀದಳ್ಳಿ) ಕುಮಾರಧಾರ ನದಿಯಲ್ಲಿ ಸ್ಟಿಲ್ ವಾಟರ್ ರ್‍ಯಾಫ್ಟಿಂಗ್ ಮತ್ತು ಕಾಯಕಿಂಗ್ ನಡೆಸಲು ಇಬ್ಬರು ಮುಂದೆ ಬಂದಿದ್ದು, ತಲಾ 4 ರ್‍ಯಾಫ್ಟರ್ ಮತ್ತು ಕಾಯಕಿಂಗ್ ನಡೆಸಲು ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಈ ಸ್ಥಳದಲ್ಲಿ ಮೂಲ ಸೌಕರ್ಯಗಳಿಲ್ಲದೆ ಅನುಮತಿ ನೀಡಿಲ್ಲ ಎಂದು ಶಶಿಧರ ಅವರು ಮಾಹಿತಿ ನೀಡಿದರು.

ಕರ್ನಾಟಕ ಪ್ರವಾಸೋದ್ಯಮ ನೀತಿ 2024–29 ರಡಿ ಸಾಹಸ ಜಲಕ್ರೀಡೆಯಲ್ಲಿ ಒಂದಾದ ಕಾಯಕಿಂಗ್ ಜಲಕ್ರೀಡೆ ನಡೆಸಲು ಅವಕಾಶವಿದ್ದು, ಕೊಡಗು ಜಿಲ್ಲೆಯಲ್ಲಿ ವಿವಿಧ ಕಡೆಗಳಲ್ಲಿ ಕಾಯಕಿಂಗ್ ನಡೆಸಲು 16 ಅರ್ಜಿಗಳು ಸಲ್ಲಿಕೆಯಾಗಿವೆ. ರ್‍ಯಾಫ್ಟಿಂಗ್ ಸಂದರ್ಭದಲ್ಲಿ ಸುರಕ್ಷತೆಗೆ ಒತ್ತು ನೀಡಬೇಕಿದೆ ಎಂದರು.


ಹೊನ್ನಮ್ಮನ ಕೆರೆ ಪ್ರವಾಸಿ ತಾಣದಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸೇರಿದ 4 ಸೆಂಟ್ಸ್ ಜಾಗವಿದ್ದು, ಈ ಜಾಗದಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವುದು, ದುಬಾರೆ ಪ್ರವಾಸಿ ತಾಣದಲ್ಲಿ ರ್‍ಯಾಫ್ಟ್ ನಿಲುಗಡೆಗೆ ಸ್ಥಳದ ಕೊರತೆ ಇದ್ದು, ಹೆಚ್ಚುವರಿ ಹೊಸ ರ್‍ಯಾಫ್ಟ್‌ಗಳಿಗೆ ಅವಕಾಶ ನೀಡದಂತೆ ಕೋರಿ ದುಬಾರೆ ಅಸೋಸಿಯೇಷನ್‌ನವರು ಮನವಿ ಸಲ್ಲಿಸಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ದುಬಾರೆ ಕಾವೇರಿ ನದಿಯಲ್ಲಿ ಹೊಸದಾಗಿ ರಿವರ್ ರ್‍ಯಾಫ್ಟಿಂಗ್ ನಡೆಸಲು 9 ಮನವಿ, ಹಾಗೆಯೇ ದುಬಾರೆ ಪ್ರವಾಸಿ ತಾಣದಲ್ಲಿ ಕಾಯಕಿಂಗ್, ವಾಟರ್ ಜೋರ್ಬಿಂಗ್ ಬಾಲ್ ನಡೆಸಲು 4 ಮನವಿಗಳು ಬಂದಿರುವ ಬಗ್ಗೆ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ವಿವರಿಸಿದರು.

ದುಬಾರೆಯ ರಿವರ್ ರ್‍ಯಾಫ್ಟಿಂಗ್ ಕಾರ್ಯದರ್ಶಿ ವಸಂತ ಅವರು ಮಾತನಾಡಿ, ಮೇ ಅಂತ್ಯದೊಳಗೆ ಫಿಟ್‌ನೆಸ್ ಪ್ರಮಾಣ ಪತ್ರ ಮತ್ತು ಗೈಡ್ ಪರವಾನಗಿ ಲಭ್ಯವಾಗಬೇಕು ಎಂದು ಕೋರಿದರು.

ಬರಪೊಳೆಯ ರಿವರ್ ರ್‍ಯಾಫ್ಟಿಂಗ್‌ನ ರತನ್, ನಿತಿನ್, ಪವನ್, ಪ್ರದೀಪ್, ತಹಶೀಲ್ದಾರ ಪ್ರವೀಣ್ ಕುಮಾರ್, ಹಿರಿಯ ಪೊಲೀಸ್ ಅಧಿಕಾರಿ ಮೇದಪ್ಪ, ಲೋಕೋಪಯೋಗಿ ಇಲಾಖೆಯ ಇಇ ಪ್ರಭು, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿ.ಟಿ.ವಿಸ್ಮಯಿ, ದುಬಾರೆ ರ್‍ಯಾಫ್ಟಿಂಗ್ ಅಧ್ಯಕ್ಷರಾದ ಉತ್ತಪ್ಪ, ಸಿ.ಎಲ್.ವಿಶ್ವ ಹಲವು ಮಾಹಿತಿ ನೀಡಿದರು. ತಹಶೀಲ್ದಾರರಾದ ಶ್ರೀಧರ, ಸಂಜನಾ, ಪಿಡಿಒಗಳಾದ ರಾಜಶೇಖರ್, ಹರೀಶ್, ಪ್ರವಾಸೋದ್ಯಮ ಇಲಾಖೆಯ ಸಮಾಲೋಚಕ ಜತೀನ್ ಇದ್ದರು.

೧೧
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಮಂಗಳವಾರ, 19 ಮೇ 2026
ಮಂಗಳೂರು



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್	13	8	5	0	16	+0.400
ಹೈದರಾಬಾದ್	12	7	5	0	14	+0.331
ಪಂಜಾಬ್	13	6	6	1	13	+0.227
ಚೆನ್ನೈ	12	6	6	0	12	+0.027
ರಾಜಸ್ಥಾನ	12	6	6	0	12	+0.027
ದಿಲ್ಲಿ	13	6	7	0	12	-0.871
ಕೆಕೆಆರ್	12	5	6	1	11	-0.038
ಮುಂಬೈ	12	4	8	0	8	-0.504
ಲಖನೌ	12	4	8	0	8	-0.701

ಕಿರುಸುದ್ದಿ

ಧೋನಿ ಶೂಟಿಂಗ್ ತಾಲೀಮು



ಚೆನ್ನೈ: ನಗರದಲ್ಲಿರುವ ರಾಷ್ಟ್ರೀಯ ಭದ್ರತಾ ಸಿಬ್ಬಂದಿ (ಎನ್ ಎಸ್‌ಜಿ) ಪ್ರಾದೇಶಿಕ ಕೇಂದ್ರಕ್ಕೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಭಾನುವಾರ ಭೇಟಿ ನೀಡಿದ್ದು, ಎನ್‌ಎಸ್‌ಜಿ ಕಮಾಂಡೋಗಳೊಂದಿಗೆ ಶೂಟಿಂಗ್ ಡ್ರಿಲ್ ್ಸನಲ್ಲಿ ಪಾಲ್ಗೊಂಡ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಮಾಡಿವೆ. ಈ ವೇಳೆ ಕಪ್ಪು ಟಿ-ಶರ್ಟ್ ಮತ್ತು ಡೆನಿಮ್ ಉಡುಗೆಯಲ್ಲಿ ಕಾಣಿಸಿಕೊಂಡ ಧೋನಿ ಕಮಾಂಡೋಗಳೊಂದಿಗೆ ಸಮಯ ಕಳೆದಿದ್ದಾರೆ. ಕಮಾಂಡೋಗಳ ಜತೆ ತಾಲೀಮು ಬಳಿಕ ಉಪಹಾರದ ವೇಳೆ, ಫಿಟ್ ಲಗ್ ರಹಾ ಹೂ ನಾ? (ನಾನು ಫಿಟ್ ಆಗಿ ಕಾಣಿಸುತ್ತಿದ್ದೀನಲ್ವಾ?) ಎಂದು ಕೇಳಿ ಧೋನಿ ಸಿಬ್ಬಂದಿ ಮುಖದಲ್ಲಿ ನಗು ತರಿಸಿದ್ದಾರೆ. ಆದರೆ ಸನ್‌ರೈಸರ್ಸ್ ವಿರುದ್ಧ ಧೋನಿ ಆಡಿಲ್ಲ. ಧೋನಿ ಫಿಟ್ ಇಲ್ಲವೆಂದು ನಾಯಕ ಋತುರಾಜ್ ಗಾಯಕ್ವಾಡ್ ಕಾರಣ ನೀಡಿದ್ದಾರೆ.

ಗುಮ್ಮಟ ನಗರಿಯಲ್ಲಿ ರಾಜ್ಯಮಟ್ಟದ ಬ್ಯಾಡ್ಮಿಂಟನ್

ವಿಜಯಪುರ: ಗುಮ್ಮಟ ನಗರಿಯಲ್ಲಿ ಮೊದಲ ಬಾರಿಗೆ ಬೃಹತ್ ಮಟ್ಟದಲ್ಲಿ ಹಮ್ಮಿಕೊಂಡ ಅಂಡರ್ 15 ಹಾಗೂ ಅಂಡರ್ 17 ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗಳು ಆಕರ್ಷಕವಾಗಿ ನಡೆಯುತ್ತಿವೆ. ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಯೋನೆಕ್ಸ್ ಆಶ್ರಯದಲ್ಲಿ ನಡೆಯುತ್ತಿರುವ ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ಆಟಗಾರರ ರ್ಯಾಕೆಟ್ ಮೂಲಕ ಷಟಲ್‌ಗಳ ನಡುವಿನ ಸೆಣಸಾಟ ಕ್ರೀಡಾಸಕ್ತರನ್ನು ರೋಮಾಂಚನಗೊಳಿಸುತ್ತಿದೆ. 15 ವರ್ಷದೊಳಗಿನ ಸಿಂಗಲ್ಸ್ ವಿಭಾಗದಲ್ಲಿ ವೈಭವ ಸಾಯಿ ಗೌಡ ಅವರು ಸಿದ್ಧಾಂತ್ ಬಾಲಕುಮಾರನ್ ವಿರುದ್ಧ 23-21, 21-13 ಅಂಕಗಳಿಂದ ಜಯ ಗಳಿಸಿದರೆ, ಚಯನ್ ಎನ್.ಕುಮಾರ್ ಅವರು ಡಿ ತ್ರಯಾಕ್ಷ ಗೌಡ ವಿರುದ್ಧ 21-3, 21-3 ಅಂಕಗಳಿಂದ ಜಯ ಗಳಿಸಿದರು. ಬಾಲಕರ ಸಿಂಗಲ್ಸ್ 17 ವರ್ಷದೊಳಗಿನವರ ವಿಭಾಗದ ಪಂದ್ಯಾವಳಿಯಲ್ಲಿ ತೇಜ್ರಾಜ್ ಕಿತ್ತೂರು ಅವರು ವಿಜಯ ಪ್ರದೀಪ್ ಅವ್ವಾರು ವಿರುದ್ಧ 21-8, 21-11 ಅಂಕಗಳಿಂದ ಜಯಿಸಿದರೆ, ಸಾಯಿ ಸಮರ್ಥ್ ಪಿ. ಅವರು ದಿರಾಜ್ ಪಾಟೀಲ್ ವಿರುದ್ಧ 21-16, 21-13 ಅಂಕಗಳಿಂದ ಗೆದ್ದರು. 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಅನ್ವಿತಾ ಸಾಹು ಅವರು ನಿಹಾರಿಕಾ ಪೈ ಡಿ ವಿರುದ್ಧ 21-15, 21-12 ಅಂತರದಿಂದ ಗೆದ್ದರೆ, ಸಾನಿಹಾ ಚೇತನ್ ವಿರುದ್ಧ ಯುಕ್ತಾ ಹರೀಶ್ 22-20, 21-19 ಅಂಕಗಳಿಂದ ಜಯಿಸಿದರು.

ಫ್ರೆಂಚ್ ಓಪನ್ ಅರ್ಹತಾ ಸುತ್ತಿಗೆ ಕರ್ಮನ್ ಪ್ರವೇಶ

ಹೊಸದಿಲ್ಲಿ: ಭಾರತೀಯ ಟೆನಿಸ್ ಆಟಗಾರ್ತಿ ಕರ್ಮನ್ ಕೌರ್ ಥಂಡಿ ಫ್ರೆಂಚ್ ಓಪನ್ ಅರ್ಹತಾ ಸುತ್ತನ್ನು ಪ್ರವೇಶಿಸಿದ್ದಾರೆ. 238ನೇ ಶ್ರೇಯಾಂಕಿತೆ ಕರ್ಮನ್ ಫ್ರೆಂಚ್ ಓಪನ್ 2026ರ ಅರ್ಹತಾ ಸುತ್ತಿಗೆ 119ನೇ ಆಟಗಾರ್ತಿಯಾಗಿ ಅರ್ಹತೆ ಸಂಪಾದಿಸಿದ್ದಾರೆ. ಮಂಗಳವಾರ ನಡೆಯಲಿರುವ ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ ಹಾರ್ಮನಿ ಟ್ಯಾನ್ ಅವರನ್ನು ಎದುರಿಸಲಿದ್ದಾರೆ. ಭಾರತದ ಮಾಜಿ ನಂ.1 ಆಟಗಾರ್ತಿ ಗಾಯದ ಬಳಿಕ ವೃತ್ತಿಪರ ಟೆನಿಸ್‌ನಲ್ಲಿ ಕಂಬ್ಯಾಕ್ ಮಾಡಿದ್ದು, ಇತ್ತೀಚೆಗೆ ಗ್ರ್ಯಾಂಡ್ ಸ್ಲಾಮ್ ಸಿಂಗಲ್ಸ್ ವಿಭಾಗದಲ್ಲಿ ಭಾರತ ಭಾಗವಹಿಸಿಲ್ಲ ಎಂಬ ಶಾಪವನ್ನು ಕೌರ್ ಕೊನೆಗೊಳಿಸಿದ್ದಾರೆ.

ಬ್ರೇವಿಸ್ ಸ್ಫೋಟಕ 44 ರನ್ | ಸಿಎಸ್‌ಕೆ ಸಾಧಾರಣ ಮೊತ್ತ

ಕಮಿನ್ಸ್ ದಾಳಿಗೆ ಕುಸಿದ ಚೆನ್ನೈಕಿಂಗ್ಸ್



ಚೆನ್ನೈ: ಡೆವಾಲ್ಡ್ ಬ್ರೇವಿಸ್ ಪರಾಕ್ರಮದ ನೆರವಿನಿಂದ ಸನ್ ರೈಸರ್ಸ್ ವಿರುದ್ಧ ತವರಿನ ಕೊನೆಯ ಪಂದ್ಯವನ್ನಾಡಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ 180 ರನ್ ಕಲೆಹಾಕಿತು.

ಹೈದರಾಬಾದ್ ನಾಯಕ ಪ್ಯಾಟ್ ಕಮಿನ್ಸ್ ಮಾರಕ ಬೌಲಿಂಗ್ ದಾಳಿ ನಡೆಸಿದ್ದು, ಮೂರು ವಿಕೆಟ್‌ಗಳನ್ನು ಕಬಳಿಸಿದ್ದರು. ಕಮಿನ್ಸ್ ಮಾರಕ ಬೌಲಿಂಗ್ ದಾಳಿಯ ಮುಂದೆ ಬ್ರೇವಿಸ್ ಇನ್ನಿಂಗ್ಸ್ ದೊಡ್ಡ ಪರಿಣಾಮ ಬೀರದಿದ್ದರೂ 181 ರನ್ ಸವಾಲೊಡ್ಡುವಲ್ಲಿ ನೆರವಾದರು. 27 ಎಸೆತಗಳಿಂದ 44 ರನ್ ಬಾರಿಸುವ ಮೂಲಕ ಬ್ರೇವಿಸ್ ಸ್ಫೋಟಕ ಆಟವನ್ನಾಡಿದರು. ಟಾಸ್ ಗೆದ್ದ ಸಿಎಸ್‌ಕೆ ನಾಯಕ ಋತುರಾಜ್ ಗಾಯಕ್ವಾಡ್ ಮೊದಲು ಬ್ಯಾಟಿಂಗ್ ಮಾಡುವುದಾಗಿ ಹೇಳಿದರು. ಆರಂಭಿಕ ಸಂಜು ಸ್ಯಾಮ್ಸನ್ (13 ಎಸೆತಗಳಿಂದ 27 ರನ್) ಬಿರುಸಿನ ಆರಂಭ ನೀಡಿದ್ದರಿಂದ ಸಿಎಸ್‌ಕೆ ಪವರ್‌ಪ್ಲೇ ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 57 ರನ್ ಪೇರಿಸಿತ್ತು. ಆದರೆ ಸ್ಯಾಮ್ಸನ್, ಕಾರ್ತಿಕ್ ಶರ್ಮಾ (19 ಎಸೆತಗಳಿಂದ 32 ರನ್) ಮತ್ತು ಗಾಯಕ್ವಾಡ್ ವಿಕೆಟ್ ಕಬಳಿಸುವ ಮೂಲಕ ಕಮಿನ್ಸ್ ಸಿಎಸ್‌ಕೆ ಅಗ್ರ ಕ್ರಮಾಂಕವನ್ನು ಪೆವಿಲಿಯನ್‌ಗೆ ಕಳುಹಿಸಿದರು. ದಕ್ಷಿಣ ಆಫ್ರಿಕಾದ ಸ್ಫೋಟಕ ಬ್ಯಾಟರ್ ಬ್ರೇವಿಸ್ ಮಿಡಲ್ ಓವರ್‌ಗಳಲ್ಲಿ ಬೇಕಾಗಿದ್ದ ರನ್ ವೇಗವನ್ನು ಹೆಚ್ಚಿಸಿದರು. ಅವರ ಇನ್ನಿಂಗ್ಸ್ 2 ಬೌಂಡರಿ ಮತ್ತು 4 ಸಿಕ್ಸರ್‌ಗಳನ್ನು ಒಳಗೊಂಡಿದ್ದವು. ಇಶಾನ್ ಮಾಲಿಂಗ ಅವರಿಗೆ ಬ್ರೇವಿಸ್ ವಿಕೆಟ್ ಒಪ್ಪಿಸುವ ಮುನ್ನ ಚೆನ್ನೈ 150ರ ಗಡಿ ದಾಟಿತ್ತು. ಅಂದರೆ ಚೆನ್ನೈ ಗೌರವಯುತ ಮೊತ್ತ ದಾಖಲಿಸುವಲ್ಲಿ ಬ್ರೇವಿಸ್ ಪ್ರಮುಖ ಪಾತ್ರ ವಹಿಸಿದ್ದರು. ಶಿವಂ ದುಬೆ (26) 3 ಬೌಂಡರಿ ಮತ್ತು 1 ಸಿಕ್ಸರ್ ಬಾರಿಸಿದರೆ, ಕೊನೆಯಲ್ಲಿ ಪ್ರಶಾಂತ್ ವೀರ್ (11) ಎರಡು ಬೌಂಡರಿಗಳನ್ನು ಬಾರಿಸಿದ್ದರು.

ಪ್ಲೇಆಫ್ ಪ್ರವೇಶಿಸಲು ಸನ್‌ರೈಸರ್ಸ್ ಈ ಪಂದ್ಯ ಗೆಲ್ಲಬೇಕಿದ್ದು, ಇನ್ನೊಂದೆಡೆ ಚೆನ್ನೈಗೆ ಇದು ಗೆಲ್ಲಲೇಬೇಕಾದ ಪಂದ್ಯವಾಗಿರುವ ಕಾರಣ ಪಂದ್ಯ ಕುತೂಹಲಕರ ಪಂದ್ಯವಾಗಿ ಗಮನಸೆಳೆದಿದೆ.

ಸಂಕ್ಷಿಪ್ತ ಸ್ಕೋರ್

ಚೆನ್ನೈ 180/7 (20): ಬ್ರೇವಿಸ್ 44(27), ಕಾರ್ತಿಕ್ 32(19), ಸಂಜು 27(13)
ಕಮಿನ್ಸ್ 28ಕ್ಕೆ 3, ಸಾಕಿಬ್ 34ಕ್ಕೆ 2, ಪ್ರಫುಲ್ 37ಕ್ಕೆ 1

ಫಿಟ್ ಇಲ್ಲಂತೆ ಧೋನಿ

ಸಿಎಸ್‌ಕೆ ತನ್ನ ತವರಿನ ಕೊನೆಯ ಪಂದ್ಯದಲ್ಲಿ ಎಂಎಸ್ ಧೋನಿ ಇಂಪ್ಯಾಕ್ಟ್ ಆಟಗಾರನಾಗಿ ಕ್ರೀಸ್‌ಗಿಳಿಯುತ್ತಾರೆ ಎಂಬ ವದಂತಿಯೊಂದಿತ್ತು. ಆದರೆ ಟಾಸ್ ವೇಳೆ ಧೋನಿ ಆಡುತ್ತಾರೆಯೇ? ಎಂದು ವೀಕ್ಷಕ ವಿವರಣೆಕಾರ ರವಿಶಾಸ್ತ್ರಿ ಅವರು ನಾಯಕ ಋತುರಾಜ್‌ಗೆ ಪ್ರಶ್ನಿಸಿದ್ದರು. ಈ ಸಂದರ್ಭ ಉತ್ತರಿಸಿದ ಋತು, ಧೋನಿ ಇನ್ನೂ ಫಿಟ್ ಆಗಿಲ್ಲ. ಹಾಗಾಗಿ ಅವರು ಈ ಪಂದ್ಯದಲ್ಲೂ ಆಡುತ್ತಿಲ್ಲ ಎಂದು ಇಂಪ್ಯಾಕ್ಟ್ ಪ್ಲೇಯರ್ ವದಂತಿಗಳಿಗೆ ಫುಲ್‌ಸ್ಟಾಪ್ ಹಾಕಿದ್ದಾರೆ. ಭಾನುವಾರ ರಾತ್ರಿ ನೆಟ್ಸ್‌ನಲ್ಲಿ ತಂಡದೊಂದಿಗೆ ಧೋನಿ ಬ್ಯಾಟಿಂಗ್ ಅಭ್ಯಾಸ ನಡೆಸಿದ್ದರು. ಮೇ 21ರಂದು ಗುರುವಾರ ಅಹಮದಾಬಾದ್‌ನಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಚೆನ್ನೈ ತನ್ನ ಕೊನೆಯ ಪಂದ್ಯವನ್ನು ಆಡಲಿದ್ದು, ಬಹುಶಃ ಅಭಿಮಾನಿಗಳಿಗೆ ಧೋನಿ ದರ್ಶನಭಾಗ್ಯ ಸಿಗುವ ಸಾಧ್ಯತೆಯಿದೆ.

ತವರಿನಲ್ಲಿ ಸತತ ಮೂರು ಸೋಲುಂಡ ರಾಯಲ್ಸ್

ರಾಜರ ಪ್ಲೇಆಫ್ ಹಾದಿಗೆ ಅಡ್ಡಗಾಲಿಡ್ತಾರಾ ಜೈಂಟ್ಸ್?

ಜೈಪುರ: ಐಪಿಎಲ್ ಚರಿತ್ರೆಯಲ್ಲೇ ಮೇ ತಿಂಗಳಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ಆಡಿದ ಒಟ್ಟು 19 ಪಂದ್ಯಗಳಲ್ಲಿ 14 ಸೋಲುಂಡಿದ್ದು, ಕೇವಲ 4 ಪಂದ್ಯಗಳನ್ನಷ್ಟೇ ಇದುವರೆಗೆ ಗೆದ್ದಿದೆ. ಹೀಗಾಗಿ ಐಪಿಎಲ್ ದ್ವಿತೀಯಾರ್ಧದಲ್ಲಿ ರಾಯಲ್ಸ್ ಕಳಪೆ ಪ್ರದರ್ಶನ ನೀಡುತ್ತಿರುವುದು ಇದೇನು ಹೊಸತಲ್ಲ. ಆದರೂ ತವರಿನ ಮೈದಾನ ಜೈಪುರದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಗೆಲುವು ಸಾಧಿಸಿ ಈ ಆವೃತ್ತಿಯ ಪ್ಲೇಆಫ್ ಆಸೆಯನ್ನು ಜೀವಂತವಿಡುವ ಧಾವಂತದಲ್ಲಿದೆ.



ರಾಜಸ್ಥಾನ-ಲಖನೌ

ಇಂದು ರಾತ್ರಿ 7.30ರಿಂದ,
ಸ್ಥಳ: ಜೈಪುರ, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ರಾಯಲ್ಸ್ 6 ಗೆಲುವು ಮತ್ತು ಅಷ್ಟೇ ಸೋಲುಗಳೊಂದಿಗೆ 12 ಅಂಕಗಳನ್ನು ಪಡೆದು ಅಂಕಪಟ್ಟಿಯಲ್ಲಿ 6ನೇ ಸ್ಥಾನದಲ್ಲಿದೆ. ಉಳಿದಿರುವ ಲಖನೌ ಜೈಂಟ್ಸ್ ಹಾಗೂ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯಗಳನ್ನು ಗೆಲ್ಲಬೇಕಿದೆ. ಆರ್ ಆರ್ ತನ್ನ ಉಳಿದ ಎರಡೂ ಪಂದ್ಯಗಳನ್ನು ಗೆದ್ದರೆ ಒಟ್ಟು 16 ಅಂಕಗಳನ್ನು ಸಂಪಾದಿಸಲಿದೆ. ಇಂಥ ಸಂದರ್ಭದಲ್ಲಿ ಸನ್‌ರೈಸರ್ಸ್ ಅಥವಾ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳಲ್ಲಿ ಒಂದೇ ತಂಡ 16 ಅಂಕಗಳ ಗಡಿ ದಾಟಿದರೆ, ರಾಜಸ್ಥಾನ್ ನೇರ ಪ್ಲೇಆಫ್ ಸ್ಥಾನ ಗಿಟ್ಟಿಸಿಕೊಳ್ಳಲಿದೆ.

ಆದರೆ ಸಿಎಸ್‌ಕೆ ಎರಡೂ ಪಂದ್ಯಗಳನ್ನು ಗೆದ್ದು, ಸನ್ ರೈಸರ್ಸ್ ತಂಡ ಆರ್‌ಸಿಬಿ ವಿರುದ್ಧ ಗೆಲುವು ಸಾಧಿಸಿದರೆ, ನೆಟ್ ರನ್‌ರೇಟ್ ಪ್ರಮುಖ ಪಾತ್ರ ವಹಿಸಲಿದೆ. ಹಲವು ಇತರೆ ಫಲಿತಾಂಶಗಳು ಅನುಕೂಲಕರವಾಗಿ ಬಂದರೆ 14 ಅಂಕಗಳೊಂದಿಗೆ ಕೂಡ ರಾಜಸ್ಥಾನ ಪ್ಲೇಆಫ್‌ಗೆ ನುಗ್ಗುವ ಅವಕಾಶ ಹೊಂದಿದೆ. ಆದರೆ ಸದ್ಯ ಆರ್‌ಆರ್ ಸತತ ಮೂರು ಸೋಲುಗಳಿಂದಾಗಿ ಒತ್ತಡದಲ್ಲಿ ಸಿಲುಕಿದೆ. ಅದರಲ್ಲಿ ಎರಡು ಸೋಲುಗಳು ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧವೇ ಬಂದಿವೆ. ತವರಿನ ಮೈದಾನದಲ್ಲಿ ಕೊನೆಯ ಮೂರು ಪಂದ್ಯಗಳಲ್ಲಿ ಸೋತ ರಾಯಲ್ಸ್ ತಂಡದ ಮೇಲೆ ಒತ್ತಡ ಹೆಚ್ಚಾಗಿದೆ.

ಇನ್ನೊಂದೆಡೆ, ಪ್ಲೇಆಫ್ ಸ್ಪರ್ಧೆಯಿಂದ ಹೊರಬಿದ್ದಿದ್ದರೂ ಲಖನೌ ಸೂಪರ್ ಜೈಂಟ್ಸ್ ಇತ್ತೀಚಿನ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ತೋರಿಸಿದೆ. ಸಿಎಸ್‌ಕೆ ವಿರುದ್ಧ ಉತ್ತಮ ಪ್ರದರ್ಶನ ನೀಡಿದ್ದು, ಲಖನೌ ಅಗ್ರ ಕ್ರಮಾಂಕದ



ಬ್ಯಾಟರ್ಸ್ ಬಲವಾದ ಪ್ರದರ್ಶನ ನೀಡುತ್ತಿದ್ದಾರೆ. ಬೌಲರ್‌ಗಳೂ ಪರಿಣಾಮಕಾರಿ ಆಟವಾಡಿದ್ದು, ಕೊನೆಯ ಮೂರು ಪಂದ್ಯಗಳಲ್ಲಿ 2 ಗೆಲುವು ಸಾಧಿಸಿದೆ. ಆದರೆ ಲಖನೌ ತಡವಾಗಿ ಚೇತರಿಸಿಕೊಂಡಿದ್ದು, ರಾಯಲ್ಸ್ ಎದುರು ಗೆಲ್ಲುವ ಗುರಿ ಹೊಂದಿರಲಿದೆ.

ದಿಲ್ಲಿ ಪ್ಲೇಆಫ್ ಆಸೆ ಜೀವಂತ!

ದಿಲ್ಲಿ: ರಾಜಸ್ಥಾನ ರಾಯಲ್ಸ್ ನೀಡಿದ 194 ರನ್ ಸವಾಲನ್ನು ಯಶಸ್ವಿಯಾಗಿ ಬೆನ್ನತ್ತಿದ ದಿಲ್ಲಿ ಕ್ಯಾಪಿಟಲ್ಸ್ ತನ್ನ ಪ್ಲೇಆಫ್ ಆಸೆಯನ್ನು ಜೀವಂತವಾಗಿರಿಸಿದೆ.

ಅಕ್ಷರ್ ಪಟೇಲ್, ಅಶುತೋಶ್ ಶರ್ಮಾ ಬ್ಯಾಟಿಂಗ್ ಮತ್ತು ಮಿಚೆಲ್ ಸ್ಟಾರ್ಕ್ ಬೌಲಿಂಗ್ ಪ್ರದರ್ಶನದ ನೆರವಿನಿಂದಾಗಿ ದಿಲ್ಲಿ ತವರಿನ ಪಂದ್ಯ ಗೆದ್ದಿದೆ. ಒಂದು ಹಂತದಲ್ಲಿ ರಾಯಲ್ಸ್ 220 ರನ್ ಕಲೆಹಾಕುವುದೂ ಸಾಧ್ಯವಿತ್ತು. ಆದರೆ 15ನೇ ಓವರ್‌ನಲ್ಲಿ ಸ್ಟಾರ್ಕ್ 3 ವಿಕೆಟ್ ಕಬಳಿಸುವ ಮೂಲಕ ರಾಯಲ್ಸ್ ರನ್ ವೇಗಕ್ಕೆ ದೊಡ್ಡ ಕಡಿವಾಣ ಹಾಕಿದ್ದರು.

194 ರನ್ ಸವಾಲನ್ನು ಬೆನ್ನತ್ತಿದ ಕ್ಯಾಪಿಟಲ್ಸ್ ಪರ ಅಭಿಷೇಕ್ ಪೊರೆಲ್ ಮತ್ತು ಕೆಎಲ್ ರಾಹುಲ್ ಅರ್ಧ ಶತಕ ದಾಖಲಿಸಿದ್ದರು. ಅವರಿಬ್ಬರ ನಂತರ ಮಿಡಲ್ ಓವರ್‌ಗಳಲ್ಲಿ ಅಕ್ಷರ್ ಪಟೇಲ್ ಮತ್ತು ಅಶುತೋಶ್ ಶರ್ಮಾ ಬಿರುಸಿನ ಆಟದೊಂದಿಗೆ ತಂಡವನ್ನು ಗೆಲುವಿನ ದಡ ಸೇರಿಸಿದ್ದರು. ಇನ್ನೂ 4 ಎಸೆತಗಳು ಉಳಿದಿರುವಂತೆ ಕ್ಯಾಪಿಟಲ್ಸ್ ಪಂದ್ಯ ಗೆದ್ದಿತು.



- ಕ್ಯಾಪಿಟಲ್ಸ್ ಪರ ರಾಹುಲ್, ಪೊರೆಲ್ ಅರ್ಧ ಶತಕ
- 4 ವಿಕೆಟ್ ಕಬಳಿಸಿದ ಸ್ಟಾರ್ಕ್
- ದಿಲ್ಲಿಗೆ 5 ವಿಕೆಟ್ ಜಯ

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ 193/8 (20): ಜ್ಯುರೆಲ್ 53, ಪರಾಗ್ 51, ಸೂರ್ಯವಂಶಿ 46 (ಸ್ಟಾರ್ಕ್ 40ಕ್ಕೆ 4).
ದಿಲ್ಲಿ 197/5 (20): ರಾಹುಲ್ 56, ಪೊರೆಲ್ 51 (ಆರ್ಚರ್ 35ಕ್ಕೆ 2).
ಪಂದ್ಯಶ್ರೇಷ್ಠ: ಮಿಚೆಲ್ ಸ್ಟಾರ್ಕ್

2026ರಲ್ಲಿ ದಿಲ್ಲಿ ಶ್ರೇಷ್ಠ ಪವರ್‌ಪ್ಲೇ ಆಟ

ಈ ಆವೃತ್ತಿಯಲ್ಲಿ ದಿಲ್ಲಿ ತನ್ನ ಅತ್ಯುತ್ತಮ ಪವರ್‌ಪ್ಲೇ ಆಟವನ್ನು ಪ್ರದರ್ಶಿಸಿತು. ಕನ್ನಡಿಗ ಕೆಎಲ್ ರಾಹುಲ್ ಖಾತೆ ತೆರೆಯುವ ಮುನ್ನ ಆರ್ಚರ್ ಬೌಲಿಂಗ್‌ನಲ್ಲಿ ಇನ್ನೋರ್ವ ಕನ್ನಡಿಗ ಯಶ್ ರಾಜ್ ಪೂಂಜಾರಿಂದ ಜೀವದಾನ ಪಡೆದಿದ್ದರು. ಪವರ್‌ಪ್ಲೇಯ 6 ಓವರ್‌ಗಳಲ್ಲಿ ದಿಲ್ಲಿ ವಿಕೆಟ್ ನಷ್ಟವಿಲ್ಲದೆ 72 ರನ್ ಕಲೆಹಾಕಿತ್ತು. ಇದು 2026ರಲ್ಲಿ ದಿಲ್ಲಿ ತಂಡದ ಅತ್ಯುತ್ತಮ ಪವರ್‌ಪ್ಲೇ ಸ್ಕೋರ್ ಆಗಿದೆ. ರಾಹುಲ್ ಕ್ಯಾಚ್ ಕೈಚೆಲ್ಲಿದ್ದ ಪೂಂಜಾ ಬೌಲಿಂಗ್‌ಗೆ ಬಂದಾಗ ಕಂಬ್ಯಾಕ್ ಮಾಡಿದ್ದಾರೆ. 7 ಓವರ್‌ಗಳಲ್ಲಿ ದಿಲ್ಲಿ ವಿಕೆಟ್‌ನಷ್ಟವಿಲ್ಲದೆ 85 ರನ್ ಎಂಬ ಸ್ಥಿತಿಯಲ್ಲಿತ್ತು. ಆದರೆ ಪೂಂಜಾ ತಮ್ಮ ಓವರ್‌ನಲ್ಲಿ ನಾಲ್ಕೇ ರನ್ ಬಿಟ್ಟುಕೊಟ್ಟು ದಿಲ್ಲಿ ರನ್ ರೇಟ್‌ಗೆ ಕಡಿವಾಣ ಹಾಕಿದ್ದರು. ಪೂಂಜಾ ಓವರ್ ಕ್ಯಾಪಿಟಲ್ಸ್ ಇನ್ನಿಂಗ್ಸ್‌ನ ಬೌಂಡರಿಲೆಸ್ ಮೊದಲ ಓವರ್ ಆಗಿತ್ತು. ಇದಾದ ಬಳಿಕ 29 ಎಸೆತಗಳಲ್ಲಿ ಅರ್ಧ ಶತಕ ದಾಖಲಿಸಿದ್ದ ಪೊರೆಲ್ ಔಟಾಗಿದ್ದರು. ರಾಹುಲ್ 34 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ್ದರು.

ಅಕ್ಷರ್, ಶರ್ಮಾ ಪರಾಕ್ರಮ: 17ನೇ ಓವರ್‌ನಲ್ಲಿ ಕೇವಲ 8 ರನ್ ಬಿಟ್ಟುಕೊಟ್ಟು ಸ್ಟಬ್ಸ್ ವಿಕೆಟ್ ಕಬಳಿಸಿದ ಆರ್ಚರ್ ದಿಲ್ಲಿ ಗೆಲುವು ಕಸಿಯುವ ಪ್ರಯತ್ನ ಮಾಡಿದ್ದರು. ಇನ್ನು 3 ಓವರ್‌ಗಳಲ್ಲಿ 35 ರನ್ ಅಗತ್ಯವಿದ್ದಾಗ ಅಕ್ಷರ್ ಮತ್ತು ಮಿಲ್ಲರ್ ಕ್ರೀಸ್‌ನಲ್ಲಿದ್ದರು. ಪರಾಗ್ ಆಫ್‌ಸ್ಪಿನ್ನರ್ ಫೆರೇರಾ ಮತ್ತು ಮಧ್ಯಮ ವೇಗದ ಶನಕಾ ಅವರಿಗೆ ಬೌಲಿಂಗ್ ನೀಡಿದ್ದರು. ಆದರೆ ಎಡಗೈ ಬ್ಯಾಟರ್‌ಗಳು ಯಾವುದೇ ಸಮಸ್ಯೆಯಿಲ್ಲದೆ ಬ್ಯಾಟ್ ಬೀಸಿ ಸಿಕ್ಸರ್ ಎತ್ತಿದ್ದರು. ಕೊನೆಯ ಓವರ್‌ನಲ್ಲಿ 7 ರನ್ ಬೇಕಿದ್ದಾಗ ಅಶುತೋಶ್ ಶರ್ಮಾ ಒಂದು ಬೌಂಡರಿ ಮತ್ತು ಸಿಕ್ಸರ್ ಹೊಡೆದಿದ್ದರು.

ಎಸ್‌ಎಂ ಕೃಷ್ಣ ಮೆಮೋರಿಯಲ್ ಓಪನ್ | ಎಟಿಪಿ ಚಾಲೆಂಜರ್ ಟೂರ್ ಪಂದ್ಯಾವಳಿ

ಎಸ್‌ಎಂ ಕೃಷ್ಣ ಟೂರ್ನಿ 2ನೇ ಆವೃತ್ತಿಗೆ ಚಾಲನೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಸ್‌ಎಂ ಕೃಷ್ಣ ಅವರ ಸ್ಮರಣಾರ್ಥ ಆಯೋಜಿಸಲಾಗುವ ಎಸ್‌ಎಂ ಕೃಷ್ಣ ಮೆಮೋರಿಯಲ್ ಓಪನ್ ಟೂರ್ನಿಯ ಎರಡನೇ ಆವೃತ್ತಿಯ ಉದ್ಘಾಟನಾ ಸಮಾರಂಭವು ಭಾವಪೂರ್ಣ ಗೌರವ ನಮನ ಹಾಗೂ ಸಂಪ್ರದಾಯಬದ್ಧ ಕಾರ್ಯಕ್ರಮಗಳೊಂದಿಗೆ ಬೆಂಗಳೂರಿನ ಎಸ್‌ಎಂ ಕೃಷ್ಣ ಟೆನಿಸ್ ಸ್ಟೇಡಿಯಂನಲ್ಲಿ ಭಾನುವಾರ ನೆರವೇರಿತು.



ಗಣ್ಯರು, ಕುಟುಂಬಸ್ಥರಿಂದ ಗೌರವ ನಮನ

ಈ ಸಮಾರಂಭದಲ್ಲಿ ಗಣ್ಯರು, ಆಟಗಾರರು, ಅಧಿಕಾರಿಗಳು ಹಾಗೂ ಟೆನಿಸ್ ಅಭಿಮಾನಿಗಳು ಭಾಗವಹಿಸಿ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್‌ಎಂ ಕೃಷ್ಣ ಅವರ ಸಾರ್ವಜನಿಕ ಜೀವನ ಮತ್ತು ಕ್ರೀಡಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿದರು. ಕೇಸರಿ, ಬಿಳಿ ಮತ್ತು ಹಸಿರು ಬಣ್ಣದ ಬಲೂನ್‌ಗಳನ್ನು ಹಾರಿಸುವ ಮೂಲಕ ಟೂರ್ನಿಗೆ ಅಧಿಕೃತ ಚಾಲನೆ ನೀಡಲಾಯಿತು. ಮುಖ್ಯ ಅತಿಥಿಯಾಗಿ ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಫಿಬಾ ಏಷ್ಯಾ ಅಧ್ಯಕ್ಷರಾದ ಕೆ. ಗೋವಿಂದರಾಜ್ ಭಾಗವಹಿಸಿದ್ದರು. ಇದೇ ವೇಳೆ ಎಸ್‌ಎಂ ಕೃಷ್ಣ ಅವರ ಇಬ್ಬರು ಹೆಣ್ಣುಮಕ್ಕಳಾದ ಮಾಳವಿಕಾ ಹೆಗ್ಡೆ ಮತ್ತು ಶಾಂಭವಿ ಉಮೇಶ್, ಮೊಮ್ಮಗ ಇಶಾನ್ ಹೆಗ್ಡೆ ಉಪಸ್ಥಿತರಿದ್ದರು. ಇದರ ಜೊತೆಗೆ ಎಐಟಿಎ ಗೌರವ ಜಂಟಿ ಕಾರ್ಯದರ್ಶಿ ಹಾಗೂ ಟೂರ್ನಿ ನಿರ್ದೇಶಕ ಸುನಿಲ್ ಯಜಮಾನ್, ಟೂರ್ನಿ ಮೇಲುಸ್ತುವಾರ ಅಲಿ ಕಟೇಬಿ, ಕೆಎಸ್ ಎಲ್‌ಟಿಎ ಇಸಿ ಸದಸ್ಯ ಹಾಗೂ ಸಹಾಯಕ ಟೂರ್ನಿ ನಿರ್ದೇಶಕ ಪೀಟರ್ ವಿಜಯ್ ಕುಮಾರ್, ಕೆಎಸ್‌ಎಲ್‌ಟಿಎ ಇಸಿ ಸದಸ್ಯೆ ಗಾಯತ್ರಿ ರಾವ್ ಮತ್ತು ರಾಜಶೇಖರ್ ಸಹ ಉಪಸ್ಥಿತರಿದ್ದರು.

2025ರಲ್ಲಿ ಐಟಿಎಫ್ ಎಂ25 ಯಶಸ್ವಿ ಟೂರ್ನಿಯಾಗಿ ಆರಂಭಗೊಂಡಿದ್ದ ಎಸ್‌ಎಂ ಕೃಷ್ಣ ಮೆಮೋರಿಯಲ್ ಓಪನ್, ಈ ವರ್ಷ ಮಹತ್ವದ ಹಂತ ತಲುಪಿದೆ. ಇದೀಗ 63,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತದೊಂದಿಗೆ ಎಟಿಪಿ ಚಾಲೆಂಜರ್ ಟೂರ್ ಕ್ಯಾಲೆಂಡರ್‌ಗೆ ಪ್ರವೇಶಿಸಿದೆ.

ಟೂರ್ನಿಯ ಈ ಮೇಲ್ದರ್ಜೆಗೇರಿದ್ದು, ಭಾರತೀಯ ಟೆನಿಸ್ ಆಟಗಾರರಿಗೆ ತವರಿ ನಲ್ಲೇ ಉನ್ನತ ಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊ ಳ್ಳುವ ಅವಕಾಶ ಕಲ್ಪಿಸುವುದರ ಜೊತೆಗೆ, ಕರ್ನಾಟಕವನ್ನು ಅಂತಾರಾಷ್ಟ್ರೀಯ ಮಟ್ಟದ ಟೆನಿಸ್ ಟೂರ್ನಿಗಳ ಪ್ರಮುಖ ಕೇಂದ್ರವನ್ನಾಗಿ ಇನ್ನಷ್ಟು ಬಲಪಡಿಸುವ ನಿರೀಕ್ಷೆಯಿದೆ.

ಮುಖ್ಯ ಡ್ರಾಗೆ ಬೆಂಗಳೂರಿನ ಆರಾಧ್ಯ ಕ್ಷಿತಿಜ್

ಕರ್ನಾಟಕದ ಭರವಸೆಯ ಜೂನಿಯರ್ ಆಟಗಾರರಲ್ಲಿ ಒಬ್ಬರಾಗಿರುವ ಆರಾಧ್ಯ, ಅಂಡರ್-16 ವಿಭಾಗದಲಿ ಭಾರತದ ನಂ.1 ಸ್ಥಾನಕ್ಕೇರಿದ್ದವರು. ಈ ವರ್ಷ ಐಟಿಎಫ್ ಜೂನಿಯರ್ ಸರ್ಕ್ಯೂಟ್‌ನಲ್ಲಿ ಜೆ200 ಪ್ರಶಸ್ತಿ ಗೆದ್ದಿರುವ ಅವರು, ಅರ್ಹತಾ ಸುತ್ತಿನಲ್ಲಿ ಮೊದಲ ಶ್ರೇಯಾಂಕಿತ ಆಟಗಾರನ ವಿರುದ್ಧ 7-6 (2), 6-4 ನೇರ ಸೆಟ್‌ಗಳ ಅಚ್ಚರಿ ಜಯ ದಾಖಲಿಸಿದ್ದನ್ನು ಮತ್ತೊಮ್ಮೆ ದೃಢಪಡಿಸಿದರು. ಅನುಭವಿ ನಿತಿನ್ ಕುಮಾರ್ ಸಿನ್ಹಾ ವಿರುದ್ಧ ಆರಾಧ್ಯ ಅತ್ಯಂತ ಸಮಾಧಾನದಿಂದ ಆಟವಾಡಿದರು. ಮೊದಲ ಸೆಟ್ ಟೈಬ್ರೇಕ್ ಜಯಿಸಿದ ಬಳಿಕ ಎರಡನೇ ಸೆಟ್‌ನಲ್ಲೂ ಹಿಡಿತ ಕಳೆದುಕೊಳ್ಳದೇ ನೇರ ಸೆಟ್‌ಗಳಲ್ಲಿ ಪಂದ್ಯ ಮುಗಿಸಿದರು. ತಮ್ಮ ವೃತ್ತಿಜೀವನದ ಮಹತ್ವದ ಮೈಲಿಗಲ್ಲಾದ ಈ ಜಯದೊಂದಿಗೆ, ಆರಾಧ್ಯ ತಮ್ಮ ತವರೂರಿನ ಎಟಿಪಿ ಚಾಲೆಂಜರ್ ಟೂರ್ನಿಯ ಮುಖ್ಯ ಡ್ರಾದಲ್ಲಿ ಸ್ಥಾನ ಪಡೆದಿದ್ದಾರೆ. ಭಾರತೀಯ ಆಟಗಾರರ ಹಲವು ಪಂದ್ಯಗಳು ಇನ್ನೂ ಪೂರ್ಣಗೊಳ್ಳಬೇಕಿದ್ದು, ಮಂಗಳವಾರದ ವೇಳಾಪಟ್ಟಿ ಭರ್ತಿಯಾಗಿರುವ ಸಾಧ್ಯತೆಯಿದೆ.



ಮಳೆಯಿಂದ ಪಂದ್ಯಗಳಿಗೆ ಅಡ್ಡಿ



ನಿರಂತರ ಮಳೆಯ ಕಾರಣದಿಂದ ಎಸ್‌ಎಂ ಕೃಷ್ಣಸ್ಮಾರಕ ಓಪನ್ ಎಟಿಪಿ ಚಾಲೆಂಜರ್ ಟೂರ್ನಿಯ ಮುಖ್ಯ ಡ್ರಾದ ಆರಂಭಿಕ ದಿನದ ಹಲವು ಪಂದ್ಯಗಳು ಸ್ಥಗಿತಗೊಂಡವು. ಮೊದಲ ಸುತ್ತಿನ ಐದು ಸಿಂಗಲ್ಸ್ ಹಾಗೂ ಒಂದು ಡಬಲ್ಸ್ ಪಂದ್ಯ ಮಳೆ ಅಡ್ಡಿಯಿಂದ ಪೂರ್ಣಗೊಳ್ಳಲಿಲ್ಲ. ಸಂಜೆ ಸುಮಾರು 6:30ರ ವೇಳೆಗೆ ಕೋರ್ಟ್‌ಗಳನ್ನು ಒಣಗಿಸಿ ಆಟ ಮರುಪ್ರಾರಂಭಿಸಲು ಸಿದ್ಧತೆ ನಡೆದರೂ, ಮತ್ತೆ ಸುರಿದ ಮಳೆಯಿಂದ ಪಂದ್ಯಗಳನ್ನು ರದ್ದುಪಡಿಸಲಾಯಿತು. ಅಪೂರ್ಣ ಪಂದ್ಯಗಳು ಮಂಗಳವಾರಕ್ಕೆ ಮುಂದೂಡಲ್ಪಟ್ಟಿವೆ. ಇದಕ್ಕೂ ಮೊದಲು ದಿನದ ಗಮನ ಸೆಳೆದವರು 17 ವರ್ಷದ ವೈಲ್ಡ್‌ಕಾರ್ಡ್ ಆಟಗಾರ ಆರಾಧ್ಯ ಕ್ಷಿತಿಜ್ ಮುಖ್ಯ ಡ್ರಾಗೆ ಪ್ರವೇಶಿಸಿದರು.

ಸಿನ್ನರ್ ಗೋಲ್ಡನ್ ಮಾಸ್ಟರ್ ವಿನ್ನರ್

ರೋಮ್: ವಿಶ್ವ ನಂ.1 ಟೆನಿಸಿಗ ಯಾನಿಕ್ ಸಿನ್ನರ್ ಇಟಾಲಿಯನ್ ಓಪನ್ ಗೆದ್ದು, ಕ್ಯಾಲೆಂಡರ್ ವರ್ಷವೊಂದರಲ್ಲಿ ಎಲ್ಲಾ ಎಟಿಪಿ ಅಗ್ರ-ಕ್ರಮಾಂಕದ ಪ್ರಶಸ್ತಿಗಳನ್ನು ಗೆದ್ದು ಗೋಲ್ಡನ್ ಮಾಸ್ಟರ್ ಎಂಬ ದಾಖಲೆ ಬರೆದಿದ್ದಾರೆ. ಈ ಮೂಲಕ ಹಿಂದಿನ ಗೋಲ್ಡನ್ ಮಾಸ್ಟರ್ಸ್ ದಾಖಲೆ ಬರೆದಿದ್ದ ಸರ್ಬಿಯಾ ದಂತಕತೆ ನೊವಾಕ್ ಜೊಕೊವಿಚ್ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ.

ಇದಲ್ಲದೆ, ಕಳೆದ 50 ವರ್ಷಗಳಲ್ಲಿ ಇಟಾಲಿಯನ್ ಓಪನ್ ಪ್ರಶಸ್ತಿ ಗೆದ್ದ ಮೊದಲ ಇಟಲಿ ಟೆನಿಸಿಗನೆಂಬ ದಾಖಲೆ ಬರೆದಿದ್ದಾರೆ. ಈ ಹಿಂದೆ ಆಡ್ರಿಯಾನೋ ಪನಟ್ಟಾ 1976ರ ಇಟಾಲಿಯನ್ ಓಪನ್ ಚಾಂಪಿಯನ್ ಆಗಿದ್ದರು. ಫೈನಲ್ ಗೆದ್ದ ನಂತರ ಪ್ರಶಸ್ತಿ ಸಮಾರಂಭದಲ್ಲಿ 75 ವರ್ಷದ ಪನಟ್ಟಾ ಭಾಗವಹಿಸಿದ್ದು, ಆಡ್ರಿಯಾನೋ 50 ವರ್ಷಗಳ ಬಳಿಕ ನಾವು ಬಹಳ ಪ್ರಾಮುಖ್ಯ ಟ್ರೋಫಿ ಗೆದ್ದಿದ್ದೇವೆ ಎಂದು ಸಿನ್ನರ್ ಹೇಳಿದ್ದಾರೆ. ಸಿನ್ನರ್ ಈವರೆಗೆ ಫ್ರೆಂಚ್ ಓಪನ್ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಯೊಂದನ್ನಷ್ಟೇ ಗೆದ್ದಿಲ್ಲ. ಉಳಿದಂತೆ ಎರಡು ಬಾರಿ ಆಸ್ಟ್ರೇಲಿಯನ್ ಓಪನ್, ತಲಾ ಒಂದು ಬಾರಿ ವಿಂಬಲ್ಡನ್ ಹಾಗೂ ಯುಎಸ್ ಓಪನ್ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ ಗಳನ್ನು ಗೆದ್ದಿದ್ದಾರೆ. ಭಾನುವಾರ ನಡೆದ ಫೈನಲ್‌ನಲ್ಲಿ ಕ್ಯಾಸ್ಪರ್ ರೂಡ್ ಅವರನ್ನು 6-4, 6-4 ನೇರ ಸೆಟ್‌ಗಳಿಂದ ಮಣಿಸಿ ಸಿನ್ನರ್ ಚಾಂಪಿಯನ್ ಆಗಿದ್ದಾರೆ. ನಾರ್ವೆ ಆಟಗಾರನ ವಿರುದ್ಧ ಇದು ಸಿನ್ನರ್‌ಗೆ 5ನೇ ಗೆಲುವು. ಅಚ್ಚರಿಯ ಗೆಲುವಿನ ಲಯದಲ್ಲಿರುವ ಸಿನ್ನರ್ ಕಳೆದ 29 ಪಂದ್ಯಗಳನ್ನು ಗೆದ್ದಿದ್ದಾರೆ.



ಸಿನ್ನರ್‌ಗೆ ಜೊಕೊ ಅಭಿನಂದನೆ

ತಮ್ಮ ಗೋಲ್ಡನ್ ಮಾಸ್ಟರ್ ದಾಖಲೆಯನ್ನು ಸರಿಗಟ್ಟಿದ ಸಿನ್ನರ್‌ಗೆ ಜೊಕೊವಿಚ್ ಇನ್‌ಸ್ಟಾಗ್ರಾಮ್‌ನಲ್ಲಿ, ಎಕ್ಸ್‌ಕ್ಲೂಸಿವ್ ಕ್ಲಬ್‌ಗೆ ನಿಮಗೆ ಸ್ವಾಗತ ಎಂಬ ಸಂದೇಶದಿಂದ ಅಭಿನಂದಿಸಿದ್ದಾರೆ.

- ಸತತ 29ನೇ ಗೆಲುವು
- ಸತತ 6ನೇ ಎಟಿಪಿ ಮಾಸ್ಟರ್ಸ್ ಪ್ರಶಸ್ತಿ




ಸ್ವಿಟೊಲಿನಾ ಮಹಿಳಾ ಚಾಂಪಿಯನ್

ವಿಶ್ವ ನಂ.4 ಅಮೆರಿಕ ಆಟಗಾರ್ತಿ ಕೊಕೊ ಗಾಫ್‌ರನ್ನು ಮಣಿಸಿದ ಉಕ್ರೇನ್‌ನ ಎಲಿನಾ ಸ್ವಿಟೊಲಿನಾ ಇಟಾಲಿಯನ್ ಓಪನ್ ಪ್ರಶಸ್ತಿ ಮುಡಿಗೇರಿಸಿದ್ದಾರೆ. ಫೈನಲ್ ಪಂದ್ಯದಲ್ಲಿ 6-4, 6-7(3), 6-2 ಸೆಟ್ ಅಂತರ ದಿಂದ ಸ್ವಿಟೊಲಿನಾ ಜಯಿಸಿದ್ದಾರೆ. ಟೆನಿಸ್ ಋತುವಿನ ಮೊದಲ ಆವೆಮಣ್ಣಿನ ಪ್ರಶಸ್ತಿ ಗೆದ್ದ ಸ್ವಿಟೊಲಿನಾ ಫ್ರೆಂಚ್ ಓಪನ್ ಗ್ರ್ಯಾಂಡ್ ಸ್ಲಾಮ್ ಗೆಲ್ಲುವ ಫೇವರಿಟ್ ಆಗಿದ್ದಾರೆ. 8 ವರ್ಷಗಳ ಬಳಿಕ ಸ್ವಿಟೊಲಿನಾ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದು ಸಂಭ್ರಮಿಸಿದ್ದಾರೆ. ಇದೇ ವೇಳೆ ಉಕ್ರೇನಿಯನ್ನರ ಪ್ರೀತಿ ಮತ್ತು ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5988

5987 ಉತ್ತರ

ಎಡದಿಂದ ಬಲಕ್ಕೆ:
1.ನಾಗರಿಕ 3.ವೀಣಾಪಾಣಿ
5.ಬವರ 6.ಡವರಿಸು
8.ತನುಜಾತೆ 10.ದತ್ತೂರಿ
11.ತಟಾಕ 13.ಕೊಳಗ
15.ರದ್ದುಮಾಡು
16.ಯುವರಾಜ
ಮೇಲಿನಿಂದ ಕೆಳಕ್ಕೆ
: 1.ನಾಡಗೌಡ
2.ಕಬಳಿಸು 3.ವೀರಗೀತೆ
4.ತರಂಗಿಣಿ 7.ರಿಪೇರಿ
9.ಜಾಗೃತ 10.ದರಕಾರ
12.ಕಪಿಧ್ವಜ 13.ಕೊರಡು
14.ಗತಾಯು

ಎಡದಿಂದ ಬಲಕ್ಕೆ
2.ಕಾಯವಿಲ್ಲದವನು-ಮನ್ಮಥ (3)
5.ಹಿಮಾಲಯವನ್ನು ಹೀಗೂ ಕರೆಯಬಹುದು (4)
6.ಸೈನ್ಯದ ಮುಖ್ಯಸ್ಥ-ನಾಯಕನೀತ (4)
7.ಯಾವಾಗಲೂ-ನಿರಂತರವಾಗಿ ಎಂಬರ್ಥದ ಶಬ್ದ (3)
9.ಅನುಭವದ ಆಧಾರದ ಮೇಲಿನ ಜನಪ್ರಿಯ ಮಾತು (3)
10.ತಪ್ಪನ್ನು ಹೊರಿಸು (4)
12.ಕುತಂತ್ರವನ್ನು ಹೀಗೂ ಹೇಳುತ್ತೇವೆ (4)
14.ಸ್ವರ್ಗದಲ್ಲಿ ಜನಿಸಿದವನು-ದೇವತೆ (3)
15.ನೂರು ವರ್ಷಗಳ ಕಾಲಾವಧಿಯಿದು (4)
16.ಅಪಹಾಸ್ಯಕ್ಕೆ ಗುರಿಯಾದವನು (4)
ಮೇಲಿನಿಂದ ಕೆಳಕ್ಕೆ
1.ಈ ಸಮಾಜಕ್ಕೆ ಮಂಜ ಮಾಡಿದ್ದು ಹೀಗೆ ಸೂಕ್ತವಾಗಿದೆ (4)
2.ತಿಳಿವಳಿಕೆ-ಜ್ಞಾನವಿದು (3)
3.ಜಬರಿಸು-ಸಿಟ್ಟಿನಿಂದ ಕೂಗು (3)
4.ಮಾತೃಭಾಷೆಯನ್ನು ಸರಳವಾಗಿ ಹೀಗೆನ್ನುತ್ತೇವೆ (4)
8.ಬುನಾದಿಯ ಸಮಾನಪದ (4)
9.ಅತಿವೇಗವಾಗಿ ಓಡುವಿಕೆ (4)
10.ಅಸಮಾಧಾನದ ಉಗ್ರ ಪ್ರದರ್ಶನ-ರೋಷ (3)
11.ಸುದ್ದಿ ನನಗೆ ತಿಳಿದದ್ದು ಈ ಶುಭದಿನದಂದು (3)
12.ಕೂಡಿದ ಜನಕ್ಕೆ ಕೇಳಿಸಿದ ಇಂಪಾದ ಧ್ವನಿ (3)
13.ಮೂರು ಬಾಹುಗಳುಳ್ಳ ಆಕೃತಿ (3)

ಕಿರುಸುದ್ದಿ

ಪಶು ಸಂಗೋಪನೆ ಸಚಿವರ ಪ್ರವಾಸ

ಮಂಗಳೂರು: ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರು ಮೇ 20 ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಅಂದು ಬೆಳಿಗ್ಗೆ 8.15ಕ್ಕೆ ಮಂಗಳೂರು ವಿಮಾನ ನಿಲ್ದಾಣ ಆಗಮನ, 10 ಗಂಟೆಗೆ ವಿಟ್ಲದಲ್ಲಿ ವಿಟ್ಲ ಎಜುಕೇಶನ್ ಸೊಸೈಟಿ, ಪದವಿ ಪೂರ್ವ ಕಾಲೇಜು ಸುವರ್ಣ ರಂಗ ಮಂದಿರದಲ್ಲಿ ಭಾರತ ಕೃಷಿ ಅಭಿವೃದ್ಧಿ ಸಂಸ್ಥೆ ನಿಯಮಿತ, ವಿಟ್ಲ ಹಾಗೂ ರೇಷ್ಮೆ ಇಲಾಖೆಯ ಸಹಯೋಗದೊಂದಿಗೆ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ರೇಷ್ಮೆ ಕೃಷಿ ಮೇಳ ಕಾರ್ಯಕ್ರಮ, ಸಂಜೆ 4.35ಕ್ಕೆ ಸಚಿವರು ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ಬೈಕ್-ಕಾರು ಡಿಕ್ಕಿ: ಮಹಿಳೆ ಸಾವು

ಬೆಳ್ತಂಗಡಿ: ಪಡಂಗಡಿ, ಕನ್ನಡಿಕಟ್ಟೆ ಎಂಬಲ್ಲಿ ಓಡೀಲು ದೇವಸ್ಥಾನದ ದ್ವಾರದ ಬಳಿ ಭಾನುವಾರ ರಾತ್ರಿ ಪಲ್ಸರ್ ಬೈಕ್ ಹಾಗೂ ಆಲ್ಟೋ ಕಾರು ನಡುವೆ ಡಿಕ್ಕಿಯಾಗಿ ಬೈಕ್ ಸಹಸವಾರೆ ಶೈಲಜಾ (35) ಎಂಬ ಮಹಿಳೆ ಮೃತಪಟ್ಟಿದ್ದಾರೆ. ಅವರ ಪತಿ ಪ್ರಗತಿಪರ ಕೃಷಿಕ ಅನಿಲ್ ಬಳಂಜ ಅವರು



ಗಾಯಗೊಂಡಿದ್ದು ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಜೊತೆಯಲ್ಲಿದ್ದ ಅವರ ಪುತ್ರ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅನಿಲ್ ಬಳಂಜ ಅವರು ಬಳಂಜ ಗ್ರಾಮದ ನಾಲ್ಕೂರು ಎಂಬಲ್ಲಿಯವರಾಗಿದ್ದು ದೇಶಿ ಮತ್ತು ವಿದೇಶೀ ತಳಿಯ ಹಣ್ಣಿನ ಗಿಡಗಳ ಕೃಷಿ ಮಾಡುವಲ್ಲಿ ಪ್ರಖ್ಯಾತರು. ಅನಿಲ್ ಅವರ ಪುತ್ರ ಸುಳ್ಯ ಕೇಶವ ಕೃಪಾದಲ್ಲಿ ನಡೆಯುತ್ತಿದ್ದ ವೇದ ಶಿಬಿರದಲ್ಲಿದ್ದ. ಶೈಲಜಾ ಕೂಡ ಅಲ್ಲಿದ್ದರು. ಭಾನುವಾರ ಸಂಜೆ ಸಮಾರೋಪ ಸಮಾರಂಭ ಮುಗಿದ ಬಳಿಕ ಅವರನ್ನು ಕರೆದೊಯ್ಯಲು ಅನಿಲ್ ಬಂದಿದ್ದರು. ಮರಳಿ ಮನೆಗೆ ಬರುತ್ತಿರುವ ಸಂದರ್ಭ ಕನ್ನಡಿಕಟ್ಟೆಯಲ್ಲಿ ಈ ಘೋರ ದುರಂತ ನಡೆದಿದೆ.

ಫೋನ್ ಕೊಡುವಂತೆ ಬೆದರಿಕೆ: ದೂರು

ಮಂಗಳೂರು: ವ್ಯಕ್ತಿಯೊಬ್ಬರ ಫೋನ್ ಕೇಳಿ ಬೆದರಿಕೆ ಒಡ್ಡಿದ ಕುರಿತಂತೆ ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ಹೊಯ್ಗೆ ಬಜಾರ್‌ನ ಬಾರೊಂದರ ಬಳಿ ಶನಿವಾರ ರಾತ್ರಿ 8 ಗಂಟೆ ಸುಮಾರಿಗೆ ನಡೆದುಕೊಂಡು ಹೋಗುತ್ತಿದ್ದ ರಾಘವೇಂದ್ರ ಬಾರ್ಕೆರಾ ಎಂಬವರ ಬಳಿ ಆಟೋದಲ್ಲಿ ಬಂದ ಇಬ್ಬರು ಅಪರಿಚಿತರು ಮೊಬೈಲ್ ಕೊಡುವಂತೆ ಒತ್ತಾಯಿಸಿದ್ದಾರೆ. ಕೊಡುವುದಿಲ್ಲ ಎಂದು ತಿಳಿಸಿದಾಗ, ಆಟೋದಲ್ಲಿದವರು ಮುಂದೆ ಹೋಗದಂತೆ ತಡೆದು ನಿಲ್ಲಿಸಿ, ಕೈಯಿಂದ ದೂಡಿ ಹಾಕಿದ್ದಾರೆ. ಬಳಿಕ ಆಟೋದಲ್ಲಿದ್ದ ರಾಡ್ ತೆಗೆದು ಮೊಬೈಲ್ ಫೋನ್ ಕೊಡುವಂತೆ ಬೆದರಿಸಿದ್ದಾರೆ. ಜತೆಗೆ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ವೃದ್ಧ ಆತ್ಮಹತ್ಯೆ

ಪುತ್ತೂರು: ಕೆದಂಬಾಡಿ ಗ್ರಾಮದ ದರ್ಬೆ ನಿವಾಸಿಯೋರ್ವರು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಮೇ 17ರಂದು ಸಂಭವಿಸಿದೆ. ಇಲ್ಲಿನ ದರ್ಬೆ ನಿವಾಸಿ ಜಯಚಂದ್ರ ನಾಯಕ್ (60) ಆತ್ಮಹತ್ಯೆ ಮಾಡಿಕೊಂಡವರು. ಇವರು ತಮ್ಮ ಮನೆಯಲ್ಲಿ ಪಕ್ಕಾಸಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪುತ್ತೂರು ಗ್ರಾಮಾಂತರ ಠಾಣೆಯ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಮೃತರು ಪತ್ನಿ ಹಾಗೂ ಮೂವರು ಮಕ್ಕಳನ್ನು ಅಗಲಿದ್ದಾರೆ.

ತಾಯಿ-ಮಗು ನಾಪತ್ತೆ

ಮಂಗಳೂರು: ಬಳ್ಳಾರಿ ಮೂಲದ ರಕ್ಷಿತಾ ಎಂ. (21) ಎಂಬವರು ಪ್ರಸ್ತುತ ನಗರದ ಬಂಗ್ರ ಕೂಳೂರು ದಂಬೆಲ್‌ನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದು, ಮೇ 9 ರಂದು ತನ್ನ ಮಗ ಆದರ್ಶ(1)ನೊಂದಿಗೆ



ಮನೆಯಿಂದ ಹೋದವರು ಈವರೆಗೆ ಮನೆಗೂ ಬಾರದೇ ಕಾಣೆಯಾಗಿರುವ ಪ್ರಕರಣ ಕಾವೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಕಾಣೆಯಾದವರ ಬಗ್ಗೆ ಮಾಹಿತಿ ಪತ್ತೆಯಾದಲ್ಲಿ ಕಾವೂರು ಪೊಲೀಸ್ ಠಾಣೆ ಸಂಪರ್ಕಿಸುವಂತೆ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚೆಕ್ ಅಮಾನ್ಯ: ದಂಡ

ಬೈಂದೂರು: ಚೆಕ್ ಅಮಾನ್ಯ ಪ್ರಕರಣದಲ್ಲಿ ನಾವುಂದ ಗ್ರಾಮದ ಮತ್ಸ್ಯೋದ್ಯಮಿ ಬಿ.ಎಸ್. ಶಾನಿಯಾಸ್ ವಿರುದ್ಧ ಕಂಫರ್ಟ್ ಮಿನಿ ಮಾರ್ಟ್ ನಾವುಂದ ಇದರ ಮಾಲಕರು ದಾಖಲಿಸಿದ ಚೆಕ್ ಅಮಾನ್ಯ ಪ್ರಕರಣದಲ್ಲಿ ಬೈಂದೂರು ಸಿವಿಲ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯವು ರೂ.55,000 ಮೊತ್ತವನ್ನು ಪಾವತಿಸಲು ಆದೇಶಿಸಿದೆ. ಒಂದು ವೇಳೆ ಸದ್ರಿ ಮೊತ್ತವನ್ನು ಪಾವತಿಸದೇ ಇದ್ದ ಪಕ್ಷದಲ್ಲಿ ಒಂದು ವರ್ಷ ಕಾರಾಗೃಹ ಶಿಕ್ಷೆಯನ್ನು ಅನುಭವಿಸಲು ಆದೇಶಿಸಿದೆ. ವಿಚಾರಣೆ ಬಳಿಕ ಬಿ. ಎಸ್. ಶಾನಿಯಾಸ್ ದೋಷಿ ಎಂದು ಪರಿಗಣಿಸಿ ಶಿಕ್ಷೆ ಪ್ರಕಟಿಸಿದ್ದು, ಬಿ. ಎಸ್. ಶಾನಿಯಾಸ್ ರೂ. 1,05,000 ಹಾಗೂ ರೂ. 5000ವನ್ನು ಸರ್ಕಾರಕ್ಕೆ ಪಾವತಿಸಬೇಕು ಎಂದು ಆದೇಶಿಸಿದೆ.

ಪ್ರಾಕೃತಿಕ ವಿಕೋಪ ತಡೆಯಲು ಸಕಲ ಸಿದ್ಧತೆ | ಮೇ 26ರೊಳಗೆ ಚರಂಡಿ ಹೂಳೆತ್ತುವಿಕೆ ಪೂರ್ಣ

ಕೃತಕ ನೆರೆ ತಡೆಗೆ ಶಾಶ್ವತ ಪರಿಹಾರಕ್ಕೆ ಕ್ರಮ

ಮಂಗಳೂರು: ಮಳೆಗಾಲದಲ್ಲಿ ಎದುರಾಗುವ ಪ್ರಾಕೃತಿಕ ವಿಕೋಪ ತಡೆಯಲು ಜಿಲ್ಲಾಡಳಿತ ಸಕಲ ಸಿದ್ಧತೆ ನಡೆಸಿದೆ. ಮಳೆಯ ಸಂದರ್ಭ ಕೆಲವೊಂದು ತಗ್ಗು ಪ್ರದೇಶಗಳಲ್ಲಿ ಕೃತಕ ನೆರೆ ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಶಾಶ್ವತ ಪರಿಹಾರಕ್ಕೆ ಕ್ರಮವಹಿಸಲಾಗುತ್ತಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಂಪ್‌ವೆಲ್ ಸೇರಿದಂತೆ ಕೃತಕ ನೆರೆ ಸಂಭವಿಸುವ ಪ್ರದೇಶಗಳ ಒಳಚರಂಡಿಗಳ ಎತ್ತರವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಐದು ಕಾಮಗಾರಿಗಳಲ್ಲಿ ಮೂರು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕೆಲವೆಡೆ ಭೂಸ್ವಾಧೀನದ ಅಗತ್ಯವಿದೆ. ರಾಜಕಾಲುವೆಗಳು ಸೇರಿದಂತೆ ಮಳೆ ನೀರು ಹರಿಯುವ ಚರಂಡಿಗಳ ಹೂಳೆತ್ತುವ ಕಾಮಗಾರಿ ಮೇ 26ರೊಳಗೆ ಪೂರ್ಣಗೊಳ್ಳಲಿದೆ ಎಂದವರು ಹೇಳಿದರು.

ಈ ಹಿಂದೆ ಹೂಳೆತ್ತುವ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬ ದೂರಿನ ಮೇರೆಗೆ ಈ ಬಾರಿ ಸ್ಥಳೀಯ ಆಸಕ್ತ ಜನರ ಮೇಲ್ವಿಚಾರಣೆಯೊಂದಿಗೆ ಕಾಮಗಾರಿ ನಡೆಸಲಾಗುತ್ತಿದೆ ಎಂದರು.

ರಾಷ್ಟ್ರೀಯ ಹೆದ್ದಾರಿ ರಸ್ತೆಗಳ ಅತಿಕ್ರಮಣ ತೆರವಿಗೆ ಕ್ರಮ ರಾಷ್ಟ್ರೀಯ ಹೆದ್ದಾರಿ 66, 75, 73ರಲ್ಲಿ ಅತಿಕ್ರಮಣ ತೆರವು ಕಾರ್ಯಾಚರಣೆಗೆ



ಎನ್‌ಎಚ್‌ಎಐಯಿಂದ ಮಾಹಿತಿ ಪಡೆಯಲಾಗಿದೆ. ಸ್ಥಳೀಯ ತಂಡಗಳ ಸಹಕಾರದೊಂದಿಗೆ ತೆರವು ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಜಿಲ್ಲಾಧಿಕಾರಿ ದರ್ಶನ್ ಉತ್ತರಿಸಿದರು.

ವಾಟರ್ ಫ್ರಂಟ್ ಯೋಜನೆ ಶೀಘ್ರ ಮುಕ್ತಾಯ

ನೇತ್ರಾವತಿ ಸೇತುವೆ ಸಮೀಪ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನಿರ್ಮಾಣವಾಗುತ್ತಿರುವ ಜಲಾಭಿಮುಖ ಅಭಿವೃದ್ಧಿ ಯೋಜನೆ (ವಾಟರ್ ಫ್ರಂಟ್) ಕಾಮಗಾರಿ ಜೂನ್ 2ನೆ ವಾರದೊಳಗೆ ಪೂರ್ಣಗೊಳ್ಳಲಿದೆ. ಒಟ್ಟು 2.1 ಕಿ.ಮೀ. ವ್ಯಾಪ್ತಿಯ ಯೋಜನೆಯಡಿ 1.8 ಮೀಟರ್ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಈ ವಾಯು ವಿಹಾರ ಪಥಕ್ಕೆ ಪ್ರವೇಶ ಹಾದಿ ಕಿರಿದಾಗಿದ್ದು, ಮಂಗಳೂರು ಕ್ಲಬ್ ಮೂಲಕ ಪಾರ್ಕಿಂಗ್ ವ್ಯವಸ್ಥೆಯೊಂದಿಗೆ ಪ್ರವೇಶ ದಾರಿಗೆ ಮಾತುಕತೆ ನಡೆಸಿ ಕ್ರಮ ವಹಿಸಲಾಗುವುದು. ಪಕ್ಕದ ಹೆಂಚಿನ ಕಾರ್ಖಾನೆಯ ಮಾಲಕರು ಕೂಡಾ ಪ್ರವೇಶಕ್ಕೆ ಹಾದಿ ಒದಗಿಸಲು ಒಪ್ಪಿದ್ದು, ಕ್ರಮ ವಹಿಸಲಾಗುವುದು. ಸದ್ಯ ಕಾಮಗಾರಿ ನಡೆಯುತ್ತಿರುವ ಕಾರಣ ಉದ್ಯಾನವದೊಳಗೆ ಸಾರ್ವಜನಿಕರ ಪರವೇಶವನ್ನು ನಿರ್ಬಂಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದರು.

ಫಲ್ಗುಣಿ ನದಿ ಹರಿವಿಗೆ ತೊಂದರೆ ಆಗದಂತೆ ಕ್ರಮ

ಸುಲ್ತಾನ್ ಬತ್ತೇರಿ ಹಾಗೂ ತಣ್ಣೀರುಬಾವಿ ನಡುವೆ ಸೇತುವೆ ನಿರ್ಮಾಣ ಕಾರ್ಯದ ಹಿನ್ನೆಲೆಯಲ್ಲಿ ಫಲ್ಗುಣಿ ನದಿಗೆ ಹಾಕಲಾಗಿರುವ ಮಣ್ಣಿನ ಒಡ್ಡನ್ನು ತೆರವುಗೊಳಿಸುವ ಕಾರ್ಯ ಶೀಘ್ರವೇ ನಡೆಯಲಿದೆ. ಈ ಬಗ್ಗೆ ಈಗಾಗಲೇ ಸಭೆ ನಡೆಸಿ ಮಳೆಗಾಲದಲ್ಲಿ ನದಿ ನೀರಿನ ಹರಿವಿಗೆ ತೊಂದರೆ ಆಗದಂತೆ ಯಾವ ರೀತಿಯಲ್ಲಿ ಕ್ರಮ ವಹಿಸಬೇಕು ಎಂಬ ಬಗ್ಗೆ ಚರ್ಚೆ ಆಗಿದೆ. ಜುಲೈ 2ನೆ ವಾರದೊಳಗೆ ಸಂಪೂರ್ಣ ಕಾಮಗಾರಿ ಪೂರ್ಣವಾಗಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಸುಲ್ತಾನ್ ಬತ್ತೇರಿ ನದಿ ಅತಿಕ್ರಮಣ 10 ದಿನಗಳಲ್ಲಿ ತೆರವು

ಸುಲ್ತಾನ್ ಬತ್ತೇರಿಯ ಬೋಳೂರು ಪಾರ್ಕ್ ಬಳಿ ಫಲ್ಗುಣಿ ನದಿಗೆ ಕಟ್ಟಡ ತ್ಯಾಜ್ಯ ಸೇರಿದಂತೆ ಮಣ್ಣು ಸುರಿದು ಅತಿಕ್ರಮಣ ಮಾಡಿರುವುದನ್ನು ಎರಡು ಜೆಸಿಬಿಗಳ ಮೂಲಕ 10 ದಿನಗಳಲ್ಲಿ ತೆರವುಗೊಳಿಸುವ ಕಾರ್ಯ ನಡೆಯಲಿದೆ ಎಂದು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದರು. ಅತಿಕ್ರಮಣ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಿ ದಂಡ ಹಾಕಿ ಅತಿಕ್ರಮಣ ತೆರವುಗೊಳಿಸುವಂತೆ ಸೂಚಿಸಲಾಗಿದ್ದರೂ ಎರಡು ಮೂರು ವಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಹಾಗಾಗಿ ಜಿಲ್ಲಾಡಳಿತದ ವತಿಯಿಂದಲೇ ಅತಿಕ್ರಮಣ ತೆರವು ಕಾರ್ಯವನ್ನು ಎರಡು ಜೆಸಿಬಿಗಳ ಮೂಲಕ ನಡೆಸಲಾಗುತ್ತಿದೆ. ಅದರ ಖರ್ಚು ವೆಚ್ಚವನ್ನು ಅತಿಕ್ರಮಣ ಮಾಡಿದವರಿಂದಲೇ ಭರಿಸಲಾಗುವುದು ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದರು.

ಬ್ಯಾಂಕ್ ಕಾವಲುಗಾರನ ಇರಿದು ಹತ್ಯೆ: ಇಬ್ಬರು ಆರೋಪಿಗಳ ಬಂಧನ

ಬದಿಯಡ್ಕ: ಬ್ಯಾಂಕ್ ಕಾವಲುಗಾರನಾದ ವ್ಯಕ್ತಿಯನ್ನು ಇರಿದು ಕೊಲೆಗೈದ ಘಟನೆ ಮಾರ್ಪನಡ್ಕದಲ್ಲಿ ನಡೆದಿದೆ. ಕುಂಬ್ಡಾಜೆ ಸೇವಾ ಸಹಕಾರಿ ಬ್ಯಾಂಕ್‌ನ ಸೆಕ್ಯುರಿಟಿ ನೌಕರ, ಮಾರ್ಪನಡ್ಕ ಬೆದ್ರಂಕೊಡ್ಲು ನಿವಾಸಿ, ಬಿಜೆಪಿ ಮತ್ತು ಎಸ್‌ಸಿ ಮೋರ್ಚಾದ ಮುಖಂಡರಾಗಿದ್ದ ಬಿ.ಕೆ.ಸುರೇಶ್ (45) ಹತ್ಯೆಗೀಡಾದ ವ್ಯಕ್ತಿ. ಕೊಲೆ ನಡೆಸಿ ಪುತ್ತೂರಿಗೆ ಪರಾರಿಯಾಗಲು ಯತ್ನಿಸಿದ ಆರೋಪಿಗಳಾದ ಕುಂಬ್ಡಾಜೆ ಮಾಪಿಳ್ಳತೊಟ್ಟಿ ನಿವಾಸಿ ಕಿರಣ್ (30) ಮತ್ತು ಕರುವಲ್ತಡ್ಕದ ಪಾಲೆಕ್ಕಾರು ನಿವಾಸಿ ಅಖಿಲೇಶ್ (25) ಎಂಬವರನ್ನು ಕಾಸರಗೋಡು ಉನ್ನತ ಮಟ್ಟದ ಪೊಲೀಸರು ಮತ್ತು ಬದಿಯಡ್ಕ ಪೊಲೀಸರ ತಂಡವು ಬಂಧಿಸಿದೆ.

- ಕುಂಬ್ಡಾಜೆ ಸೇವಾ ಸಹಕಾರಿ ಬ್ಯಾಂಕ್‌ನ ಸೆಕ್ಯುರಿಟಿ ನೌಕರ, ಬಿಜೆಪಿ ಮತ್ತು ಎಸ್‌ಸಿ ಮೋರ್ಚಾದ ಮುಖಂಡರಾಗಿದ್ದ ಬಿ.ಕೆ.ಸುರೇಶ್ (45) ಹತ್ಯೆಗೀಡಾದ ವ್ಯಕ್ತಿ.
- ಆರೋಪಿಗಳು 2 ಬೈಕ್‌ಗಳಲ್ಲಾಗಿ ಆಗಮಿಸಿ ಕೊಲೆ ನಡೆಸಿದ್ದು ಬಳಿಕ ಒಂದು ಬೈಕ್‌ನ್ನು ಅಲ್ಲೇ ಉಪೇಕ್ಷಿಸಿ ಇನ್ನೊಂದು ಬೈಕ್‌ನಲ್ಲಿ ಏತಡ್ಕ ಮೂಲಕ ಪುತ್ತೂರಿಗೆ ತೆರಳಿ ತಲೆಮರೆಸಿಕೊಳ್ಳಲು ಯತ್ನಿಸಿದ್ದರು.



ಭಾನುವಾರ ರಾತ್ರಿ ಕುಂಬ್ಡಾಜೆ ಸೇವಾ ಸಹಕಾರಿ ಬ್ಯಾಂಕ್‌ನ ಪರಿಸರದಲ್ಲಿ ಈ ಕೊಲೆಕೃತ್ಯ ಸಂಭವಿಸಿದೆ. ಆರೋಪಿಗಳು ಎರಡು ಬೈಕ್‌ಗಳಲ್ಲಾಗಿ ಆಗಮಿಸಿ ಕೊಲೆ ನಡೆಸಿದ್ದು ಬಳಿಕ ಒಂದು ಬೈಕ್‌ನ್ನು ಅಲ್ಲೇ ಉಪೇಕ್ಷಿಸಿ ಇನ್ನೊಂದು ಬೈಕ್‌ನಲ್ಲಿ ಏತಡ್ಕ ಮೂಲಕ ಪುತ್ತೂರಿಗೆ ತೆರಳಿ ತಲೆಮರೆಸಿಕೊಳ್ಳಲು ಯತ್ನಿಸಿದ್ದರು. ಈ ನಡುವೆ ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕುಂಬ್ಡಾಜೆ ಗ್ರಾಮ ಪಂಚಾಯತ್ ಮೈದಾನದಲ್ಲಿ ನಡೆದ ಕ್ರಿಕೆಟ್ ಪಂದ್ಯಾಟದ ವೇಳೆ ಉಂಟಾದ ವಾಗ್ವಾದವೇ ಕೊಲೆಕೃತ್ಯಕ್ಕೆ ಕಾರಣವೆಂದು ಪೊಲೀಸರ ಪ್ರಾಥಮಿಕ ಮಾಹಿತಿಯಲ್ಲಿ ತಿಳಿಸಲಾಗಿದೆ. ಮೈದಾನದಲ್ಲಿ ನಡೆದ ವಾಗ್ವಾದದ ಮುಂದವರಿಕೆಯಾಗಿ ಬ್ಯಾಂಕ್ ಪರಿಸರಕ್ಕೆ ಆಗಮಿಸಿದ ಆರೋಪಿಗಳು ಸುರೇಶ್ ಅವರಿಗೆ ಯದ್ವಾತದ್ವಾವಾಗಿ ಇರಿದಿದ್ದರು. ಗಂಭೀರ ಗಾಯಗೊಂಡಿದ್ದ ಅವರನ್ನು ಕೂಡಲೇ ಆಸ್ಪತ್ರೆಗೆ ತಲುಪಿಸಿದರೂ ಜೀವ ಉಳಿಸಲು ಸಾಧ್ಯವಾಗಲಿಲ್ಲ. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ದಿ.ಕೊರಗ ಎಂಬವರ ಪುತ್ರನಾದ ಮೃತರು ತಾಯಿ ದೇವಕಿ, ಪತ್ನಿ ಉಷಾ, ಮಕ್ಕಳಾದ ಸುಶಾಂತ್, ಸುಭಾಷ್, ಸುಧೀಶ್ ಅವರನ್ನು ಅಗಲಿದ್ದಾರೆ.

ಕುಟುಂಬಶ್ರೀ ಸಾರಥ್ಯದಲ್ಲಿ ವಿಷಕಾರಿಯಲ್ಲದ ಕಲ್ಲಂಗಡಿ ಹಣ್ಣುಗಳ ಬೆಳೆ

ಕೇರಳಕ್ಕೆ ಮಾದರಿಯಾದ ಕಾಸರಗೋಡು

ಕಾಸರಗೋಡು: ಮಾರುಕಟ್ಟೆಗಳಲ್ಲಿ ವಿಷಕಾರಿ ಕಲ್ಲಂಗಡಿಗಳ ಬಗ್ಗೆ ಕಳವಳ ಹೆಚ್ಚುತ್ತಿರುವಂತೆಯೇ ಕಾಸರಗೋಡು ಜಿಲ್ಲೆಯು ತನ್ನದೇ ಆದ ಮಣ್ಣಿನಲ್ಲಿ ಗುಣಮಟ್ಟದ ವಿಷಕಾರಿಯಲ್ಲದ ಕಲ್ಲಂಗಡಿ ಹಣ್ಣುಗಳನ್ನು ಬೆಳೆಯುವ ಮೂಲಕ ಇಡೀ ರಾಜ್ಯಕ್ಕೆ ಮಾದರಿಯಾಗಿದೆ. ಕುಟುಂಬಶ್ರೀ ರಾಜ್ಯ ಮಿಷನ್‌ನ ವೇನಲ್ ಮಧುರಂ ಎಂಬ ವಿಶೇಷ ಯೋಜನೆಯ ಭಾಗವಾಗಿ ನಡೆಸಲಾದ ಕಲ್ಲಂಗಡಿ (ಬಚ್ಚಂಗಾಯಿ) ಕೃಷಿಯಲ್ಲಿ ಜಿಲ್ಲೆ ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದಿದೆ. ಈ ಸಾಧನೆಗೆ ಕುಟುಂಬಶ್ರೀ ಸದಸ್ಯೆಯರ ಸಮರ್ಥ ಯೋಜನೆ ಮತ್ತು ಕಠಿಣ ಪರಿಶ್ರಮವೇ ಕಾರಣ. ಜೆಎಲ್‌ಜಿ ಗುಂಪುಗಳ ಸದಸ್ಯೆಯರು ಪಾಳು ಬಿದ್ದ ಖಾಸಗಿ ಭೂಮಿ ಮತ್ತು ಗುತ್ತಿಗೆ ಪಡೆದ ಭತ್ತದ ಗದ್ದೆಗಳನ್ನು ಕೃಷಿಯೋಗ್ಯವಾಗಿಸುವ ಮೂಲಕ ಕಲ್ಲಂಗಡಿ ಕೃಷಿಯನ್ನು ವಿಸ್ತರಿಸಿದ್ದಾರೆ. ಕಾಞಂಗಾಡಿನಲ್ಲಿರುವ ದುರ್ಗಾ ಕುಟುಂಬಶ್ರೀ ನೆರೆಹೊರೆ ಗುಂಪಿನ ಒಂಭತ್ತು ಮಂದಿ ಸದಸ್ಯೆಯರ ತಂಡವು ಉತ್ತಮ ರೀತಿಯಲ್ಲಿ ಕಲ್ಲಂಗಡಿ ಕೃಷಿ ಮಾಡಿ ಜಿಲ್ಲೆಗೇ ತಂದಿದ್ದಾರೆ.

ಮನೆಯ ಪಕ್ಕದಲ್ಲಿರುವ ಸುಮಾರು ಎರಡು ಎಕರೆ ಪಾಳುಭೂಮಿಯನ್ನು ಕೃಷಿಯೋಗ್ಯ ಭೂಮಿಯಾಗಿ ತಂಡವು ಪರಿವರ್ತಿಸಿತು ಮತ್ತು ಉತ್ತಮ ಫಸಲನ್ನು ಗಳಿಸಿತು. ಜಿಲ್ಲೆಯಲ್ಲಿ ಕಲ್ಲಂಗಡಿ ಕೃಷಿ ಚಟುವಟಿಕೆಗಳಿಗೆ ಸುಡುವ ಬೇಸಿಗೆಯಲ್ಲಿಯೂ ಸರಿಯಾದ ನೀರಾವರಿ ಮತ್ತು ಸಾವಯವ ಗೊಬ್ಬರಗಳ ವ್ಯವಸ್ಥೆ ಲಭಿಸಿದ್ದವು.

ಮಾರುಕಟ್ಟೆ ಬೇಡಿಕೆಯನ್ನು ನಿರೀಕ್ಷಿಸಿ ವಿವಿಧ ಪ್ರಭೇದಗಳನ್ನು ಬೆಳೆಸಲಾಗಿದೆ. ಹೊರಭಾಗದಲ್ಲಿ ಕಪ್ಪು ಬಣ್ಣದಲ್ಲಿರುವ ಶುಗರ್ ಬೇಬಿ ವಿಧ ಮತ್ತು ಒಳಭಾಗದಲ್ಲಿ ಹಳದಿ ಬಣ್ಣದ ಹಳದಿ ಮಂಚ್ ವಿಧವು ಉತ್ತಮ ಬೇಡಿಕೆ ಪಡೆಯುವಲ್ಲಿ ಯಶಸ್ವಿಯಾಗಿದೆ. ಅಲ್ಲದೆ ನಾಮಧಾರಿ, ಮಹಾರಾಜ, ಇರಾನಿ ಮತ್ತು ಸ್ವಾಮ್‌ನಂತಹ ಪ್ರಭೇದಗಳನ್ನು ಸಹ ಜಿಲ್ಲೆಯಲ್ಲಿ ವ್ಯಾಪಕವಾಗಿ ಬೆಳೆಸಲಾಗಿದೆ.

ನಮ್ಮ ಹೊಲಗಳಿಂದ ಹಣ್ಣುಗಳು ಬರುತ್ತವೆ ಎಂಬ ನಂಬಿಕೆಯನ್ನು ಸ್ಥಳೀಯರಲ್ಲಿ ಕುಟುಂಬಶ್ರೀ ಮೂಡಿಸುವಲ್ಲಿ ಯಶಸ್ವಿಯಾಯಿತು. ಕುಟುಂಬಶ್ರೀ ನೇರವಾಗಿ ರಸ್ತೆಬದಿಗಳಲ್ಲಿ ಮಳಿಗೆಗಳನ್ನು ತೆರೆಯುವುದರೊಂದಿಗೆ ಮಧ್ಯವರ್ತಿಗಳಿಲ್ಲದೆ ಉತ್ತಮ ಆದಾಯವನ್ನು ಗಳಿಸಿದೆ.

ರಾಜ್ಯಾದ್ಯಂತ ಕಲ್ಲಂಗಡಿ ಕೃಷಿಯ ಮೂಲಕ ಕುಟುಂಬಶ್ರೀ ಘಟಕಗಳು 6.78 ಕೋಟಿ ರೂಪಾಯಿ ಆದಾಯ ಗಳಿಸಿದೆ. ಕಾಸರಗೋಡು ಜಿಲ್ಲೆಯು 3.91 ಕೋಟಿ ರೂಪಾಯಿ ಆದಾಯ ಪಡೆದು ಮೊದಲ ಸ್ಥಾನ ಪಡೆಯಿತು. 326.9 ಎಕರೆ ಪ್ರದೇಶದಲ್ಲಿ ಕಲ್ಲಂಗಡಿ ಕೃಷಿ ನಡೆಸುವ ಮೂಲಕ ಈ ಸಾಧನೆ ಮಾಡಲಾಗಿದೆ. ಎರಡನೇ ಸ್ಥಾನ ಪಡೆದ ಮಲಪ್ಪುರಂ ಜಿಲ್ಲೆಯು 99.54 ಲಕ್ಷ ರೂಪಾಯಿ ವಹಿವಾಟು ಮತ್ತು ಮೂರನೇ ಸ್ಥಾನ ಪಡೆದ ತ್ರಿಶೂರು ಜಿಲ್ಲೆಯು 80.24 ಲಕ್ಷ ರೂಪಾಯಿ ವಹಿವಾಟು ಮಾಡಿದೆ.

400 ಎಕರೆ ಕೃಷಿ ಗುರಿಯೊಂದಿಗೆ ಆರಂಭಿಸಲಾದ ಈ ಯೋಜನೆಯು 326.9 ಎಕರೆಗಳಲ್ಲಿ ದಾಖಲೆಯ ಇಳುವರಿಯನ್ನು ಸಾಧಿಸಿದೆ. ಕಾಸರಗೋಡು ಜಿಲ್ಲೆಯ 42 ಸಿಡಿಎಸ್ ಪ್ರದೇಶಗಳಲ್ಲಿ ನಡೆಸಿದ ಕೃಷಿಯಲ್ಲಿ ಬದಿಯಡ್ಕ ಸಿಡಿಎಸ್ (16 ಎಕರೆ) ಮೊದಲ ಸ್ಥಾನ ಮತ್ತು ಚೆಂಗಳ ಸಿಡಿಎಸ್ (12 ಎಕರೆ) ಎರಡನೇ ಸ್ಥಾನ ಗಳಿಸಿದೆ. ಗ್ರೂಪ್‌ಗಳ ಪೈಕಿ ಬದಿಯಡ್ಕ ದುರ್ಗಾ ಜೆಎಲ್‌ಜಿ ಮತ್ತು ಚೆಂಗಳದ ಹರಿತಾ ಹಾಗೂ ಹರಿಶ್ರೀ ಜೆಎಲ್‌ಜಿಗಳು ಉತ್ತಮ ಪ್ರದರ್ಶನ ನೀಡಿದವು.

ಕಾಸರಗೋಡು ಜಿಲ್ಲೆಗೆ ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಕಲ್ಲಂಗಡಿ ಲಭ್ಯತೆಯೊಂದಿಗೆ ಇತರ ರಾಜ್ಯಗಳಿಂದ ಆಮದು ಗಮನಾರ್ಹವಾಗಿ ಕಡಿಮೆಯಾಗಿದೆ.



ಭಾರೀ ಯಶಸ್ಸು

ರಾಜ್ಯ ಮಿಷನ್‌ನ ಬೆಂಬಲ ಮತ್ತು ವಿವಿಧ ಇಲಾಖೆಗಳ ಸಹಕಾರ ಮುಂದುವರಿದರೆ ಮುಂಬರುವ ವರ್ಷಗಳಲ್ಲಿ ಜಿಲ್ಲೆಯಲ್ಲಿ ಕಲ್ಲಂಗಡಿ ಕೃಷಿಯನ್ನು 700 ಎಕರೆ ಪ್ರದೇಶಕ್ಕೆ ವಿಸ್ತರಿಸಬಹುದು ಎಂದು ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ಕೆ.ರತೀಶ್ ಕುಮಾರ್ ಹೇಳಿದ್ದಾರೆ. ಡಿಸೆಂಬರ್‌ನಲ್ಲಿ ಪ್ರಾರಂಭವಾದ ಅಭಿಯಾನವು ಮಾರ್ಚ್ ಮತ್ತು ಏಪ್ರಿಲ್ ವೇಳೆಗೆ ಭಾರೀ ಯಶಸ್ಸು ಸಾಧಿಸಿತು ಎಂದು ಅವರು ಮಾಹಿತಿ ನೀಡಿದ್ದಾರೆ.

ಸುಳ್ಯ ಪೆರಾಜೆಯಲ್ಲಿ ಮತ್ತೆ ಅಕ್ರಮ ಹರಳುಕಲ್ಲು ಗಣಿಗಾರಿಕೆ

ಅಧಿಕಾರಿಗಳಿಂದ ಸ್ಥಳ ಪರಿಶೀಲನೆ

ಸುಳ್ಯ: ಪೆರಾಜೆ ತೊಕ್ಕುಳಿ ಬಳಿ ಹರಳು ಕಲ್ಲು ಗಣಿಗಾರಿಕೆ ನಡೆಯುತ್ತಿದೆ ಎಂಬ ಲಭ್ಯ ಮಾಹಿತಿಯ ಹಿನ್ನಲೆಯಲ್ಲಿ ಸ್ಥಳಕ್ಕೆ ಗಣಿ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ ಘಟನೆ ಸೋಮವಾರ ನಡೆದಿದೆ.

ಈ ಹಿಂದೆ ಇದೇ ಸ್ಥಳದಲ್ಲಿ ಅಕ್ರಮವಾಗಿ ಹರಳುಕಲ್ಲು ತೆಗೆಯುವುದಾಗಿ ದೂರಿನ ಬಳಿಕ ಅಕ್ರಮಗಳಿಗೆ ಕಡಿವಾಣ ಹಾಕಲಾಗಿದ್ದು ಇದೀಗ ಮತ್ತೆ ಅದೇ ಪ್ರದೇಶದಲ್ಲಿ ಅಕ್ರಮವಾಗಿ ಹರಳುಕಲ್ಲು ಗಣಿಗಾರಿಕೆ ಆರಂಭವಾಗಿರುವ ಕುರಿತು ದೂರು ಬಂದಿತ್ತು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮಣ್ಣು ಅಗೆದಿರುವ ಸ್ಥಳವನ್ನು ಪರಿಶೀಲನೆ ನಡೆಸಿದರು.



ಅಲ್ಲದೆ, ಗಣಿ ಅಧಿಕಾರಿಗಳು ಪರೀಕ್ಷೆಗಾಗಿ ಮಣ್ಣು ಕೊಂಡೊಯ್ದಿರುವುದಾಗಿ ತಿಳಿದು ಬಂದಿದೆ. ಈ ಕುರಿತು ಸ್ಪಷ್ಟ ಉತ್ತರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಸಿಗದೇ ಇದ್ದು ಈ ವಿಚಾರ ತಾಲೂಕಿನೆಲ್ಲೆಡೆ ಚರ್ಚೆಗೆ ಗ್ರಾಸವಾಗಿದೆ.

ಅನುಮಾನ ಹುಟ್ಟಿಸಿದೆ ನಂಬರ್ ಪ್ಲೇಟ್‌ಗೆ ಬಳಿದ ಬಣ್ಣ


ವಾಹನ ಅಪಘಾತ: ಓರ್ವ ಮೃತ್ಯು

ಪುತ್ತೂರು: ಮಿತ್ತೂರು ಸಮೀಪದ ಕೂವೆತ್ತಿಲದಲ್ಲಿ ಪಿಕಪ್ ಹಾಗೂ ದ್ವಿಚಕ್ರವಾಹನದ ನಡುವೆ ಅಪಘಾತ ನಡೆದು, ದ್ವಿಚಕ್ರವಾಹನ ಸವಾರ ಗಂಭೀರ ಗಾಯಗೊಂಡು ಮೃತಪಟ್ಟಿದ್ದಾರೆ.

ವಾಹನಗಳ ಕುಶನ್ ಕೆಲಸ ನಿರ್ವಹಿಸುತ್ತಿದ್ದ ಕಬಕ ನಿವಾಸಿ ಸಲೀಂ (52) ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟವರು.

ಸವಾರ ಮಿತ್ತೂರು ಶಿಕ್ಷಣ ಸಂಸ್ಥೆಗೆ ತೆರಳಿ ಹಿಂದಿರುಗುತ್ತಿದ್ದ ಸಂದರ್ಭ ಕಬಕ ಕಡೆಯಿಂದ ಆಗಮಿಸಿದ ಪಿಕಪ್ ಡಿಕ್ಕಿಯಾಗಿದೆ.

ಡಿಕ್ಕಿಯ ರಭಸಕ್ಕೆ ಸವಾರ ರಸ್ತೆಗೆ ಎಸೆಯಲ್ಪಟ್ಟು ಗಂಭೀರ ಗಾಯಗೊಂಡಿದ್ದಾನೆನ್ನಲಾಗಿದೆ.



ಡಿಕ್ಕಿಯ ತೀವ್ರತೆಗೆ ದ್ವಿಚಕ್ರವಾಹನದ ಮುಂಭಾಗ ಸಂಪೂರ್ಣ ಜಖಂಗೊಂಡಿದೆ. ನಿಯಂತ್ರಣ ಕಳೆದುಕೊಂಡ ಪಿಕಪ್ ರಸ್ತೆ ಬದಿಯ ಚರಂಡಿಗೆ ನುಗ್ಗಿದೆ.

ನಂಬರ್ ಪ್ಲೇಟ್‌ಗೆ ಬಣ್ಣ!

ಪಿಕಪ್ ವಾಹನದಲ್ಲಿ ಎಲ್ಲವೂ ಸಮಂಜಸವಾಗಿಲ್ಲ ಎಂದು ಹೇಳಲಾಗಿದ್ದು, ಈ ಕಾರಣದಿಂದ ಗುರುತು ಸಿಗದಂತೆ ಮಾಡುವ ಪ್ರಯತ್ನವಾಗಿದೆ ಎಂದು ಆರೋಪವಿದೆ. ಘಟನೆಯ ಬಳಿಕ ಪಿಕಪ್ ನಂಬರ್ ಪ್ಲೇಟ್‌ಗೆ ನೀಲಿ ಬಣ್ಣ ಬಳಿದಿರುವುದು ಹಲವು ಅನುಮಾನಕ್ಕೆ ಕಾರಣವಾಗಿದೆ.

ಮೇ 29ರಿಂದ 31ರವರೆಗೆ ತಣ್ಣೀರುಬಾವಿಯಲ್ಲಿ ಆಯೋಜನೆ | ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಿಂದಲೂ ಸ್ಪರ್ಧಿಗಳು

ರಾಷ್ಟ್ರೀಯ ಸರ್ಫಿಂಗ್ ಸ್ಪರ್ಧೆಗೆ ಸಜ್ಜಾಗುತ್ತಿದೆ ಬ್ಲೂ ಬೇ ಇಕೋ ಬೀಚ್

ಮಂಗಳೂರು: ಮಂಗಳೂರಿನ ತಣ್ಣೀರುಬಾವಿಯ ಬ್ಲೂ ಬೇ ಇಕೋ ಬೀಚ್‌ನಲ್ಲಿ ಮೇ 29ರಿಂದ 31ರವರೆಗೆ ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಚಾಂಪಿಯನ್ ಶಿಪ್ ಆಯೋಜಿಸಲಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಚಿ ನಗೋಯಾ ಏಷ್ಯನ್ ಗೇಮ್ಸ್ 2026ನಲ್ಲಿ ಸರ್ಫಿಂಗ್‌ನಲ್ಲಿ ಭಾರತದ ಸ್ಪರ್ಧಿಗಳು ಚೊಚ್ಚಲ ಪ್ರವೇಶಕ್ಕೆ ಸಿದ್ಧತೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಈ ಸರ್ಫಿಂಗ್ ಮಹತ್ವಪೂರ್ಣವೆನಿಸಿದೆ. ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದ ಸ್ಪರ್ಧಿಗಳು ಭಾಗವಹಿಸಲಿದ್ದಾರೆ ಎಂದರು.

ದೇಶದಲ್ಲಿ ಸರ್ಫಿಂಗ್ ಹಾಗೂ ಸ್ಟ್ಯಾಂಡ್-ಅಪ್ ಪ್ಯಾಡ್ಲಿಂಗ್ ಕ್ರೀಡೆಗಳ ಆಡಳಿತ ಸಂಸ್ಥೆಯಾದ ಸರ್ಫಿಂಗ್ ಫೆಡರೇಶನ್ ಆಫ್ ಇಂಡಿಯಾ ಆಶ್ರಯದಲ್ಲಿ ನಡೆಯುವ ಈ ಸ್ಪರ್ಧೆಯನ್ನು ನವ ಮಂಗಳೂರು ಬಂದರು ಪ್ರಾಧಿಕಾರ ಸತತ ಮೂರನೇ ವರ್ಷವೂ ಎನ್‌ಎಂಪಿಎ ಇಂಡಿಯನ್ ಓಪನ್ ಆಫ್ ಸರ್ಫಿಂಗ್, ಶೀರ್ಷಿಕೆ ಪ್ರಾಯೋಜಕರಾಗಿ ಬೆಂಬಲಿಸುತ್ತಿದೆ. ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಸರ್ಫಿಂಗ್ ಅಸೋಸಿಯೇಷನ್ ಸಹ ಕಾರ್ಯಕ್ರಮಕ್ಕೆ ಕೈಜೋಡಿಸಿವೆ ಎಂದು ಅವರು ಹೇಳಿದರು. ಸರ್ಫಿಂಗ್ ಹಾಗೂ ಕರಾವಳಿ ಕ್ರೀಡೆಗಳಿಗೆ ಕರ್ನಾಟಕವು ದೇಶದ ಪ್ರಮುಖ ತಾಣವಾಗಿ ಹೊರಹೊಮ್ಮುತ್ತಿದೆ. ಎನ್‌ಎಂಪಿಎ ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಸ್ಪರ್ಧೆ ಮತ್ತು ಪ್ರವಾಸೋದ್ಯಮ ಎರಡನ್ನೂ ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಕರಾವಳಿಯ



ಸೌಂದರ್ಯವನ್ನು ಜಗತ್ತಿಗೆ ಪರಿಚಯಿಸುವುದರ ಜೊತೆಗೆ ಯುವ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಲು ಒತ್ತು ನೀಡಲಾಗಿದೆ ಎಂದವರು ತಿಳಿಸಿದರು.

ಮೂರು ದಿನಗಳ ಮುಕ್ತ ಸರ್ಫಿಂಗ್ ಸ್ಪರ್ಧೆ ನಡೆಯಲಿದೆ. 2017ರಿಂದ ಮಂಗಳೂರಿನಲ್ಲಿ ಸರ್ಫಿಂಗ್ ಸ್ಪರ್ಧೆಯನ್ನು ನಡೆಸಲಾಗುತ್ತಿದ್ದು, ಸ್ಪರ್ಧೆಯ ಚಾಂಪಿಯನ್‌ಗಳು ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ ಎಂದವರು ಹೇಳಿದರು.

- ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದ ಸ್ಪರ್ಧಿಗಳು ಭಾಗವಹಿಸಲಿದ್ದಾರೆ
- ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಸರ್ಫಿಂಗ್ ಅಸೋಸಿಯೇಷನ್ ಸಹ ಕಾರ್ಯಕ್ರಮಕ್ಕೆ ಕೈಜೋಡಿಸಿವೆ

ಕರ್ನಾಟಕ ಸರಕಾರದ ಬೆಂಬಲದೊಂದಿಗೆ ಸರ್ಫಿಂಗ್ ಸ್ಪರ್ಧೆಯನ್ನು ಸರ್ಫಿಂಗ್ ಸ್ವಾಮಿ ಫೌಂಡೇಶನ್‌ನ ಧನಂಜಯ್ ಶೆಟ್ಟಿ ಮಾತನಾಡಿ, ಕಳೆದ ಕೆಲ ವರ್ಷಗಳಲ್ಲಿ ಸರ್ಫರ್‌ಗಳ ಬೆಳವಣಿಗೆ ಆಶಾದಾಯಕವಾಗಿದೆ. ಈ ಚಾಂಪಿಯನ್‌ಶಿಪ್‌ನಲ್ಲಿ ದೇಶದ ಅಗ್ರ ಸರ್ಫರ್‌ಗಳು ವಿವಿಧ ವಿಭಾಗಗಳ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಸರ್ಫಿಂಗ್ ಕ್ಷೇತ್ರದ ರೋಮಾಂಚಕ ಕ್ಷಣಗಳಿಗೆ ಮಂಗಳೂರಿನ ಕಡಲ ಕಿನಾರೆ ಸಾಕ್ಷಿಯಾಗಲಿದೆ ಎಂದು ಅವರು ಹೇಳಿದರು.

ಈ ಸಂದರ್ಭ ಸರ್ಫಿಂಗ್ ಚಾಂಪಿಯನ್‌ಶಿಪ್‌ನ ಲೋಗೋವನ್ನು ಅನಾವರಣಗೊಳಿಸಲಾಯಿತು.

ಸುದ್ದಿಗೋಷ್ಠಿಯಲ್ಲಿ ಜಿ.ಪಂ. ಸಿಇಒ ನರ್ವಾಡೆ ವಿನಾಯಕ ಕಾರ್ಬಾರಿ, ಸರ್ಫಿಂಗ್ ಅಸೋಸಿಯೇಶ್‌ನ ಶ್ಯಾಮ್, ಧ್ರುವ, ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯ ಉಪ ನಿರ್ದೇಶಕ ಪ್ರದೀಪ್ ಡಿಸೋಜಾ, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ದಿಲೀಪ್ ಕುಮಾರ್, ಯತೀಶ್ ಬೈಕಂಪಾಡಿ ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 29° 26° | ಉಡುಪಿ 30° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 19, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5
ರಾತ್ರಿ ಸಂಚಾರಿ ಶಸ್ತ್ರಚಿಕಿತ್ಸಾ ಘಟಕ ಕಾಸರಗೋಡು ಜಿಲ್ಲೆಯಲ್ಲಿ ಆರಂಭ



ಪುಟ 6
ಕೊಡವೂರು ಮಹಾ ರುದ್ರಯಾಗದಲ್ಲಿ ಬೃಹತ್ ಉದ್ಯೋಗ ಮೇಳ

ಗ್ರಾಹಕರ ಮನಸೆಳೆಯುವಲ್ಲಿ ಯಶಸ್ವಿಯಾಯಿತು ಕದ್ರಿಯಲ್ಲಿ ಹಮ್ಮಿಕೊಂಡ ರಾಜ್ಯಮಟ್ಟದ ಗೇರು ಮೇಳ



ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಮತ್ತು ಅರಣ್ಯ ಇಲಾಖೆಯ ವತಿಯಿಂದ ಕದ್ರಿ ಉದ್ಯಾನವನದಲ್ಲಿ ಎರಡು ದಿನಗಳ ಕಾಲ ನಡೆದ ರಾಜ್ಯಮಟ್ಟದ ಗೇರು ಮೇಳಕ್ಕೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಕಂಡುಬಂದಿದೆ. ಕೊನೆಯ ದಿನವಾದ ಸೋಮವಾರ ರಿಯಾಯಿತಿ ದರದಲ್ಲಿ ಮಾವಿನ ಹಣ್ಣಿನ ಮಾರಾಟವಾಗಿದ್ದು, ಗ್ರಾಹಕರು ಮುಗಿಬಿದ್ದು ಖರೀದಿಸಿದರು. ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಬಾಗ್

ಸುತ್ತಮುತ್ತ

ಕರಾವಳಿ ಭಾಗಗಳಿಗೆ ಮೋಡದ ಹೊದಿಕೆ: ತುಸು ಇಳಿಕೆಯಾದ ತಾಪಮಾನ

ಮಂಗಳೂರು: ಸೋಮವಾರ ಕರಾವಳಿ ಭಾಗದಲ್ಲಿ ಮೋಡ ಮುಸುಕಿದ ವಾತಾವರಣ ಕಾಣಿಸಿಕೊಂಡಿದ್ದು, ಭಾರೀ ಮಳೆಯಾಗುವ ಸಾಧ್ಯತೆ ಗೋಚರಿಸಿತ್ತಾದರೂ ಎಲ್ಲೂ ಅಂತಹಾ ಮಳೆಯಾಗಿಲ್ಲ, ಕೆಲವೆಡೆ ಹನಿಹನಿ ಮಳೆಯಾಗಿದೆ. ಈ ನಡುವೆ ತಾಪಮಾನದಲ್ಲಿ ತುಸು ಇಳಿಕೆಯಾಗಿದ್ದು, ದಕ್ಷಿಣ ಕನ್ನಡದಲ್ಲಿ ಗರಿಷ್ಠ 29 ಡಿಗ್ರಿ, ಉಡುಪಿಯಲ್ಲಿ 30 ಡಿಗ್ರಿ, ಕಾಸರಗೋಡಿನಲ್ಲಿ 31 ಡಿಗ್ರಿ ಸೆಲ್ಸಿಯೆಸ್ ತಾಪಮಾನ ದಾಖಲಾಗಿತ್ತು.

ಭೀಕರ ಗಾಳಿ ಮಳೆಗೆ ಕಂಗಾಲಾದ ಸುಳ್ಯ: ಕೃಷಿ ಬೆಳೆಗಳಿಗೆ ಅಪಾರ ಹಾನಿ

ಸುಳ್ಯ: ತಾಲೂಕಿನಾದ್ಯಂತ ಅಬ್ಬರಿಸುತ್ತಿರುವ ಮುಂಗಾರು ಪೂರ್ವ ಗಾಳಿ ಮಳೆಯು ಭಾರಿ ಆಸ್ತಿಪಾಸ್ತಿ ನಷ್ಟವನ್ನುಂಟುಮಾಡಿದ್ದು, ರೈತರನ್ನು ಕಣ್ಣೀರಲ್ಲಿ ಕೈ ತೊಳೆಯುವಂತೆ ಮಾಡಿದೆ. ನೆಲ್ಲೂರು ಕೆಮ್ರಾಜೆ ಗ್ರಾಮದಲ್ಲಿ ಅಪಾರ ಹಾನಿಯಾಗಿದ್ದು, ಕೆರೆಮೂಲೆ ನಿವಾಸಿ ರಾಜಾರಾಮ್ ನಾಯಕ್ ವೈ ಎಂಬುವವರ ತೋಟದಲ್ಲಿದ್ದ ದೈತ್ಯ ಮರವೊಂದು ಏಕಾಏಕಿ ಬುಡಮೇಲಾಗಿ ಕೃಷಿ ಭೂಮಿಗೆ ಉರುಳಿ ಬೆಳೆಗಳಿಗೆ ಹಾನಿ ಉಂಟಾಗಿದೆ.

ವಾಮದಪದವು ಬೀಡಿ ಕಾರ್ಮಿಕರ ಚಿಕಿತ್ಸಾಲಯ ಶಾಶ್ವತವಾಗಿ ಬಂದ್

ಮಂಗಳೂರು: ಬಂಟ್ವಾಳ ತಾಲೂಕು ವಾಮದಪದವಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬೀಡಿ ಕಾರ್ಮಿಕರ ಚಿಕಿತ್ಸಾಲಯವನ್ನು ಜೂ.1 ರಿಂದ ಸಂಪೂರ್ಣವಾಗಿ ಮುಚ್ಚಲಾಗುತ್ತದೆ. ಈ ಚಿಕಿತ್ಸಾಲಯದ ಫಲಾನುಭವಿಗಳು ತಮ್ಮ ಮುಂದಿನ ಚಿಕಿತ್ಸೆ ಔಷಧಿಗಳಿಗಾಗಿ ಮೂಡಬಿದಿರೆ ಬೀಡಿ ಕಾರ್ಮಿಕರ ಆಸ್ಪತ್ರೆಯ ವೈದ್ಯಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ವೈದ್ಯಕೀಯ ಅಧಿಕಾರಿ ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರಾವಳಿ ಭಾಗದತ್ತ ಹರಿದುಬರುತ್ತಿದೆ ಈಗ ಪ್ರವಾಸಿಗರ ದಂಡು

ಮಂಗಳೂರು: ಬೇಸಗೆ ರಜೆಯ ಹಿನ್ನಲೆಯಲ್ಲಿ ಕರಾವಳಿ ಭಾಗದ ಧಾರ್ಮಿಕ ಸ್ಥಳಗಳು, ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗುತ್ತಿದೆ. ಈ ಪೈಕಿ ಉಳ್ಳಾಲ, ತಣ್ಣೀರುಬಾವಿ, ಪಣಂಬೂರು ಬೀಚ್‌ಗಳಲ್ಲಿ ಹೆಚ್ಚಿನ ಪ್ರವಾಸಿಗರು ಕಾಣಸಿಗುತ್ತಿದ್ದಾರೆ.

ರೂ. 500ರಿಂದ 470ಕ್ಕೆ ಕುಸಿದ ಧಾರಣೆ

ಅಡಕ್ಕತ್ತರಿಗೆ ಕೃಷಿಕ!

ಖರ್ಚು ವೆಚ್ಚ ಸರಿದೂಗಿಸಲು ಕಸರತ್ತು

ಬೆಳ್ತಂಗಡಿ: ರೂ. 500 ವರೆಗೂ ತಲುಪಿದ್ದ ಅಡಿಕೆ ದರ ಪ್ರಸ್ತುತ 470 ರೂ. ಆಸುಪಾಸಿನಲ್ಲಿದ್ದು ಇನ್ನಷ್ಟು ಕುಸಿಯಬಹುದೇ ಎಂಬ ಭೀತಿ ಕೃಷಿಕರಿಗೆ ಎದುರಾಗಿದೆ.

ಅಡಿಕೆಗೆ ಉತ್ತಮ ದರದ ನಿರೀಕ್ಷೆ ಹೊಂದಿದ್ದ ಕೃಷಿಕರಲ್ಲಿ ಈಗ ಸಮಾಧಾನ ಇನ್ನೂ ಕಂಡುಬಂದಿಲ್ಲ, ಕೃಷಿ ಉತ್ಪಾದನಾ ವೆಚ್ಚ ಹೆಚ್ಚುವ ಜತೆ ಅಡಿಕೆಗೆ ಕಾಡುವ ರೋಗಗಳಿಂದ ಖರ್ಚು ವೆಚ್ಚ ಸರಿದೂಗಿಸಲು ಆತ ಹರಸಾಹಸ ಪಡುವಂತಾಗಿದೆ.

ಇನ್ನಷ್ಟು ಏರಿಕೆಯ ನಿರೀಕ್ಷೆಯಿತ್ತು

ಮಾರ್ಚ್ ಕೊನೆ, ಏಪ್ರಿಲ್‌ನಲ್ಲಿ ಧಾರಣೆ ಕಿಲೋಗೆ 500 ರೂ. ವರೆಗೆ ತಲುಪಿದ್ದು, ಕೃಷಿಕರು ಇನ್ನಷ್ಟು ಏರಿಕೆಯ ನಿರೀಕ್ಷೆ ಹೊಂದಿದ್ದರು. ಆದರೆ ಕ್ಯಾಂಪ್ಕೋ, ಮಾಸ್ ಮೊದಲಾದ ಸಂಸ್ಥೆಗಳಲ್ಲಿ 470 ರೂ. ಗಳಲ್ಲಿ ಹೊಸ ಅಡಿಕೆ ಖರೀದಿಯಾಗುತ್ತಿದ್ದರೆ, ಖಾಸಗಿ ಮಾರುಕಟ್ಟೆಯಲ್ಲಿ 5 ರಿಂದ 10 ರೂ. ವ್ಯತ್ಯಾಸವಿದೆ. ಅಲ್ಲದೆ ಈಗ ಮಾರುಕಟ್ಟೆಗೆ ಬರುವ ಅಡಿಕೆ ಪ್ರಮಾಣ ಕುಂಠಿತಗೊಂಡಿದೆ. »ಪುಟ 6



ಏರಿಕೆ ನಿರೀಕ್ಷೆ

"ಮಾರುಕಟ್ಟೆಗೆ ಬರುವ ಅಡಿಕೆ ಪ್ರಮಾಣ ಕಡಿಮೆ ಇದೆ. ದರ ಸ್ಥಿರತೆ ಬಗ್ಗೆ ಸಂಸ್ಥೆಯ ವತಿಯಿಂದ ಪ್ರಯತ್ನಿಸಲಾಗುತ್ತಿದ್ದು, ಮುಂದಿನ 15 ದಿನಗಳಲ್ಲಿ ಏರಿಕೆ ನಿರೀಕ್ಷೆ ಇದೆ.

• ಎಸ್.ಆರ್. ಸತೀಶ್ಚಂದ್ರ, ಕ್ಯಾಂಪ್ಕೋ ಅಧ್ಯಕ್ಷ.

ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ

ಈ ವರ್ಷ ಅಡಿಕೆ ಬೆಳೆ ತುಂಬಾ ಕಡಿಮೆ ಇದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಹೆಚ್ಚಿನ ಕಡೆಗಳಲ್ಲಿ ಅರ್ಧಕ್ಕರ್ಧ ಬೆಳೆ ಇಳಿಕೆಯಾಗಿದೆ. ಅಡಿಕೆ ದರ ಗಾಯದ ಮೇಲೆ ಬರೆ ಎಳೆದಿದೆ. ಕಳೆದ ವರ್ಷದ ಹವಾಮಾನ ವೈಪರೀತ್ಯ, ವಿಪರೀತ ಮಳೆ, ಕೊಳೆರೋಗ ಇತ್ಯಾದಿ ಕಾರಣದಿಂದ ಫಸಲು ನಷ್ಟವಾಗಿದ್ದು, ಕೃಷಿಕರು ಹೆಚ್ಚಿನ ದರದ ನಿರೀಕ್ಷೆ ಹೊಂದಿದ್ದರು. ಆದರೆ ಮಾರುಕಟ್ಟೆಯಲ್ಲಿನ ವಿದ್ಯಮಾನಗಳು ಇದಕ್ಕೆ ಪೂರಕವಾಗಿಲ್ಲ,

ಸಣ್ಣ ಕೃಷಿಕರಲ್ಲಿಯೂ ಈಗ ಅಡಿಕೆ ಸ್ಟಾಕ್ ಇಲ್ಲ

ಸಣ್ಣ ಕೃಷಿಕರಲ್ಲಿ ಹೆಚ್ಚಿನವರಲ್ಲಿ ಅಡಿಕೆ ಖಾಲಿಯಾಗುತ್ತಾ ಬಂದಿದೆ. ಸದ್ಯ ಕೊಯ್ಲಿನ ಅಡಿಕೆ ಮಾರುಕಟ್ಟೆಗೆ ಬರುತ್ತಿದ್ದರೂ ದರ ಏರಿಕೆಯಾಗುತ್ತಿಲ್ಲ.

ಏನು ಕಾರಣ?

ಬೇಡಿಕೆಯಲ್ಲಿ ಭಾರಿ ಬದಲಾವಣೆಯಾಗದ ಕಾರಣ ಇಲ್ಲಿನ ಅಡಿಕೆಯ ದರ ಕುಸಿಯುತ್ತಿದೆ. ಸದ್ಯ ಬೇಡಿಕೆ ಹಾಗೂ ಮಾರುಕಟ್ಟೆಗೆ ಹರಿದು ಬರುವ ಅಡಿಕೆ ಪ್ರಮಾಣ ಕಡಿಮೆ ಇದೆ.

ಮೈಲು ತುತ್ತು ದರ ದಿನದಿಂದ ದಿನಕ್ಕೆ ಏರಿಕೆ

ಇದೀಗ ತೋಟಗಳಿಗೆ ಪ್ರಥಮ ಹಂತದ ಅಡಿಕೆ ಸಿಂಪಡಣೆ ನಡೆಯಬೇಕಿದೆ. ಮೈಲು ತುತ್ತು ದರ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ಅಡಿಕೆ ದರದಲ್ಲಿ ಇಳಿಕೆಯಾಗುತ್ತಿರುವುದರಿಂದ ಕೃಷಿಕರು ಕಂಗಾಲಾಗುವ ಸ್ಥಿತಿ ಉಂಟಾಗಿದೆ.

ಮುಂಗಾರು ಪೂರ್ವ ಮಳೆ ಚುರುಕು

ಮಳೆ 'ಘರ್ಜನೆ'ಗೆ ಸಜ್ಜಾಗಿದೆ ವೇದಿಕೆ

ಮೇ 26ರಿಂದ ಭಾರಿ ವರ್ಷಧಾರೆ


ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಮತ್ತೆ ಮಳೆಯ ಅಬ್ಬರ ಮುಂದುವರಿಯ ಲಕ್ಷಣ ಗೋಚರಿಸಿದ್ದು, ಮೇ 26ರಿಂದ ಎಲ್ಲೆಡೆ ಭಾರೀ ಮಳೆಯಾಗಲಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಭವಿಷ್ಯ ನುಡಿದಿದೆ.

ಬೇಗನೆ ಮುಂಗಾರು ಆರಂಭ?

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಸಹಿತ ಇಡೀ ಕರಾವಳಿ ಭಾಗದಲ್ಲಿ ಹವಾಮಾನದಲ್ಲಿ ಗಣನೀಯ ಬದಲಾವಣೆ ಕಂಡುಬರುತ್ತಿದ್ದು, ಈ ಬಾರಿ ಬೇಗನೆ ಮುಂಗಾರು ಆರಂಭದ ಮುನ್ಸೂಚನೆ ಈಗಾಗಲೇ ಕಂಡುಬರುತ್ತಿದೆ.

ದಿನಪೂರ್ತಿ ಮೋಡದ ವಾತಾವರಣ

ಸೋಮವಾರ ಕರಾವಳಿಯುದ್ದಕ್ಕೂ ದಿನಪೂರ್ತಿ ಮೋಡಕವಿದಿತ್ತು. ಮಂಗಳವಾರದ ವೇಳೆಗೆ ಕಾಸರಗೋಡು ಹಾಗೂ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಮೋಡದ ಸಾಂದ್ರತೆ ಹೆಚ್ಚಲಿದ್ದು, ಆರಂಭದಲ್ಲಿ ಸಣ್ಣ ಹನಿಗಳ ಮಳೆಯಾಗಲಿದೆ. ತದನಂತರ ಮಧ್ಯಾಹ್ನದ ಮೇಲೆ, ಸಂಜೆ ಹಾಗೂ ರಾತ್ರಿಯ ಅವಧಿಯಲ್ಲಿ ಅಲ್ಲಲ್ಲಿ ಗುಡುಗು ಸಹಿತ ಸಾಮಾನ್ಯ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಮೀನುಗಾರಿಕೆ ವೇಳೆ ಎಚ್ಚರವಹಿಸಲು ಸೂಚನೆ

ಮೇ 26ರಿಂದ ಮಾರುತಗಳು ಚುರುಕಾಗಲಿದ್ದು ಕಡಲ ತೀರದಲ್ಲಿ ಗಾಳಿಯ ವೇಗ ಗಂಟೆಗೆ 40 ರಿಂದ 50 ಕಿ.ಮೀ ದಾಟುವ ನಿರೀಕ್ಷೆಯಿದೆ. ಆಳ ಸಮುದ್ರದಲ್ಲಿ ಮೀನುಗಾರಿಕೆ ನಡೆಸುವ ಮೀನುಗಾರರು ಹೆಚ್ಚಿನ ಜಾಗ್ರತೆ ವಹಿಸಬೇಕು. ಹವಾಮಾನ ಪರಿಸ್ಥಿತಿ ಗಮನಿಸಿ ಮೀನುಗಾರಿಕೆ ನಡೆಸಬೇಕು ಎಂದು ಇಲಾಖೆ ಎಚ್ಚರಿಸಿದೆ.

ಅಮ್ಟಾಡಿ ನಾಗರಿಕರ ಹೈರಾಣಾಗಿಸಿದ ಅನಧಿಕೃತ ಹಂದಿ ಸಾಕಾಣಿಕೆ ಕೇಂದ್ರ

ಪಿಡಿಒಗೆ ಸ್ಥಳೀಯರಿಂದ ಆರೋಪ ಪಟ್ಟಿ!

ಬಂಟ್ವಾಳ: ಅಮ್ಟಾಡಿ ಗ್ರಾಮದ ಏರ್ಕುಲ ಪ್ರದೇಶದಲ್ಲಿ ಅನಧಿಕೃತ ಹಂದಿ ಸಾಕಾಣಿಕೆ ಕೇಂದ್ರದ ವಿರುದ್ಧ ಸ್ಥಳೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಗ್ರಾಮಸ್ಥರ ದೂರಿನ ಹಿನ್ನೆಲೆಯಲ್ಲಿ ಅಮ್ಟಾಡಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸೋಮವಾರ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪಿಡಿಒಗೆ ಸ್ಥಳೀಯರ ದೂರುಪಟ್ಟಿ

ಹಂದಿ ಸಾಕಾಣಿಕೆ ಕೇಂದ್ರದಿಂದ ನಿರಂತರ ಗಬ್ಬು ವಾಸನೆ ಹರಡುತ್ತಿದ್ದು, ಸೊಳ್ಳೆಗಳ ಕಾಟ ಹೆಚ್ಚಾಗಿದೆ. ನಾಗರಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ ಎಂದು ಗ್ರಾಮಸ್ಥರು ಅಧಿಕಾರಿಗಳಲ್ಲಿ ದೂರಿದರು. ತೆರೆದ ವಾಹನಗಳಲ್ಲಿ ತ್ಯಾಜ್ಯಗಳನ್ನು ಹಂದಿ ಸಾಕಾಣಿಕೆ ಕೇಂದ್ರಕ್ಕೆ ಸಾಗಿಸಲಾಗುತ್ತಿದ್ದು, ಪರಿಸರ ಮತ್ತಷ್ಟು ಮಾಲಿನ್ಯಗೊಳ್ಳುತ್ತಿದೆಯಲ್ಲದೆ ಸಮೀಪದಲ್ಲೇ ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿ ಕೇಂದ್ರವು ಇದ್ದು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನಾನಾ ತೊಂದರೆ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದರು. ಅನಧಿಕೃತವಾಗಿ ನಡೆಯುತ್ತಿರುವ ಈ ಹಂದಿ ಸಾಕಾಣಿಕೆ ಕೇಂದ್ರ ತಕ್ಷಣ ತೆರವು ಗೊಳಿಸಿ ಕ್ರಮ ಕೈಗೊಳ್ಳಬೇಕು ಎಂದು ಇಲ್ಲಿನ ಗ್ರಾಮಸ್ಥರು ಆಗ್ರಹಿಸಿದರು. ಇದಕ್ಕೆ ಸ್ಪಂದಿಸಿದ ಪಿಡಿಒ ಅವರು, ಮೇಲಧಿಕಾರಿಗಳ ಗಮನಕ್ಕೆತಂದು ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.



ಏನೇನು ಆರೋಪ?

- ತೆರೆದ ವಾಹನಗಳಲ್ಲಿ ಹಂದಿ ಸಾಕಾಣೆ ಕೇಂದ್ರಕ್ಕೆ ತ್ಯಾಜ್ಯ
- ಸಮೀಪದ ಸರ್ಕಾರಿ ಶಾಲೆ, ಅಂಗನವಾಡಿಗೂ ಸಮಸ್ಯೆ
- ವಿದ್ಯಾರ್ಥಿಗಳು, ನಾಗರಿಕರಿಗೆ ಇಲ್ಲಿ ಬಹಳಷ್ಟು ತೊಂದರೆ
- ಪರಿಸರ ಮಾಲಿನ್ಯಕ್ಕೂ ಕಾರಣವಾದ 'ಕೇಂದ್ರ'

ಗಾಳಿಮಳೆಗೆ ನೆಲ್ಲೂರು ಕೆಮ್ರಾಜೆ ಕಂಗಾಲು



ಗಾಳಿ ಮಳೆಯ ಆರ್ಭಟಕ್ಕೆ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದಲ್ಲಿ ಬೃಹತ್ ಮರವೊಂದು ಕೃಷಿ ತೋಟದ ಮೇಲೆ ಉರುಳಿ ಬಿದ್ದ ಪರಿಣಾಮ ಲಕ್ಷಾಂತರ ರೂಪಾಯಿ ಮೌಲ್ಯದ ಕೃಷಿ ಬೆಳೆ ಸಂಪೂರ್ಣ ನಾಶವಾಗಿದೆ.

ಎಲ್ಲೆಡೆ ಕೆಸರುಮಯವಾದ ರಸ್ತೆ | ಎಲ್ಲೆಂದರಲ್ಲಿ ಚದುರಿಬಿದ್ದ ಕಬ್ಬಿಣದ ಪೈಪ್‌ಗಳು | ಫುಟ್‌ಪಾತ್ ಸಂಚಾರಕ್ಕೂ ಕುತ್ತು | ಸಂಕಷ್ಟದಲ್ಲಿ ಜನತೆ

ಕಾಸರಗೋಡು ಎಂ.ಜಿ. ರಸ್ತೆ ಬದಿ ಅಗೆದು ಹೊಂಡಗುಂಡಿ ಸೃಷ್ಟಿಸಿದ ಜಲ ಪ್ರಾಧಿಕಾರ

ಸಂಗಮ ವಿಶೇಷ

ಕಾಸರಗೋಡು: ವಾಹನ ಸಂಚಾರ ದಟ್ಟಣೆ ವಿಪರೀತ ಪ್ರಮಾಣದಲ್ಲಿ ಹೆಚ್ಚುತ್ತಿರುವ ಕಾಸರಗೋಡು ನಗರದ ಎಂ.ಜಿ. ರಸ್ತೆಯ ಬದಿಯಲ್ಲಿ ಜಲ ಪ್ರಾಧಿಕಾರವು ನರಕಸದೃಶ ಹೊಂಡ ಗುಂಡಿಗಳನ್ನು ಸೃಷ್ಟಿಸಿದ್ದು, ಇದು ಭಾರೀ ಅವಾಂತರಕ್ಕೆ ಕಾರಣವಾಗಿದೆ.

ಇಲ್ಲಿ ರಸ್ತೆ ಸಂಪೂರ್ಣ ಕೆಸರುಮಯ

ಇಲ್ಲಿನ ಕಾಸರಗೋಡು ಹಳೆ ಬಸ್ ನಿಲ್ದಾಣದಿಂದ ಹೊಸ ಬಸ್ ನಿಲ್ದಾಣಕ್ಕೆ ತೆರಳುವ ರಸ್ತೆ ಬದಿ ಅಗೆದು ಹೊಂಡ ನಿರ್ಮಿಸಲಾಗಿದೆ. ಕಳೆದ ದಿನಗಳಲ್ಲಿ ಸುರಿದ ಮಳೆಯಿಂದಾಗಿ ಈ ಹೊಂಡದಲ್ಲಿ ನೀರು ತುಂಬಿ ರಸ್ತೆ ಸಂಪೂರ್ಣವಾಗಿ ಕೆಸರುಮಯವಾಗಿದ್ದು, ಪ್ರಯಾಣ ಇಲ್ಲಿ ದುಸ್ತರವಾಗಿ ಪರಿಣಮಿಸಿದೆ. ಕುಡಿಯುವ ನೀರು ಯೋಜನೆಯಾದ ಅಮೃತ್ ಪೈಪ್‌ಲೈನ್ ಸಂಪರ್ಕ ನಿರ್ಮಾಣ ಕಾಮಗಾರಿಗೆ ಹೊಂಡ ತೆಗೆದು ಪೈಪ್‌ಲೈನ್ ಅಳವಡಿಸಿದ ನಂತರ ರಸ್ತೆಯನ್ನು ಮೊದಲಿನ ಸ್ಥಿತಿಗೆ ತರಬೇಕಾದುದು ಜಲ ಪ್ರಾಧಿಕಾರದ ಹೊಣೆಯಾಗಿದೆ. ಆದರೆ ರಸ್ತೆಯನ್ನು ಸರಿಪಡಿಸದೆ ತೆರಳಿರುವುದಾಗಿ ಸ್ಥಳೀಯ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಳೆ ಬಂದರೆ ಇಲ್ಲಿ ಇನ್ನಷ್ಟು ಅಧ್ವಾನ ಖಚಿತ

ಮಳೆ ಧಾರಾಕಾರವಾಗಿ ಸುರಿಯುವ ಮೊದಲು ಈ ಹೊಂಡವನ್ನು ಮುಚ್ಚಲು ಜಲ ಪ್ರಾಧಿಕಾರದ ಅಧಿಕಾರಿಗಳು ತಯಾರಾಗದಿದ್ದಲ್ಲಿ ವಾಹನ ಸಂಚಾರ ಇನ್ನಷ್ಟು ಸಂಕಷ್ಟಕ್ಕೆ ಸಿಲುಕಲಿದೆ. ಹೊಂಡ ತೋಡಿರುವ ಹಿನ್ನೆಲೆಯಲ್ಲಿ ರಸ್ತೆ ಬದಿಯಲ್ಲಿ ಪಾದಚಾರಿಗಳಿಗಿರುವ ಫುಟ್‌ಪಾತ್‌ನಲ್ಲೂ ಅಪಾಯ ಎದುರಾಗಿದೆ. ಫುಟ್‌ಪಾತ್‌ನ ಸ್ಲಾಬ್ ಹಾನಿಗೀಡಾಗಿರುವುದು ಸಮಸ್ಯೆಗೆ ಕಾರಣವಾಗಲಿದ್ದು, ಭೀತಿ ಸೃಷ್ಟಿಸುತ್ತಿದೆ. ಫುಟ್‌ಪಾತ್‌ನ ಸರಳು ಹೊರಗೆ ಚಾಚಿದ್ದು, ಸ್ಲಾಬ್ ಹಾನಿಗೀಡಾದ ಭಾಗದಲ್ಲಿ ಚರಂಡಿಗೆ ಬೀಳದಂತೆ ಹಳೆಯ ಪ್ಲೈವುಡ್ ತುಂಡು ಇರಿಸಲಾಗಿದೆ. ಇಲ್ಲಿ ಹಾನಿಗೀಡಾದ ಭಾಗವು ಪಾದಚಾರಿಗಳ ಗಮನಕ್ಕೆ ತಕ್ಷಣಕ್ಕೆ ಬರುವುದಿಲ್ಲ, ಕೂಡಲೇ ಹಾನಿಗೀಡಾದ ಫುಟ್‌ಪಾತ್‌ನ ಸ್ಲಾಬ್‌ಗಳನ್ನು ತೆರವುಗೊಳಿಸಿ ಹೊಸ ವ್ಯವಸ್ಥೆ ಕಲ್ಪಿಸಬೇಕೆಂದು ನಾಗರಿಕರು ಆಗ್ರಹಿಸಿದ್ದಾರೆ.



ಇದು ಬೇಜವಾಬ್ದಾರಿಯ ಪರಮಾವಧಿ ಎಂದ ಜನತೆ!

ಇಲ್ಲಿನ ಹಳೆ ಪ್ರೆಸ್ ಕ್ಲಬ್ ಜಂಕ್ಷನ್ ದ್ವಾರದ ಟ್ರಾಫಿಕ್ ಸರ್ಕಲ್‌ನಿಂದ ಕಾಸರಗೋಡು ಜನರಲ್ ಆಸ್ಪತ್ರೆ ಸಮೀಪದ ಟ್ರಾನ್ಸ್‌ಫಾರ್ಮರ್ ತನಕದ ಸ್ಥಳದಲ್ಲಿ ರಸ್ತೆ ಬದಿಯಲ್ಲಿ ಹೊಂಡ ತೋಡಲಾಗಿದೆ. ಈ ಹೊಂಡವನ್ನು ಮುಚ್ಚಲು ಜಲ್ಲಿಕಲ್ಲುಗಳನ್ನು ಹಾಕಲಾಗಿದೆ ಆದರೂ ಇದಕ್ಕೆ ಡಾಮರು ಅಥವಾ ಕಾಂಕ್ರೀಟ್ ಅಳವಡಿಸಿ ರಸ್ತೆಯನ್ನು ಹಳೆಯ ಸ್ಥಿತಿಗೆ ತಲುಪಿಸದಿರುವುದು ಬೇಜವಾಬ್ದಾರಿಯ ಪರಮಾವಧಿಯಾಗಿದೆ ಎನ್ನುತ್ತಾರೆ ಜನತೆ.

ಕಬ್ಬಿಣದ ಪೈಪ್‌ಗಳನ್ನು ಎಲ್ಲೆಂದರಲ್ಲಿ ಎಸೆಯಲಾಗಿದೆ!!

ಇಲ್ಲಿನ ಟ್ರಾನ್ಸ್‌ಫಾರ್ಮರ್‌ನಿಂದ ಹಳೆ ಬಸ್ ನಿಲ್ದಾಣಕ್ಕಿರುವ ಭಾಗದವರೆಗೆ ಕಾಂಕ್ರೀಟ್ ಅಳವಡಿಸಲಾಗಿದೆ. ಕುಡಿಯುವ ನೀರು ಯೋಜನೆಯ ಅಂಗವಾಗಿ ಇಳಿಸಿದ ಕಬ್ಬಿಣದ ಪೈಪ್‌ಗಳನ್ನು ಎಲ್ಲೆಂದರಲ್ಲಿ ಎಸೆಯಲಾಗಿದೆ. ಜನರಲ್ ಆಸ್ಪತ್ರೆಯ ಮುಂಭಾಗದ ಟೆಂಪೋ ಮತ್ತು ಆಟೋ ಸ್ಟ್ಯಾಂಡ್ ಪರಿಸರದಲ್ಲಿ ಈ ಪೈಪ್‌ಗಳನ್ನು ಹಾಕಲಾಗಿದೆ. ಈ ನಿಟ್ಟಿನಲ್ಲಿ ವಾಹನಗಳನ್ನು ಇಲ್ಲಿ ನಿಲ್ಲಿಸಲು ಕೂಡಾ ಸಾಧ್ಯವಾಗುತ್ತಿಲ್ಲ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

ಸುತ್ತಮುತ್ತ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಹನುಮಾನ್ ಟಿಂಬರ್, ಪ್ರಗತಿ ಸರ್ವಿಸ್ ಸ್ಟೇಷನ್, ಕಟ್ಟೆಮಾರ್, ವೆಂಕಟರಮಣ ದೇವಸ್ಥಾನ, ಕೆನರಾ ಹೈಸ್ಕೂಲ್, ಡೊಂಗರಕೇರಿ, ಸಿಟಿ ಪಾಯಿಂಟ್, ಹೋಂಡ ಮ್ಯಾಟ್ರಿಕ್ಸ್, ಓಷನ್ ಪರ್ಲ್, ಅಯೋಧ್ಯ ಹೋಟೆಲ್, ತಾಜ್ ಮಹಲ್, ಮಾನಸ ಟವರ್, ಪಿವಿಎಸ್ ವೃತ್ತ, ಪ್ರಗತಿ ಸರ್ವಿಸ್ ಸ್ಟೇಷನ್ ಹಿಂದೆ, ಕಲಾಕುಂಜ ರಸ್ತೆ, ಭಗವತಿ ಕ್ಷೇತ್ರ, ಎಕ್ಸ್‌ಪರ್ಟ್ ಕಾಲೇಜು, ಬೆಸೆಂಟ್ ಕಾಂಪ್ಲೆಕ್ಸ್, ಸಿ ಬಿ ಹಾಲ್, ಶಾರದಾ ವಿದ್ಯಾಲಯ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಅಳಕೆ, ಮಂಗಳ ಸಹಯೋಗ, ಶ್ರೀನಿಧಿ ಕಾಂಪ್ಲೆಕ್ಸ್, ವಾದಿರಾಜ ನಗರ, ನವ ದುರ್ಗ ದೇವಸ್ಥಾನ, ದುರ್ಗಮಹಲ್, ಕಾಂತರಾಜ್ ಶೆಟ್ಟಿ ಲೇನ್, ಬರ್ಕೆ ನಾರಾಯಣ ಗುರು ಕಾಲೇಜು, ಬೊಕ್ಕಪಟ್ನ ಚರ್ಚ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 19ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಸ್ಥಳದಲ್ಲಿ ತ್ಯಾಜ್ಯ: ಪೊಲೀಸ್ ದೂರು ನೀಡಿದ ಪಿಡಿಒ


ಉಪ್ಪಿನಂಗಡಿ: ಇಲ್ಲಿನ 34 ನೆಕ್ಕಿಲಾಡಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ತ್ಯಾಜ್ಯ ಎಸೆದವರ ವಿರುದ್ಧ ಗ್ರಾ.ಪಂ. ಪಿಡಿಒ ಅವರು ಉಪ್ಪಿನಂಗಡಿ ಪೊಲೀಸರಿಗೆ ದೂರು ನೀಡಿದ್ದಾರೆ. 34 ನೆಕ್ಕಿಲಾಡಿ ಗ್ರಾ.ಪಂ. ವತಿಯಿಂದ ಸ್ವಚ್ಛ ಶನಿವಾರ ಭಾಗವಾಗಿ ತ್ಯಾಜ್ಯ ಸಂಗ್ರಹ ಕಾರ್ಯ ನಡೆದಿತ್ತು. ಈ ಸಂದರ್ಭ ನೆಕ್ಕಿಲಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಳಿ ರಸ್ತೆ ಬದಿಯಲ್ಲಿ ಕಸದ ಚೀಲವೊಂದು ಪತ್ತೆಯಾಗಿತ್ತು. ಇದನ್ನು ಪರಿಶೀಲಿಸಿದಾಗ ಇದರಲ್ಲಿ ಬಟ್ಟೆ ಮಳಿಗೆಯೊಂದರ ಬಿಲ್ ಇದ್ದು ಅದರಲ್ಲಿ ಗ್ರಾಹಕರ ಮೊಬೈಲ್ ನಂಬರ್ ಕೂಡಾ ಇತ್ತು. ಇದರ ಆಧಾರದ ಮೇಲೆ ಗ್ರಾ.ಪಂ. ಪಿಡಿಒ ರವಿಚಂದ್ರ ಯು. ಅವರು ಉಪ್ಪಿನಂಗಡಿ ಪೊಲೀಸರಿಗೆ ದೂರು ನೀಡಿದ್ದು, ದೂರನ್ನು ಸ್ವೀಕರಿಸಿದ ಪೊಲೀಸ್ ಠಾಣೆಯ ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಬೆಟ್ಟಂಪಾಡಿ ದೇವಳ: ಪತ್ತನಾಜೆ ಜಾತ್ರೆಗೆ ಗೊನೆ ಮುಹೂರ್ತ

ನಿಡ್ಪಳ್ಳಿ: ವರ್ಷದಲ್ಲಿ ಎರಡು ಬಾರಿ ಜಾತ್ರೆ ನಡೆಯುವ ಸೀಮೆಯ ವಿಶೇಷ ದೇವಾಲಯವಾದ ಬೆಟ್ಟಂಪಾಡಿ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಪತ್ತನಾಜೆ ಜಾತ್ರೆ ಮೇ 25ರಂದು ನಡೆಯಲಿದ್ದು, ಅದರ ಅಂಗವಾಗಿ ಗೊನೆ ಮುಹೂರ್ತ ಕಾರ್ಯಕ್ರಮ ಮೇ 18ಕ್ಕೆ ನಡೆಯಿತು. ದೇವಳದ ಆನುವಂಶಿಕ ಆಡಳಿತ ಮೊಕ್ತೇಸರ ವಿನೋದ್ ಕುಮಾರ್ ಬಲ್ಲಾಳ್, ಮೊಕ್ತೇಸರ ವಿನೋದ್ ರೈ ಗುತ್ತು ಉಪಸ್ಥಿತರಿದ್ದರು. ಅರ್ಚಕ ನಾರಾಯಣ ಭಟ್ ಪ್ರಾರ್ಥಿಸಿದರು. ವೇ.ಮೂ. ಸುಬ್ರಹ್ಮಣ್ಯ ಭಟ್ ತಲೆಪ್ಪಾಡಿ ಗೊನೆ ಮಹೂರ್ತ ನೆರವೇರಿಸಿದರು. ಕ್ಲರ್ಕ್ ವಿನಯ ಕುಮಾರ್ ಸಹಕರಿಸಿದರು.

ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ವಸಂತ ಪೂಜೆ

ಮುಲ್ಕಿ: ಪಡುಪಣಂಬೂರು ಹೊಯ್ಗೆ ಗುಡ್ಡೆ ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ವಸಂತ ಪೂಜೆ



ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ಆಡಳಿತ ಮೊಕ್ತೇಸರ ಹಾಗೂ ಅರ್ಚಕ ವೇದಮೂರ್ತಿ ರಂಗನಾಥ ಭಟ್ ನೇತೃತ್ವದಲ್ಲಿ ಶ್ರೀ ದೇವರಿಗೆ ವಿಶೇಷ ಪ್ರಾರ್ಥನೆ,ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದು ಶ್ರೀ ದೇವರಿಗೆ ವಸಂತ ಪೂಜೆ , ಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ರಾಮದಾಸ್ ಪುತ್ರನ್, ಹಿರಿಯ ಲೇಖಕಿ ಶಕುಂತಲಾ ಭಟ್ ಮತ್ತಿತರರು ಉಪಸ್ಥಿತರಿದ್ದರು.

ಬೀದಿ ನಾಯಿಗಳ ನಿಗ್ರಹಕ್ಕೆ ಎಡಪದವು ನಾಗರಿಕರ ಆಗ್ರಹ

ಕೈಕಂಬ: ಎಡಪದವು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂಖ್ಯೆ ವಿಪರೀತವಾಗಿ ಹೆಚ್ಚಿದ್ದು, ಸಾರ್ವಜನಿಕರಿಗೆ



ಅಪಾಯಕಾರಿಯಾಗಿ ಪರಿಣಮಿಸುತ್ತಿದ್ದು, ಬೀದಿ ನಾಯಿಗಳನ್ನು ನಿಗ್ರಹಿಸಬೇಕು ಎಂದು ಗ್ರಾಮಸ್ಥರು ಪಂಚಾಯತ್‌ಗೆ ಮನವಿ ಸಲ್ಲಿಸಿದ್ದಾರೆ. ಈ ಬಗ್ಗೆ ಗ್ರಾಮಸ್ಥರಾದ ಮೋರಿಸ್ ಪಿಂಟೋ ಎಂಬವರು ಪಂಚಾಯತ್‌ಗೆ ಮನವಿ ಸಲ್ಲಿಸಿದ್ದು, ಎಡಪದವು ಪೇಟೆಯಲ್ಲಿ ಹಲವು ಬಾರಿ ನಾಯಿಗಳು ಮನುಷ್ಯರ ಮೇಲೆ ದಾಳಿ ನಡೆಸಿರುವುದನ್ನು ಉಲ್ಲೇಖಿಸಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಪಂಚಾಯತ್‌ನ್ನು ಆಗ್ರಹಿಸಿದ್ದಾರೆ.

ಎಡಪದವು ಜಂಕ್ಷನ್, ಬಾರ್ ಬಳಿ ಹತ್ತಿಪ್ಪತ್ತು ನಾಯಿಗಳು ಇದ್ದು, ಮಕ್ಕಳು ಮತ್ತು ಮಹಿಳೆಯರಿಗೆ ರಸ್ತೆಯಲ್ಲಿ ನಡೆದಾಡಲು ಭಯವಾಗುತ್ತಿದೆ. ಯಾವಾಗ ಯಾರ ಮೇಲೆ ದಾಳಿ ಮಾಡುತ್ತವೆ ಎಂಬ ಭಯದಲ್ಲಿಯೇ ನಡೆದಾಡಬೇಕಾದ ಪರಿಸ್ಥಿತಿ ಇದೆ. ಆದುದರಿಂದ ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಂಡು ಜನರು ನಿರ್ಭಯವಾಗಿ ಓಡಾಡುವಂತೆ ಮಾಡಬೇಕು ಎಂದು ಮನವಿಯಲ್ಲಿ ಅವರು ಆಗ್ರಹಿಸಿದ್ದಾರೆ.

ಪ್ರಶ್ನಾ ಚಿಂತನೆಯಂತೆ ಪರಿಹಾರ ಕಾರ್ಯ | ಶ್ರೀ ಸೋಮನಾಥ ದೇವಾಲಯದಲ್ಲಿ ವಿಶೇಷ ಸೇವೆ

ಅಬ್ಬಕ್ಕ ಆರಾಧಿಸಿದ ಸಾನಿಧ್ಯಗಳ ಜೀರ್ಣೋದ್ಧಾರಕ್ಕೆ ಚಾಲನೆ

ಉಳ್ಳಾಲ: ದಕ್ಷಿಣ ಕನ್ನಡ ಜಿಲ್ಲೆಯ ಹೆಮ್ಮೆಯ ಸ್ವಾಭಿಮಾನದ ಅಸ್ಮಿತೆಯಾಗಿರುವ ವೀರರಾಣಿ ಅಬ್ಬಕ್ಕ ದೇವಿಯವರು ಆರಾಧನೆ ಮಾಡುತ್ತಿದ್ದ ದೈವ-ದೇವರುಗಳ ಸಾನ್ನಿಧ್ಯಗಳು ಶಿಥಿಲಾವಸ್ಥೆಯಲ್ಲಿರುವ ಹಿನ್ನೆಲೆ ರಾಣಿ ಅಬ್ಬಕ್ಕಳ ಅರಮನೆಯಲ್ಲಿ ಐದು ದಿನಗಳ ಕಾಲ ಅಷ್ಟಮಂಗಲ ಪ್ರಶ್ನೆ ನಡೆಸಲಾಗಿತ್ತು. ಈ ಅಷ್ಟಮಂಗಲ ಪ್ರಶ್ನೆಯಲ್ಲಿ ತಿಳಿದು ಬಂದ ವಿಚಾರಗಳನ್ನು ಆಧರಿಸಿ, ದೈವ ದೇವರ ಪ್ರೇರಣೆಯಂತೆ ಜ್ಯೋತಿಷ್ಯರು ಸೂಚಿಸಿದ ಪರಿಹಾರ ಕಾರ್ಯಗಳನ್ನು ಮೊದಲ ಹಂತವಾಗಿ ಆರಂಭಿಸಲು ತೀರ್ಮಾನಿಸಲಾಗಿದ್ದು, ಈ ನಿಟ್ಟಿನಲ್ಲಿ ಸೋಮವಾರ ವಿವಿಧ ಧಾರ್ಮಿಕ ಕಾರ್ಯಕ್ರಮ ಹಾಗೂ ದೇವಾಲಯಗಳಲ್ಲಿ ಸೇವೆಗಳು ನಡೆಯಿತು.



ಸರ್ವಸೇವೆ, ಅನ್ನದಾನ

ಪ್ರಾರಂಭಿಕ ಪರಿಹಾರ ಕಾರ್ಯವಾಗಿ ಸೋಮೇಶ್ವರದ ಶ್ರೀ ಸೋಮನಾಥ ದೇವಾಲಯದಲ್ಲಿ ಏಕಾದಶ ರುದ್ರಾಭಿಷೇಕ, ಸರ್ವಸೇವೆ, ಪಂಚಾಮೃತಾಭಿಷೇಕ ಹಾಗೂ ಅನ್ನದಾನ ಸೇವೆಯು ಸೋಮವಾರ ಬೆಳಿಗ್ಗೆ 10.45ರಿಂದ ಮಧ್ಯಾಹ್ನ 1ರವರೆಗೆ ನಡೆಯಿತು.

ಈ ಸಂದರ್ಭ ಗೋಪಾಲಕೃಷ್ಣ ಮಠ ಸೋಮನಾಥ ಚಾವಡಿಯ ಅರುಣ್ ಭಟ್, ಶ್ರೀ ಸೋಮನಾಥ ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರಾದ ರವೀಂದ್ರನಾಥ ರೈ, ಬಾಸ್ಕರ ಗಟ್ಟಿ, ಸದಾನಂದ ಬಂಗೇರ, ನಿರ್ಮಲ ಭಾರತ ಚಾರಿಟೇಬಲ್ ಟ್ರಸ್ಟ್‌ನ ವಿಶ್ವಸ್ಥ ಜಿತೇಂದ್ರ ಶೆಟ್ಟಿ, ಮೊಗವೀರ ಸಮಾಜದ ಅಧ್ಯಕ್ಷ ಯಶವಂತ್ ಪಿ. ಅಮೀನ್, ವ್ಯಾಘ್ರ ಚಾಮುಂಡೇಶ್ವರಿ ಎಜ್ಯುಕೇಶನ್ ಟ್ರಸ್ಟ್‌ನ ಸಮೂಹ ಸಂಚಾಲಕ ರೋಹಿದಾಸ್ ಬಂಗೇರ, ಕೆಸಿಸಿಐ ಸ್ಟಾರ್ಟ್ ಅಪ್ ಉಪಸಮಿತಿಯ ಅಧ್ಯಕ್ಷ ವಿಶ್ವಾಸ್ ಯು.ಎಸ್., ಮಾಧ್ಯಮದ ಅಧ್ಯಕ್ಷ ಶಶಿಧರ ಪೊಯ್ಯೆತ್ತಬೈಲ್ ಹಾಗೂ ರಾಣಿ ಅಬ್ಬಕ್ಕ ಕಾರ್ಯದಳದ ಸದಸ್ಯ ಶ್ರೀಕರ ಕಿಣಿ, ಚಂದ್ರಹಾಸ ಉಳ್ಳಾಲ್, ಶರತ್ ಚಂದ್ರ ಗಟ್ಟಿ, ಪ್ರಕಾಶ ಉಳ್ಳಾಲಬೈಲ್, ವಸಂತ, ದಿನೇಶ್, ಯತೀಶ್, ಹರ್ಷವರ್ಧನ, ಸುಂದರ ಉಳಿಯ, ವಿವೇಕ್ ಗಜಾನನ ರಾವ್ ಉಳ್ಳಾಲ, ಡಾ. ಲತಾ ರೈ ಮೊದಲಾದವರು ಉಪಸ್ಥಿತರಿದ್ದರು.

ಯತಿಗಳಿಂದ ಸೂಕ್ತ ಮಾರ್ಗದರ್ಶನ, ಆಶೀರ್ವಾದ

ಕೊಂಡೆವೂರಿನ ಶ್ರೀ ನಿತ್ಯಾನಂದ ಯೋಗಾಶ್ರಮದ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ ಹಾಗೂ ಮೂಡಬಿದಿರೆಯ ಶ್ರೀ ಜೈನ ಮಠದ ಸ್ವಸ್ತಿ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯ ಮಹಾಸ್ವಾಮಿಗಳು ಈ ಮಹೋನ್ನತ ಕಾರ್ಯಕ್ಕೆ ಆಶೀರ್ವಾದ ಹಾಗೂ ಮಾರ್ಗದರ್ಶನ ನೀಡಿದ್ದಾರೆ. ರಾಣಿ ಅಬ್ಬಕ್ಕ ದೇವಿಯವರ ಮನೆತನದ ಕುಟುಂಬಸ್ಥ ಪ್ರಶಾಂತ್ ಕಟ್ಟೆಮಾರ್ ಅವರ ಸಹಕಾರದೊಂದಿಗೆ, ರಾಣಿ ಅಬ್ಬಕ್ಕ ದೇವಿಯವರು ಕಟ್ಟಿಸಿದ ಮನೆಯಲ್ಲಿ ವಾಸಿಸುತ್ತಿರುವ ಉಳ್ಳಾಲದ ಕಿಣಿ ಮನೆತನದ ಪ್ರಮುಖರಾದ ಶ್ರೀಕರ ಕಿಣಿ ಅವರ ನೇತೃತ್ವ ವಹಿಸಿದ್ದಾರೆ.

ವಿಕಲಚೇತನರ ಮಾಸಾಶನ ಬಾಕಿ: ಪುತ್ತೂರು ಶಾಸಕರ ಮೂಲಕ ಮನವಿ



ಪುತ್ತೂರು: ರಾಜ್ಯದಾದ್ಯಂತ ವಿಕಲಚೇತನರು, ಹಾಸಿಗೆ ಹಿಡಿದ ವಿಕಲ ಚೇತನರು, ಎಂಡೊ ಪೀಡಿತ ವಿಕಲ ಚೇತನರು ಹಾಗೂ ಹಿರಿಯ ನಾಗರಿಕರಿಗೆ ಮಾಸಾಶನ ಪಿಂಚಣಿ 2 ತಿಂಗಳಿಂದ ಬಾರದೆ ಜೀವನ ನಿರ್ವಹಣೆಗೆ ತೀವ್ರ ತೊಂದರೆಯಾಗಿದ್ದು, ಸೋಮವಾರ ಪುತ್ತೂರು ತಾಲೂಕು ಪಂಚಾಯತ್ ವಿಕಲ ಚೇತನರ ಸೇವಾ ಕೇಂದ್ರ ಕಚೇರಿ ವತಿಯಿಂದ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ನಿರ್ದೇಶಕರಿಗೆ ಪತ್ರದ ಭರವಸೆ

ಮನವಿಗೆ ಸ್ಪಂದಿಸಿದ ಶಾಸಕ ಅಶೋಕ್ ಕುಮಾರ್ ರೈ ಅವರು ನಿರ್ದೇಶಕರು ಸಾಮಾಜಿಕ ಭದ್ರತೆ ಪಿಂಚಣಿಗಳ ನಿರ್ದೇಶನಾಲಯ ಬೆಂಗಳೂರು ಇದರ ನಿರ್ದೇಶಕರಿಗೆ ಅವರಿಗೆ ಪತ್ರ ಬರೆದು 2 ತಿಂಗಳು ಬಾರದೆ ಇರುವ ಪಿಂಚಣಿ ಸಮಸ್ಯೆ ಬಗ್ಗೆ ಮಾಹಿತಿ ಕೇಳುವುದಾಗಿ ತಿಳಿಸಿದ್ದಾರೆ.

ಈ ಸಂದರ್ಭ ಪುತ್ತೂರು ತಾಲೂಕು ಪಂಚಾಯತ್ ವಿಕಲಚೇತನರ ವಿವಿಧೋದ್ದೇಶ ಪುನರ್ ವಸತಿ ಕಾರ್ಯಕರ್ತ ನವೀನ್ ಕುಮಾರ್, ಪುತ್ತೂರು ನಗರ ಸಭೆಯ ನಗರ ಪುನರ್ ವಸತಿ ಕಾರ್ಯಕರ್ತ ಭರತ್ ಕೆ., ಕಡಬ ತಾಲೂಕು ಬೆಳಂದೂರು ವಿಕಲ ಚೇತನರ ಗ್ರಾಮೀಣ ಪುನರ್ ವಸತಿ ಕಾರ್ಯಕರ್ತ ಪ್ರಶಾಂತಿ ಆನಂದ ಗೌಡ, ಅಲಂಕಾರು ಗ್ರಾಮ ಪಂಚಾಯತ್ ಗ್ರಾಮೀಣ ಪುನರ್ ವಸತಿ ಕಾರ್ಯಕರ್ತ ಮೋನಪ್ಪ ಬಿ. ಹಾಗೂ ವಿಕಲಚೇತನರು, ಎಂಡೋಪೀಡಿತ ವಿಕಲ ಚೇತನರ ಆರೈಕೆದಾರರು ಉಪಸ್ಥಿತರಿದ್ದರು.

ವಸ್ತು ಸಂಗ್ರಹಾಲಯಗಳು ಜ್ಞಾನ ಬೋಧಿಸುವ ಕೇಂದ್ರ: ಸುಬ್ರಹ್ಮಣ್ಯ ಶ್ರೀ



ಸುಬ್ರಹ್ಮಣ್ಯ: ವಸ್ತು ಸಂಗ್ರಹಾಲಯಗಳೆಂದರೆ ಬರಿ ಹಳೆಯ ವಸ್ತುಗಳ ಸಂಗ್ರಹ ಅಲ್ಲ, ಅವುಗಳು ಪ್ರಾಚೀನ ವಸ್ತುಗಳ ಜ್ಞಾನ ಬೋಧಿಸುವ ವಿದ್ಯಾಕೇಂದ್ರ ಎಂದು ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಶ್ರೀ ಸುಬ್ರಹ್ಮಣ್ಯ ಮಠದ ಶ್ರೀನಿಕೇತನ ಟ್ರಸ್ಟ್ ಆಶ್ರಯದ ಶ್ರೀನಿಕೇತನ ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಸೋಮವಾರ ನಡೆದ ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯಗಳ ದಿನಾಚರಣೆ ಉದ್ಘಾಟಿಸಿ, ಅವರು ಮಾತನಾಡಿದರು.

ವಸ್ತು ಸಂಗ್ರಹಾಲಯಗಳಲ್ಲಿ ಇರುವ ಪ್ರಾಚ್ಯ ವಸ್ತುಗಳಾದ ಮರದ ಕೆತ್ತನೆಗಳು, ನಾಣ್ಯಗಳು, ಹಸ್ತ ಪ್ರತಿಗಳು, ತೂಕ ಮತ್ತು ಅಳತೆಯ ಸಾಮಗ್ರಿಗಳು, ಜಾನಪದ ವಸ್ತುಗಳು, ನೋಟುಗಳು ವಿವಿಧ ಕಾಲಘಟ್ಟದ ಸಾಹಿತ್ಯ ಇತಿಹಾಸ, ಸಂಸ್ಕೃತಿ, ಆಚಾರ, ವಿಚಾರಗಳ ಬಗ್ಗೆ ತಿಳಿಸುತ್ತದೆ. ಅವುಗಳನ್ನು ಮುಂದಿನ ಜನಾಂಗಕ್ಕೆ ತಲುಪಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಶ್ರೀಗಳು ತಿಳಿಸಿದರು.

ವೆಬ್‌ಸೈಟ್ ಲೋಕಾರ್ಪಣೆ

ಈ ಸಂದರ್ಭ ಸ್ವಾಮೀಜಿಯವರು ವಸ್ತು ಸಂಗ್ರಹಾಲಯದ ವೆಬ್‌ಸೈಟ್ ಬಿಡುಗಡೆ ಮಾಡಿದರು. ಮಲೆನಾಡು ಇತಿಹಾಸ ಮಂಡಲದ ಅಧ್ಯಕ್ಷ ಹಾಗೂ ಪುರಾತತ್ವ ವಿದ್ವಾಂಸ ಡಾ. ಎಸ್.ಜಿ. ಸಾಮಕ್ ಉಪನ್ಯಾಸ ನೀಡಿದರು. ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ, ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರ ಡಾ.ಜಿ.ವಿ. ಕಲ್ಲಾಪುರ, ಸುಬ್ರಹ್ಮಣ್ಯ ಮಠದ ದಿವಾನ ಸುದರ್ಶನ ಜೋಯಿಸ, ಇತಿಹಾಸ ಸಂಶೋಧಕ ಡಾ. ಕೆ.ಎಸ್.ಎನ್ ಉಡುಪ, ನಿವೃತ್ತ ಸಂಸ್ಕೃತ ಉಪನ್ಯಾಸಕ ಡಾ. ವೆಂಕಟೇಶ ಎಂ. ಗಿರಿ ಮೊದಲಾದವರು ಇದ್ದರು.ಅಪೂರ್ವ ಜೋಯಿಸ ಮತ್ತು ಮಾನಸಿ ಪ್ರಾರ್ಥಿಸಿದರು.

ಆತ್ಮಶಕ್ತಿ ಎಲ್ಯಾರ್‌ಪದವು ಶಾಖೆಯ ವಾರ್ಷಿಕೋತ್ಸವ: ಆರೋಗ್ಯ ಶಿಬಿರ



ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಎಲ್ಯಾರ್‌ಪದವು ಶಾಖೆಯ ದ್ವಿತೀಯ ವಾರ್ಷಿಕೋತ್ಸವದ ಪ್ರಯುಕ್ತ ಎ.ಜೆ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸ್ ಹಾಗೂ ಕಣಚೂರು ಮೆಡಿಕಲ್ ಕಾಲೇಜ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನುರಿತ ವೈದ್ಯರ ತಂಡದಿಂದ ಉಚಿತ ನೇತ್ರ ತಪಾಸಣಾ, ದಂತ ಚಿಕಿತ್ಸಾ ಮತ್ತು ಸಾಮಾನ್ಯ ವೈದ್ಯಕೀಯ ಶಿಬಿರವು ಎಲ್ಯಾರ್‌ಪದವು ಹೋಲಿ ಕ್ರಾಸ್ ಚರ್ಚ್ ಬಳಿ ಜರುಗಿತು.

ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಭಾಗವಹಿಸಿ, ಶುಭಹಾರೈಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಇದರ ನೋಡೆಲ್ ಅಧಿಕಾರಿ ಪ್ರಶಾಂತ್ ಪೂರ್ಜೆ ಶಿಬಿರ ಉದ್ಘಾಟಿಸಿದರು. ಪ್ರಮುಖರಾದ ರೋನಾಲ್ಡ್ ಜೆ ಅಮ್ಮಣ್ಣ, ಗೀತಾ ಕುಂದರ್, ಸಂಘದ ನಿರ್ದೇಶಕ ಗೋಪಾಲ್ ಎಂ., ಸಿಇಒ ಸೌಮ್ಯ ವಿಜಯ್, ದೀಪಕ್, ಯೋಗೀಶ್, ಬಬಿತಾ ಹೆಗ್ಡೆ, ಸತೀಶ್ ಬಂಗೇರ ವೈದ್ಯರಾದ ಡಾ. ಆರಾಧನ, ಡಾ. ಪ್ರಬಿತಾ ಮತ್ತು ಪಿ.ಆರ್.ಓ ರಶೀದ್, ವಿದ್ಯಾ ಮತ್ತಿತರರು ಉಪಸ್ಥಿತರಿದ್ದರು. ಸುಮಾರು 200ಕ್ಕೂ ಹೆಚ್ಚು ಶಿಬಿರಾರ್ಥಿಗಳಿಗೆ ಆರೋಗ್ಯ ತಪಾಸಣೆ, ಉಚಿತ ಔಷಧಿ ವಿತರಣೆ, ಹಾಗೂ ನೇತ್ರ ತಪಾಸಣೆ ನಡೆಸಲಾಯಿತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ ವತಿಯಿಂದ ಆಯುಷ್ಮಾನ್ (ಅಭಾ) ಕಾರ್ಡ್ ಮತ್ತು ಇಶ್ರಮ್ ಕಾರ್ಡ್ ಉಚಿತ ನೋಂದಾವಣೆ ಮಾಡಲಾಯಿತು. ಆತ್ಮಶಕ್ತಿ ಸಹಕಾರಿ ಸಂಘದ ಹಿರಿಯ ಶಾಖಾಧಿಕಾರಿ ರವಿಕಲಾ ವಿಶ್ವನಾಥ್ ಸ್ವಾಗತಿಸಿ, ಸಿಬ್ಬಂದಿ ನಿಶ್ಮಿತ ವಂದಿಸಿದರು. ಕವಿತಾ ಶೋಬಿತ್ ನಿರ್ವಹಿಸಿದರು.

ಎಸ್.ಸಿ.ಎಸ್ ಕಾಲೇಜಿನಲ್ಲಿ ಸಂತ ರವಿದಾಸರ ಜಯಂತಿ: ವಿಶೇಷ ಉಪನ್ಯಾಸ



ಮಂಗಳೂರು: ಎಸ್.ಸಿ.ಎಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕರ ಸಂಘ, ಮಂಗಳೂರು ವಿಭಾಗ ಹಾಗೂ ಕಾಲೇಜಿನ ಹಿಂದಿ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಸಂತ ರವಿದಾಸರ 650ನೇ ಜಯಂತಿಯ ಅಂಗವಾಗಿ 'ಭಾರತೀಯ ಸಂತ ಪರಂಪರೆ' ವಿಷಯದ ಉಪನ್ಯಾಸಮಾಲೆ-2 ಕಾರ್ಯಕ್ರಮ ನಡೆಯಿತು.

ಕಾಲೇಜಿನ ಪ್ರಾಂಶುಪಾಲ ಹಾರ್ದಿಕ್ ಪಿ. ಚೌಹಾಣ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳು ಕೇವಲ ಪಾಠ ಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ಶರಣರು ಮತ್ತು ಸಂತರು ಬೋಧಿಸಿದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಸಹಕಾರಿ ಎಂದು ಅಭಿಪ್ರಾಯಪಟ್ಟರು.

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ ಕಾರ್ಯಕ್ರಮ ಉದ್ಘಾಟಿಸಿ, ಜಾತಿ ಭೇದ, ಅಸಮಾನತೆ ಮತ್ತು ಅಹಂಕಾರದಿಂದ ಕೂಡಿದ ಕಾಲಘಟ್ಟದಲ್ಲಿಯೇ ಸಂತ ರವಿದಾಸರು ಮಾನವೀಯತೆ, ಸಮಾನತೆ ಮತ್ತು ಪ್ರೀತಿಯ ಸಂದೇಶವನ್ನು ಸಾರಿದ ಮಹಾನ್ ಸಂತರು ಎಂದು ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕರ ಸಂಘದ ರಾಜ್ಯ ಜಂಟಿ ಕಾರ್ಯದರ್ಶಿ, ಪ್ರಾಧ್ಯಾಪಕ ಡಾ. ಮಾಧವ ಎಂ.ಕೆ. ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಇದರ ಪ್ರಾಧ್ಯಾಪಕ ಪ್ರೊ. ನಾಗರತ್ನ ರಾವ್ ಭಾಗವಹಿಸಿದರು. ಕಾರ್ಯಕ್ರಮದ ಸಂಯೋಜಕರಾದ ಹಿಂದಿ ವಿಭಾಗದ ಮುಖ್ಯಸ್ಥರು ಡಾ. ವಂದನಾ ಅತಿಥಿಗಳನ್ನು ಸ್ವಾಗತಿಸಿ, ಕನ್ನಡ ವಿಭಾಗದ ಮುಖ್ಯಸ್ಥ ಸುಚಿತ್ರ. ಪಿ. ಶೆಟ್ಟಿ ವಂದಿಸಿದರು. ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿಗಳು ಇದ್ದರು.

ಪರಿಸರ ಅಧ್ಯಯನದಿಂದ ಮಕ್ಕಳಲ್ಲಿ ಕಾಳಜಿ ಮೂಡುತ್ತದೆ: ಆಂಜನೇಯ ರೆಡ್ಡಿ



ಸುಬ್ರಹ್ಮಣ್ಯ: ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಕಾಳಜಿ ಹೆಚ್ಚಲು ಇಂತಹ ಶಿಬಿರಗಳು ಪೂರಕ. ಎಳವೆಯಲ್ಲಿ ಪ್ರಕೃತಿ ಕುರಿತು ಅರಿವು ಮೂಡಿಸುವ ಕಾರ್ಯ ನಡೆಸು ವುದು ಅತ್ಯವಶ್ಯಕ. ಪ್ರಕೃತಿಯ ಬಗ್ಗೆ ಅಧ್ಯಯನ ನಡೆಸುವುದುದರಿಂದ ಪರಿಸರದ ಬಗ್ಗೆ ಹೆಚ್ಚಿನ ಜ್ಞಾನ ಮೂಡಲು ಸಾಧ್ಯವಿದೆ ಎಂದು ಸುಬ್ರಹ್ಮಣ್ಯ ಠಾಣಾಧಿಕಾರಿ ಆಂಜನೇಯ ರೆಡ್ಡಿ ಹೇಳಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ,ಪಂಜ ಸ್ಥಳೀಯ ಸಂಸ್ಥೆ ಹಾಗೂ ಕುಮಾರಸ್ವಾಮಿ ವಿದ್ಯಾಲಯ ಸುಬ್ರಹ್ಮಣ್ಯ ಇವರ ಸಹಭಾಗಿತ್ವದಲ್ಲಿ ಕುಮಾರಸ್ವಾಮಿ ವಿದ್ಯಾಲಯದಲ್ಲಿ ಭಾನುವಾರ ಆರಂಭಗೊಂಡ ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಚಾರಣ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕುಮಾರಸ್ವಾಮಿ ವಿದ್ಯಾಲಯದ ಅಧ್ಯಕ್ಷ ಗಣೇಶ್ ಪ್ರಸಾದ್.ಎನ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಗೈಡ್ ಆಯುಕ್ತೆ ವಿಮಲ ರಂಗಯ್ಯ, ಪಂಜ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಮಾಧವ ಬಿ.ಕೆ, ಜಿಲ್ಲಾ ಸಹಾಯಕ ಆಯುಕ್ತ ದೇವಿಪ್ರಸಾದ್ ಜಾಕೆ, ಕುಮಾರಸ್ವಾಮಿ ವಿದ್ಯಾಲಯದ ಮುಖ್ಯ ಶಿಕ್ಷಕಿ ವಿದ್ಯಾರತ್ನ ಎಚ್., ಪಂಜ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಉದಯ್ ಕುಮಾರ್ ರೈ, ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಭರತ್ ರಾಜ್ ಕೆ. ವೇದಿಕೆಯಲ್ಲಿದ್ದರು.

109 ಶಿಬಿರಾರ್ಥಿಗಳು ಭಾಗಿ

ಶಿಬಿರದಲ್ಲಿ ರಾಜ್ಯದ 17 ಜಿಲ್ಲೆಯಿಂದ 21 ಸ್ಕೌಟ್ಸ್, 05 ಗೈಡ್ಸ್, 42 ರೋವರ್ಸ್, 34 ರೇಂಜರ್ಸ್ ಮತ್ತು 7 ದಳ ನಾಯಕರುಗಳು ಸೇರಿ109 ಶಿಬಿರಾರ್ಥಿಗಳು ಭಾಗವಹಿಸಿದ್ದಾರೆ. ಶಿಬಿರವು ಮೇ 20ರತನಕ ನಡೆಯಲಿದೆ.



ಬಂಟ್ವಾಳ ತಾಲೂಕಿನ ಕಡೇಶಿವಾಲಯದ ನೆತ್ತರ ಬಾಬು ಪೂಜಾರಿ ಮನೆಗೆ ಸಿಡಿಲು ಬಡಿದು ಹಾನಿಯಾಗಿದ್ದು, ಘಟನಾ ಸ್ಥಳಕ್ಕೆ ಬಂಟ್ವಾಳ ಶಾಸಕ ರಾಜೇಶ್ ನಾೃಕ್ ಭೇಟಿ ನೀಡಿ ಪರಿಶೀಲಿಸಿದರು. ಪರಿಹಾರ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭ ಸುರೇಶ್ ಬನಾರಿ, ಸುರೇಶ ಪೂಜಾರಿ ಕನೊಟ್ಟು, ಸಂಪತ್ ಕೋಟ್ಯಾನ್ ಕಡೇಶಿವಾಲಯ, ದೇವಿಪ್ರಸಾದ್ ಶೆಟ್ಟಿ ಉಪಸ್ಥಿತರಿದ್ದರು.

ಮೇ 20: ಮೆಸ್ಕಾಂ ಜನ ಸಂಪರ್ಕ ಸಭೆ

ಬೆಳ್ತಂಗಡಿ: ಮೆಸ್ಕಾಂ ಬೆಳ್ತಂಗಡಿ ಮತ್ತು ಉಜಿರೆ ಉಪವಿಭಾಗಗಳಿಗೆ ಸಂಬಂಧಿಸಿದ ಜನ ಸಂಪರ್ಕ ಸಭೆಯು ಬೆಳ್ತಂಗಡಿ ಉಪವಿಭಾಗ ಕಚೇರಿಯಲ್ಲಿ ಮೇ 20ಕ್ಕೆ ಬೆಳಿಗ್ಗೆ 11ರಿಂದ 12ರವರೆಗೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ, ದೂರವಾಣಿ ಕರೆಯ ಮುಖಾಂತರವೂ ಸಂಪರ್ಕಿಸಿ, ಅಹವಾಲು ಸಲ್ಲಿಸಬಹುದಾಗಿದ್ದು, ದೂರವಾಣಿ ಸಂಖ್ಯೆ: 08256-232095 ಅನ್ನು ದೆ. ಸಂಪರ್ಕಿಸಬಹುದಾಗಿದೆ ಎಂದು ಮೆಸ್ಕಾಂ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಬೈಕಂಪಾಡಿ, ಕೂಳೂರು ಜಂಕ್ಷನ್ ಬಳಿ ಅಂಡರ್ ಪಾಸ್ ನಿರ್ಮಾಣ | ಸಂಸದ ಕ್ಯಾ. ಬ್ರಿಜೇಶ್ ಚೌಟ ಮಾಹಿತಿ

ಕೇಂದ್ರ ಸರ್ಕಾರದಿಂದ ಒಟ್ಟು 11.63 ಕೋಟಿ ರೂ. ಅನುದಾನ ಮಂಜೂರು

ಮಂಗಳೂರು: ಮಂಗಳೂರು ನಗರದ ಹೊರ ವಲಯದ ಪ್ರಮುಖ ಹೆದ್ದಾರಿ ಜಂಕ್ಷನ್‌ಗಳಾದ ಬೈಕಂಪಾಡಿ ಮತ್ತು ಕೂಳೂರು ಬಳಿ ಸುಗಮ ಸಂಚಾರ ಹಾಗೂ ಅಪಘಾತ ಮುಕ್ತ ವಲಯ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಮಹತ್ವದ ಕಾಮಗಾರಿಗಳಿಗೆ ಅನುಮೋದನೆ ನೀಡಿ ಅನುದಾನ ಮಂಜೂರು ಮಾಡಿದೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಬರುವ ಈ 2 ಪ್ರಮುಖ ಜಂಕ್ಷನ್‌ನಲ್ಲಿ ವಾಹನಗಳ ಸುಗಮ ಸಂಚಾರಕ್ಕಾಗಿ ಅಂಡರ್‌ಪಾಸ್ ನಿರ್ಮಾಣಕ್ಕೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಒಟ್ಟು 11.63 ಕೋಟಿ ರೂ. ಅಧಿಕ ಅನುದಾನ ಬಿಡುಗಡೆ ಮಾಡಿದೆ.

ಬ್ಲ್ಯಾಕ್ ಸ್ಪಾಟ್ ಆಗಿ ಮಾರ್ಪಟ್ಟಿದ್ದ ಬೈಕಂಪಾಡಿ ಜಂಕ್ಷನ್ ಸುಗಮ ಹಾಗೂ ಸುರಕ್ಷಿತ ವಾಹನ ಸಂಚಾರಕ್ಕೆ ಸಾರ್ವಜನಿಕರಿಂದ ಹಾಗೂ ವಾಹನ ಸವಾರರಿಂದ ಬೇಡಿಕೆ ಕೇಳಿಬಂದಿತ್ತು. ಇದಕ್ಕೆ ಪರಿಹಾರವಾಗಿ ಹಾಗೂ ಬೈಕಂಪಾಡಿ ಕೈಗಾರಿಕಾ ಪ್ರದೇಶಕ್ಕೆ ತೆರಳುವ ವಾಹನಗಳ ಅನುಕೂಲಕ್ಕಾಗಿ ಬೈಕಂಪಾಡಿ ಜಂಕ್ಷನ್‌ನಲ್ಲಿ 7.09 ಕೋಟಿ ರೂ. ವೆಚ್ಚದಲ್ಲಿ ಅಂಡರ್ ಪಾಸ್ ನಿರ್ಮಾಣಕ್ಕೆ ಹೆದ್ದಾರಿ ಸಚಿವಾಲಯವು ಅನುಮೋದನೆ ನೀಡಿದೆ. ಈ ಅಂಡರ್‌ಪಾಸ್ ನಿರ್ಮಾಣದಿಂದಾಗಿ ವಾಹನಗಳು ಹೆದ್ದಾರಿಯಲ್ಲಿ ಅಪಾಯಕಾರಿಯಾಗಿ ತಿರುವು ಪಡೆಯುವ ಬದಲು, ಸುರಕ್ಷಿತವಾಗಿ ಅಂಡರ್ ಪಾಸ್ ಮೂಲಕವೇ ಕೈಗಾರಿಕಾ ಪ್ರದೇಶದ ಕಡೆಗೆ ಚಲಿಸಬಹುದಾಗಿದೆ. ಜತೆಗೆ ಹೆದ್ದಾರಿಯಲ್ಲಿಯೂ ಬೈಕಂಪಾಡಿ ಬಳಿ ಸುಗಮವಾಗಿ ಉಡುಪಿ ಕಡೆಗೆ ವಾಹನಗಳು ಸಂಚರಿಸುವುದಕ್ಕೆ ಅನುಕೂಲವಾಗಲಿದೆ.

ಸತತ ಪ್ರಯತ್ನದಿಂದ ಅಡತಡೆಗಳು ದೂರ: ಸಂಸದ ಕ್ಯಾ.ಚೌಟ

ದಕ್ಷಿಣ ಕನ್ನಡ ಜಿಲ್ಲೆಯ ಹೆದ್ದಾರಿಗಳ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಎನ್‌ಎಂಪಿಟಿ ಭಾಗದ ರಸ್ತೆಯು ಇದಕ್ಕೂ ಮೊದಲು ರಾಷ್ಟ್ರೀಯ ಹೆದ್ದಾರಿ ಸರಕು ಸಾಗಣೆ ನಿರ್ವಹಣೆ



ಲಿಮಿಟೆಡ್ ವ್ಯಾಪ್ತಿಯಲ್ಲಿದ್ದು ನಿರ್ದಿಷ್ಟ ಏಜೆನ್ಸಿ ಇಲ್ಲದಿರುವುದು ಹಾಗೂ ನಿಧಿಯ ಕೊರತೆಯಿಂದ ಹೆದ್ದಾರಿ ಅಭಿವೃದ್ಧಿಗೆ ತೀವ್ರ ಸವಾಲು ಎದುರಾಗಿತ್ತು. ಈ ಬಗ್ಗೆ ಸತತ ಪ್ರಯತ್ನ ನಡೆಸಿ, ಎದುರಾಗಿದ್ದ ತಾಂತ್ರಿಕ ಅಡಚಣೆ-ಸವಾಲು ಬಗೆಹರಿಸಿ ಪೋರ್ಟ್ ವ್ಯಾಪ್ತಿಯ ರಸ್ತೆಯನ್ನು ಸಂಪೂರ್ಣ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವಲ್ಲಿ ಈಗಾಗಲೇ ಯಶಸ್ವಿಯಾಗಿದೆ. ಇದೀಗ ಕೂಳೂರು ಸೇತುವೆ ಬಳಿ ಅಂಡರ್‌ಪಾಸ್ ನಿರ್ಮಾಣವಾಗಲಿದೆ. ಅಲ್ಲದೆ, ಬ್ಲ್ಯಾಕ್ ಸ್ಪಾಟ್ ಆಗಿ ಬದಲಾಗಿದ್ದ ಬೈಕಂಪಾಡಿ ಜಂಕ್ಷನ್ ಬಳಿಯೂ ಕೆಳಸೇತುವೆ ನಿರ್ಮಾಣಕ್ಕೆ ಅನುಮೋದನೆ ದೊರಕಿರುವುದರಿಂದ ಮಂಗಳೂರು-ಉಡುಪಿ ನಡುವೆ ಸಂಚರಿಸುವ ಸಾರ್ವಜನಿಕರಿಗೆ ಸುಗಮ ಸಂಚಾರ ಸಾಧ್ಯವಾಗಲಿದೆ. ಜೊತೆಗೆ ಬೈಕಂಪಾಡಿ ಕೈಗಾರಿಕಾ ವಲಯ ಹಾಗೂ ಎಂ.ಎಸ್.ಇ.ಝೆಡ್ ಭಾಗಕ್ಕೆ ಸಂಚರಿಸುವವರಿಗೂ ಅನುಕೂಲ ಕಲ್ಪಿಸಲಿದೆ ಎಂದು ಸಂಸದ ಚೌಟ ತಿಳಿಸಿದರು.

ಕೂಳೂರು ಸೇತುವೆ ಬಳಿ ಅಂಡರ್‌ಪಾಸ್

ರಾಷ್ಟ್ರೀಯ ಹೆದ್ದಾರಿ-66ರ ಕೆ.ಐ.ಒ.ಸಿ.ಎಲ್ ಜಂಕ್ಷನ್ ಮತ್ತು ಕೂಳೂರು ಸೇತುವೆ ಬಳಿ 4.54 ಕೋಟಿ ರೂ. ವೆಚ್ಚದಲ್ಲಿ ಅಂಡರ್ ಪಾಸ್ ಕಾಮಗಾರಿಗೆ ಅನುಮೋದನೆ ಸಿಕ್ಕಿದೆ. ಈ ಭಾಗದಲ್ಲಿ ಅಂಡರ್‌ಪಾಸ್ ನಿರ್ಮಿಸುವುದರಿಂದ ತಣ್ಣೀರುಬಾವಿ ಬೀಚ್ ಹಾಗೂ ಎಂ.ಎಸ್.ಇ.ಝೆಡ್ ಕಡೆಗೆ ಚಲಿಸುವ ವಾಹನಗಳ ದಟ್ಟಣೆ ನಿವಾರಿಸಲು ಮತ್ತು ಸುಗಮ ಸಂಚಾರ ಕಲ್ಪಿಸಲು ಈ ಯೋಜನೆ ಅತ್ಯಂತ ಸಹಕಾರಿಯಾಗಲಿದೆ. ಜಿಲ್ಲೆಯ ಹೆದ್ದಾರಿ ಮೂಲಸೌಕರ್ಯದ ದೀರ್ಘಕಾಲದ ಬೇಡಿಕೆಯನು ಈಡೇರಿಸಿ, ಈ ಮಹತ್ವದ ಕಾಮಗಾರಿಗಳಿಗೆ ತಕ್ಷಣವೇ ಅನುದಾನ ಒದಗಿಸಿದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿಗೆ ಸಂಸದರು ಕೃತಜ್ಞತೆ ಸಲ್ಲಿಸಿದ್ದಾರೆ.

ಸುತ್ತಮುತ್ತ


ಡಿಪ್ಲೋಮಾ ಕೃಷಿ ಕೋರ್ಸ್‌ಗೆ ಅರ್ಜಿ ಆಹ್ವಾನ

ಉಡುಪಿ: ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ಅಧೀನದಲ್ಲಿರುವ ಬ್ರಹ್ಮಾವರದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 2 ವರ್ಷಗಳ ಡಿಪ್ಲೊಮಾ ಕೃಷಿ ಕೋರ್ಸ್ ಪ್ರವೇಶಾತಿಗೆ ವೆಬ್‌ಸೈಟ್ www.uahs.edu.in ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಡಿಪ್ಲೊಮಾ (ಕೃಷಿ) ಯನ್ನು ಕನ್ನಡ ಮಾಧ್ಯಮದಲ್ಲಿ ಸೆಮಿಸ್ಟರ್ (4 ಸೆಮಿಸ್ಟರ್) ಪದ್ಧತಿಯಲ್ಲಿ ಬೋಧಿಸಲಾಗುವುದು. ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದಲ್ಲಿ ಡಿಪ್ಲೊಮಾ (ಕೃಷಿ) ಕೋರ್ಸ್ಗೆ ಪ್ರವೇಶ ಕೋರುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಪಠ್ಯವನ್ನು ಭಾ?ಯಾಗಿ ಅಭ್ಯಸಿಸಿ ಕನಿಷ್ಟ ಶೇ. 45 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು (ಪ.ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1ರ ಅಭ್ಯರ್ಥಿಗಳು ಕನಿಷ್ಠ ಶೇ. 40 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು). 2026ರ ಜೂನ್ 12ಕ್ಕೆ ಅಭ್ಯರ್ಥಿಗಳ ವಯಸ್ಸು 19 ವರ್ಷ ಮೀರಿರಬಾರದು. ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ. 50ರಷ್ಟು ಸೀಟುಗಳನ್ನು ಡಿಪ್ಲೊಮಾ (ಕೃಷಿ) ಪ್ರವೇಶಾತಿಗೆ ಮೀಸಲಿಡಲಾಗಿದೆ. ಭರ್ತಿಮಾಡಿದ ಅರ್ಜಿಗಳನ್ನು ಮತ್ತು ಅರ್ಜಿಯ ನಿಗದಿತ ಶುಲ್ಕವನ್ನು ಡಿಡಿ ರೂಪದಲ್ಲಿ ಲಗತ್ತಿಸಿ, ಜೂನ್ 12ರ ಒಳಗಾಗಿ ಕುಲಸಚಿವರು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ, ಇರುವಕ್ಕಿ ಆವರಣ-577412 ಇಲ್ಲಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದಾಗಿದೆ ನಿಗದಿತ ದಿನಾಂಕದ ನಂತರ ಡಿಡಿಯನ್ನು ಪಡೆದು ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಎಂದು ಕುಲಸಚಿವರ ಕಚೇರಿ ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿನಿಲಯ ಪ್ರವೇಶಾತಿ :ಅರ್ಜಿ ಆಹ್ವಾನ

ಉಡುಪಿ: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿಗಾಗಿ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 15 ಮೆಟ್ರಿಕ್ ಪೂರ್ವ ಹಾಗೂ 8 ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ಎಚ್‌ಎಂಐಎಸ್ ತಂತ್ರಾಂಶದ https://swd-hmis.karnataka.gov.in/ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಜೂನ್ 30 ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಉಡುಪಿ ದೂರವಾಣಿ ಸಂಖ್ಯೆ: 0820-2528884, ಮೊಬೈಲ್ ಸಂಖ್ಯೆ 9480843209, ಕುಂದಾಪುರ ದೂರವಾಣಿ ಸಂಖ್ಯೆ: 08254-230609, 298089, ದೂರವಾಣಿ ಸಂಖ್ಯೆ 9480843208 ಹಾಗೂ ಕಾರ್ಕಳ ದೂರವಾಣಿ ಸಂಖ್ಯೆ 08258-298134, 232133, ಮೊಬೈಲ್ ಸಂಖ್ಯೆ 9480843207 ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಪ್ರಕಟಣೆ ತಿಳಿಸಿದೆ.

ಶಿಲ್ಪ ಕಲಾ ಶಾಲೆಗೆ ಮಾಜಿ ಐಎಎಸ್ ಅಧಿಕಾರಿ ಪ್ರಭಾಕರ್ ಆಚಾರ್ಯ ಭೇಟಿ



ಉಡುಪಿ: ಕರ್ನಾಟಕ ಸರಕಾರದ ಕಂದಾಯ ಇಲಾಖೆಯ ಮಾಜಿ ಮುಖ್ಯ ಕಾರ್ಯದರ್ಶಿ ಐಎಎಸ್ ಪ್ರಭಾಕರ್ ಆಚಾರ್ಯ ಸೋಮವಾರ ಇಲ್ಲಿನ ಕುಂಭಾಶಿಯ ವಿಶ್ವವಿಖ್ಯಾತ ರಥ ಶಿಲ್ಪಿ ರಾಜಗೋಪಾಲ ಆಚಾರ್ಯ ಇವರ ಶಿಲ್ಪ ಕಲಾ ಶಾಲೆಗೆ ಭೇಟಿ ನೀಡಿ ಅಲ್ಲಿನ ಕಾರ್ಯವೈಖರಿ ,ಹೊಸ ತಂತ್ರಜ್ಞಾನಗಳನ್ನು ಪರಿಶೀಲಿಸಿ ಪ್ರಶಂಸಿದರು. ಈ ಸಂದರ್ಭದಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕತ ರಥಶಿಲ್ಪಿ ಲಕ್ಷ್ಮೀನಾರಾಯಣ ಆಚಾರ್ಯ ಸಮ್ಮುಖದಲ್ಲಿ ಪ್ರಭಾಕರ್ ಆಚಾರ್ಯ ಅವರನ್ನು ಸನ್ಮಾನಿಸಿದರು.

ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ | ಮಡಿಕೇರಿಯಲ್ಲಿ ಪ್ರಾಚೀನ ನಾಣ್ಯಗಳ ಪ್ರದರ್ಶನ

ಜನರನ್ನು ಆಕರ್ಷಿಸಿದ 2000ಕ್ಕೂ ಹೆಚ್ಚು ನಾಣ್ಯಗಳ ಪ್ರದರ್ಶನ





ಮಡಿಕೇರಿ: ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ ಅಂಗವಾಗಿ ನಾಡಿನ ಗತ ಇತಿಹಾಸವನ್ನು ಪುಷ್ಟೀಕರಿಸುವ 'ಪ್ರಾಚೀನ ನಾಣ್ಯಗಳ ಪ್ರದರ್ಶನ ನಗರದ ಕೋಟೆಯ ಆವರಣದ ವಸ್ತುಸಂಗ್ರಹಾಲಯದಲ್ಲಿ ಅರ್ಥಪೂರ್ಣವಾಗಿ ನಡೆಯಿತು.

ಕೊಡಗಿನ ಖ್ಯಾತ ವೈದ್ಯ ಹಾಗೂ ನಾಣ್ಯ ಸಂಗ್ರಹಕಾರ ಡಾ.ಎಂ.ಜಿ.ಪಾಟ್ಕರ್ ಅವರ ಸಂಗ್ರಹದ ಎರಡು ಸಾವಿರಕ್ಕೂ ಹೆಚ್ಚು ನಾಣ್ಯಗಳ ಪ್ರದರ್ಶನ ಕುತೂಹಲಕಾರಿಯಾಗಿ ಮೂಡಿ ಬಂದು, ನೂರಾರು ಸಂಖ್ಯೆಯ ಜನರನ್ನು ಆಕರ್ಷಿಸಿತು.

ಇತಿಹಾಸ ನೋಡಿ ಕಲಿಯಲು ವೇದಿಕೆ

ಖ್ಯಾತ ನಾಣ್ಯ-ನೋಟು ಸಂಗ್ರಹಕಾರ ಹುಣಸೂರು ಪಿ.ಕೆ.ಕೇಶವಮೂರ್ತಿ ಅವರು ಪ್ರಾಚೀನ ನಾಣ್ಯಗಳ ಪ್ರದರ್ಶನ ಉದ್ಘಾಟಿಸಿ, ಪ್ರಾಚೀನ ನಾಣ್ಯಗಳ ಪ್ರದರ್ಶನದಿಂದ ವಿದ್ಯಾರ್ಥಿಗಳು ಪುಸ್ತಕದಲ್ಲಿ ಓದುವ ಇತಿಹಾಸವನ್ನು ಕಣ್ಣಾರೆ ನೋಡಿ ಕಲಿಯಲು ಉತ್ತಮ ವೇದಿಕೆಯಾಗಿದೆ ಎಂದರು.

ಇದು ಮುಂದಿನ ಪೀಳಿಗೆಗೆ ಇತಿಹಾಸದ ವಿವಿಧ ರಾಜವಂಶಗಳ, ಲಾಂಛನಗಳ ಹಾಗೂ ಆಯಾ ಕಾಲದ ಇತಿಹಾಸವನ್ನು ಸ್ಪಷ್ಟವಾಗಿ ತಿಳಿಯಲು ಸಹಕಾರಿಯಾಗುತ್ತದೆ. ಅಲ್ಲದೇ ವಿದ್ಯಾರ್ಥಿಗಳು ಹಾಗೂ ಇತಿಹಾಸಕಾರರ ಕಲಿಕೆಗೆ ಪೂರಕವಾಗಿದೆ. ಈ ನಿಟ್ಟಿನಲ್ಲಿ ಶಾಲಾ-ಕಾಲೇಜುಗಳಲ್ಲಿ, ವಸ್ತು ಸಂಗ್ರಹಾಲಯಗಳಲ್ಲಿ ಪ್ರದರ್ಶನ ನಡೆಸಲಾಗುತ್ತದೆ ಎಂದು ತಿಳಿಸಿದರು.

ಈ ಹಿಂದೆ ತಾನು ನಾಣ್ಯ ಮತ್ತು ನೋಟುಗಳ ಪ್ರದರ್ಶನ ನಡೆಸುತ್ತಿದ್ದು, ಈ ಬಾರಿ ನಾಡಿನ ಖ್ಯಾತ ವೈದ್ಯ ಹಾಗೂ ನಾಣ್ಯ ಸಂಗ್ರಹಕಾರರೂ ಆಗಿರುವ ಡಾ.ಎಂ.ಜಿ.ಪಾಟ್ಕರ್ ಮತ್ತು ವಿಜಯಲಕ್ಷ್ಮೀ ಪಾಟ್ಕರ್ ಅವರ ಸಂಗ್ರಹದ ನಾಣ್ಯಗಳ ಪ್ರದರ್ಶನ ನಡೆಸಲಾಗುತ್ತಿದೆ. ಇಲ್ಲಿ ಕ್ರಿಸ್ತ ಪೂರ್ವ 6ನೇ ಶತಮಾನದಲ್ಲಿ ಚಲಾವಣೆಗೆ ಬಂದ ಭಾರತದ ಮೊಟ್ಟ ಮೊದಲ ಪಂಚ್‌ಮಾರ್ಕ್ ನಾಣ್ಯಗಳು, ಗ್ರೀಕ್, ರೋಮನ್, ಕುಶಾನರು, ಗುಪ್ತ ಸಾಮ್ರಾಜ್ಯ, ಶಾತವಾಹನ, ಕ್ಷತ್ರಪ, ಚೋಳ, ಪಲ್ಲವ, ಪಾಂಡ್ಯ, ವಿದೇಶಿ ಆಕ್ರಮಣಕಾರರ, ಬ್ರಿಟಿಷರ ನಾಣ್ಯಗಳು, ಸ್ವಾತಂತ್ರ್ಯ ಪೂರ್ವ, ನಂತರದ ತಾಮ್ರ, ಬೆಳ್ಳಿ, ಚಿನ್ನ, ಸೀಸ, ಹಿತ್ತಾಳೆ, ಕಂಚಿನ ನೂರಾರು ನಾಣ್ಯಗಳು ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಿದೆ ಎಂದು ಅವರು ಹೇಳಿದರು.

ಪ್ರದರ್ಶನದಲ್ಲಿ ಕರ್ನಾಟಕದ ನಾಣ್ಯಗಳು

ಗಂಗ, ಕದಂಬ, ಚಾಲುಕ್ಯ, ಹೊಯ್ಸಳ, ಕಾಕತೀಯ, ಯಾದವ, ವಿಜಯನಗರದ ಹರಿಹರ, ದೇವರಾಯ, ಕೃಷ್ಣದೇವರಾಯ, ಅಚ್ಯುತರಾಯ, ಶ್ರೀರಂಗರಾಯ, ಸದಾಶಿವರಾಯ ಇತರೆ ಅರಸರು. ಮೈಸೂರಿನ ದಿವಾನ್ ಪೂರ್ಣಯ್ಯ, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ನಾಣ್ಯಗಳು ಪ್ರದರ್ಶನದಲ್ಲಿ ಕಂಡುಬಂದವು.

ನಾಡಿನ ಖ್ಯಾತ ವೈದ್ಯರು ಹಾಗೂ ನಾಣ್ಯ ಸಂಗ್ರಹಕಾರರೂ ಆಗಿರುವ ಡಾ.ಎಂ.ಜಿ.ಪಾಟ್ಕರ್ ಮತ್ತು ವಿಜಯಲಕ್ಷೀ ಪಾಟ್ಕರ್, ಕೊಡಗು ಜಿಲ್ಲಾ ಜಾನಪದ ಪರಿಷತ್ತಿನ ಅಧ್ಯಕ್ಷ ಬಿ.ಜಿ.ಅನಂತಶಯನ, ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್ ಬಿ.ಪಿ.ರೇಖಾ ಹಾಗೂ ಸಿಬ್ಬಂದಿಗಳು ಇದ್ದರು.

ಮಹಾತ್ಮಾ ಗಾಂಧಿ ಮೆಮೋರಿಯಲ್ ಸಂಧ್ಯಾ ಕಾಲೇಜಿನ ವಾರ್ಷಿಕೋತ್ಸವ



ಉಡುಪಿ: ಉಡುಪಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಸಂಧ್ಯಾ ಕಾಲೇಜಿನ ವಾರ್ಷಿಕೋತ್ಸವ ಎರಡು ಹಂತಗಳಲ್ಲಿ ಎಂಜಿಎಂ ಕ್ಯಾಂಪಸ್‌ನ ನೂತನ ರವೀಂದ್ರ ಮಂಟಪದಲ್ಲಿ ನಡೆಯಿತು.

ಎಂಜಿಎಂ ಕಾಲೇಜಿನ ಬಳಿಕ ಎಂಜಿಎಂ ಸಂಧ್ಯಾ ಕಾಲೇಜಿನ ಪ್ರಾಂಶುಪಾಲರಾದ ಡಾ. ದೇವಿದಾಸ್ ಎಸ್. ನಾಯಕ್ ವಾರ್ಷಿಕ ವರದಿ ಮಂಡಿಸಿ, ಕಾಲೇಜಿನ ಶೈಕ್ಷಣಿಕ ಸಾಧನೆಗಳ ಕುರಿತು ವಿವರಿಸಿದರು. ಮುಖ್ಯ ಅತಿಥಿಯಾಗಿ ಶಾರದಾ ರೆಸಿಡೆನ್ಷಿಯಲ್ ಶಾಲೆಯ ನಿರ್ದೇಶಕ ವಿದ್ಯಾವಂತ ಆಚಾರ್ಯ ಭಾಗವಹಿಸಿ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು. ಗೌರವ ಅತಿಥಿಗಳಾಗಿ ಎಂಜಿಎಂ ಪಿಯು ಕಾಲೇಜಿನ ಪ್ರಾಂಶುಪಾಲೆ ಮಾಲತಿ ದೇವಿ ಹಾಗೂ ಬಿಕಾಂ, ಬಿಬಿಎ ಸಂಯೋಜಕಿ ಡಾ. ಮಲ್ಲಿಕಾ ಎ. ಶೆಟ್ಟಿ ಉಪಸ್ಥಿತರಿದ್ದರು. ರೋಶಲ್ ತೃತೀಯ ಬಿಸಿಎ ಕ್ರೀಡಾ ಸಾಧಕರ ಪಟ್ಟಿ ವಾಚಿಸಿದರು. ಕಾರ್ಯಕ್ರಮವನ್ನು ಮಿಥಾಲಿ ಪೈ, ಮಿತಾ ನಿರೂಪಿಸಿದರು.

ಎರಡನೆಯ ಹಂತದಲ್ಲಿ ಸಂಧ್ಯಾ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ವಿದ್ಯಾರ್ಥಿಗಳ ಪ್ರತಿಭೆ, ಸಾಧನೆ ಹಾಗೂ ಶೈಕ್ಷಣಿಕ ಮೇಲುಗ್ಗೆಯನ್ನು ಗೌರವಿಸುವ ವಿಶೇಷ ಕಾರ್ಯಕ್ರಮವು ಶುಕ್ರವಾರ ಎಂಜಿಎಂ ಕ್ಯಾಂಪಸ್‌ನ ನೂತನ ರವೀಂದ್ರ ಮಂಟಪದಲ್ಲಿ ನಡೆಯಿತು.

ಪ್ರಾಂಶುಪಾಲ ಡಾ. ದೇವಿದಾಸ್ ಎಸ್. ನಾಯಕ್ ಸ್ವಾಗತ ಭಾಷಣ ಮಾಡಿದರು. ಬಳಿಕ ಅತಿಥಿಗಳಿಗೆ ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು.ವಾಣಿಜ್ಯ ವಿಭಾಗದ ಉಪನ್ಯಾಸಕಿ ಕಾವ್ಯಶ್ರೀ ಪ್ರಾವೀಣ್ಯ ಬಹುಮಾನ ವಿಜೇತರ ಘೋಷಣೆ ಹಾಗೂ ಸನ್ಮಾನ ಕಾರ್ಯಕ್ರಮ ನಡೆಸಿಕೊಟ್ಟರು. ವಿದ್ಯಾರ್ಥಿ ಕ್ಷೇಮಪಾಲನಾ ಮಂಡಳಿಯ ಜಂಟಿ ಕಾರ್ಯದರ್ಶಿ ಧನ್ಯಾ ಬಂಗೇರ ಸಾಧಕರ ಸನ್ಮಾನ ಕಾರ್ಯಕ್ರಮ ನಿರ್ವಹಿಸಿದರು. ಅತ್ಯುತ್ತಮ ಹೊರಹೋಗುವ ವಿದ್ಯಾರ್ಥಿಗಳ ಘೋಷಣೆ ಹಾಗೂ ಅಭಿನಂದನಾ ಕಾರ್ಯಕ್ರಮವೂ ನಡೆಯಿತು. ಎಂಜಿಎಂ ಕಾಲೇಜು ಟ್ರಸ್ಟ್ ಅಧ್ಯಕ್ಷ ಡಾ. ಟಿ. ಸತೀಶ್ ಯು. ಪೈ, ಮಣಿಪಾಲದ ಐಎಸ್‌ಎ ಫೌಂಡೇಶನ್ ನಿರ್ದೇಶಕ ಡಾ. ಪ್ರಭಾಕರ ಶಾಸ್ತ್ರಿ ಎಂ.ಜಿ.ಎಂ ಕಾಲೇಜಿನ ಉಪಪ್ರಾಂಶುಪಾಲ ಹಾಗೂ ಬಿಸಿಎ ಸಂಯೋಜಕ ಡಾ. ಎಂ. ವಿಶ್ವನಾಥ ಪೈ, ಬಿಕಾಂ, ಬಿಬಿಎ ಸಂಯೋಜಕ ಡಾ. ಮಲ್ಲಿಕಾ ಎ. ಶೆಟ್ಟಿ ಇದ್ದರು. ಭೂಮಿಕಾ ಹಾಗೂ ತಂಡ ಪ್ರಾರ್ಥಿಸಿದರು. ಉಪಪ್ರಾಂಶುಪಾಲ ಹಾಗೂ ಬಿಸಿಎ ಸಂಯೋಜಕ ಡಾ. ಎಂ. ವಿಶ್ವನಾಥ ಪೈ ಸ್ವಾಗತಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಉಪನ್ಯಾಸಕಿ ಅಕ್ಷತಾ ನಾಯಕ್ ನಿರೂಪಿಸಿದರು.

ಮಕ್ಕಳಗುಡಿ ಬೆಟ್ಟದಲ್ಲಿ ತ್ಯಾಜ್ಯ ತೆರವಿಗೆ ಶಾಸಕ ಮಂಥರ್ ಸೂಚನೆ



ಸೋಮವಾರಪೇಟೆ: ಮಕ್ಕಳಗುಡಿ ಬೆಟ್ಟ ಸಂರಕ್ಷಣಾ ಮತ್ತು ಅಭಿವೃದ್ಧಿ ಸಮಿತಿ ಸಭೆ ತಾಲೂಕಿನ ಕಿರಗಂದೂರು ಗ್ರಾಮದ ಮಕ್ಕಳಗುಡಿ ಬೆಟ್ಟದಲ್ಲಿ ಸಮಿತಿ ಅಧ್ಯಕ್ಷ ಸುರೇಶ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಡಾ. ಮಂತರ್‌ಗೌಡ ಮಾತನಾಡಿ, ಪ್ರವಾಸಿ ತಾಣ ಮಕ್ಕಳಗುಡಿ ಬೆಟ್ಟದಲ್ಲಿ ಕೆಲವೊಂದು ಅಭಿವೃದ್ಧಿ ಕೆಲಸಗಳಾಗಿವೆ. ಇನ್ನೂ ಹೆಚ್ಚಿನ ಅಭಿವೃದ್ಧಿ ಕಾಣಬೇಕು ಎಂದು ಹೇಳಿದರು. ಮಕ್ಕಳ ಗುಡಿ ಬೆಟ್ಟದ ಪ್ರದೇಶವನ್ನು ಸರ್ವೆ ಮಾಡಿಸಿ, ಮಕ್ಕಳಗುಡಿ ಬೆಟ್ಟದ ಗಡಿ ಗುರುತಿಸುವ ಕೆಲಸ ಮಾಡಿಸಿಕೊಡಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುವುದು. ಮಕ್ಕಳ ಗುಡಿ ಬೆಟ್ಟದ ಸುತ್ತಲೂ ಸಾಕಷ್ಟು ತ್ಯಾಜ್ಯ ಕಂಡುಬರುತ್ತಿದ್ದು, ಒಂದು ವಾರದಲ್ಲಿ ಸ್ವಚ್ಛ ಮಾಡಿಸುವಂತೆ ಕಿರಗಂದೂರು ಗ್ರಾ.ಪಂ. ಪಿಡಿಒ ವೇಣುಗೋಪಾಲ್‌ಗೆ ಸೂಚಿಸಿದರು. ತ್ಯಾಜ್ಯ ಸಂಗ್ರಹಿಸಲು ಅಲ್ಲಲ್ಲಿ ತೊಟ್ಟಿಗಳು, ಆಯ್ದ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಬೇಕು ಎಂದು ತಿಳಿಸಿದರು.

ಐಗೂರು ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಬಿ. ಶಿವಕುಮಾರ್ ಮಾತನಾಡಿ, ಮಕ್ಕಳಗುಡಿ ಬೆಟ್ಟ ಸಮುದ್ರಮಟ್ಟದಿಂದ 4 ಸಾವಿರ ಅಡಿ ಎತ್ತರದಲ್ಲಿದ್ದು, ಕಣ್ಣು ಹಾಯಿಸಿದಷ್ಟು ದೂರ ಸುಂದರ ಪರಿಸರವನ್ನು ಕಾಣಬಹುದು. ಕಳೆದ ಕೆಲವು ವರ್ಷಗಳಿಂದ ಮಕ್ಕಳಗುಡಿ ಬೆಟ್ಟದ ಭೂಮಿ ಒತ್ತುವರಿಯಾಗದಂತೆ ಗ್ರಾಮಸ್ಥರು ಒಂದು ಸಮಿತಿ ಮಾಡಿ ಜಾಗವನ್ನು ಉಳಿಸಿಕೊಂಡು ಬರುವ ಕೆಲಸ ಮಾಡಿದ್ದಾರೆ ಎಂದರು. ಕೊಡಗು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್.ಎಂ. ಚಂಗಪ್ಪ, ತಾಲೂಕು ಘಟಕದ ಅಧ್ಯಕ್ಷ ಎ.ಆರ್. ಮುತ್ತಣ್ಣ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಸತೀಶ್, ಸೆಸ್ಕ್ ಎಇಇ ವಿನಯ್ ಇದ್ದರು.

ನಿಡ್ಪಳ್ಳಿ ಒಕ್ಕೂಟದ ಸಭೆ: ನೂತನ ಅಧ್ಯಕ್ಷರಾಗಿ ಕುಶಾಲಪ್ಪ ಕೋಡಿ ಆಯ್ಕೆ



ನಿಡ್ಪಳ್ಳಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೆಟ್ಟಂಪಾಡಿ ವಲಯದ ನಿಡ್ಪಳ್ಳಿ ಒಕ್ಕೂಟದ ಮಾಸಿಕ ಸಭೆ ಒಕ್ಕೂಟದ ಅಧ್ಯಕ್ಷ ರಾಧಾಕೃಷ್ಣ ಪಾಟಾಳಿ ಅವರ ಅಧ್ಯಕ್ಷತೆಯಲ್ಲಿ ನಿಡ್ಪಳ್ಳಿ ಶಾಲೆಯಲ್ಲಿ ನಡೆಯಿತು.

ತಾಲೂಕು ಕೃಷಿ ಅಧಿಕಾರಿ ಹರೀಶ್, ಯೋಜನೆಯ ಪ್ರಸ್ತುತ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಸೇವಾ ಪ್ರತಿನಿಧಿ ಶಾಲಿನಿ ಕೆ., ಸಂಪೂರ್ಣ ಆರೋಗ್ಯ ಸುರಕ್ಷೆ ಹಾಗೂ ಸಾಲದ ಬಗ್ಗೆ ಮಾಹಿತಿ ನೀಡಿದರು. ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ ಅಧ್ಯಕ್ಷೆ ಸುನೀತಾ ರೈ, ಒಕ್ಕೂಟದ ಕಾರ್ಯದರ್ಶಿ ಶ್ರೀಮತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ನೂತನ ಒಕ್ಕೂಟದ ಪದಗ್ರಹಣ ಕಾರ್ಯಕ್ರಮ ಜೂ.6ರಂದು ಶ್ರೀ ಶಾಂತದುರ್ಗಾ ದೇವಸ್ಥಾನದಲ್ಲಿ ನಡೆಸಲಿರುವ ಕುರಿತು ಸಭೆಗೆ ತಿಳಿಸಲಾಯಿತು. ಜವಾಬ್ದಾರಿ ತಂಡವಾದ ಶ್ರೀ ಶಾಸ್ತಾರ ತಂಡದ ಮಂಜುನಾಥ ರೈ ಸ್ವಾಗತಿಸಿ, ವಂದಿಸಿದರು. ಹರಿಪ್ರಸಾದ್ ಸಿ.ಎಚ್. ತಂಡದ ವರದಿ ವಾಚಿಸಿದರು. ಒಕ್ಕೂಟದ ಸದಸ್ಯರು ಪಾಲ್ಗೊಂಡರು.

ನೂತನ ಒಕ್ಕೂಟ ರಚನೆ

ನೂತನ ಒಕ್ಕೂಟದ ಅಧ್ಯಕ್ಷರಾಗಿ ಕುಶಾಲಪ್ಪ ಕೋಡಿ, ಉಪಾಧ್ಯಕ್ಷರಾಗಿ ಸುಗುಣ, ಕಾರ್ಯದರ್ಶಿಯಾಗಿ ಸುಮಿತ್ರಾ, ಜತೆ ಕಾರ್ಯದರ್ಶಿಯಾಗಿ ನವನೀತ, ಕೋಶಾಧಿಕಾರಿಯಾಗಿ ಗಂಗಾಧರ ಸಿ.ಎಚ್. ಅವರನ್ನು ಆರಿಸಲಾಯಿತು. ಉಪ ಸಮಿತಿ ಸದಸ್ಯರಾಗಿ ಬಾಲಚಂದ್ರ ಕೆ., ಮಾಲತಿ ಕೆ., ಹರೀಶ ಬಿ., ಹರಿಪ್ರಸಾದ್ ಸಿ.ಎಚ್, ಜಲಜಾಕ್ಷಿ ಆಯ್ಕೆಯಾದರು. ದಾಖಲಾತಿ ಸದಸ್ಯರಾಗಿ ಶೀನಪ್ಪ ಬಿ., ತೃಪ್ತಿ, ಕವಿತಾ ಬಿ., ಪುಷ್ಪಾವತಿ ಬಿ.,ಸುನೀತಾ ಅವರನ್ನು ಆರಿಸಲಾಯಿತು.

ಮಂಗಳೂರು: ಕರ್ನಾಟಕ ಜೋಗಿ ಸಮಾಜ ಸುಧಾರಕ ಸಂಘದ ವಾರ್ಷಿಕ ಕ್ರೀಡಾಕೂಟ



ಮಂಗಳೂರು: ಕರ್ನಾಟಕ ಜೋಗಿ ಸಮಾಜ ಸುಧಾರಕ ಸಂಘದ ವಾರ್ಷಿಕ ಕ್ರೀಡಾಕೂಟದ ಅಂಗವಾಗಿ ವಲಯವಾರು ವಯೋಮಿತಿಗೆ ಅನುಗುಣವಾಗಿ 8 ವಿಭಾಗಗಳಲ್ಲಿ ಆಟೋಟ ಸ್ಪರ್ಧೆಗಳು ರವಿವಾರ ನಗರದ ಮಂಗಳಾ ಸ್ಟೇಡಿಯಮ್ ನಲ್ಲಿ ನಡೆಯಿತು. ಸಂಘದ ಮಾಜಿ ಖಜಾಂಚಿ ಕೆ. ಸುರೇಶ್ ಕಾರ್ಯಕ್ರಮ ಉದ್ಘಾಟಿಸಿದರು. ಅಧ್ಯಕ್ಷ ಕಿರಣ್ ಕುಮಾರ್ ಜೋಗಿ, ಉಪಾಧ್ಯಕ್ಷ ಶಿವರಾಮ್ ವಿ, ಕಾರ್ಯದರ್ಶಿ ಯೋಗಿ ವರದ್‌ರಾಜ್, ಖಜಾಂಚಿ ಎಲ್. ಯಶವಂತ್ ಕುಮಾರ್, ಜತೆ ಕಾರ್ಯದರ್ಶಿ ಸುನಂದ ಕೆ, ಕ್ರೀಡಾ ಕಾರ್ಯದರ್ಶಿ ಗಿರಿಧರ್ ಕೆ, ಮಹಿಳಾ ಘಟಕದ ಅಧ್ಯಕ್ಷೆ ನಮಿತಾ ಜಯರಾಮ್, ಯುವ ಘಟಕದ ಅಧ್ಯಕ್ಷ ಸುಮನ್‌ರಾಜ್ ಸೇರಿದಂತೆ ಹಲವು ಪದಾಧಿಕಾರಿಗಳು ಹಾಜರಿದ್ದರು. ಮೇ 24ರಂದು ಪದುವಾ ಹೈಸ್ಕೂಲ್ ಮೈದಾನದಲ್ಲಿ ಕ್ರಿಕೆಟ್ ಪಂದ್ಯಾಟ ನಡೆಯಲಿದ್ದು, ವಿಜೇತರಿಗೆ ಮೇ 31ರ ವಾರ್ಷಿಕೋತ್ಸವ ಸಂದರ್ಭ ಬಹುಮಾನ ವಿತರಣೆ ನಡೆಯಲಿದೆ

ಕಾರ್ಕಳ ಭುವನೇಂದ್ರ ಕಾಲೇಜಿನಲ್ಲಿ ಸ್ಥಾಪಕ ಪ್ರಾಚಾರ್ಯ ಕೆ.ಡಿ.ಕಿಣಿ ಸಂಸ್ಮರಣೆ



ಕಾರ್ಕಳ: ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ಸ್ಥಾಪಕ ಪ್ರಾಚಾರ್ಯರಾಗಿದ್ದ ಪ್ರೊ. ದಾಮೋದರ ಕಿಣಿ ಇವರ ಸ್ಮರಣಾರ್ಥ ಸಂಸ್ಮರಣ ಕಾರ್ಯಕ್ರಮ ಜರುಗಿತು.

ಪ್ರೊ. ಕಿಣಿ ಅವರ ವಿದ್ಯಾರ್ಥಿಯಾದ ಗೋವಾ ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರೂ, ನಿವೃತ್ತ ಪ್ರೊಫೆಸರರೂ ಆದ ಡಾ.ಐ.ಕೆ. ಪೈ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡುತ್ತಾ, ಅತ್ಯಂತ ಕಡಿಮೆ ಜನರಿಗೆ ಗೌರವದ ಭಾಗ್ಯ ಸಿಗುತ್ತದೆ. ಅಂತಹ ಭಾಗ್ಯವಂತರಲ್ಲಿ ಪ್ರೊ. ಕಿಣಿ ಬಹಳ ಪ್ರಮುಖರಾಗುತ್ತಾರೆ. ಗುರು ಶಿಷ್ಯ ಪರಂಪರೆಗೆ ಒಂದು ಬಲವಾದ ಚೌಕಟ್ಟನ್ನು ಹಾಕಿದವರು ಡಾ.ಕಿಣಿ. ಸ್ವ ಕಲಿಕೆಯ ಶ್ರದ್ಧೆಯನ್ನು ಸದಾ ವಿದ್ಯಾರ್ಥಿಗಳಿಂದ ಅಪೇಕ್ಷಿಸುತ್ತಿದ್ದವರು. ಭುವನೇಂದ್ರ ಕಾಲೇಜು ಮತ್ತು ಡಾ. ಕಿಣಿ ಇಬ್ಬರದೂ ಬಿಡಿಸಲಾಗದ ಬಂಧ. ಶಿಕ್ಷಣತಜ್ಞ ಅಲ್ಲದೆ ಸಮರ್ಥ ಆಡಳಿತಗಾರರೂ ಆಗಿದ್ದವರು. ಆ ಕಾಲದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಬೇಕಾದ ಜ್ಞಾನದ ಕೊರತೆಗಳನ್ನು ನೀಗಿಸುವಲ್ಲಿ ಮಹತ್ತರ ಪಾತ್ರ ವಹಿಸಿದವರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಸಿ. ಎ. ಶಿವಾನಂದ ಪೈ ಮಾತನಾಡಿ, ಪದವಿಯೆನ್ನುವುದು ಉದ್ಯೋಗಕ್ಕೆ ತೆರೆದುಕೊಳ್ಳುವ ದಾರಿಯಷ್ಟೇ. ವ್ಯಕ್ತಿತ್ವವೆನ್ನುವುದು ಇದನ್ನು ಮೀರಿದ್ದು. ವಿದ್ಯಾರ್ಥಿಗಳು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ತಾಕತ್ತನ್ನು ಬೆಳೆಸಿಕೊಳ್ಳಬೇಕು ಎಂದರು.

ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ. ಮಂಜುನಾಥ ಎ. ಕೋಟ್ಯಾನ್ ಸ್ವಾಗತಿಸಿ, ಕೆ. ಡಿ. ಕಿಣಿಯವರು ಮತ್ತು ತನ್ನ ವಿದ್ಯಾರ್ಥಿ ದೆಸೆಯ ದಿನಗಳನ್ನು ನೆನಪಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ರಮೇಶ್ ಎಸ್.ಸಿ. ವಂದಿಸಿದರು. ಉಪನ್ಯಾಸಕರಾದ ನಂದಕಿಶೋರ್ ಕಾರ್ಯಕ್ರಮ ನಿರೂಪಿಸಿದರು.

ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪರಿಣಾಮಕಾರಿ ಭಾಷಣ ಸ್ಪರ್ಧೆ



ಬೈಂದೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಜೆಸಿಐ ಬೈಂದೂರು ಸಿಟಿ ಘಟಕದ ವತಿಯಿಂದ ಪರಿಣಾಮಕಾರಿ ಭಾಷಣ ಸ್ಪರ್ಧೆ ಜರುಗಿತು.

ಯುವ ಜನತೆಯಲ್ಲಿ ನಾಯಕತ್ವ ಗುಣ ಹಾಗೂ ಸಂವಹನ ಕೌಶಲ್ಯವನ್ನು ಬೆಳೆಸುವ ನಿಟ್ಟಿನಲ್ಲಿ ಆಯೋಜಿಸಲಾಗಿದ್ದ ಈ ಸ್ಪರ್ಧೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿ ತಮ್ಮ ವಾಕ್ಚಾತುರ್ಯವನ್ನು ಪ್ರದರ್ಶಿಸಿದರು. ಜೆಸಿಐ ಬೈಂದೂರು ಸಿಟಿಯ ಅಧ್ಯಕ್ಷೆ ಚೈತ್ರಾ ಸತೀಶ್ ಅಧ್ಯಕ್ಷತೆ ವಹಿಸಿದ್ದರು. ಘಟಕದ ಸ್ಥಾಪಕಾಧ್ಯಕ್ಷ ಮಣಿಕಂಠ ಎಸ್. ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರಾಂಶುಪಾಲ ನಾಗರಾಜ ಶೆಟ್ಟಿ ಅವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಸ್ಪರ್ಧೆಯ ತೀರ್ಪುಗಾರರಾಗಿ ಕಾಲೇಜಿನ ಉಪನ್ಯಾಸಕ ಡಾ. ಆನಂದ್ ಹಾಗೂ ಎರಡು ಬಾರಿ ರಾಜ್ಯಮಟ್ಟದ ಭಾಷಣ ಸ್ಪರ್ಧಾ ವಿಜೇತೆ, ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತೆ ಆಶಾ ವೀಣಾ ಡಾಯಸ್ ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ಉತ್ತಮ ಭಾಷಣ ಕಲೆಗೆ ಇರಬೇಕಾದ ಲಕ್ಷಣಗಳ ಬಗ್ಗೆ ಉಪಯುಕ್ತ ಸಲಹೆಗಳನ್ನು ನೀಡಿದರು. ಉಪನ್ಯಾಸಕಿ ಶರ್ಮಿಳಾ ಕಾರ್ಯಕ್ರಮ ನಿರ್ವಹಿಸಿದರು. ಕೊನೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಸುವರ್ಣ ವರ್ಷ ಆಚರಿಸಿದ ಕಲಾರಂಗಕ್ಕೆ ಶತಮಾನೋತ್ಸವ ಆಚರಿಸುತ್ತಿರುವ ಕಲಾ ಸಂಘಟನೆಯ ಗೌರವ

ಶಂಕರನಾರಾಯಣ ಸಾಮಗರ 'ಅಂಗದ ಸಂಧಾನ' ಬಿಡುಗಡೆ



ಉಡುಪಿ: ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಹುಕ್ಲಮಕ್ಕಿ ಶ್ರೀ ಸಿದ್ಧಿವಿನಾಯಕ ದುರ್ಗಾಂಬಾ ಯಕ್ಷಗಾನ ಮಿತ್ರ ಮಂಡಳಿಯ ಶತಮಾನೋತ್ಸವ ಕಾರ್ಯಕ್ರಮ ಜರುಗಿತು.

ಶತಮಾನೋತ್ಸವ ಆಚರಣಾ ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಹೆಗಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಲ್ಪೆ ಶಂಕರನಾರಾಯಣ ಸಾಮಗರು 85 ವರ್ಷದ ಹಿಂದೆ ಬರೆದ ಡಾ. ಶ್ರೀಪಾದ ಹೆಗಡೆ ಹುಕ್ಕಮಕ್ಕಿ ಸಂಪಾದಿಸಿ ಪ್ರಕಟಿಸಿದ ಅರ್ಥಸಹಿತ 'ಅಂಗದ ಸಂಧಾನ' ಪುಸ್ತಕವನ್ನು ವೇದಿಕೆಯ ಗಣ್ಯರು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಯಕ್ಷಗಾನದ ಹಿರಿಯ ಸಾಧಕರಾದ ಡಾ. ಎಂ. ಪ್ರಭಾಕರ ಜೋಶಿ, ಪ್ರೊ. ಎಂ.ಎಲ್. ಸಾಮಗ, ಶ್ರೀ ಶ್ರೀಧರ ಡಿ.ಎಸ್., ಡಾ. ಜಿ.ಎಲ್. ಹೆಗಡೆ ಅವರನ್ನು ಸಮ್ಮಾನಿಸಲಾಯಿತು. ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಪ್ರಧಾನ ಅಭ್ಯಾಗತರಾಗಿ ಭಾಗವಹಿಸಿದ್ದರು. ನಾರಾಯಣ ಎಂ. ಹೆಗಡೆ ಉಪಸ್ಥಿತರಿದ್ದರು. ಆಯೋಜಕರು ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘಟನೆ ಯಕ್ಷಗಾನ ಕಲಾರಂಗಕ್ಕೆ ತಮ್ಮ ಶತಮಾನ ಆಚರಣೆಯ ನೆನಪಿನ ಗೌರವವನ್ನು ಪ್ರದಾನ ಮಾಡಿ ಅಭಿನಂದಿಸಿದರು.

ಸಂಸ್ಥೆಯ ಪರವಾಗಿ ಹಿರಿಯ ಉಪಾಧ್ಯಕ್ಷ ಶ್ರೀ ಎಸ್.ವಿ. ಭಟ್ ಗೌರವ ಪುರಸ್ಕಾರ ಸ್ವೀಕರಿಸಿದರು. ಶತಮಾನದ ಸಂಭ್ರಮದಲ್ಲಿರುವ ಹುಕ್ಲಮಕ್ಕಿ ಮೇಳವನ್ನು ಪ್ರಸ್ತುತ ಮುನ್ನಡೆಸುತ್ತಿರುವ ಸಿ.ಎಸ್. ಗೋಪಾಲಕೃಷ್ಣ ಡಾ. ಶ್ರೀಪಾದ ಹೆಗಡೆ ಸಹೋದರರನ್ನು ಯಕ್ಷಗಾನ ಕಲಾರಂಗದ ವತಿಯಿಂದ ಶಾಲು, ಸ್ಮರಣಿಕೆಯೊಂದಿಗೆ ಗೌರವಿಸಲಾಯಿತು. ನ್ಯಾಯವಾದಿ ಸತೀಶ ಭಟ್ ಉಳಗೆರೆ ಸನ್ಮಾನಪತ್ರ ವಾಚಿಸಿದರು. ಶ್ರೀ ದತ್ತಾತ್ರಿ ಕಾರ್ಯಕ್ರಮ ನಿರೂಪಿಸಿ ಧನ್ಯವಾದ ಸಮರ್ಪಿಸಿದರು. ಸಭಾಕಾರ್ಯಕ್ರಮದ ಅನಂತರ ಹುಕ್ಲಮಕ್ಕಿ ಮೇಳದ ಕಲಾವಿದರಿಂದ 'ಕರಂಡಕಾಸುರ ಕಾಳಗ' ಪ್ರಸ್ತುತಗೊಂಡಿತು.

'ಮಕ್ಕಳ ರಂಗ ಶಿಬಿರ' ಉದ್ಘಾಟನೆ | ಜಗನ್ ಪವಾರ್ ಬಣ್ಣನೆ

ರಂಗಭೂಮಿಯ ಪಾತ್ರ ಮಹತ್ವದ್ದು



ಮಂಗಳೂರು: ಚಾಮರ ಫೌಂಡೇಶನ್ ಮತ್ತು ಆದರ್ಶ ಫ್ರೆಂಡ್ಸ್ ಅಸೋಸಿಯೇಶನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿರುವ ಏಳು ದಿನಗಳ ಮಕ್ಕಳ 'ರಂಗ ಶಿಬಿರ 2026' ಭಾನುವಾರ ಆದರ್ಶನಗರ, ಚಿಲಿಂಬಿ ಗುಡ್ಡೆಯಲ್ಲಿ ಉದ್ಘಾಟನೆಗೊಂಡಿತು.

ಸ್ವರ್ಗೀಯ ಯತೀಶ್ ವೈ. ಶೆಟ್ಟಿ ಅವರ ಸ್ಮರಣಾರ್ಥ ಈ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಪ್ರಸಿದ್ಧ ರಂಗ ನಿರ್ದೇಶಕ ಜಗನ್ ಪವಾರ್ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಮಕ್ಕಳ ವ್ಯಕ್ತಿತ್ವ ವಿಕಸನ, ಸಂವಹನ ಕೌಶಲ್ಯ ಮತ್ತು ಸೃಜನಶೀಲತೆಯ ಬೆಳವಣಿಗೆಯಲ್ಲಿ ರಂಗಭೂಮಿಯ ಪಾತ್ರ ಮಹತ್ವದ್ದು ಎಂದರು.

ಆದರ್ಶ ಫ್ರೆಂಡ್ಸ್ ಅಸೋಸಿಯೇಶನ್ ಅಧ್ಯಕ್ಷ ಅಶೋಕ್ ಕೋಟ್ಯಾನ್, ಕದ್ರಿ ಶ್ರೀಮಂಜುನಾಥ ದೇವಸ್ಥಾನದ ಮೊಕ್ತೇಸರ ರಾಜೇಂದ್ರ ಚಿಲಿಂಬಿ, ಚಾಮರ ಫೌಂಡೇಶನ್‌ನ ವ್ಯವಸ್ಥಾಪಕ ಟ್ರಸ್ಟಿ ರಚನಾ, ರಂಗ ಕಲಾವಿದೆ ತ್ರಿಶಾ ಶೆಟ್ಟಿ, ಪ್ರಶಾಂತ್ ಕುಮಾರ್ ಇದ್ದರು. ಟ್ರಸ್ಟಿ ಮನೀಶ್ ಕೆ. ಸಾಲ್ಯಾನ್ ಶಿಬಿರದ ಉದ್ದೇಶದ ಬಗ್ಗೆ ವಿವರಿಸಿದರು.

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಮಂಗಳವಾರ 19, ಮೇ 2026

ಸುತ್ತಮುತ್ತ

ನೂತನ ಅಧ್ಯಕ್ಷರಾಗಿ ಡೊನಾಲ್ಡ್ ನೊರೊನ್ಹಾ ಅಲ್ಲಿಪಾದೆ ಆಯ್ಕೆ

ಬಂಟ್ವಾಳ: ಯುಎಫ್ ಯುನೈಟೆಡ್ ಲೊರೆಟ್ಟೊ ಫ್ರೆಂಡ್ಸ್ ಇದರ ನೂತನ ಅಧ್ಯಕ್ಷರಾಗಿ ಡೊನಾಲ್ಡ್ ನೊರೊನ್ಹಾ ಅಲ್ಲಿಪಾದೆ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ



ಸಂಸ್ಥೆಯ 2026–28ನೇ ಸಾಲಿನ ನೂತನ ಸಾಲಿಗೆ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಪ್ರಧಾನ ಕಾರ್ಯದರ್ಶಿಯಾಗಿ ಜೆವಿತಾ ರೋಡ್ರಿಗಸ್ ಸುರತ್ಕಲ್, ಜೊತೆ ಕಾರ್ಯದರ್ಶಿಯಾಗಿ ಗ್ಲೆವೀನಾ ಅರನ್ಹಾ ಅತ್ತೂರು, ಕೋಶಾಧಿಕಾರಿಯಾಗಿ ರಾಯ್ ಡಿಸೋಜ ಲೊರೆಟ್ಟೊ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಸಿಲ್ವಿಯಾ ನೊರೊನ್ಹಾ ಲೊರೆಟ್ಟೊ, ಕ್ರೀಡಾ ಕಾರ್ಯದರ್ಶಿಯಾಗಿ ವಿನೋದ್ ಪಿಂಟೋ ಲೊರೆಟ್ಟೊ, ಮಾಧ್ಯಮ ಸಂಯೋಜಕಿಯಾಗಿ ಪ್ರೀತಿ ಡಿಸೋಜ ಕೋರ್ಡೆಲ್, ವಿದೇಶಿ ಸಂಯೋಜಕರಾಗಿ ಗ್ರೆಟ್ಟಾ ಫೆರ್ನಾಂಡಿಸ್, ಅಂಜಲೋರ್ ಹಾಗೂ ಸಚಿನ್ ನೊರೊನ್ಹಾ ಲೊರೆಟ್ಟೊ ಅವರು ಆಯ್ಕೆಯಾಗಿದ್ದಾರೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಅತ್ಯುತ್ತಮ ನಾಯಕತ್ವ ಹಾಗೂ ಸಮರ್ಪಿತ ಸೇವೆ ಸಲ್ಲಿಸಿದ ನಿರ್ಗಮನ ಅಧ್ಯಕ್ಷ ರೂಪೇಶ್ ಪಿಂಟೋ ಹಾಗೂ ತಂಡಕ್ಕೆ ಯು ಎಲ್ ಎಫ್ ಕೃತಜ್ಞತೆ ಸಲ್ಲಿಸಲಾಯಿತು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ: ಪಾಲಿಬೆಟ್ಟ, ಎಫ್13 ಹೈಸೊಡ್ಲೂರು, ಎಫ್11–ತಿತಿಮತಿ ಫೀಡರ್‌ನಲ್ಲಿ ಮೇ 19 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ತುರ್ತು ನಿರ್ವಹಣಾ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ನೋಕ್ಯ, ತಿತಿಮತಿ, ಸೀಗೆತೋಡು,ಚೆನ್ನಂಗೊಲ್ಲಿ ಕಲ್ಲಳ್ಳ, ಹೆಬ್ಬಾಲೆ, ದೇವರಪುರ, ಮರೂರು, ಅಕ್ಕಿಮಾಳ, ಕನ್ನಂಬಾಡಿ, ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಚಂದ್ರ ಅವರು ಮಾಹಿತಿ ನೀಡಿದ್ದಾರೆ.

ವೀರಾಜಪೇಟೆ: ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ತುರ್ತು ನಿರ್ವಹಣಾ ಕಾಮಗಾರಿ ನಡೆಸಬೇಕಿರುವುದರಿಂದ ವೀರಾಜಪೇಟೆ, ಸಿದ್ದಾಪುರ ಮತ್ತು ಅಮ್ಮತ್ತಿ ಶಾಖಾ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಮಾರ್ಗಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಆದ್ದರಿಂದ ವೀರಾಜಪೇಟೆ ಪಟ್ಟಣ, ಕಾಕೋಟುಪರಂಬು, ಕದನೂರು, ಕೆದಮುಳ್ಳೂರು, ಬಿಟ್ಟಂಗಾಲ, ಬಿ ಶೆಟ್ಟಿಗೇರಿ, ಆರ್ಜಿ, ಬೇಟೋಳಿ, ಸಿದ್ದಾಪುರ ಪಟ್ಟಣ, ಮಾಲ್ದಾರೆ, ಕರಡಿಗೋಡು, ಗುಯ್ಯ, ಅಮ್ಮತ್ತಿ, ಚೆಂಬೆಬೆಳ್ಳೂರು, ಹಾಲುಗುಂದ, ಕಣ್ಣಂಗಾಲ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಎಲ್ಲಾ ಧರ್ಮಗಳ ಭಾವನೆಗಳಿಗೆ ಗೌರವ: ಎ.ಎಸ್ ಪೊನ್ನಣ್ಣ

ನಾಪೋಕ್ಲು: ರಾಜ್ಯ ಸರ್ಕಾರ ಹಿಜಾಬ್ ಅವಕಾಶ ನೀಡಿದ ವಿಚಾರದ ಬಗ್ಗೆ ಪರ ವಿರೋಧಿಗಳು ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಕೇಸರಿ ಶಾಲು ಯಾವುದೇ ಧಾರ್ಮಿಕ ಮೌಲ್ಯಗಳ ಸಂಕೇತವಾಗಿ ಯಾವತ್ತು ಬಳಸಲಿಲ್ಲ ಎಂದು ಶಾಸಕರು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು



ಆಗಿರುವ ಎ.ಎಸ್ ಪೊನ್ನಣ್ಣ ಹೇಳಿದ್ದಾರೆ.

ನಾಪೋಕ್ಲುವಿನಲ್ಲಿ ಶನಿವಾರ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾಧ್ಯಮ ದೊಂದಿಗೆಮಾತನಾಡಿದ ಅವರು ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ಮಹಿಳೆಯರಿಗೆ ಸಾಂವಿಧಾನಿಕ ಹಕ್ಕನ್ನು ನೀಡಿ ಆದೇಶಿಸಿದೆ. ಕೇಂದ್ರೀಯ ಶಾಲೆಗಳಲ್ಲಿ ಈಗಾಗಲೇ ಇಂತಹ ಕ್ರಮ ಜಾರಿಯಲ್ಲಿದೆ. ರಾಜ್ಯ ಸರ್ಕಾರವು ಪರಂಪರಾನುಗತವಾಗಿ ಹಿಂದಿನಿಂದಲೇ ಆಚರಿಸಿಕೊಂಡು ಬಂದಂತಹ ಆಚರಣೆಯನ್ನು ಮುಂದುವರಿಸಲು ಅವಕಾಶ ಕಲ್ಪಿಸಿದೆ ಎಂದರು. ಆದರೆ ಶಿಕ್ಷಣ ಸಂಸ್ಥೆಗಳಲ್ಲಿ ಹೊಸ ಪರಂಪರೆಗಳನ್ನ ಪ್ರಾರಂಭಿಸಲು ಅವಕಾಶ ಇರಬಾರದು ಎಂಬುದಿಲ್ಲ, ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆಯ ಭದ್ರತೆ ಕಾಪಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು ಎಂದು ಸರ್ಕಾರ ತೀರ್ಮಾನ ಮಾಡಿದೆ ಎಂದು ಸಮರ್ಥನೆ ಮಾಡಿಕೊಂಡರು.

ಶಲ್ಯ ಧಾರ್ಮಿಕ ಮೌಲ್ಯಗಳ ಸಂಕೇತವಲ್ಲ

ಕೇಸರಿ ಶಾಲು ಯಾವುದೇ ಧಾರ್ಮಿಕ ಮೌಲ್ಯಗಳ ಸಂಕೇತವಾಗಿ ಹಿಂದೂಗಳು ಯಾವತ್ತು ಬಳಸಿಲ್ಲ, ಕೆಲವು ಸಂದರ್ಭಗಳಲ್ಲಿ ಮಾತ್ರ ಕೇಸರಿ ಶಾಲುಗಳನ್ನು ಬಳಸುತ್ತಾರೆ. ಕಾರ್ಯಕ್ರಮಗಳಲ್ಲಿ ದೇವಾಲಯ ಮತ್ತು ಇತರ ಧಾರ್ಮಿಕ ಆಚರಣೆಗಳಲ್ಲಿ ಬಳಸುತ್ತಾರೆ. ಆದ್ದರಿಂದ ಕೇಸರಿ ಶಾಲು ಮತ್ತು ಹಿಜಾಬ್ ಹೋಲಿಕೆ ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಸರ್ಕಾರ ಎಲ್ಲಾ ಧರ್ಮಗಳ ಭಾವನೆಗಳನ್ನು ಗೌರವಿಸಿ ಕಾನೂನುಬದ್ಧವಾಗಿ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಅವರು ಸ್ಪಷ್ಟಪಡಿಸಿದರು..

ಮಂಗಳೂರು: ನಾಳೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಅಶೋಕನಗರ ಶಾಲೆ, ಶೇಡಿಗುರಿ, ದಂಬೆಲ್, ರೆಹಮಾನ್ ಸ್ವಾಮಿಲ್ ರೋಡ್, ಇಂಡಿಯನ್ ವುಡ್, ಫಾಲ್ಗುಣಿ ನಗರ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 20ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಪುತ್ತೂರು ನಗರದ ಗಾಂಧಿಕಟ್ಟೆ ಬಳಿಯಲ್ಲಿ ಕಾಂಗ್ರೆಸ್‌ನಿಂದ ಪ್ರತಿಭಟನೆ | ಶಾಸಕ ಅಶೋಕ್ ರೈ ಆಗ್ರಹ

ದೇಶದ ಆರ್ಥಿಕ ಸ್ಥಿತಿ ಬಗ್ಗೆ ಕೂಡಲೇ 'ಶ್ವೇತಪತ್ರ' ಹೊರಡಿಸಲಿ

ಪುತ್ತೂರು: ದೇಶದ ಸಂಪತ್ತು ಮೂರು ಮಂದಿ ಉದ್ಯಮಿಗಳಲ್ಲಿ ಕೇಂದ್ರೀಕೃತವಾಗಿದ್ದು, ಭವಿಷ್ಯದಲ್ಲಿ ಇದು ದೊಡ್ಡ ಅಪಾಯಕಾರಿಯಾಗಿ ಪರಿಣಮಿಸಲಿದೆ. ಜನಸಾಮಾನ್ಯರ ಬದುಕು ದುಸ್ತರವಾಗುತ್ತಿದೆ. ಹಾಗಾಗಿ ದೇಶದ ಆರ್ಥಿಕ ಪರಿಸ್ಥಿತಿ ಬಗ್ಗೆ ಪ್ರಧಾನಿ ಮೋದಿ ಶೀಘ್ರವೇ 'ಶ್ವೇತಪತ್ರ' ಹೊರಡಿಸಬೇಕು. ಇಲ್ಲವಾದರೆ ದೇಶದಾದ್ಯಂತ ಪ್ರತಿಭಟನೆಯ ಕಾವು ಏರಲಿದೆ ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಎಚ್ಚರಿಸಿದರು.

ಅವರು ಸೋಮವಾರ ಪುತ್ತೂರು, ವಿಟ್ಲ ಹಾಗೂ ಉಪ್ಪಿನಂಗಡಿ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ನಗರದ ಕೇಂದ್ರ ಸ್ಥಾನದ ಗಾಂಧಿಕಟ್ಟೆ ಬಳಿಯಲ್ಲಿ ಆಯೋಜಿಸಲಾಗಿದ್ದ ಕೇಂದ್ರ ಸರಕಾರದ ವೈಫಲ್ಯದ ವಿರುದ್ಧ ಪ್ರತಿಭಟನೆಯಲ್ಲಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಪ್ರತಿಷ್ಠೆಗಾಗಿ ಈ ಪ್ರತಿಭಟನೆ ನಡೆಸುತ್ತಿಲ್ಲ, ಭಾರತದ ಜನಸಾಮಾನ್ಯರ ಮನಸ್ಸಿನ ವೇದನೆಯ ಪ್ರತೀಕವಾಗಿ ನಡೆಸುತ್ತಿದ್ದೇವೆ. ಮೋದಿ ಅವರನ್ನು ಒಪ್ಪುವ ಜನರಿಗೂ ಕೇಂದ್ರ ಸರಕಾರದ ವೈಫಲ್ಯದ ಬಗ್ಗೆ ಮನವರಿಕೆ ಮಾಡುತ್ತಿದ್ದೇವೆ. ದೇಶದ



ಜ್ವಲಂತ ಸಮಸ್ಯೆ ಕೇವಲ ಕಾಂಗ್ರೆಸಿಗರ ನೋವಲ್ಲ, ಬಿಜೆಪಿಗರು ಸೇರಿದಂತೆ ಜನಸಾಮಾನ್ಯರ ನೋವು ಇದಾಗಿದೆ. ಇದರ ನಿವಾರಣೆಗಾಗಿ ಹೋರಾಟ ಅನಿವಾರ್ಯವಾಗಿದೆ ಎಂದರು.

ಕೊಲ್ಲಿ ದೇಶದಲ್ಲಿ ಯುದ್ಧ ನಡೆದಾಗ ನಮ್ಮ ಪರಿಸ್ಥಿತಿ ಈ ರೀತಿಗೆ ತಲುಪಿದರೆ ಮುಂದೆ ಎಲ್ಲಿಯಾದರೂ ನಮ್ಮ ವಿರೋಧಿ ದೇಶಗಳ ನಮ್ಮ ದೇಶದ ಮೇಲೆ ಯುದ್ಧ ಸಾರಿದರೆ ದೇಶದ ಪರಿಸ್ಥಿತಿ ಏನಾಗಬಹುದು ಎಂದು ಪ್ರಶ್ನಿಸಿದ ಅವರು ದೇಶದ ಖಜಾನೆಯ ಸ್ಥಿತಿಯನ್ನು ಭಾರತದ ಪ್ರಜೆಗಳಿಗೆ ತಿಳಿಸಬೇಕಾದ ಜವಾಬ್ದಾರಿ ಪ್ರಧಾನಿಯವರ ಮೇಲಿದೆ ಎಂದರು.

ವಿಟ್ಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪದ್ಮನಾಭ ಪೂಜಾರಿ ಮಾತನಾಡಿ, ದೇಶದೊಳಗಡೆ ಜ್ವಲಂತ ಸಮಸ್ಯೆ ಕಾಡುತ್ತಿದ್ದರೂ ಪ್ರಧಾನಿ ಮೋದಿ ವಿದೇಶದಲ್ಲಿ ಸುತ್ತಾಡುತ್ತಿದ್ದಾರೆ. ಜನರಿಗೆ ಬಿಟ್ಟಿ ಸಲಹೆ ನೀಡುವ ಪ್ರಧಾನಿ ಈ ದೇಶಕ್ಕೆ ಬೇಕಾಗಿಲ್ಲ, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು ಈಗಲೂ ನಾವು ಪ್ರತಿಭಟಿಸದಿದ್ದಲ್ಲಿ ಬದುಕು ಹಕ್ಕನ್ನು ಕಳೆದುಕೊಂಡು ಬೇಡುವ ಪರಿಸ್ಥಿತಿ ಬರಬಹುದು ಎಂದರು. ಕೆಪಿಸಿಸಿ ಕಾರ್ಯದರ್ಶಿ ಎಂ.ಎಸ್. ಮಹಮ್ಮದ್ ಮಾತನಾಡಿ, ಸದಾ ಸುಳ್ಳಿನಿಂದಲೇ ಬದುಕುತ್ತಿರುವ ಮೋದಿ ದೇಶ ದೊಡ್ಡ ಹಾಸ್ಯನಟ. ಇಂತಹ ಪ್ರಧಾನಿ ಇರುವುದು ನಮ್ಮ ದುರಾದೃಷ್ಟ ಎಂದರು.

ಕೆಪಿಸಿಸಿ ಸಂಯೋಜಕ ಕಾವು ಹೇಮನಾಥ ಶೆಟ್ಟಿ ಜಿಲ್ಲಾ ಗ್ರಾಮಾಂತರ ಪ್ರಚಾರ ಸಮಿತಿ ಅಧ್ಯಕ್ಷ ಎಚ್. ಮಹಮ್ಮದ್ ಆಲಿ, ಉಪ್ಪಿನಂಗಡಿ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಡಾ. ರಾಜಾರಾಮ್ ಕೆ.ಬಿ., ಪುತ್ತೂರು ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಂ.ಬಿ. ವಿಶ್ವನಾಥ ರೈ ಮಾತನಾಡಿದರು. ಉಪ್ಪಿನಂಗಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಯು.ಟಿ. ತೌಸೀಫ್, ಜಿ.ಪಂ. ಮಾಜಿ ಸದಸ್ಯೆ ಅನಿತಾ ಹೇಮನಾಥ ಶೆಟ್ಟಿ, ಪಕ್ಷದ ಮುಖಂಡರಾದ ಫಾರೂಕ್ ಪೆರ್ನೆ, ಮುರಳೀಧರ್ ರೈ ಮಠಂತಬೆಟ್ಟು, ಕುಂಬ್ರ ದುರ್ಗಾಪ್ರಸಾದ್ ರೈ, ಪ್ರವೀಣ್ ಚಂದ್ರ ಆಳ್ವ, ಪ್ರಸಾದ್ ಕೌಶಲ್ ಶೆಟ್ಟಿ, ಅಬ್ದುಲ್ ರಹಿಮಾನ್ ಆಝಾದ್, ರಾಮಣ್ಣ ಪಿಲಿಂಜ, ಅಮಳ ರಾಮಚಂದ್ರ, ವಿಕ್ರಂ ಶೆಟ್ಟಿ ಅಂತರ ಮತ್ತಿತರರು ವೇದಿಕೆಯಲ್ಲಿದ್ದರು. ಪುತ್ತೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ ನಿರ್ವಹಿಸಿದರು.

> **ನೀಟ್ ಪರೀಕ್ಷೆಯಲ್ಲಿ ಭ್ರಷ್ಟಾಚಾರದ ಶಂಕೆ**
>
> ನೀಟ್ ಹಗರಣದಿಂದ ಸಾಕಷ್ಟು ಭ್ರಷ್ಟಾಚಾರಗಳ ಶಂಕೆ ಎದ್ದು ಕಾಣುತ್ತಿದೆ. ಇದರಿಂದಾಗಿ ಮಕ್ಕಳ ಭವಿಷ್ಯಕ್ಕೆ ಮಾರಕ ಹೊಡೆತ ಬಿದ್ದಿದೆ. ಬಿಜೆಪಿ ವಿರೋಧಿಗಳಿಗೆ ಇಡಿ, ಸಿಬಿಐ ಮೂಲಕ ದಾಳಿ ನಡೆಸುತ್ತಿರುವ ಕೇಂದ್ರ ಸರಕಾರ ಈ ಹಗರಣದ ಬಗ್ಗೆ ಸಿಬಿಐ ಇಡಿಗೆ ತನಿಖೆ ನಡೆಸಲು ಆದೇಶ ನೀಡಲಿ. ಈ ಮೂಲಕ ಸತ್ಯಾಸತ್ಯತೆ ಜನರಿಗೆ ಗೊತ್ತಾಗಲಿ.
>
> ● ಅಶೋಕ್ ಕುಮಾರ್ ರೈ, ಶಾಸಕ

ಅರಮನೆಗಯ ಸೇತುವೆ ಉದ್ಘಾಟನೆಯಲ್ಲಿ ಶಿಷ್ಟಾಚಾರ ಉಲ್ಲಂಘನೆ: ಕಾಂಗ್ರೆಸ್ ಆರೋಪ

ಸುಳ್ಯ: ಅರಂತೋಡು ಮರ್ಕಂಜ ಗ್ರಾಮಕ್ಕೆ ಸಂಪರ್ಕಿತ ಅರಮನೆಗಯ ಸೇತುವೆ ಉದ್ಘಾಟನೆಯಲ್ಲಿ ಶಾಸಕರು ಶಿಷ್ಟಾಚಾರ ಪಾಲಿಸಬೇಕಿತ್ತು. ಆದರೆ, ಅವರು ಹಾಗೆ ಮಾಡದೇ ಶಿಷ್ಟಾಚಾರ ಉಲ್ಲಂಘಿಸಿರುವುದು ಸರಿಯಲ್ಲ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಹೇಳಿದ್ದಾರೆ.

ಅವರು ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅರಮನೆಗಯ ಸೇತುವೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಕ್ರಮ ಉದ್ಘಾಟನೆಗೆ ಮೇ 8ರಂದು ಜಿಲ್ಲೆಯ ಉಸ್ತುವಾರಿ ಸಚಿವರು ಬರುವುದೆಂದು ನಿಗದಿಯಾಗಿತ್ತು. ಆದರೆ, ಶಾಸಕಿ ಭಾಗೀರಥಿಯವರು ಆ ದಿನ ಬರುವುದು ಬೇಡ. ನಾನು ಇರುವುದಿಲ್ಲ, ಬೇರೆ ಯಾವ ದಿನ ಬಂದರೂ ನಾನು ಇರುವುದಾಗಿ ಹೇಳಿದ್ದರಿಂದ ಶಾಸಕರ ಮಾತಿಗೆ ಸಚಿವರು ಗೌರವ ಕೊಟ್ಟು ಅವರು ಆ ದಿನ ಬರಲಿಲ್ಲ, ಆದರೆ, ಶಾಸಕರು ಮಾತ್ರ ಸಚಿವರಿಗೆ ತಿಳಿಸದೇ ಸೇತುವೆ ಉದ್ಘಾಟಿಸಿದ್ದಾರೆ. ಇದು ಶಿಷ್ಟಾಚಾರ ಉಲ್ಲಂಘನೆಯಾದಂತಾಗಿದೆ ಎಂದರು.

ನಾವು ಸಚಿವರಿಗೆ ಈ ವಿಷಯ ತಿಳಿಸಿ ಮತ್ತೆ ಅದನ್ನು ಶಿಷ್ಟಾಚಾರ ಪ್ರಕಾರ ಉದ್ಘಾಟನೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಅರಮನೆಗಯ ಸೇತುವೆಗೆ ಉಸ್ತುವಾರಿ ಸಚಿವರು ಪತ್ರ ಕೊಟ್ಟಿದ್ದರಿಂದ ನಮ್ಮ ಸರಕಾರ ಅನುದಾನ ಕೊಟ್ಟಿರುವುದು. ನಮ್ಮ ಸರಕಾರ ಅನುದಾನ ನೀಡಿರುವುದರಿಂದಲೇ ಎಲ್ಲಾ ಅಭಿವೃದ್ಧಿ ಕೆಲಸ ಆಗುತ್ತಿದೆ. ಆದರೆ, ಫ್ಲೆಕ್ಸ್‌ನಲ್ಲಿ ಮಾತ್ರ ಮುಖ್ಯಮಂತ್ರಿಗಳ ಫೋಟೊ ಅವರು ಹಾಕುತ್ತಿಲ್ಲ, ಮುಂದಿನ ದಿನ ನಾವು ಅನುದಾನ ಬಂದಿರುವ ಬಗ್ಗೆ ಫಲಕ ಹಾಕುತ್ತೇವೆ. ರೂ.25 ಕೋಟಿ ಮುಖ್ಯಮಂತ್ರಿಗಳ ವಿಶೇಷ ಅನುದಾನ ಸುಳ್ಯಕ್ಕೆ ಬಂದಿದೆ. ಅದರ ಬಗ್ಗೆಯೂ ಶಾಸಕರು ಮಾಹಿತಿ ನೀಡುತಿಲ್ಲ ಎಂದು ಹೇಳಿದರು.

ಅಲ್ಲದೆ, ಸದ್ಯದಲ್ಲೇ ಉಸ್ತುವಾರಿ ಸಚಿವರನ್ನು ಸುಳ್ಯಕ್ಕೆ ಬರುವಂತೆ ವಿನಂತಿಸಿ ಸಭೆ ನಡೆಸುತ್ತೇವೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಭವಾನಿಶಂಕರ ಕಲ್ಮಡ್ಕ, ಯುವ ಕಾಂಗ್ರೆಸ್ ಅಧ್ಯಕ್ಷ ಚೇತನ್ ಕಜೆಗದ್ದೆ, ಪ್ರಚಾರ ಸಮಿತಿ ಅಧ್ಯಕ್ಷ ದಿನೇಶ್ ಅಂಬೆಕಲ್ಲು ಉಪಸ್ಥಿತರಿದ್ದರು.

ಪ್ರಶ್ನೆಪತ್ರಿಕೆ ಸೋರಿಕೆ, ಬೆಲೆ ಏರಿಕೆ ವಿರುದ್ಧ ಕೇಂದ್ರದ ವಿರುದ್ಧ ಪ್ರತಿಭಟನೆ



ಬೆಳ್ತಂಗಡಿ: ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಕೇಂದ್ರ ಸರಕಾರದ ಬೆಲೆ ಏರಿಕೆ ವಿರುದ್ಧ ಬೆಳ್ತಂಗಡಿ ಬ್ಲಾಕ್ ಕಾಂಗ್ರೆಸ್ ಹಾಗೂ ಯುವ ಕಾಂಗ್ರೆಸ್ ವತಿಯಿಂದ ಬೆಳ್ತಂಗಡಿ ಬಸ್ ನಿಲ್ದಾಣದ ಬಳಿಯ ಮೂರು ಮಾರ್ಗ ಜಂಕ್ಷನ್ ಬಳಿ ಮೇ 18ರಂದು ಬೃಹತ್ ಪ್ರತಿಭಟನೆ ನಡೆಯಿತು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಕ್ಷಿತ್ ಶಿವರಾಂ ಮಾತನಾಡಿ, ಕೇಂದ್ರ ಸರಕಾರ ಬೆಲೆ ಏರಿಕೆ ಮಾಡುವ ಮೂಲಕ ಸಾಮಾನ್ಯ ಜನರ ಬದುಕಿನ ಜೊತೆ ಚೆಲ್ಲಾಟ ಆಡುತ್ತಿದೆ. ಪ್ರಶ್ನೆಪತ್ರಿಕೆ ಸೋರಿಕೆಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಕನಸನ್ನು ಹುಸಿ ಮಾಡಿದೆ. ಕೇಂದ್ರ ಸರ್ಕಾರ ಒಂದು ಪಂಚರ್ ಸರ್ಕಾರ ಎಂದು ಟೀಕಿಸಿದರು. ಈ ಸಂದರ್ಭದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ದಿನನಿತ್ಯ ಬಳಕೆಯ ಗ್ಯಾಸ್ ಬೆಲೆ ಏರಿಸಿದ ಮತ್ತು ನೀಟ್ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಗೆ ಕಾರಣವಾದ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಲಾಯಿತು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ಫೋಟೋವನ್ನು ಬೆಂಕಿ ಹಚ್ಚಿ ಸುಡಲಾಯಿತು. ಬಳಿಕ ರಸ್ತೆ ತಡೆದು ಪ್ರತಿಭಟನೆ ಮಾಡಲಾಯಿತು. ಬೆಳ್ತಂಗಡಿ ನಗರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸತೀಶ್ ಕಾಶಿಪಟ್ಟ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ನಾಗೇಶ್ ಕುಮಾರ್ ಗೌಡ, ಜಿಲ್ಲಾ ಕೆಡಿಪಿ ಸದಸ್ಯ ಸಂತೋಷ್ ಕುಮಾರ್ ಲಾಯಿಲ ಕೇಶವ ಪಿ. ಬೆಳಾಲು, ರಾಜ್ಯ ಅಲ್ಪಸಂಖ್ಯಾತ ಘಟಕದ ಪ್ರವೀಣ್ ಹಳ್ಳಿಮನೆ, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ಯೂತ್ ಕಾಂಗ್ರೆಸ್ ಅಧ್ಯಕ್ಷ ಹಕೀಮ್ ಕೊಕ್ಕಡ, ಬೆಳ್ತಂಗಡಿ ಬ್ಲಾಕ್ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಆಝರ್ ನಾವೂರು, ಅಶ್ರಫ್, ಗ್ಯಾರಂಟಿ ಸಮಿತಿಯ ಅಧ್ಯಕ್ಷ ಪದ್ಮನಾಭ ಸಾಲಿಯಾನ್, ಮಹಿಳಾ ಘಟಕದ ಅಧ್ಯಕ್ಷೆ ನಮಿತಾ, ಜೀನತ್, ಶೋಭಾ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ನಿಟಿಲಾಕ್ಷ ಸದಾಶಿವ ಶ್ರೀಕ್ಷೇತ್ರದಲ್ಲಿ ಲೋಕಕಲ್ಯಾಣಾರ್ಥ ಸೀಯಾಳಾಭಿಷೇಕ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಲ್ಲಡ್ಕ ವಲಯದ ವತಿಯಿಂದ ಜನಜಾಗೃತಿ ವೇದಿಕೆ ಕಲ್ಲಡ್ಕ, ಶೌರ್ಯ ವಿಪತ್ತು ನಿರ್ವಹಣಾ ಘಟಕ ಕಲ್ಲಡ್ಕ ಇದರ ಸಹಕಾರದೊಂದಿಗೆ ಲೋಕ ಕಲ್ಯಾಣಾರ್ಥಕವಾಗಿ ಶ್ರೀ ನಿಟಿಲಾಕ್ಷ ಸದಾಶಿವ ದೇವಸ್ಥಾನ ನೆಟ್ಲದಲ್ಲಿ ಶ್ರೀ ದೇವರಿಗೆ ಸೀಯಾಳಾಭಿಷೇಕ ಸೋಮವಾರ ನಡೆಯಿತು.

ಪುರೋಹಿತ ಪ್ರಕಾಶ್ ಭಟ್ ಅಭಿಷೇಕ ಕಾರ್ಯಕ್ರಮ ನೆರವೇರಿಸಿದರು. ಗ್ರಾಮಾಭಿವೃದ್ಧಿ ಯೋಜನೆಯ ಕಲ್ಲಡ್ಕ ವಲಯ ಮೇಲ್ವಿಚಾರಕ ಸುಖರಾಜ್, ಜನಜಾಗೃತಿ ವೇದಿಕೆ ಕಲ್ಕಡ್ಕ ವಲಯ ಅಧ್ಯಕ್ಷ ಭಟ್ಯಪ್ಪ ಶೆಟ್ಟಿ, ಯೋಜನೆಯ ಕಲ್ಲಡ್ಕ ವಲಯ ಅಧ್ಯಕ್ಷೆ ತುಳಸಿ, ಗೋಳ್ತಮಜಲ್ ಒಕ್ಕೂಟ ಅಧ್ಯಕ್ಷ ಸೀತಾರಾಮ್ ಶೆಟ್ಟಿ,ಬೋಳಂತೂರು ಒಕ್ಕೂಟ ಅಧ್ಯಕ್ಷೆ ಸೀತಾ ರಾಮಚಂದ್ರ ಆಚಾರ್ಯ, ವೀರಕಂಭ ಒಕ್ಕೂಟ ಅಧ್ಯಕ್ಷೆ ಶಾಂಭವಿ ಆಚಾರ್ಯ, ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸಂಯೋಜಕಿ ವಿದ್ಯಾ, ನಿಯೋಜಿತ ಅಧ್ಯಕ್ಷ ಗಣೇಶ್, ಶೌರ್ಯ ತಂಡದ ಸದಸ್ಯರು, ಒಕ್ಕೂಟಗಳ ಸೇವ ಪ್ರತಿನಿಧಿಗಳಾದ ಲೀಲಾವತಿ, ರೇವತಿ, ಸುಕನ್ಯ, ಅಶ್ವಿನಿ, ಗ್ರಾಮಾಭಿವೃದ್ಧಿ ಯೋಜನೆ ಪದಾಧಿಕಾರಿಗಳು, ಪ್ರಗತಿ ಬಂಧು ಸ್ವಸಹಾಯ ಸಂಘದ ಸದಸ್ಯರು, ದೇವಸ್ಥಾನದ ಭಕ್ತಾದಿಗಳು ಭಾಗವಹಿಸಿದ್ದರು.

ವಾರ್ಷಿಕ ಕ್ರೀಡಾಕೂಟ: ಬಂಟ್ವಾಳ ಕಂದಾಯ ಇಲಾಖೆಗೆ ಸಮಗ್ರ ಪ್ರಶಸ್ತಿ



ಬಂಟ್ವಾಳ: ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖಾ ನೌಕರರ ಸಂಘ, ಬೆಂಗಳೂರು ಜಿಲ್ಲಾ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಲಾದ ಕಂದಾಯ ಇಲಾಖೆಯ ವಾರ್ಷಿಕ ಕ್ರೀಡಾಕೂಟ 2026ರಲ್ಲಿ ಬಂಟ್ವಾಳ ತಂಡ ಸಮಗ್ರ ಚಾಂಪಿಯನ್ ಆಗಿ ಮೂಡಿಬಂದಿದೆ.

ಸಿಬ್ಬಂದಿಗಳಲ್ಲಿ ಕಂಡಿತು ಉತ್ಸಾಹ

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ತಾಲೂಕುಗಳ ಕಂದಾಯ ಇಲಾಖೆ ಸಿಬ್ಬಂದಿ ಭಾಗವಹಿಸಿ, ಕ್ರೀಡಾ ಮನೋಭಾವವನ್ನು ಪ್ರದರ್ಶಿಸಿದರು. ಅಲ್ಲದೇ ಸದಾ ಕರ್ತವ್ಯದ ಒತ್ತಡದಲ್ಲಿರುವ ಇಲಾಖೆಯ ಸಿಬ್ಬಂದಿಗಳು ಕ್ರೀಡಾಕೂಟದಲ್ಲಿ ಉತ್ಸಾಹದಿಂದ ಭಾಗವಹಿಸಿದರು.

ಎಲ್ಲಾ ಕಡೆಯೂ ನಡೆಯಲಿ

ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಕಂದಾಯ ಇಲಾಖೆ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಜನಾರ್ದನ್ ಜೆ.ಮತ್ತು ಅವರ ತಂಡಕ್ಕೆ, ಗ್ರಾಮ ಆಡಳಿತ ಅಧಿಕಾರಿಗಳ ಜಿಲ್ಲಾ ಸಂಘದ ಹಂಗಾಮಿ ಜಿಲ್ಲಾಧ್ಯಕ್ಷ ಪ್ರದೀಪ್ ಕುಮಾರ್ ಸಿ.ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿ, ಇಂತಹ ಕ್ರೀಡಾಕೂಟ ಎಲ್ಲಾ ಕಡೆಯೂ ಆಯೋಜನೆಯಾಗಲಿ ಎಂದು ಶುಭ ಹಾರೈಸಿದರು.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಸಹಿತ ಅಪರ ಜಿಲ್ಲಾಧಿಕಾರಿ, ಮಂಗಳೂರು ಮಹಾನಗರ ಪಾಲಿಕೆಯ ಆಯುಕ್ತ, ಮಂಗಳೂರು ಉಪವಿಭಾಗದ ಸಹಾಯಕ ಆಯುಕ್ತ, ಜಿಲ್ಲೆಯ ವಿವಿಧ ತಾಲೂಕುಗಳ ತಹಸೀಲ್ದಾರರು, ಎನ್ ಐಟಿಕೆ ಸಂಸ್ಥೆಯ ಡೀನ್, ರಾಜ್ಯಾಧ್ಯಕ್ಷರು–ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಕೇಂದ್ರ ಸಂಘ , ತಾಲೂಕು ಮಟ್ಟದ ಕಂದಾಯ ನೌಕರರ ಸಂಘ ಹಾಗೂ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಪದಾಧಿಕಾರಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಅಳದಂಗಡಿ ಹಾಲು ಉ. ಸಂಘದ ಸುವರ್ಣ ಸಂಭ್ರಮ ಸಮಾರೋಪ



ಬೆಳ್ತಂಗಡಿ: 1976 ಮೇ 1ರಂದು 98 ಸದಸ್ಯರೊಂದಿಗೆ ಆರಂಭಗೊಂಡ ಅಳದಂಗಡಿ ಹಾಲು ಉತ್ಪಾದಕರ ಸಹಕಾರಿ ಸಂಘ ಸಹಕಾರಿ ಮಾದರಿಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಗ್ರಾಹಕರಿಗಾಗಿ, ಶುದ್ಧ ಹಾಗೂ ಗುಣಮಟ್ಟದ ಹಾಲನ್ನು ಖರೀದಿಸಿ ನೂರಾರು ರೈತರ ಬಾಳಿಗೆ ಬೆಳಕಾಗಿದ್ದು, ಸಂಘವು ಇಂದು ಸುವರ್ಣ ಮಹೋತ್ಸವ ಸಂಭ್ರಮದಲ್ಲಿದೆ ಎಂದು ಸಂಘದ ಅಧ್ಯಕ್ಷ ಪ್ರಶಾಂತ್ ವೇಗಸ್ ತಿಳಿಸಿದ್ದಾರೆ.

ಮೇ 21ರಂದು ಕಾರ್ಯಕ್ರಮ

ಅವರು ಸೋಮವಾರ ಬೆಳ್ತಂಗಡಿ ಪ್ರೆಸ್ ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಸಂಘದ ಸುವರ್ಣ ಮಹೋತ್ಸವ ಸಮಾರೋಪ ಸಮಾರಂಭ ಮೇ 21ರಂದು ನಡೆಯಲಿದ್ದು, ಒಕ್ಕೂಟದ ಅಧ್ಯಕ್ಷ ರವಿರಾಜ ಹೆಗ್ಡೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಅಳದಂಗಡಿ ಚರ್ಚ್ ಧರ್ಮಗುರು ರೇ|ಫಾ| ಎಲಿಯಾಸ್ ಡಿಸೋಜ ಆಶೀರ್ವಚನ ನೀಡಲಿದ್ದು ಅಳದಂಗಡಿ ಅರಮನೆಯ ಡಾ.ಪದ್ಮಪ್ರಸಾದ ಅಜಿಲ ಉತ್ತಮ ಹೈನುಗಾರರಿಗೆ ಸನ್ಮಾನ, ಶಾಸಕ ಹರೀಶ್ ಪೂಂಜ ಮಾಜಿ ಅಧ್ಯಕ್ಷರುಗಳಿಗೆ ಸನ್ಮಾನ ನೆರವೇರಿಸಲಿದ್ದಾರೆ. ಅತಿಥಿಗಳಾಗಿ ಮಾಜಿ ಸಚಿವ ರಮಾನಾಥ ರೈ, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ವಿವೇಕ ಡಿ, ಕೆಪಿಸಿಸಿ ಪ್ರ.ಕಾರ್ಯದರ್ಶಿ ರಕ್ಷಿತ್ ಶಿವರಾಂ, ಒಕ್ಕೂಟದ ನಿರ್ದೇಶಕ ಪ್ರಭಾಕರ್ ಎಚ್, ದ.ಕ ಜಿಲ್ಲಾ ಯೂನಿಯನ್ ನಿರ್ದೇಶಕ ಸಹಕಾರ ರತ್ನ ಸತೀಶ್ ಕೆ. ಕಾಶಿಪಟ್ಟ ಉದ್ಯಮಿ ಸತೀಶ್ ಪೂಜಾರಿ ನಡಾಯಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ಅಶೋಕ್ ಸುವರ್ಣ, ನಿರ್ದೇಶಕ ಲ್ಯಾನ್ಸಿ ರೋಡ್ರಿಗಸ್, ಸದಸ್ಯ ದೇವಿಪ್ರಸಾದ್ ಶೆಟ್ಟಿ ಇದ್ದರು.

ಡಿಸಿಎಂ ಡಿಕೆಶಿ ಜನ್ಮ ದಿನಾಚರಣೆ : ಮಡಿಕೇರಿಯಲ್ಲಿ ರಕ್ತದಾನ ಶಿಬಿರ



ಮಡಿಕೇರಿ: ರಾಜ್ಯದ ಉಪ ಮುಖ್ಯಮಂತ್ರಿಗಳು ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಅವರ ಜನ್ಮ ದಿನದ ಅಂಗವಾಗಿ ಮಡಿಕೇರಿಯ ಜಿಲ್ಲಾ ರಕ್ತ ನಿಧಿ ಕೇಂದ್ರದಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಮತ್ತು ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ರಕ್ತದಾನ ಶಿಬಿರ ನಡೆಯಿತು.

ಈ ಸಂದರ್ಭ ಮಾತನಾಡಿದ ಜಿಲ್ಲಾ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ.ಕೆ.ಸಿ.ಕರುಂಬಯ್ಯ ಅವರು ರೋಗಿಯ ಜೀವ ಉಳಿಸಲು ರಕ್ತದಾನ ಅಮೂಲ್ಯ ದಾನವಾಗಿದೆ. ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ರಕ್ತದಾನ ಮಾಡಲು ಮುಂದಾಗಬೇಕು ಮತ್ತು ಇತರರಿಗೆ ಉತ್ತೇಜನ ನೀಡಬೇಕು ಎಂದು ಕರೆ ನೀಡಿದರು. ಜಿಲ್ಲಾ ಕಾಂಗ್ರೆಸ್ ವಕ್ತಾರ ತೆನ್ನಿರ ಮೈನಾ ಅವರು ರಕ್ತದಾನದ ಮಹತ್ವವನ್ನು ವಿವರಿಸಿದರು ಮತ್ತು ಕಾರ್ಯಕ್ರಮ ನಿರೂಪಿಸಿದರು.

ಸಮಾಜ ಸೇವಕ ಕ್ರಿಯೇಟಿವ್ ಖಲೀಲ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷ ಪ್ರಭು ರೈ, ಪ್ರಧಾನ ಕಾರ್ಯದರ್ಶಿ ರಾವುಫ್ ಎಂ.ಎಸ್, ಸಂಘಟನಾ ಕಾರ್ಯದರ್ಶಿ ರವಿ ಗೌಡ, ನಗರಸಭಾ ಸದಸ್ಯ ಸದಾ ಮುದ್ದಪ್ಪ, ಮಾಜಿ ಸದಸ್ಯ ಕೆ.ಯು. ಅಶ್ರಫ್, ನಗರ ಕಾಂಗ್ರೆಸ್ ಕಾರ್ಯದರ್ಶಿ ನಜ್ಹೀರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಜಮ್ಮಡ ಸೋಮಣ್ಣ, ಉಪಾಧ್ಯಕ್ಷ ಕತ್ತಣೀರ ಮೈಸಿ, ಉಪಾಧ್ಯಕ್ಷ ರಾಹುಲ್ ಮಾರ್ಷಲ್, ಕಾರ್ಯಕರ್ತ ಸಾಧತ್ ಹಾಗೂ ರಕ್ತನಿಧಿ ಕೇಂದ್ರದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸುಳ್ಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ವಿದ್ಯಾರ್ಥಿಗಳಿಗೆ ಸಿಗುವ ವಿವಿಧ ಸೌಲಭ್ಯಗಳ ಕುರಿತ ಮಾಹಿತಿ, ಸನ್ಮಾನ

ಮಕ್ಕಳ ಉತ್ತಮ ಜೀವನಕ್ಕೆ ಶಿಕ್ಷಣವು ಆಧಾರ: ಶಾಸಕಿ ಭಾಗೀರಥಿ ಮುರುಳ್ಯ

ಸುಳ್ಯ: ವಿದ್ಯಾರ್ಥಿಗಳ ಜೀವನ ರೂಪಿಸಲು ತಂದೆ–ತಾಯಂದಿರು ಮಾಡುವ ತ್ಯಾಗಗಳು ಮತ್ತು ಕೊಡುಗೆಗಳ ಬಗ್ಗೆ ವಿದ್ಯಾರ್ಥಿಗಳು ಸದಾ ಸ್ಮರಿಸಿಕೊಳ್ಳಬೇಕು. ಪೋಷಕರು ಮಕ್ಕಳಿಗೆ ನೀಡುವ ಉತ್ತಮ ಪೋಷಕಾಂಶಗಳಲ್ಲಿ ಶಿಕ್ಷಣವೂ ಕೂಡ ಒಂದು ಅಂಗವಾಗಿದೆ. ಮಕ್ಕಳ ಬೆಳವಣಿಗೆಗಾಗಿ ಪೋಷಕರು ನೀಡುವ ಉತ್ತಮ ಆಹಾರ ಪದಾರ್ಥಗಳು ಮಕ್ಕಳನ್ನು ಒಳ್ಳೆಯ ರೀತಿಯಲ್ಲಿ ಬೆಳೆಸಿದರೆ ಮಕ್ಕಳ ಉತ್ತಮ ಜೀವನವನ್ನು ನಡೆಸಲು ಶಿಕ್ಷಣವು ಆಧಾರ ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.

ಅವರು ಸೋಮವಾರ ಸುಳ್ಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲೂಕು ಮಾಹಿತಿ ಕೇಂದ್ರ ಮತ್ತು ಸುಳ್ಯ ತಾಲೂಕು ಯೂತ್ ಮುಸ್ಲಿಂ ಫೆಡರೇಶನ್, ಕೆಎ ನಾಲೆಜ್ ಸೆಂಟರ್



ವತಿಯಿಂದ ಆಯೋಜಿಸಲಾಗಿದ್ದ ಸರಕಾರದಿಂದ ವಿದ್ಯಾರ್ಥಿಗಳಿಗೆ ಸಿಗುವ ವಿವಿಧ ಸೌಲಭ್ಯಗಳ ಕುರಿತ ಮಾಹಿತಿ ಮತ್ತು ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಬಡ ವಿದ್ಯಾರ್ಥಿಗಳ ತಂದೆ ತಾಯಿಯಂದಿರು ಹೊಟ್ಟೆ ಬಟ್ಟೆಗಳನ್ನು ಕಟ್ಟಿ ತಮ್ಮ ಮಕ್ಕಳ ಜೀವನ ರೂಪಿಸುವಲ್ಲಿ ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಾರೆ. ಮಕ್ಕಳ ಕಲಿಕೆಗಾಗಿ ಸಾಲ ಸೂಲ ಮಾಡಿ ಜೀವನ ತ್ಯಾಗ ಮಾಡುತ್ತಾರೆ ಇದನ್ನು ಮಕ್ಕಳು ಎಂದಿಗೂ ಮರೆಯಬಾರದೆಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸುಳ್ಯ ನಗರ ಪ್ರಾಕಾರ ಅಧ್ಯಕ್ಷ ಕೆ.ಎಂ. ಮುಸ್ತಫಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಮುಖ್ಯ ಅತಿಥಿಗಳಾಗಿದ್ದ ತಾಲೂಕು ಪಂಚಾಯತ್ ಇಒ ರಾಜಣ್ಣ ಇತ್ತೀಚಿನ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆಯುತ್ತಿರುವ ಉತ್ತಮ ಅಂಕದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ಶುಭ ಹಾರೈಸಿದರು. ಸರ್ಕಾರದಿಂದ ವಿದ್ಯಾರ್ಥಿಗಳಿಗೆ ಲಭ್ಯವಾಗುವ ವಿವಿಧ ಸೌಲಭ್ಯಗಳ ಜೊತೆಗೆ ಎಸೆಸ್ಸೆಲ್ಸಿ ಹಾಗೂ ಪಿಯುಸಿ ಬಳಿಕದ ಮುಂದಿನ ವಿದ್ಯಾಭ್ಯಾಸ ಆಯ್ಕೆ ಮತ್ತು ಉದ್ಯೋಗಾವಕಾಶಗಳ ಕುರಿತು ಪುತ್ತೂರಿನ ಕಮ್ಯುನಿಟಿ ಸೆಂಟರ್‌ನ ಮುಖ್ಯಸ್ಥ ಹನೀಫ್ ಪುತ್ತೂರು ಮತ್ತು ಇಮ್ತಿಯಾಜ್ ಕಾರ್ಯಾಗಾರ ನಡೆಸಿದರು.

ಕಾರ್ಯಕ್ರಮದಲ್ಲಿ 2025–26ನೇ ಸಾಲಿನ ದ್ವಿತೀಯ ಪಿಯುಸಿ ಮತ್ತು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕವನ್ನು ಪಡೆದು ರಾಜ್ಯಕ್ಕೆ 2ನೇ ಸ್ಥಾನವನ್ನು ಪಡೆದ ವಿದ್ಯಾರ್ಥಿನಿಗೆ ಹಾಗೂ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆ ಹೊಂದಿರುವ ಸುಮಾರು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ವೇದಿಕೆಯಲ್ಲಿ ಮುಖಂಡ ಭಾತಿಷಾ ಡಿಗ್ನಿಟಿಕ್ ಕನಕಮಜಲು, ಉದ್ಯಮಿ ಅಬ್ದುಲ್ ರಜಾಕ್ ರಾಜಧಾನಿ, ನಗರ ಪಂಚಾಯತ್ ಮಾಜಿ ಸದಸ್ಯ ಶರೀಫ್ ಕಂಠಿ, ಸಿದ್ದೀಕ್ ಕೊಕ್ಕೊ, ಸಾಮಾಜಿಕ ಕಾರ್ಯಕರ್ತ ಸಿದ್ದೀಕ್ ಕಟ್ಟೆಕ್ಕಾರ್ಸ್ ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು. ಮಾಹಿತಿ ಕೇಂದ್ರದ ನಿರ್ವಾಹಕ ಕಮಾಲ್ ಹಾಗೂ ಮುಸ್ಲಿಂ ಯೂತ್ ಫೆಡರೇಶನ್ ಅಧ್ಯಕ್ಷ ಕೆ.ಎಸ್. ಉಮ್ಮರ್ ಸ್ವಾಗತಿಸಿದರು. ಸಂಸ್ಥೆಯ ಮುಖ್ಯಸ್ಥ ಸಾಕ್ ಕಲ್ಲುಗುಂಡಿ ನಿರ್ವಹಿಸಿದರು.

ಸುತ್ತ ಮುತ್ತ

ಇಂದು ಎಂ.ಗೋಪಾಲ ಬಂದ್ಯೋಡುಗೆ ಶ್ರದ್ಧಾಂಜಲಿ ಅರ್ಪಣೆ

ಉಪ್ಪಳ: ಇತ್ತೀಚೆಗೆ ನಿಧನ ಹೊಂದಿದ ಕೇರಳ ಸರಕಾರದ ನಿವೃತ್ತ ಉದ್ಯೋಗಿ, ಧಾರ್ಮಿಕ ಹಾಗೂ ಸಾಮಾಜಿಕ ಮುಂದಾಳು ಆಗಿದ್ದ ಎಂ.ಗೋಪಾಲ ಬಂದ್ಯೋಡು ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ಸಭೆಯು ಮೇ 19ರಂದು ಸಂಜೆ 5 ಗಂಟೆಗೆ ಉಪ್ಪಳ ಐಲ ಶ್ರೀ ದುರ್ಗಾಪರಮೇಶ್ವರೀ ಕಲಾಭವನದಲ್ಲಿ ನಡೆಯಲಿದೆ. ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳ, ಸಂಘ ಸಂಸ್ಥೆಗಳ ಮುಂದಾಳುಗಳು, ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಸಂಘಟಕರು ವಿನಂತಿಸಿದ್ದಾರೆ.

ಮಳೆಗಾಲಕ್ಕೆ ಸಕಲ ಸಿದ್ಧತೆ: ಸಮರ್ಪಕ ಕ್ರಮಕ್ಕೆ ಆರ್‌ಡಿಒ ಆದೇಶ

ಕಾಸರಗೋಡು: ಕಾಸರಗೋಡು ಕಂದಾಯ ವಿಭಾಗೀಯ ಮಿತಿಯೊಳಗಿನ ಅನೇಕ ಹೊಳೆಗಳಲ್ಲಿ ಕಸ ಮತ್ತು ಮರಳು ಸಂಗ್ರಹವಾಗಿ ನೀರಿನ ಹರಿವು ಅಡಚಣೆಯಾಗಿ ಮಳೆಗಾಲದಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಯುದ್ಧೋಪಾದಿಯಲ್ಲಿ ಹೊಳೆಗಳಿಂದ ತ್ಯಾಜ್ಯವನ್ನು ತೆರವುಗೊಳಿಸಲು ಸಮರ್ಪಕ ಕ್ರಮ ಕೈಗೊಳ್ಳುವಂತೆ ಕಾಸರಗೋಡು ಆರ್‌ಡಿಒ ನಿರ್ದೇಶನ ನೀಡಿದ್ದಾರೆ. ಈ ನಿಟ್ಟಿನಲ್ಲಿ ಅಗತ್ಯದ ಕ್ರಮಗಳನ್ನು ಕೈಗೊಳ್ಳುವಂತೆ ಸ್ಥಳೀಯಾಡಳಿತ ಇಲಾಖೆಯ ಜಂಟಿ ನಿರ್ದೇಶಕರಿಗೆ ಸೂಚಿಸಲಾಗಿದೆ. ವಿಪತ್ತು ನಿರ್ವಹಣಾ ಚಟುವಟಿಕೆಗಳ ಭಾಗವಾಗಿರುವ ಕಲ್ಲಿನ ಕೋರೆಗಳು ಮಳೆಗಾಲದಲ್ಲಿ ಅಪಘಾತಗಳ ಅಪಾಯವನ್ನುಂಟುಮಾಡುವ ಸಾಧ್ಯತೆ ಇರುವುದರಿಂದ ಕೋರೆಗಳ ಬಳಿ ಎಚ್ಚರಿಕೆ ಫಲಕಗಳು ಮತ್ತು ಬ್ಯಾರಿಕೇಡ್‌ಗಳನ್ನು ಅಳವಡಿಸುವಂತೆ ಆರ್‌ಡಿಒ ಅವರು ತಹಶೀಲ್ದಾರ್‌ರವರು ಮತ್ತು ಜಿಲ್ಲಾ ಭೂವಿಜ್ಞಾನಿಗಳಿಗೆ ಆದೇಶಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 66ರ ಬಳಿ ನಡೆಯುತ್ತಿರುವ ಅವೈಜ್ಞಾನಿಕ ಅಗೆತ ಕಾರ್ಯದಿಂದ ಈ ಪ್ರದೇಶದಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆ ಇರುವುದರಿಂದ ನಿರ್ಮಾಣ ಕಾರ್ಯ ಪರಿಶೀಲಿಸಿ ತಕ್ಷಣ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರಿಗೆ ಆರ್‌ಡಿಒ ನಿರ್ದೇಶಿಸಿದ್ದಾರೆ.

ಚಾಲಕ ಹುದ್ದೆಗೆ ಸಂದರ್ಶನ

ಕಾಸರಗೋಡು: ಚೀಮೇನಿಯ ಪಳ್ಳಿಪ್ಪರದಲ್ಲಿರುವ ಅನ್ವಯಿಕ ವಿಜ್ಞಾನ ಕಾಲೇಜಿನಲ್ಲಿ ಚಾಲಕ (ಕಾಲೇಜು ಬಸ್) ನೇಮಕಾತಿಗಾಗಿ ಸಂದರ್ಶನವು ಮೇ 20 ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ. 8ನೇ ತರಗತಿ ಉತ್ತೀರ್ಣರಾದ ಹೆವಿ ಡ್ಯೂಟಿ ವಾಹನ ಚಾಲನಾ ಪರವಾನಗಿ ಮತ್ತು ಕೆಲಸದ ಅನುಭವ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಮಾಹಿತಿಎ 8547005052 , 9074842902 ಕರೆ ಮಾಡಬಹುದು.

ಎಸ್ಸೆಸೆಲ್ಸಿ ಸಾಧಕರಾದ ಮೀನುಗಾರರ ಮಕ್ಕಳಿಗೆ ನಗದು ಬಹುಮಾನ

ಕಾಸರಗೋಡು: ಮೀನುಗಾರರ ಕಲ್ಯಾಣ ನಿಧಿ ಮಂಡಳಿಯು ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚಿನ ಯಶಸ್ಸು ಸಾಧಿಸಿದ ಮೀನುಗಾರರ ಮಕ್ಕಳಿಗೆ ಬಹುಮಾನ ನೀಡುವ ವ್ಯವಸ್ಥೆ ಕೈಗೊಂಡಿದೆ. ಅದರಂತೆ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ 10 ಎ ಪ್ಲಸ್, 9 ಪ್ಲಸ್, 8 ಪ್ಲಸ್ ಶ್ರೇಣಿಗಳನ್ನು ಪಡೆದ ಮಕ್ಕಳಿಗೆ ಕ್ರಮವಾಗಿ 5000, 4000, 3000 ರೂ. ಬಹುಮಾನ ನೀಡಲಾಗುತ್ತದೆ. ಇದರ ಜೊತೆಗೆ ಕ್ರೀಡೆ ಮತ್ತು ಮನರಂಜನಾ ಸ್ಪರ್ಧೆಗಳಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದವರಿಗೆ ಬಹುಮಾನ ನೀಡಲು ನಿರ್ಧರಿಸಲಾಗಿದೆ. ಅರ್ಜಿ ಯೊಂದಿಗೆ ಮೀನುಗಾರರ ಪಾಸ್‌ಬುಕ್‌ನ ಪ್ರತಿ, ವ್ಯಾಸಂಗ ಮಾಡಿದ ಶಾಲೆಯಿಂದ ಪ್ರಮಾಣೀಕೃತ ಅಂಕಪಟ್ಟಿಯ ಪ್ರತಿ, ವಿದ್ಯಾರ್ಥಿ ಆಧಾರ್ ಕಾರ್ಡ್ ನ ಪ್ರತಿ, ಬ್ಯಾಂಕ್ ಪಾಸ್‌ಬುಕ್‌ನ ಪ್ರತಿ , ಪಾಸ್‌ಪೋರ್ಟ್ ಗಾತ್ರದ ಛಾಯಾಚಿತ್ರವನ್ನು ಆಯಾ ಮೀನುಗಾರಿಕಾ ಕಚೇರಿಗಳಿಗೆ ಮೇ 22 ರೊಳಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ.

ಕ್ಲರ್ಕ್ ಹುದ್ದೆಗೆ ಸಂದರ್ಶನ

ಮುಳ್ಳೇರಿಯ: ದೇಲಂಪಾಡಿ ಗ್ರಾ.ಪಂ.ನ ಸಹಾಯಕ ಇಂಜಿನಿಯರ್ ಕಚೇರಿಗೆ ದಿನವೇತನ ಆಧಾರದ ಮೇಲೆ ಗುಮಾಸ್ತರ (ಕ್ಲರ್ಕ್) ನೇಮಕಾತಿಗೆ ಸಂದರ್ಶನ ಮೇ 22ರಂದು ಬೆಳಿಗ್ಗೆ 11ಕ್ಕೆ ದೇಲಂಪಾಡಿ ಪಂ.ಕಚೇರಿಯಲ್ಲಿ ನಡೆಯಲಿದೆ. ಪ್ಲಸ್ ಟು ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರುವವರು ಅರ್ಜಿ ಸಲ್ಲಿಸಬಹುದು. ಉನ್ನತ ಶೈಕ್ಷಣಿಕ ಅರ್ಹತೆ ಯನ್ನು ಹೆಚ್ಚುವರಿ ಅರ್ಹತೆ ಎಂದು ಪರಿಗಣಿಸಲಾ ಗುತ್ತದೆ. ವಿವರಗಳಿಗೆ 04994 270034 ಸಂಪರ್ಕಿಸಬಹುದು.

ಉಪನ್ಯಾಸಕರ ನೇಮಕಾತಿಗೆ ಸಂದರ್ಶನ

ಕಾಸರಗೋಡು: ಪೆರಿಂಗೋಮ್ ಸರಕಾರಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರ ನೇಮಕಕ್ಕಾಗಿ ಸಂದರ್ಶನ ಏರ್ಪಡಿಸಲಾಗಿದೆ. ಮೇ 21 ರಂದು ಬೆಳಿಗ್ಗೆ 9.30ಕ್ಕೆ ಸಂಖ್ಯಾಶಾಸ್ತ್ರ ಮತ್ತು ಮೇ 21ರಂದು ಬೆಳಿಗ್ಗೆ 11 ಗಂಟೆಗೆ ಇತಿಹಾಸ ವಿಷಯಗಳಿಗೆ ಸಂದರ್ಶನ ನಡೆಯಲಿದೆ. ಮೇ 22ರಂದು ಬೆಳಿಗ್ಗೆ 10 ಗಂಟೆಗೆ ವಾಣಿಜ್ಯ, ಮೇ 23 ರಂದು ಬೆಳಗ್ಗೆ 9.30ಕ್ಕೆ ಭೌತಶಾಸ್ತ್ರ ಮೇ 23 ರಂದು ಬೆಳಿಗ್ಗೆ 11 ಕ್ಕೆ ಗಣಿತ ಮತ್ತು ಮೇ 29 ರಂದು ಬೆಳಗ್ಗೆ 10 ಗಂಟೆಗೆ ಪತ್ರಿಕೋದ್ಯಮ ವಿಷಯಗಳಿಗೆ ಸಂಬಂಧಿಸಿ ಸಂದರ್ಶನ ನಡೆಯಲಿದೆ. ಮಾಹಿತಿಗೆ ದೂ.ಸಂ. 04985–295440 ಸಂಪರ್ಕಿಸಬಹುದೆಂದು ಪ್ರಕಟಣೆ ತಿಳಿಸಿದೆ.

ಸ್ವಚ್ಛತಾ ಸಿಬ್ಬಂದಿಗಳ ನೇಮಕಾತಿ

ಕಾಸರಗೋಡು: ಚಟ್ಟಂಚಾಲ್ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಸ್ವಚ್ಛತಾ ಸಿಬ್ಬಂದಿಗಳ ನೇಮಕಾತಿಗಾಗಿ ಸಂದರ್ಶನವು ಮೇ 26 ರಂದು ಬೆಳಿಗ್ಗೆ 10 ಗಂಟೆಗೆ ಚಟ್ಟಂಚಾಲ್ ಕುಟುಂಬ ಆರೋಗ್ಯ ಕೇಂದ್ರದ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ. ಮಾಹಿತಿಗೆ 04994 284808 ಅಥವಾ 8075076488 ಕರೆ ಮಾಡಬಹುದು.

ರಾತ್ರಿ ವೇಳೆ ಸಂಚಾರಿ (ಮೊಬೈಲ್) ತುರ್ತು ಶಸ್ತ್ರಚಿಕಿತ್ಸಾ ಘಟಕ ಜಿಲ್ಲೆಯಲ್ಲಿ ಆರಂಭ

ಜಾನುವಾರುಗಳಿಗೆ ಸಂಪೂರ್ಣ ಚಿಕಿತ್ಸಾ ವ್ಯವಸ್ಥೆಯ ಜಾರಿ

ಕಾಸರಗೋಡು: ಜಿಲ್ಲೆಯ ಕೃಷಿಕರು ಎದುರಿಸುತ್ತಿರುವ ಬಹುದೊಡ್ಡ ಸವಾಲು ಎಂದರೆ ತಮ್ಮ ಜಾನುವಾರುಗಳು ಅನಾರೋಗ್ಯಕ್ಕೆ ಒಳಗಾದಾಗ ಆಸ್ಪತ್ರೆಗೆ ತಲುಪಿಸುವ ನಿಟ್ಟಿನಲ್ಲಿ ಇಲ್ಲಿಯವರೆಗೆ ಸಮರ್ಪಕ ವ್ಯವಸ್ಥೆಗಳು ಇಲ್ಲದಿರುವುದಾಗಿದೆ. ಆದರೆ ಇದಕ್ಕೆ ಶಾಶ್ವತ ಪರಿಹಾರವಾಗಿ ಪಶುಸಂಗೋಪನಾ ಇಲಾಖೆಯು ಕಾಸರಗೋಡು ಜಿಲ್ಲೆಯಲ್ಲಿ ಅತ್ಯಾಧುನಿಕ ಸೌಲಭ್ಯಗಳು, ರಾತ್ರಿ ವೇಳೆ ತುರ್ತು ಚಿಕಿತ್ಸಾ ಘಟಕಗಳನ್ನು ಹೊಂದಿರುವ ಸಂಚಾರಿ (ಮೊಬೈಲ್) ಶಸ್ತ್ರಚಿಕಿತ್ಸಾ ಘಟಕವನ್ನು ಜಾರಿಗೆ ತಂದಿದೆ. ಮನೆ ಬಾಗಿಲಿಗೆ ಅತ್ಯುತ್ತಮ ಚಿಕಿತ್ಸೆ ನೀಡುವ ಈ ಯೋಜನೆಗಳು ಹೈನುಗಾರರು ಮತ್ತು ಜಾನುವಾರು ಸಾಕಣೆದಾರರಿಗೆ ಬಹುದೊಡ್ಡ ನಿರಾಳತೆಯನ್ನುಂಟುಮಾಡಿವೆ.

ಈ ಸೇವೆಗಳು ಅನಾರೋಗ್ಯ ಪೀಡಿತ ಪ್ರಾಣಿಗಳನ್ನು ವಾಹನಗಳಲ್ಲಿ ಸಾಗಿಸುವ ತೊಂದರೆಯನ್ನು ಸಂಪೂರ್ಣವಾಗಿ ನಿವಾರಿಸಲು ಸಹಾಯ ಮಾಡುತ್ತವೆ. ಈಗಾಗಲೇ ಪ್ರಾರಂಭವಾಗಿರುವ ಮೊಬೈಲ್ ಶಸ್ತ್ರಚಿಕಿತ್ಸಾ ಆಸ್ಪತ್ರೆ ಸೇವೆಯು ಜಿಲ್ಲೆಯಲ್ಲಿ ಉತ್ತಮ ರೀತಿಯಲ್ಲಿ ನಡೆಯುತ್ತಿದ್ದು, ಈ ಘಟಕವು ಈಗಾಗಲೇ ಸುಮಾರು 180 ಪ್ರಾಣಿಗಳಿಗೆ ಅತ್ಯುತ್ತಮ ಚಿಕಿತ್ಸೆಯನ್ನು ಒದಗಿಸಿದೆ.



ಜಿಲ್ಲಾ ಪಶುವೈದ್ಯಕೀಯ ಕೇಂದ್ರವನ್ನು ಆಧರಿಸಿದ ಈ ಯೋಜನೆಗಾಗಿ ವಿವಿಧ ಪ್ರದೇಶಗಳಲ್ಲಿನ ಪಶು ವೈದ್ಯಕೀಯ ಆಸ್ಪತ್ರೆಗಳನ್ನು ಸಂಪರ್ಕಿಸುವ ಮೂಲಕ ವಿಶೇಷ ಆಂಕರ್ ವ್ಯವಸ್ಥೆಯನ್ನು ಸಿದ್ಧಪಡಿಸಲಾಗಿದೆ. ರೈತರು ತಮ್ಮ ಸ್ಥಳೀಯ ಪಶುವೈದ್ಯಕೀಯ ಆಸ್ಪತ್ರೆಯ ಮೂಲಕ ಈ ಘಟಕದ ಸೇವೆಗಳನ್ನು ಮುಂಚಿತವಾಗಿ ಬುಕ್ ಮಾಡಬಹುದು. ತುರ್ತು ಸಂದರ್ಭದಲ್ಲಿ ಈ ತಂಡವು ನೇರವಾಗಿ ಕೃಷಿಕರ ಮನೆಗಳಿಗೆ ಭೇಟಿ ನೀಡುತ್ತದೆ. ಇದಕ್ಕಾಗಿ ಇಬ್ಬರು ಪಶುವೈದ್ಯರು ಮತ್ತು ಚಾಲಕ – ಕಮ್ – ಅಟೆಂಡೆಂಟ್ ಒಳಗೊಂಡ ತಂಡವನ್ನು ಸಿದ್ಧಪಡಿಸಲಾಗಿದೆ.

ಈ ಘಟಕವು ಹಸುಗಳು ಸೇರಿದಂತೆ ದೊಡ್ಡ ಪ್ರಾಣಿಗಳಿಗೆ ಸಿಸೇರಿಯನ್, ಗೆಡ್ಡೆ ತೆಗೆಯುವಿಕೆ, ಹರ್ನಿಯಾ, ರುಮೆನೋಟಮಿ, ಸೀಳು ಅಂಗುಳಿನ ದುರಸ್ತಿ ಇತ್ಯಾದಿಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತದೆ. ಜೊತೆಗೆ ಸಣ್ಣ ಪ್ರಾಣಿಗಳಿಗೆ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ನಿರ್ವಹಿಸುತ್ತದೆ.

- ಸಂಚಾರಿ ಘಟಕವು ಸಂಜೆ 4ರಿಂದ ಮಧ್ಯರಾತ್ರಿವವರೆಗೆ ಕಾರ್ಯನಿರ್ವಹಣೆ
- ಅಗತ್ಯ ಚಿಕಿತ್ಸೆಗೆ ಸಂಚಾರಿ ಪಶು ವೈದ್ಯಕೀಯ ಘಟಕ ಟೋಲ್ ಫ್ರೀ ಸಂಖ್ಯೆ 1962ಗೆ ಕರೆ ಮಾಡಬಹುದು
- ಹಸುಗಳು , ಮೇಕೆಗಳಿಗೆ ಚಿಕಿತ್ಸಾ ಶುಲ್ಕ 460 ರೂ., ನಾಯಿಗಳು ಮತ್ತು ಬೆಕ್ಕುಗಳಿಗೆ 900 ರೂ. ಆಗಿದೆ.

ವಿವಿಧೆಡೆ ಸಮರ್ಪಕ ಸೇವೆಗಳು

ರಾತ್ರಿ ವೇಳೆಯ ಸೇವೆಯನ್ನು ಪ್ರಸ್ತುತ ಕಾಸರಗೋಡು ಜಿಲ್ಲಾ ಪಶುವೈದ್ಯಕೀಯ ಆಸ್ಪತ್ರೆ, ಕಾಞಂಗಾಡು ಪಶುವೈದ್ಯಕೀಯ ಆಸ್ಪತ್ರೆ, ಪರಪ್ಪ ಬ್ಲಾಕ್‌ನಲ್ಲಿರುವ ಕೊನ್ನಕ್ಕಾಡ್ ಪಶುವೈದ್ಯಕೀಯ ಆಸ್ಪತ್ರೆ ಮತ್ತು ಜಿಲ್ಲೆಯ ಕಾರಡ್ಕ ಬ್ಲಾಕ್‌ನಲ್ಲಿರುವ ಕುತ್ತಿಕೋಲ್ ಪಶುವೈದ್ಯಕೀಯ ಚಿಕಿತ್ಸಾಲಯದಲ್ಲಿ ಒದಗಿಸಲಾಗುತ್ತಿದೆ. ಗ್ರಾಮೀಣ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಸಾಮಾನ್ಯವಾಗಿ ಅನುಭವಿಸುವ ವೈದ್ಯರ ಸಮಸ್ಯೆ ಮತ್ತು ಕೆಲಸದ ಹೊರಗೆ ಮೊಬೈಲ್ ಶಸ್ತ್ರಚಿಕಿತ್ಸಾ ಘಟಕ , ರಾತ್ರಿ ಚಿಕಿತ್ಸಾ ಘಟಕವು ಉತ್ತಮ ಪರಿಹಾರವಾಗಿದೆ.

ಶಸ್ತ್ರಚಿಕಿತ್ಸಾ ಘಟಕದ ಜೊತೆಗೆ ಸಾಮಾನ್ಯ ಆಸ್ಪತ್ರೆ ಸಮಯದ ನಂತರ ಬಿಕ್ಕಟ್ಟುಗಳನ್ನು ನಿವಾರಿಸಲು ಜಿಲ್ಲೆಯಲ್ಲಿ ರಾತ್ರಿಯ ಸಂಚಾರಿ ಪಶುವೈದ್ಯಕೀಯ ಘಟಕಗಳನ್ನು ಸಹ ಸಕ್ರಿಯಗೊಳಿಸಲಾಗಿದೆ.

ಪಶುವೈದ್ಯಕೀಯ ಆಸ್ಪತ್ರೆಗಳು ಸಾಮಾನ್ಯವಾಗಿ ಮಧ್ಯಾಹ್ನ 3 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತವೆ. ಆ ನಂತರ ಅನಾರೋಗ್ಯ ಪೀಡಿತ ಪ್ರಾಣಿಗಳನ್ನು ನೇರವಾಗಿ ಆಸ್ಪತ್ರೆಗೆ ಕರೆದೊಯ್ಯಲು ಕಷ್ಟಪಡುವವರಿಗೆ ಈ ಸೇವೆಯು ಒಂದು ದೊಡ್ಡ ವರದಾನವಾಗಿದೆ. ಈ ತಂಡವು ಸಂಜೆ 4 ಗಂಟೆಯಿಂದ ಮಧ್ಯರಾತ್ರಿಯವರೆಗೆ ಕಾರ್ಯನಿರ್ವಹಿಸುತ್ತದೆ.

ಟೋಲ್ ಫ್ರೀ ಸಂಖ್ಯೆ 1962ಗೆ ಕರೆ ಮಾಡುವ ಮೂಲಕ ಸಂಚಾರಿ ಪಶುವೈದ್ಯಕೀಯ ಘಟಕವು ಮನೆಗೆ ಬರುತ್ತದೆ. ರಾತ್ರಿ ವೇಳೆಯ ತಂಡವು ಇಬ್ಬರು ಪಶುವೈದ್ಯರು ಮತ್ತು ಇಬ್ಬರು ಕಚೇರಿ ಪರಿಚಾರಕರನ್ನು ಒಳಗೊಂಡಿದೆ. ಹಸುಗಳು ಮತ್ತು ಮೇಕೆಗಳಿಗೆ ಚಿಕಿತ್ಸಾ ಶುಲ್ಕ 460 ರೂ., ಮತ್ತು ನಾಯಿಗಳು ಮತ್ತು ಬೆಕ್ಕುಗಳಿಗೆ 900 ರೂ. ಆಗಿದೆ.

ಜನಗಣತಿ 2027 ಕಾರ್ಯಚಟುವಟಿಕೆಗೆ ಅಧಿಕಾರಿಗಳ ಪಾಲ್ಗೊಳ್ಳುವಿಕೆ ಅಗತ್ಯ: ಡೀಸಿ



ಕಾಸರಗೋಡು: ಜನಗಣತಿ 2027 ಕಾರ್ಯ ಚಟುವಟಿಕೆಗಳಿಗೆ ಅಧಿಕಾರಿಗಳ ಸಂಪೂರ್ಣ ಭಾಗವಹಿಸುವಿಕೆ ಅತೀ ಅಗತ್ಯ ಎಂದು ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಸಂಪೂರ್ಣ ಗಮನ ಹರಿಸಿ ಕೆಲಸ ನಿರ್ವಹಿಸಬೇಕೆಂದು ಕರೆ ನೀಡಿದ್ದಾರೆ.

ಜನಗಣತಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲು ಮನೆಗಳಿಗೆ ತೆರಳುವ ಗಣತಿದಾರರು, ಮೇಲ್ವಿಚಾರಕರಿಗೆ ತರಬೇತಿ ನೀಡುವ ಅಂಗವಾಗಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಕ್ರಮವನ್ನು ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು. ಜನಗಣತಿಗೆ ಸಂಬಂಧಿಸಿ ಸ್ವಯಂ ಗಣತಿ ನಡೆಸುವ ಕ್ರಮಗಳನ್ನು ಆದಷ್ಟು ಬೇಗ ಪ್ರಾರಂಭಿಸಬೇಕು. ಜನಗಣತಿಯ ಮೂಲಕ ದತ್ತಾಂಶ ಸಂಗ್ರಹಣೆಯನ್ನು ಜನರ ಕಲ್ಯಾಣ ಮತ್ತು ದೇಶದ ಪ್ರಗತಿಗೆ ಬಳಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜನಗಣತಿಗೆ ಸಂಬಂಧಿಸಿದ 3 ದಿನಗಳ ತರಬೇತಿ ಕಾರ್ಯಕ್ರಮ ಡಿಸಿಒ ಉಪನಿ ದೇರ್ಶಕಿ ವಿ.ವಿಭಾ ಮೇಲ್ವಿಚಾರಣೆ ನಡೆಸುವರು. ಮಾಸ್ಟರ್ ತರಬೇತುದಾರರಾದ ಪಿ.ವಿಜಯೇಶ, ರಾಜ್‌ಕುಮಾರ್, ಕ್ಯೂಆರ್ ತಂಡದ ಸದಸ್ಯ ಸಜಿತ್ ರಾಜ್ ತರಗತಿ ನಡೆಸಿದರು.

> **ಆನ್‌ಲೈನ್‌ನಲ್ಲಿ ಮಾಹಿತಿ ದಾಖಲಿಸಬಹುದು**
>
> ಸ್ವಯಂ ಗಣತಿಯು ಸಾರ್ವಜನಿಕರಿಗೆ ಆನ್‌ಲೈನ್‌ನಲ್ಲಿ ಮಾಹಿತಿ ದಾಖಲಿಸುವ ವ್ಯವಸ್ಥೆಯಾಗಿದೆ. ಜೂನ್ 16 ರಿಂದ 30ರ ವರೆಗೆ ಸ್ವಯಂ ಗಣತಿಗೆ ಸಂಬಂಧಿಸಿದ ಮಾಹಿತಿಯನ್ನು ಆ್ಯಪ್ ಮೂಲಕ ಭರ್ತಿಗೊಳಿಸಬೇಕು. ಜುಲೈ 1 ರಿಂದ 30ರ ತನಕ ಕ್ಷೇತ್ರ ಭೇಟಿ ಕಾರ್ಯಕ್ರಮ ಆಯೋಜಿಸಲಾಗುವುದು.
>
> ● ಅರ್ಜುನ್ ಪಾಂಡ್ಯನ್, ಡೀಸಿ

ಕೇರಳ ಹೊಸ ಸಚಿವ ಸಂಪುಟ ಕಾಸರಗೋಡು ಜಿಲ್ಲೆಯ ಪಾಲಿಗೆ ನಿರಾಶಾದಾಯಕ: ಅಶ್ವಿನಿ

ಕಾಸರಗೋಡು: 10 ವರ್ಷಗಳ ಬಳಿಕ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಒಕ್ಕೂಟ ಸಚಿವರು ಸೋಮವಾರ ತಿರುವನಂತಪುರದಲ್ಲಿ ಪ್ರಮಾಣ ವಚನ ಸ್ವೀಕರಿಸಿದಾಗ ಕಾಸರಗೋಡು ಜಿಲ್ಲೆಯ ಪಾಲಿಗೆ ನಿರಾಶೆಯಷ್ಟೇ ಉಳಿದಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷೆ ಅಶ್ವಿನಿ ಎಂ.ಎಲ್. ಹೇಳಿದ್ದಾರೆ.

ಕೇರಳ ರಾಜ್ಯದಲ್ಲೇ ಅತ್ಯಂತ ಹಿಂದುಳಿದಿರುವ ಜಿಲ್ಲೆಗೆ ಮತ್ತೊಮ್ಮೆ ಸಚಿವ ಸ್ಥಾನದ ಪ್ರಾತಿನಿಧ್ಯವನ್ನು ನಿರಾಕರಿಸುವ ಮೂಲಕ ಮುಂದಿನ ಐದು ವರ್ಷಗಳ ಕಾಲ ಜಿಲ್ಲೆಯ ಬಗ್ಗೆ ನೂತನ ಸಿಎಂ ವಿ.ಡಿ.ಸತೀಶನ್ ಅವರ ಸರಕಾರದ ಧೋರಣೆ ಏನಿರಲಿದೆ ಎಂಬುದು ಬಹುಮಟ್ಟಿಗೆ ಸ್ಪಷ್ಟವಾಗಿದೆ ಎಂದು ಅವರು ತಿಳಿಸಿದ್ದಾರೆ.



ಎಷ್ಟೋ ದಶಕಗಳ ಬಳಿಕ ಕಾಸರಗೋಡು ಜಿಲ್ಲೆಯಿಂದ ಕಾಂಗ್ರೆಸ್ ಶಾಸಕರು ರಾಜ್ಯ ವಿಧಾನಸಭೆ ಯನ್ನು ಪ್ರವೇಶಿಸಿದ್ದಾರೆ. ಕನಿಷ್ಠ ಈ ವಿಷಯವನ್ನಾದರೂ ಕಾಂಗ್ರೆಸ್ ನಾಯಕತ್ವ ಪರಿಗಣಿಸಬೇಕಿತ್ತು ಎಂದು ಅವರು ಉಲ್ಲೇಖಿಸಿದ್ದಾರೆ.

ವೆಂಟಿಲೇಟರ್ ಸ್ಥಿತಿಯಲ್ಲಿರುವ ಕಾಸರಗೋಡು ಉಕ್ಕಿನಡ್ಕ ಸರಕಾರಿ ವೈದ್ಯಕೀಯ ಕಾಲೇಜು ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಇನ್ನು ಮುಂದೆಯೂ ಅಗತ್ಯದ ಅನುದಾನ ಮತ್ತು ಬೆಂಬಲ ದೊರೆಯಲಾರದ ಪರಿಸ್ಥಿತಿಯಿದೆ. ಪ್ರಸ್ತುತ ಸನ್ನಿವೇಶದಲ್ಲಿ ಇಂತಹ ಅಗತ್ಯತೆಗಳು ಮತ್ತೊಮ್ಮೆ ನಿರ್ಲಕ್ಷ್ಯಕ್ಕೆ ಒಳಗಾಗುವ ಸಾಧ್ಯತೆಯಿದೆ ಎಂಬ ಆತಂಕ ಮೂಡುತ್ತಿದೆ ಎಂದು ಅಶ್ವಿನಿ ಎಂ.ಎಲ್. ಪ್ರತಿಕ್ರಿಯಿಸಿದ್ದಾರೆ.

ಕಾಸರಗೋಡು ಜಿಲ್ಲೆಯ ಸಮಗ್ರ ಅಭಿವೃದ್ಧಿ ಹಾಗೂ ಜನಪರ ಯೋಜನೆಗಳು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಿಂದ ಮಾತ್ರ ಸಾಧ್ಯ ಎಂಬ ಜನರ ಭರವಸೆಯ ಮಾತುಗಳು ಪದೇ ಪದೇ ನೆನಪಿನಂಗಳಕ್ಕೆ ಬರುತ್ತಿವೆ ಎಂದು ಅವರು ಹೇಳಿದ್ದಾರೆ.

> **ಜಿಲ್ಲೆಯಲ್ಲಿ ಸಚಿವರಿದ್ದರೆ ಉತ್ತಮವಿತ್ತು**
>
> ಸಚಿವರನ್ನು ಆಯ್ಕೆ ಮಾಡುವುದು ಯುಡಿಎಫ್ ಒಕ್ಕೂಟದ ಆಂತರಿಕ ವಿಷಯವಾಗಿದ್ದರೂ ಜಿಲ್ಲೆಯ ಅಭಿವೃದ್ಧಿ ಯೋಜನೆಗಳು , ಸಮಸ್ಯೆಗಳನ್ನು ಸಚಿವ ಸಂಪುಟದಲ್ಲಿ ಬಲವಾಗಿ ಮಂಡಿಸಲು ಒಬ್ಬ ಸಚಿವರಿದ್ದರೆ ಉತ್ತಮವಿತ್ತು ಎಂಬುದು ಜಿಲ್ಲೆಯ ಪ್ರತಿಯೊಬ್ಬ ನಾಗರಿಕನ ಆಶಯವಾಗಿದೆ ಎಂದು ಅಶ್ವಿನಿ ಹೇಳಿದರು.

ಧರ್ಮ ಮಾರ್ಗದಲ್ಲಿ ನಡೆದರೆ ದೇವರ ಅನುಗ್ರಹ ಪ್ರಾಪ್ತಿ: ಕೊಂಡೆವೂರು ಶ್ರೀ



ಕಾಸರಗೋಡು: ನಾವು ಅಧರ್ಮದಲ್ಲಿ ಸಾಗದೆ ಧರ್ಮ ಮಾರ್ಗದಲ್ಲಿ ನಡೆಯಬೇಕು. ಹಾಗೂ ತ್ಯಾಗ, ಶ್ರಮ ಸಮರ್ಪಿಸಬೇಕು ಇದರಿಂದ ದೇವರ ಅನುಗ್ರಹ ಪ್ರಾಪ್ತಿಯಾಗುವುದೆಂದು ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಹೇಳಿದ್ದಾರೆ.

ಕೂಡ್ಲು ರಾಮದಾಸನಗರದ ಕಾಳ್ಯಂಗಾಡಿನಲ್ಲಿರುವ ಬಾರಿಕ್ಕಾಡು ಅಂಜಾರಿಲ್ಲಂ ತರವಾಡಿನ ನವೀಕೃತ ತರವಾಡು ಮನೆಯ ಗೃಹಪ್ರವೇಶ, ಕೊರತ್ತಿಯಮ್ಮ, ಗುಳಿಗ ದೈವಗಳ ಪುನರ್ ಪ್ರತಿಷ್ಠಾಕಲಶಾಭಿಷೇಕದಂಗವಾಗಿ ಸೋಮವಾರ ಜರಗಿದ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.

ಇಂದು ಇಡೀ ಜಗತ್ತಿನಲ್ಲಿ ಅತ್ಯಂತ ಶ್ರೀಮಂತ ರಾಷ್ಟ್ರ ಭಾರತ ಮಾತ್ರವಾಗಿದೆ. ನಮ್ಮ ನಂಬಿಕೆ, ಅನುಭವದಿಂದ ಯಾವುದನ್ನೂ ಸಿದ್ಧಿಸಬಹುದಾಗಿದೆ. ನಮ್ಮ ಭಾರತವು ಇಡೀ ಜಗತ್ತಿಗೆ ದೇವರ ಕೋಣೆಯಾಗಿದೆ. ದೇವರ ಕೋಣೆ ದೇವತೆಗಳ ಆರಾಧನೆಯ ಸ್ವರೂಪ ಎಂದರು.

ಹೆತ್ತ ತಾಯಿಯನ್ನು ಮರೆಯಬಾರದು

ಈಗ ಎಲ್ಲೆಲ್ಲಿಯೂ ಎಲ್ಲರಲ್ಲಿಯೂ ನನ್ನ ಎಂಬ ಚಿಂತನೆಯಿದೆ. ಅದನ್ನು ಬಿಟ್ಟು 'ನಾವು' ಎಂಬ ಚಿಂತನೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ತರವಾಡಿನ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ನುಡಿದರು. ನಾವು ಮಾತೆಯನ್ನು ದೇವರಿಗೆ ಸಮಾನವಾಗಿ ಕಾಣಬೇಕು. ನಮ್ಮನ್ನು ಸಾಕಿ ಸಲಹಿದ ತಾಯಿಯನ್ನು ಎಂದೂ ಮರೆಯಬಾರದು. ಅದೇ ರೀತಿ ತರವಾಡಿನ ಕೊರತ್ತಿಯಮ್ಮನನ್ನು ಮರೆಯಬಾರದು ಎಂದರು.

ಸಭಾ ಕಾರ್ಯಕ್ರಮದಲ್ಲಿ ತರವಾಡಿನ ಅಧ್ಯಕ್ಷ ಜಗದೀಶ್ ಅತ್ತಾವರ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಸಭಾ ಸದಸ್ಯ ಡಾ.ಕೆ.ನಾರಾಯಣ ಬೆಂಗಳೂರು ಅತಿಥಿಯಾಗಿದ್ದರು. ತೆರುವತ್ತ್ ಶ್ರೀ ಚೀರುಂಬಾ ಭಗವತೀ ಕ್ಷೇತ್ರದ ಸ್ಥಾನಿಕ ಗಣೇಶ ಮಡೆಯ, ಕ್ಷಿತಿ ಮಂಗಳೂರು, ವೇಣುಗೋಪಾಲನ್ ಅತಿಥಿಗಳಾಗಿದ್ದರು. ಜಯಬಜಾಲ್ ಸ್ವಾಗತಿಸಿ, ಪ್ರಮೋದ್ ಕುಂಬಳೆ ವಂದಿಸಿ, ಮಮತಾ ದೇವಾಂಗ ಮಂಗಳೂರು ನಿರೂಪಿಸಿದರು. ವಿವಿಧ ಭಜನಾ ತಂಡಗಳಿಂದ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಇಂದು ದೈವದ ಕೋಲ

ಮೇ 19ರಂದು ಬೆಳಿಗ್ಗೆ ಕುಣಿತ ಭಜನೆ, ಕೊರತ್ತಿಯಮ್ಮನ ಕೋಲ, ಗುಳಿಗ ದೈವ ಕೋಲದೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಗಲಿದೆ.

> **ತರವಾಡಿಗೆ ದೈವ, ದೇವರ ಕೃಪೆಯಿದೆ**
>
> ತರವಾಡಿನ ದೇವರು ಮುನಿದರೆ ಇತರ ಯಾವುದೇ ಕ್ಷೇತ್ರಕ್ಕೆ ಹೋಗಿ ಫಲವಿಲ್ಲ, ಸ್ವಸ್ಥ ಸಮಾಜ ನಿರ್ಮಾಣ ಎಲ್ಲರ ಗುರಿಯಾಗಿದೆ. ಈ ತರವಾಡಿಗೆ ದೈವ, ದೇವರುಗಳ ಕೃಪೆಯಿದೆ.
>
> ● ಕೊಂಡೆವೂರು ಶ್ರೀ

ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಧರ್ಮತ್ತಡ್ಕ ಶಾಲೆಗೆ ಶೇಕಡಾ 100 ಫಲಿತಾಂಶ



ಮಂಜೇಶ್ವರ: 2025–26ನೇ ಶೈಕ್ಷಣಿಕ ವರ್ಷದ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಧರ್ಮತ್ತಡ್ಕ ಶ್ರೀ ದುರ್ಗಾಪರಮೇಶ್ವರಿ ಹೈಯರ್ ಸೆಕೆಂಡರಿ ಶಾಲೆಗೆ ಶೇಕಡಾ 100 ಫಲಿತಾಂಶ ಲಭಿಸಿದೆ. ಒಟ್ಟು 240 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಎಲ್ಲರೂ ಉತ್ತೀರ್ಣರಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ.

12 ಮಂದಿ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳಲ್ಲಿ 'ಎ' ಪ್ಲಸ್ ಗ್ರೇಡ್ ದೊರೆತಿದೆ. ವಿದ್ಯಾರ್ಥಿಗಳಾದ ಆತ್ಮಿಕ ಎ., ಆತ್ಮಿಕ ಜಿ.ಯು., ಭುವನ್ ಎ., ಈಶನ್ ಶರ್ಮ ಕೆ., ಹಂಶಿಕ, ಖದೀಜ ಸಫ, ಪ್ರಜಕ್ತ ಜೆ. ಕಯ್ಯಾರು, ಸಮರ್ಥ್, ಸಮೀಕ್ಷಾ, ಶಮಿಕ, ಶ್ರೇಯಸ್ ವಿ.ಎಸ್., ತನ್ವಿ ಅವರಿಗೆ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಗ್ರೇಡ್ ಲಭಿಸಿದೆ. 5 ಮಂದಿ ವಿದ್ಯಾರ್ಥಿಗಳಿಗೆ 9 ವಿಷಯಗಳಲ್ಲಿ 'ಎ' ಪ್ಲಸ್ ಹಾಗೂ ಒಂದು 'ಎ' ಲಭಿಸಿದೆ. ಏಳು ಮಂದಿ ವಿದ್ಯಾರ್ಥಿಗಳಿಗೆ ಎಂಟು ವಿಷಯಗಳಲ್ಲಿ 'ಎ' ಪ್ಲಸ್ ದೊರಕಿದೆ.

ಕೊಲೆಯಾದ ಬಿ.ಕೆ. ಸುರೇಶ್ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದ ಬಿಜೆಪಿ



ಕಾಸರಗೋಡು: ಕೊಲೆಗೀಡಾದ ಕುಂಬ್ಡಾಜೆ ಸೇವಾ ಸಹಕಾರಿ ಬ್ಯಾಂಕ್‌ನ ಸೆಕ್ಯುರಿಟಿ ನೌಕರರಾಗಿದ್ದ ಮಾರ್ಪನಡ್ಕ ಬೆದ್ರಂಕೂಡ್ಲು ನಿವಾಸಿ, ಎಸ್‌ಸಿ ಮೋರ್ಚಾದ ಕಾಸರಗೋಡು ಜಿಲ್ಲಾ ಸಮಿತಿ ಸದಸ್ಯ ಹಾಗೂ ಎಸ್‌ಸಿ ಮೋರ್ಚಾದ ಬದಿಯಡ್ಕ ಮಂಡಲ ಮಾಜಿ ಅಧ್ಯಕ್ಷ ಬಿ.ಕೆ.ಸುರೇಶ್ ಅವರ ಪಾರ್ಥಿವ ಶರೀರದ ಅಂತಿಮ ದರುಶನದಲ್ಲಿ ಬಿಜೆಪಿ ಪ್ರಮುಖರು, ಕಾರ್ಯಕರ್ತರು ಸೋಮವಾರ ಅಪಾರ ಸಂಖ್ಯೆಯಲ್ಲಿ ಭಾಗಿಯಾದರು.

ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿಯ ಪರವಾಗಿ ಜಿಲ್ಲಾಧ್ಯಕ್ಷೆ ಅಶ್ವಿನಿ ಎಂ.ಎಲ್., ರಾಷ್ಟ್ರೀಯ ಪರಿಷತ್ ಸದಸ್ಯ ಎಂ.ಸಂಜೀವ ಶೆಟ್ಟಿ, ಆರ್‌ಎಸ್‌ಎಸ್ ಕಾಸರಗೋಡು ಜಿಲ್ಲಾ ಸಂಘಚಾಲಕ್ ಪ್ರಭಾಕರ ಮಾಸ್ತರ್, ಜಿಲ್ಲಾ ಕಾರ್ಯವಾಹ ಪವಿತ್ರನ್ ಕೆ.ಕೆ.ಪುರಂ, ಬಿಜೆಪಿ ಕಲ್ಲಿಕೋಟೆ ವಲಯ ಪ್ರಧಾನ ಕಾರ್ಯದರ್ಶಿ ಎಂ.ಸುಧಾಮ ಗೋಡಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್. ಸುನೀಲ್, ರಾಜ್ಯ ಸಮಿತಿ ಸದಸ್ಯ ಶಿವಕೃಷ್ಣ ಭಟ್, ಸೆಲ್ ಸಂಯೋಜಕ ಸುಕುಮಾರ್ ಕುದ್ರೆಪ್ಪಾಡಿ, ಬಿಜೆಪಿ ಬದಿಯಡ್ಕ ಮಂಡಲ ಅಧ್ಯಕ್ಷ ಎಂ.ಗೋಪಾಲಕೃಷ್ಣ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ರವೀಂದ್ರ ರೈ ಗೋಸಾಡ, ಎಂ.ಶ್ರೀಧರ ಬೆಳ್ಳೂರು, ಮುಳಿಯಾರು ಮಂಡಲ ಪ್ರಧಾನ ಕಾರ್ಯದರ್ಶಿ ಜಯಕುಮಾರ್, ಕುಂಬ್ಡಾಜೆ ಪಂಚಾಯತ್ ಸಮಿತಿಯ ಅಧ್ಯಕ್ಷ ಶಶಿಧರ ತೆಕ್ಕೆಮೂಲೆ, ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರಮೋದ್ ಭಂಡಾರಿ, ಕುಂಬ್ಡಾಜೆ ಗ್ರಾಮ ಪಂಚಾಯತ್ ಅಧ್ಯಕ್ಷೆ ಯಶೋಧಾ ಎನ್. ಮೊದಲಾದವರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

ಪುಷ್ಪನಮನ ಸಲ್ಲಿಕೆ

ಕುಂಬ್ಡಾಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಾರ್ಪನಡ್ಕದಲ್ಲಿ ಸಾರ್ವಜನಿಕ ದರುಶನಕ್ಕೆ ಇಡಲಾಗಿದ್ದ ಬಿ.ಕೆ.ಸುರೇಶ್ ಅವರ ಪಾರ್ಥಿವ ಶರೀರಕ್ಕೆ ವಿವಿಧ ವಲಯಗಳ ಗಣ್ಯರು ಹಾಗೂ ಕಾರ್ಯಕರ್ತರು ಪುಷ್ಪನಮನ ಸಲ್ಲಿಸಿ ಅಂತಿಮ ವಿಧಿ ವಿಧಾನಗಳಲ್ಲಿ ಪಾಲ್ಗೊಂಡರು.

ಧನರಾಜ್ ಪ್ರತಾಪನಗರ ಸ್ಮರಣಾರ್ಥ ಕುಟುಂಬ ಸದಸ್ಯರಿಂದ ಬಡ ಮಕ್ಕಳಿಗೆ ಪುಸ್ತಕ ವಿತರಣೆ



ಉಪ್ಪಳ: ಸಂಘ ಪರಿವಾರದ ಮುಖಂಡರಾಗಿದ್ದ ಧನರಾಜ್ ಪ್ರತಾಪನಗರ ಮಂಗಲ್ಪಾಡಿ ಅವರ ಸ್ಮರಣಾರ್ಥವಾಗಿ ಅವರ ಕುಟುಂಬದ ಸದಸ್ಯರ ವತಿಯಿಂದ ಬಡ ಮಕ್ಕಳಿಗೆ ಉಚಿತ ಪುಸ್ತಕ ವಿತರಣಾ ಕಾರ್ಯಕ್ರಮವು ಭಾನುವಾರ ಬೆಳಿಗ್ಗೆ ಪ್ರತಾಪನಗರ ಜೈ ಹನುಮಾನ್ ಫ್ರೆಂಡ್ಸ್ ಕ್ಲಬ್ ಕಾರ್ಯಾಲಯದಲ್ಲಿ ನಡೆಯಿತು.

ಧನರಾಜ್ ಅವರತಾಯಿ, ಕುಟುಂಬಸದಸ್ಯರ ಉಪಸ್ಥಿತಿಯಲ್ಲಿ ಸೇವಾ ಭಾರತಿ ಅಧ್ಯಕ್ಷ ರಘು ಚೆರುಗೋಳಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಪ್ರತಿಯೋರ್ವರೂ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು. ದೇಶದ ಅಭಿವೃದ್ಧಿಗೆ , ಸಮಾಜ ಪ್ರಗತಿಗೆ ಎಲ್ಲರೂ ಸಮಯ ಮೀಸಲಿರಿಸಬೇಕು ಎಂದರು. ಮಂಗಲ್ಪಾಡಿ ಗ್ರಾ.ಪಂ. ಸದಸ್ಯ ವಸಂತ ಕುಮಾರ್ ಮಯ್ಯ , ಒಬಿಸಿ ಮೋರ್ಚಾ ಕಾಸರಗೋಡು ಜಿಲ್ಲಾಧ್ಯಕ್ಷ ಕೆ.ಪಿ. ವಲ್ಸರಾಜ್, ಶೇಖರ ಪೂಜಾರಿ ಮಂಗಲ್ಪಾಡಿ, ಜೈ ಹನುಮಾನ್ ಫ್ರೆಂಡ್ಸ್ ಕ್ಲಬ್‌ನ ಅಧ್ಯಕ್ಷ ಸುರೇಶ್ ಶೆಟ್ಟಿ ಮತ್ತಿತರರಿದ್ದರು. ಯತೀಶ್ ಸ್ವಾಗತಿಸಿ, ಸುರೇಶ್ ಜಿ. ವಂದಿಸಿದರು.

ಮುಳ್ಳೇರಿಯ ಪೇಟೆಯಲ್ಲಿ ಚರಂಡಿಯ ಹೂಳೆತ್ತದೆ ಸಮಸ್ಯೆ । ಪ್ರಯಾಣಿಕರ ಪರದಾಟ

ಮೊದಲ ಮಳೆಗೆ ಧಾರಾಕಾರ ನೀರು ಹರಿದು ತೋಡಾಗಿ ಮಾರ್ಪಟ್ಟ ರಸ್ತೆ !

ಮುಳ್ಳೇರಿಯ: ಕಾಸರಗೋಡು ಜಿಲ್ಲೆಯ ಪ್ರಧಾನ ನಗರಗಳಲ್ಲಿ ಒಂದಾದ ಮುಳ್ಳೇರಿಯ ಪೇಟೆಯಿಂದ ಗಾಡಿಗುಡ್ಡೆ ಭಾಗಕ್ಕೆ ತೆರಳುವ ಮಾರ್ಗವು ಚರಂಡಿ ವ್ಯವಸ್ಥೆಯ ಲೋಪದಿಂದಾಗಿ ಹಳ್ಳವಾಗಿ ಬದಲಾಗುತ್ತಿದೆ. ಈ ರಸ್ತೆಯ ಚರಂಡಿ ಸಮಸ್ಯೆ ಹಲವು ವರ್ಷಗಳಿಂದ ಪರಿಹಾರವಾಗದೆ ಉಳಿದುಕೊಂಡಿದೆ. ಒಂದು ಮಳೆ ಬಂದರೂ ನೀರು ರಸ್ತೆಯಲ್ಲಿಯೇ ಹರಿಯಲು ಆರಂಭವಾಗುತ್ತದೆ. ರಸ್ತೆಯ ಒಂದು ಪಾರ್ಶ್ವದಲ್ಲಿ ಅಗಲ ಕಿರಿದಾದ ಚರಂಡಿಯು ಈ ಸಮಸ್ಯೆಗೆ ಕಾರಣವಾಗಿದೆ. ಚರಂಡಿ ಹೂಳೆತ್ತದ ಹಿನ್ನೆಲೆ ಮಳೆನೀರು ರಸ್ತೆ ಮೂಲಕವೇ ಹರಿಯುತ್ತಿದೆ. ಇದರಿಂದ ರಸ್ತೆ ತೋಡಾಗಿ ಪರಿಣಮಿಸುತ್ತಿದೆ. ವಾಹನಗಳು ತುಂಬಿ ಹರಿಯುವ ನೀರಿನಲ್ಲೇ ಸಂಚರಿಸುವ ದುಃಸ್ಥಿತಿ ಇದೆ.



ಈ ಮಧ್ಯೆ ರಸ್ತೆಯಲ್ಲಿಯೂ ಮಳೆನೀರು ಹರಿ ಯಲು ಸ್ಥಳಾವಕಾಶದ ಕೊರತೆಯಿದ್ದು, ಅಂತಹ ಸಂದರ್ಭ ಪರಿಸರದ ಅಂಗಡಿಗಳಿಗೆ ನುಗ್ಗುತ್ತದೆ. ಹಲವು ವರ್ಷಗಳ ಈ ಸಮಸ್ಯೆಗೆ ಇನ್ನೂ ಮುಕ್ತಿ ದೊರಕದಿರುವುದು ದುರಂತವಾಗಿದೆ. ಈ ರಸ್ತೆಯಲ್ಲಿ ಜನ ಸಂಚಾರ , ವಾಹನಗಳ ಓಡಾಟ ಅತೀ ಹೆಚ್ಚು ಇದ್ದು, ಬೆಳ್ಳೂರು ಭಾಗಕ್ಕೆ ತೆರಳುವ ಬಸ್ ಮೊದಲಾದ ಎಲ್ಲಾ ವಾಹನಗಳು ಇದೇ ರಸ್ತೆಯಲ್ಲಿ ಸಂಚರಿಸುವುದಾಗಿವೆ. ಮುಳ್ಳೇರಿಯ ಎಯುಪಿ ಶಾಲೆ, ಜಿವಿಎಚ್‌ಎಸ್ ಶಾಲೆ, ಹೈಯರ್ ಸೆಕೆಂಡರಿ ಶಾಲೆಗೆ ಹೋಗುವ ವಿದ್ಯಾರ್ಥಿ ಗಳು ಈ ಮೂಲಕ ಸಾಗಬೇಕು. ಪಶು ಆಸ್ಪತ್ರೆ, ಹೋಮಿಯೋಪತಿ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳು, ಪೆಟ್ರೋಲ್ ಪಂಪ್ ಮುಂತಾದ ಹಲವು ಸಂಸ್ಥೆಗಳು, ಕಚೇರಿಗಳಿಗೆ ದಿನನಿತ್ಯ ಸಾಗುವ ಮಂದಿಗೆ ಈ ರಸ್ತೆ ಆಸರೆಯಾಗಿದೆ.

ಕ್ರಮ ಕೈಗೊಳ್ಳಿ


ಅಗಲ ಕಿರಿದಾದ ಈ ರಸ್ತೆಯ ಚರಂಡಿಯಲ್ಲಿ ಹೂಳು ತುಂಬಿಕೊಂಡು ಮತ್ತಷ್ಟು ಸಮಸ್ಯೆಗೆ ಕಾರಣವಾಗುತ್ತಿದ್ದು, ಲೋಕೋಪಯೋಗಿ ಇಲಾಖೆ ಪರಿಹರಿಸುವ ಗೋಜಿಗೆ ಹೋಗುವುದಿಲ್ಲ, ಕಾರಡ್ಕ ಗ್ರಾ.ಪಂ.ನಿಂದ ಪ್ರತೀವರ್ಷ ಸಣ್ಣ ಮೊತ್ತ ಇರಿಸಿ ಚರಂಡಿ ಶುಚಿಗೊಳಿಸುವ ಕಾಮಗಾರಿ ನಡೆಸುತ್ತಿದ್ದರೂ ಪ್ರಯೋಜನವಾಗುತ್ತಿಲ್ಲ, ಈ ನಿಟ್ಟಿನಲ್ಲಿ ಲೋಕೋಪಯೋಗಿ ಇಲಾಖೆಯೇ ಅಗತ್ಯದಷ್ಟು ಅನುದಾನ ಇರಿಸಿ ಸಮರ್ಪಕ ವ್ಯವಸ್ಥೆ ಕೈಗೊಳ್ಳಬೇಕು.

ಸಾರ್ವಜನಿಕರಿಂದ ಪ್ರತಿಭಟನೆಯ ಎಚ್ಚರಿಕೆ

ತುಂಬಾ ದೂರದಿಂದಲೂ ಮಳೆನೀರು ಸಹಿತ ವಿವಿಧ ತ್ಯಾಜ್ಯಗಳು ಹಾಗೂ ಕಸಕಡ್ಡಿಗಳು ಇದೇ ಚರಂಡಿಯಲ್ಲಿ ಹರಿದು ಮುಳ್ಳೇರಿಯ ಪೇಟೆಗೆ ತಲುಪುತ್ತವೆ. ಮಳೆಗಾಲ ಸಮೀಪಿಸುತ್ತಿದ್ದರೂ ಚರಂಡಿಯನ್ನು ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳದ ಕಾರಣ ಮೊದಲ ಮಳೆಗೆ ರಸ್ತೆಯು ಕೆಸರುಗುಂಡಿಯಾಗಿದೆ. ಲೋಕೋಪಯೋಗಿ ಇಲಾಖೆಯು ಈ ನಿಟ್ಟಿನಲ್ಲಿ ಶಾಶ್ವತವಾದ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟದ ರೂಪುರೇಷೆ ಸಿದ್ಧಪಡಿಸಬೇಕಾದೀತು ಎಂದು ಸಾರ್ವಜನಿಕರು ಹಾಗೂ ವ್ಯಾಪಾರಿಗಳು ಎಚ್ಚರಿಸಿದ್ದಾರೆ.

ಸುತ್ತಮುತ್ತ

ಮರು ಮೌಲ್ಯಮಾಪನ: 60 ವಿದ್ಯಾರ್ಥಿಗಳಿಗೆ 600ಕ್ಕೂ ಅಧಿಕ ಅಂಕ





ಕುಂದಾಪುರ: 2026 ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ-1ರ ಮರು ಮೌಲ್ಯಮಾಪನದಿಂದಾಗಿ 600ಕ್ಕಿಂತ ಅಧಿಕ ಅಂಕ ಗಳಿಸಿದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು. ಈ ಸಾಲಿನಲ್ಲಿ ಒಟ್ಟು 261 ವಿದ್ಯಾರ್ಥಿಗಳಲ್ಲಿ 60 ವಿದ್ಯಾರ್ಥಿಗಳು 600 ಕ್ಕಿಂತ ಅಧಿಕ ಅಂಕಗಳಿಸಿದ್ದಾರೆ. ಪ್ರಾರ್ಥನಾ ಜಿ. – 624, ಆಶ್ವಿನ್ ಎಸ್. ಶೆಟ್ಟಿ –615, ಬಿ. ದಿನೇಶ್ ಶೆಣೈ – 614, ಸಂಜನಾ ಎಸ್ ಪೂಜಾರಿ –610, ಪವನ್ ಶೆಣೈ– 610, ಅರ್ಪಿತಾ ವಿ.ಹೊನ್ನನ್ –609, ಮೇಧಾ ಆರ್.ಜೆ. – 607, ಕೃಪಾ ಎಂ. ಪುತ್ರನ್ –607, ಇಂಚರಾ ಎ. ಭಂಡಾರಿ – 607, ಸಿಂಚನಾ ಕಾಮತ್ –603, ಸಂಚಿತಾ ಸೋಮಯಾಜಿ – 602, ಪ್ರಜ್ಞಾ ಡಿ.ಕೆ – 602, ಮೀತ್ ಖಾರ್ವಿ –601 ಅಂಕಗಳನ್ನು ಪಡೆದಿದ್ದಾರೆ.

ಪೂರ್ಣಪ್ರಜ್ಞ ಕಾಲೇಜು ಉಡುಪಿ ಬೃಹತ್ ಉದ್ಯೋಗ ಮೇಳ

ಉಡುಪಿ: ಪೂರ್ಣಪ್ರಜ್ಞ (ಸ್ವಾಯತ್ತ)ಕಾಲೇಜು, ಉಡುಪಿ ಇಲ್ಲಿ ಮೇ 20ರಂದು ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ. ಐಬಿಎಂ, ಎಕ್ಸೆಂಚರ್, ಅಮೆಜಾನ್, ವಿನ್ ಮನ್, ಮಣಿಪಾಲ್ ಟೆಕ್ನಾಲಜಿಸ್, ವಿನಸ್, ಯರ್‍ಝುಕಿ, ಫೋಡ್ ಮಾರ್ಕ್ ದಿಯಾ ಸಿಸ್ಟಮ್ಸ್, ಯರ್‍ಝುಕಿ, ಎಚ್‌ಡಿಎಫ್‌ಸಿ, ಎಕ್ಸಿಸ್ ಬ್ಯಾಂಕ್, ರೈನೆಕ್ಸ್ ಟೆಕ್ನಾಲಜೀಸ್, ಗ್ರೋ ಸ್ಕ್ವೆಯರ್, ಕೋಜೆಂಟ್ ಮುಂತಾದ 25ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿದ್ದು, ಪ್ರಸ್ತುತ ಅಂತಿಮ ಪದವಿ ವಿದ್ಯಾರ್ಥಿಗಳನ್ನು ಒಳಗೊಂಡು, ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ, ಡಿಪ್ಲೋಮಾ ಪದವೀಧರರಿಗೆ ವಿವಿಧ ಹುದ್ದೆಗಳಿಗೆ ಹುದ್ದೆಗಳಿಗೆ ಉದ್ಯೋಗದ ಆಯ್ಕೆಗೆ ಅವಕಾಶ ಇದೆ. ಸ್ಥಳದಲ್ಲಿಯೇ ನೋಂದಣಿ ಲಭ್ಯವಿದ್ದು, ಎಲ್ಲಾ ಅಭ್ಯರ್ಥಿಗಳಿಗೂ ಮುಕ್ತ ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ವಿದ್ಯುತ್ ವ್ಯತ್ಯಯ

ಉಡುಪಿ: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸಿದ್ದಾಪುರ, ಜನ್ನಾಲೆ, ಆಜ್ರಿ, ಹೆನ್ನಾಬೈಲು, ಕೊಳ್ಕೆಬೈಲು ಮತ್ತು ಐರ್‌ಬೈಲು ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 19ರಂದು ಬೆಳಿಗ್ಗೆ 9.30ರಿಂದ ಸಂಜೆ 05.30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಅಡಕತ್ತರಿಗೆ ಕೃಷಿಕ!

ಇತ್ತೀಚೆಗೆ ನಡೆದ ಚುನಾವಣೆಗಳ ಅವಧಿಯಲ್ಲಿ ಇಂಡೋನೇಷ್ಯಾ, ಬರ್ಮಾ ಮೊದಲಾದ ದೇಶಗಳಿಂದ ಅಡಿಕೆ ಆಮದು ಹೆಚ್ಚಾಗಿದೆ. ಈ ಅಡಿಕೆ ಇಲ್ಲಿನ ಅಡಿಕೆಗಿಂತ ಕಡಿಮೆ ದರದಲ್ಲಿ ಸಿಗುತ್ತಿದೆ. ಉತ್ತರ ಭಾರತದಲ್ಲಿ ಅಡಿಕೆ ಖರೀದಿಗೆ ಗುಣಮಟಕ್ಕಿಂತ ದರಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತಿದೆ. ಜತೆಗೆ ಕಳ್ಳ ಮಾರ್ಗಗಳಲ್ಲಿ ಭಾರತಕ್ಕೆ ಇತರ ದೇಶಗಳಿಂದ ಅಡಿಕೆ ಬರುತ್ತಿದೆ. ಬಲವಿಲ್ಲದ ಅಡಿಕೆ ಮಾರುಕಟ್ಟೆ ನೀತಿ ಸಾಕಷ್ಟು ಹೊಡೆತ ನೀಡುತ್ತಿದೆ.

ಕೊಡವೂರು ಮಹಾರುದ್ರಯಾಗದಲ್ಲಿ ಬೃಹತ್ ಉದ್ಯೋಗ ಮೇಳ | ಡಾ.ಎಚ್.ಎಸ್.ಬಲ್ಲಾಳ್ ಅಭಿಪ್ರಾಯ

ಧಾರ್ಮಿಕ ಕಾರ್ಯ ಜೊತೆ ಉದ್ಯೋಗ ಮೇಳ ಶ್ಲಾಘನೀಯ

ಉಡುಪಿ: ದೇವಸ್ಥಾನದ ಧಾರ್ಮಿಕ ಕಾರ್ಯಕ್ರಮಗಳ ಜೊತೆಯಲ್ಲೇ ಯುವಜನತೆಯ ಭವಿಷ್ಯಕ್ಕೆ ಆಸರೆಯಾಗುವ ನಿಟ್ಟಿನಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯ ಎಂದು ಮಣಿಪಾಲ ಮಾಹೆಯ ಪ್ರೊ ಚಾನ್ಸಲರ್ ಡಾ. ಎಚ್.ಎಸ್. ಬಲ್ಲಾಳ್ ಶ್ಲಾಘಿಸಿದರು.

ಕೊಡವೂರು ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಪ್ರಸಾದ್‌ರಾಜ್ ಕಾಂಚನ್ ನೇತೃತ್ವದಲ್ಲಿ ನಡೆಯುತ್ತಿರುವ ಮಹಾರುದ್ರಯಾಗದ ಪ್ರಯುಕ್ತ ಕೊಡವೂರು ವಿಪ್ರಶ್ರೀ ಸಭಾಭವನದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 40 ರಷ್ಟು ಯುವಜನತೆಯೇ ಇದ್ದು ಇವರೇ ನಮ್ಮ ದೇಶದ ನಿಜವಾದ ಆಸ್ತಿಯಾಗಿದ್ದಾರೆ. ಇವರಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಸೂಕ್ತ ಉದ್ಯೋಗಾವಕಾಶ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.



ಸಮಾಜದ ಮುಖ್ಯವಾಹಿನಿಯಿಂದ ದೂರವಿರುವ ಗ್ರಾಮೀಣ ಭಾಗದ ಜನರನ್ನು ಮತ್ತು ಹೆಣ್ಣುಮಕ್ಕಳನ್ನು ಶಿಕ್ಷಣದ ಮೂಲಕ ಸಬಲೀಕರಿಸಿದಾಗ ಮಾತ್ರ ದೇಶದ ನೈಜ ಅಭಿವೃದ್ಧಿ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಪ್ರತಿಭೆಗಳು ವಲಸೆ ಹೋಗುವುದು ತಪ್ಪಲಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾರುದ್ರಯಾಗ ಸಮಿತಿಯ ಕಾರ್ಯಾಧ್ಯಕ್ಷ ಪ್ರಸಾದ್ ರಾಜ್ ಕಾಂಚನ್ ಮಾತನಾಡಿ, ಉಡುಪಿ ಜಿಲ್ಲೆಯು ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದರೂ, ಇಲ್ಲಿನ ಯುವಜನತೆ ಸರಿಯಾದ ಕೆಲಸ ಸಿಗದೆ ಹೊರರಾಜ್ಯ ಹಾಗೂ ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ನಮ್ಮ ಭಾಗದ ಪ್ರತಿಭೆಗಳಿಗೆ ಸ್ಥಳೀಯವಾಗಿಯೇ ಉದ್ಯೋಗ ದೊರೆತರೆ ಜಿಲ್ಲೆಯು ಆರ್ಥಿಕವಾಗಿ ಮತ್ತಷ್ಟು ಪ್ರಗತಿ ಕಾಣುತ್ತದೆ. ಈ ನಿಟ್ಟಿನಲ್ಲಿ ಯುವಕರಿಗೆ ಆಸರೆಯಾಗಲು ಈ ಮೇಳ ಹಮ್ಮಿಕೊಳ್ಳಲಾಗಿದೆ ಎಂದರು.

ಕರಾವಳಿಯಲ್ಲಿ ಪ್ರವಾಸೋದ್ಯಮ ಕ್ಷೇತ್ರವು ವೇಗವಾಗಿ ಬೆಳೆಯುತ್ತಿದ್ದು, ಸ್ಥಳೀಯ ಯುವಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಎಚ್‌ಪಿಆರ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಅಧ್ಯಕ್ಷ ಹರಿಪ್ರಸಾದ್ ರೈ, ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪ್ರಕಾಶ್ ಕೊಡವೂರು ಹಾಗೂ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು ಉಪಸ್ಥಿತರಿದ್ದರು. ಪ್ರಿಯಾ ಕಾರ್ಯಕ್ರಮ ನಿರೂಪಿಸಿದರು.

70ಕ್ಕೂ ಹೆಚ್ಚು ಕಂಪನಿಗಳು ಭಾಗಿ

ಶ್ರೀನಿವಾಸ್ ಯೂನಿವರ್ಸಿಟಿಯ ಇಂಟರ್‌ನ್ಯಾಷನಲ್ ಕೊಲಾಬರೇಷನ್ಸ್ ನಿರ್ದೇಶಕಿ ಡಾ. ದಿವ್ಯಾರಾಣಿ ಪ್ರದೀಪ್ ಪ್ರಾಸ್ತಾವಿಕವಾಗಿ ಮಾತನಾಡಿ, ಗ್ರಾಮೀಣ ಭಾಗದ ಪ್ರತಿಭಾನ್ವಿತ ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸುವ ಪ್ರಸಾದ್‌ರಾಜ್ ಕಾಂಚನ್ ಅವರ ಕನಸಿನ ಯೋಜನೆ ಇದಾಗಿದೆ. ಈ ಮೇಳದಲ್ಲಿ ದೇಶದ ಪ್ರಖ್ಯಾತ 70ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದು, ಸುಮಾರು 7,000ಕ್ಕೂ ಅಧಿಕ ಉದ್ಯೋಗಾವಕಾಶಗಳನ್ನು ಉದ್ಯೋಗಾಕಾಂಕ್ಷಿಗಳಿಗೆ ಮುಕ್ತವಾಗಿರಿಸಿವೆ ಎಂದು ಮಾಹಿತಿ ನೀಡಿದರು.

- ದೇಶದ ಒಟ್ಟು ಜನಸಂಖ್ಯೆಯ ಶೇ. 40 ಯುವಜನತೆ ದೇಶದ ನಿಜವಾದ ಆಸ್ತಿ
- ಗುಣಮಟ್ಟದ ಶಿಕ್ಷಣದ ಜೊತೆಗೆ ಸೂಕ್ತ ಉದ್ಯೋಗಾವಕಾಶ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ

ಸಹಕಾರ ಭಾವ ಜೊತೆ ದೇವರ ಸೇವೆ ನಡೆಯಲಿ: ಪರ್ತಗಾಳಿ ಶ್ರೀ

ಕುಂದಾಪುರ: ಮನುಷ್ಯ ಜನ್ಮ ಕೊಟ್ಟ ನಂತರ ಅದರ ಲಾಲನೆ, ಪಾಲನೆ, ರಕ್ಷಣೆ ಮಾಡುವ ಶಕ್ತಿ ದೇವರ ಹತ್ತಿರ ಇದೆ. ಸತ್ಕರ್ಮ ಮಾಡುವ ಕಡೆ ದೇವರ ದಯೆ ಇರುತ್ತದೆ. ಪ್ರತಿಯೊಬ್ಬರ ಬಾಯಲ್ಲಿ ದೇವರ ನಾಮಸ್ಮರಣೆ, ನಾಮೋಚ್ಚಾರಣೆ ನಡೆಯಬೇಕು. ಪ್ರತಿಯೊಬ್ಬರಲ್ಲೂ ಸಹಕಾರ ಮನೋಭಾವ ಬೆಳೆದು ದೇವರ ಸೇವೆ ನಡೆಯಬೇಕು. ಇದರಿಂದ ದೇವರ ಅನುಗ್ರಹ ನಮಗೆ ಪ್ರಾಪ್ತಿಯಾಗಬೇಕು ಎಂದು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಹೇಳಿದರು.

ಮುಂದಿನ ಮೊಕ್ಕಾಂಗೆ ಪ್ರಯಾಣ ಬೆಳೆಸುವ ಮುನ್ನ ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸೋಮವಾರ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಹರಿನಾಮ ಸಂಕೀರ್ತನೆ, ದೇವರ ನಾಮಸ್ಮರಣೆ ಮಾಡಿದಷ್ಟು ಪುಣ್ಯ ಪ್ರಾಪ್ತಿಯಾಗುತ್ತದೆ. ದೇವರಿಗೆ ಸಂಬಂಧಪಟ್ಟ ಯಾವುದೇ ಕಾರ್ಯ ಮಾಡಿದರೂ ಅದು ವ್ಯರ್ಥವಾಗುವುದಿಲ್ಲ, ಮಾಡಿದ ಎಲ್ಲಾ ಕಾರ್ಯಗಳಿಗೆ ದೇವರು ಫಲ ನೀಡುತ್ತಾನೆ. ಅಧಿಕ ಮಾಸದಲ್ಲಿ ಸಣ್ಣ ದೇವರ ಕೆಲಸ ಮಾಡಿದರೂ ಅಕ್ಷಯ ಫಲ ಪ್ರಾಪ್ತಿಯಾಗುತ್ತದೆ. ಸತ್ಕರ್ಮ ಮಾಡಿದರೆ, ದೇವರ ನಾಮಸ್ಮರಣೆ ಮಾಡಿದರೆ, ದೇವರನ್ನು ಸಂಪ್ರೀತಿಗೊಳಿಸುವ ಕಾರ್ಯ ಮಾಡಿದರೆ ನಮಗೆ ಜೀವನದಲ್ಲಿ ಯಾವುದೇ ರೀತಿಯಲ್ಲಿ ಕಡಿಮೆಯಾಗುದಿಲ್ಲ ಎಂದು ಅವರು ಆಶೀರ್ವದಿಸಿದರು.



ದೇವಸ್ಥಾನದ ಆಡಳಿತ ಮೊಕ್ತೇಸರ ಎನ್. ಸದಾಶಿವ ನಾಯಕ್ ಮತ್ತು ಜಿ.ವೆಂಕಟೇಶ ನಾಯಕ್ ಶ್ರೀಗಳ ಪಾದಪೂಜೆ ನೆರವೇರಿಸಿದರು. ದೇವಸ್ಥಾನದ ಪ್ರಧಾನ ಅರ್ಚಕ ಎಸ್.ವೆಂಕಟರಮಣ ಆಚಾರ್ಯ, ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು, ಪುರೋಹಿತರು, ಊರಿನ ಹತ್ತು ಸಮಸ್ತರು, ಸಮಾಜ ಬಾಂಧವರು ಮೊದಲಾದವರು ಉಪಸ್ಥಿತರಿದ್ದರು.

ಪಂಚಶಕ್ತಿ ಸಂಘದ ವಾರ್ಷಿಕೋತ್ಸವ, ಶಂಕರ ಜಯಂತಿ ಪ್ರಯುಕ್ತ ಉಪನ್ಯಾಸ



ಕೋಟ: ಶಂಕರಾಚಾರ್ಯರ ಜೀವನ ಯಶೋಗಾಥೆ ಇಂದಿನ ಜನಾಂಗಕ್ಕೆ ಮಾದರಿ ಬದುಕಿಗೆ ಪ್ರೇರಕ ಶಕ್ತಿ. ಆ ಮಹಾನ್ ಚೇತನ ಸನಾತನ ಹಿಂದು ಧರ್ಮದ ಪ್ರತಿಬಿಂಬ ಎಂದು ಉಪನ್ಯಾಸಕಿ ಸವಿತಾ ಎರ್ಮಾಳ್ ಹೇಳಿದರು.

ಕೋಡಿ ತಲೆ ಹೊಸಬೇಂಗ್ರೆ ಇಲ್ಲಿನ ಪಂಚಶಕ್ತಿ ಸಂಘ ಇದರ 24ನೇ ವಾರ್ಷಿಕೋತ್ಸವದ ಪ್ರಯುಕ್ತ ಹಮ್ಮಿಕೊಂಡ ಶಂಕರ ಜಯಂತಿ ಮಹೋತ್ಸವದ ಅಂಗವಾಗಿ ಅವರು ಉಪನ್ಯಾಸ ನೀಡಿದರು. ಭಾರತೀಯ ಸನಾತನ ಧರ್ಮಕ್ಕೆ ಶಂಕರಾಚಾರ್ಯರ ಕೊಡುಗೆ ಅಪಾರ ಅಂತಹ ದೈವಿ ಸ್ವರೂಪಿ ಜಯಂತೋತ್ಸವ ಅರ್ಥಪೂರ್ಣವಾಗಿಸಲು ಅವರ ಜೀವನದ ತಳಹದಿಯನ್ನು ನಾವುಗಳು ಅಳವಡಿಸಿಕೊಳ್ಳಬೇಕು ಎಂದರು.

ಸಭೆಯಲ್ಲಿ ಶೈಕ್ಷಣಿಕ ಸಾಧಕಿ ಸಾನ್ವಿ ನಾಗರಾಜ್ ಖಾರ್ವಿ ಪರವಾಗಿ ಪೋಷಕರಾದ ರೇವತಿ ಖಾರ್ವಿ ಸನ್ಮಾನ ಸ್ವೀಕರಿಸಿದರು. ಕ್ರೀಡೆ ಇನ್ನಿತರ ಆಟೋಟ ಚಟುವಟಿಕೆಗಳಲ್ಲಿ ಜಯಶಾಲಿಗಳಾದ ತಂಡ, ಪ್ರಮುಖರಿಗೆ ಬಹುಮಾನ ನೀಡಲಾಯಿತು. ಅಧ್ಯಕ್ಷತೆಯನ್ನು ಪತ್ರಕರ್ತ ರವೀಂದ್ರ ಕೋಟ ವಹಿಸಿದ್ದರು. ಸ್ಥಳೀಯರಾದ ಶಂಕರಖಾರ್ವಿ ಶಂಕರ ಜಯಂತಿ ಪೂಜಾ ಕಾರ್ಯ ನೆರವೇರಿಸಿದರು. ಮುಖ್ಯ ಅಭ್ಯಾಗತರಾಗಿ ಶ್ರೀಂಗೇರಿ ಶಾರದ ಪೀಠದ ದ.ಕ ಮತ್ತು ಉಡುಪಿ ಜಿಲ್ಲೆಯ ಪಾದಪೂಜಾ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮಾಧವ ಖಾರ್ವಿ,ಕಸಾಪ ಜಿಲ್ಲಾಧ್ಯಕ್ಷ ನಿಲಾವರ ಸುರೇಂದ್ರ ಅಡಿಗ, ಪಂಚಶಕ್ತಿ ಸಂಘದ ಅಧ್ಯಕ್ಷ ಪವೀಣ್ ಡಿ ಖಾರ್ವಿ, ಕೋಡಿ ತಲೆ ಶಾಲೆ ಮುಖ್ಯ ಶಿಕ್ಷಕಿ ನಾಗರತ್ನ ಇದ್ದರು. ಪಂಚಶಕ್ತಿ ಸಂಘದ ಗೌರವಾಧ್ಯಕ್ಷ ಮಡಿ ವಿಶ್ವನಾಥ ಖಾರ್ವಿ ನಿರೂಪಿಸಿದರು. ಶಿಕ್ಷಕಿ ಸುಪ್ರಿತಾ ಖಾರ್ವಿ ವಂದಿಸಿದರು.

ಎಂಜಿಎಂ ಸಂಧ್ಯಾ ಕಾಲೇಜು ವಿದ್ಯಾರ್ಥಿ ಕ್ಷೇಮಪಾಲನಾ ಮಂಡಳಿ ದಿನಾಚರಣೆ



ಉಡುಪಿ: ಉಡುಪಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಸಂಧ್ಯಾ ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾ ಮಂಡಳಿ ದಿನಾಚರಣೆ ಎಂಜಿಎಂ ಕ್ಯಾಂಪಸ್ ನೂತನ ರವೀಂದ್ರ ಮಂಟಪದಲ್ಲಿ ನಡೆಯಿತು.

ಮುಖ್ಯ ಅತಿಥಿಗಳ ಪರಿಚಯವನ್ನು ಸೂರಜ್ ತೃತೀಯ ಬಿಸಿಎ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಖ್ಯಾತ ನೃತ್ಯ ನಿರ್ದೇಶಕ, ನಟ ಹಾಗೂ ನಿರ್ದೇಶಕರಾದ ಎಲ್ವಿನ್ ಜೆಫ್ ಮತ್ತು ತುಳು–ಕನ್ನಡ ನಟಿ ಅನ್ವಿತಾ ಸಾಗರ್ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು.

ಸಾಂಸ್ಕೃತಿಕ ಹಾಗೂ ವಿದ್ಯಾರ್ಥಿ ಕಲ್ಯಾಣ ಮಂಡಳಿ ಕಾರ್ಯಕ್ರಮಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸಾಂಸ್ಕೃತಿಕ ಕಾರ್ಯದರ್ಶಿ ಪ್ರಜ್ಞಾ ಆಚಾರ್ಯ ಬಹುಮಾನ ವಿತರಣಾ ಕಾರ್ಯಕ್ರಮ ನಡೆಸಿಕೊಟ್ಟರು. ಎಂಜಿಎಂ ಕಾಲೇಜಿನ ಪ್ರಾಂಶುಪಾಲೆ ಡಾ. ಗಾಯತ್ರಿ ಪೈ, ಪೋಷಕರ–ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಎನ್. ನಾಯಕ್, ಕಾರ್ಯದರ್ಶಿ ಭಾರತಿ ಜಯಕರ್, ಎಂಜಿಎಂ ಸಂಧ್ಯಾ ಕಾಲೇಜಿನ ಪ್ರಾಂಶುಪಾಲ ಡಾ. ದೇವಿದಾಸ್ ಎಸ್. ನಾಯಕ್, ಬಿಬಿಎ, ಬಿಕಾಂ ಸಂಯೋಜಕರಾದ ಡಾ. ಮಲ್ಲಿಕಾ ಎ. ಶೆಟ್ಟಿ ಇದ್ದರು. ಡಾ. ಶ್ರೀಧರ್ ಆರ್ ಪೈ, ಎಒ ಅಕಾಡಮಿ ಆಫ್ ಜನರಲ್ ಎಜುಕೇಶನ್ ಮಣಿಪಾಲ್ ಅಧ್ಯಕ್ಷೀಯ ಮಾತುಗಳನ್ನಾಡಿದರು. ವಿದ್ಯಾರ್ಥಿ ಕಲ್ಯಾಣ ಮಂಡಳಿಯ ಜಂಟಿ ಕಾರ್ಯದರ್ಶಿ ಅನನ್ಯಾ ಜಿ. ಹೆಗ್ಡೆ ವಂದಿಸಿದರು.ಮಧುರಾ ಹೆಬ್ಬಾರ್ ನಿರೂಪಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾ ಮಂಡಳಿಯ ಅಧ್ಯಕ್ಷ ಧೀರಜ್ ಪ್ರವೀಣ್ ಕುಮಾರ್ ಸ್ವಾಗತ ಭಾಷಣ ಮಾಡಿದರು. ಬಳಿಕ ವಿದ್ಯಾರ್ಥಿ ಕ್ಷೇಮಪಾಲನಾ ಮಂಡಳಿಯ ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿ ಕರೇನ್ ಲಿಸಾ ಆರೋನ್ ಮಂಡಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾ ಮಂಡಳಿ ಡಾ. ಎಂ. ವಿಶ್ವನಾಥ್ ಪೈ ವಿದ್ಯಾರ್ಥಿಗಳ ಚಟುವಟಿಕೆಗಳ ಕುರಿತು ಮಾತನಾಡಿದರು.

21 ವರ್ಷಗಳ ಬಳಿಕ ವಿದ್ಯಾರ್ಥಿಗಳ ಪುನರ್ಮಿಲನ: ಸವಿ ನೆನಪುಗಳ ಮೆಲುಕು



ಬೈಂದೂರು: 21 ವರ್ಷಗಳ ಬಳಿಕ ಪ್ರಪ್ರಥಮ ಬಾರಿಗೆ ಈ ವಿದ್ಯಾಲಯದಲ್ಲಿ ಹಳೆಯ ವಿದ್ಯಾರ್ಥಿಗಳು ಒಂದಾಗಿ ಕಾಲೇಜಿನೊಂದಿಗೆ ಬಾಂಧವ್ಯ ಉಳಿಸಿ ಕೊಂಡಿರುವುದು ಶ್ಲಾಘನೀಯ. ವಿದ್ಯಾರ್ಥಿ ಜೀವನದ ನೆನಪುಗಳನ್ನು ಮತ್ತೆ ಮೆಲುಕು ಹಾಕಲು ಈ ವೇದಿಕೆ ಅವಕಾಶ ಕಲ್ಪಿಸಿದೆ. ಸಮಾಜಕ್ಕೆ ಮಾದರಿಯಾಗುವಂತಹ ಕಾರ್ಯಕ್ರಮ ಇದಾಗಿದ್ದು, ಮುಂದೆಯೂ ಕೂಡ ಇಂತಹ ಕಾರ್ಯಕ್ರಮಗಳು ನಡೆಯಲಿ ಎಂದು ಶಿಕ್ಷಕ ರಾಜೇಂದ್ರ ನಾಯಕ್ ಹೇಳಿದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2004–2005 ಸಾಲಿನ ಹಳೆ ವಿದ್ಯಾರ್ಥಿಗಳ ಸವಿನೆನಪು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರಾಂಶುಪಾಲ ನಾಗರಾಜ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಹಳೆ ವಿದ್ಯಾರ್ಥಿ ಕಾಲ್ತೋಡು ಪ್ರಕಾಶ್ಚಂದ್ರ ಶೆಟ್ಟಿ ನೇತೃತ್ವದಲ್ಲಿ ಶಿಕ್ಷಣ ನೀಡಿದ ಗುರುಗಳಿಗೆ ಗೌರವಪೂರ್ವಕವಾಗಿ ಗುರುವಂದನೆ ಸಮರ್ಪಿಸಿದರು. ಶಿಕ್ಷಕರ ಸೇವೆಯನ್ನು ಸ್ಮರಿಸಿ ಕಾರ್ಯಕ್ರಮ ಯಶಸ್ವಿಗೆ ಸಹಕರಿಸಿದ ಎಲ್ಲಾ ಸ್ನೇಹಿತರು ಹಾಗೂ ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಸಿದರು. ಹಳೆ ವಿದ್ಯಾರ್ಥಿಗಳಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಮನರಂಜನಾ ಚಟುವಟಿಕೆಗಳನ್ನು ಆಯೋಜಿಸಲಾಯಿತು. ಎಲ್ಲರೂ ಉತ್ಸಾಹದಿಂದ ಭಾಗವಹಿಸಿ ಹಳೆಯ ನೆನಪುಗಳನ್ನು ಮೆಲುಕು ಹಾಕಿದರು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು ಶಿಕ್ಷಕರಾದ ರಾಮರಾಯರು, ದಾಮೋದರ್, ಉದಯಕುಮಾರ್ ಶೆಟ್ಟಿ, ಉಪನ್ಯಾಸಕರಾದ ಮಣಿಕಂಠ ದೇವಾಡಿಗ, ಸಿಡಿಎಂಸಿ ಉಪಾಧ್ಯಕ್ಷ ಮುತ್ತಯ್ಯ ಪೂಜಾರಿ ಇದ್ದರು. ರಾಘವೇಂದ್ರ ಗೋಳಿಹೊಳೆ ಸ್ವಾಗತಿಸಿದರು. ಉಪನ್ಯಾಸಕ ಉದಯ ನಾಯಕ್ ನಿರೂಪಿಸಿದರು.

ಬ್ರಹ್ಮಾವರದಲ್ಲಿ ಬಾಲ ಲೀಲಾ ಚಿಣ್ಣರ ಬೇಸಿಗೆ ಶಿಬಿರದ ಉದ್ಘಾಟನೆ



ಬ್ರಹ್ಮಾವರ: ಭಾವನಾ ಫೌಂಡೇಶನ್ ಹಾವಂಜೆ ಹಾಗೂ ಭಾಸ ಗ್ಯಾಲರಿ ಮತ್ತು ಸ್ಟುಡಿಯೋ ಗ್ರಾಮೀಣ ಭಾಗದಲ್ಲಿ ಸಂಯೋಜಿಸುತ್ತಿರುವ ಬಾಲ ಲೀಲಾ ಚಿಣ್ಣರ ಬೇಸಿಗೆ ಶಿಬಿರವು ಶ್ರೀ ಮಹಾಲಿಂಗೇಶ್ವರ ದೇವಳದ ವಠಾರದಲ್ಲಿ ಮೂಡಂಬೈಲು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಪಕ್ಷಿತಜ್ಞ ಅರವಿಂದ ಕುಡ್ಲ ಅವರಿಂದ ಉದ್ಘಾಟನೆಗೊಂಡಿತು.

ಈ ತೆರನಾದ ಬೇಸಿಗೆ ಶಿಬಿರವು ಬಹು ಮಹತ್ವಪೂರ್ಣವಾದುದು ಮತ್ತು ಇಂದಿನ ಆಧುನಿಕ ಜೀವನದ ನಡುವೆ ಸಾಂಪ್ರದಾಯಿಕ ಮೌಲ್ಯಗಳನ್ನು ಎತ್ತಿ ಹಿಡಿಯುವುದರೊಂದಿಗೆ ಮಕ್ಕಳಲ್ಲಿ ಸಂವಹನದ ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ಇಲ್ಲಿ ಕಲೆ, ಅಭಿನಯ, ಸಂಗೀತ ಎಲ್ಲವನ್ನೂ ಸಮೀಕರಿಸುವ ಪ್ರಯತ್ನ ನಿಜಕ್ಕೂ ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ಎಂಐಟಿ ಆರ್ಕಿಟೆಕ್ಚರ್ ವಿಭಾಗದ ಉಪನ್ಯಾಸಕ ಗಣೇಶ್ ಉರಾಳ, ಭಾವನಾ ಫೌಂಡೇಶನ್‌ನ ಸ್ಥಾಪಕಾಧ್ಯಕ್ಷ ಯಕ್ಷಗುರು ಹಾವಂಜೆ ಮಂಜುನಾಥ್ ರಾವ್ ಹಾಗೂ ಶಿಬಿರ ಸಂಯೋಜಕರಾದ ಡಾ. ಜನಾರ್ದನ ಹಾವಂಜೆ, ವಿಶುರಾವ್ ಹಾವಂಜೆ ಹಾಗೂ ವಿದುಷಿ ಅಕ್ಷತಾ ವಿಶು ರಾವ್ ಉಪಸ್ಥಿತರಿದ್ದರು.

ಕಾವಿ ಕಲೆ, ಪಕಿ ವೀಕ್ಷಣೆ

ಅಭಿನಯ, ಆವೆಮಣ್ಣಿನ ಶಿಲ್ಪಗಳು, ಕಾವಿ ಕಲೆ, ಪಕ್ಷಿ ವೀಕ್ಷಣೆ, ಮನೆಮದ್ದು, ಗ್ರಾಮೀಣ ಆಟಗಳು, ಸಂಗೀತ, ಬಟ್ಟೆಯ ಮೇಲೆ ಮುದ್ರಣ ಕಲೆ ಮುಂತಾಗಿ ಹತ್ತು ಹಲವಾರು ಅಂಶಗಳನ್ನು ಶಿಬಿರದಲ್ಲಿ ಕಲಿಸಿ ಕೊಡಲಾಗುತ್ತಿದೆ.

ಭಂಡಾರ್ಕಾರ್ಸ್ ಕಾಲೇಜಿನಲ್ಲಿ ವಾರ್ಷಿಕ ಬಹುಮಾನ ವಿತರಣೆ

ಕುಂದಾಪುರ: ಯಶಸ್ಸು ಎನ್ನುವುದು ಶಿಸ್ತು, ಶ್ರದ್ಧೆ ಮತ್ತು ಸತತ ಪ್ರಯತ್ನದಿಂದ ಬರುತ್ತದೆ ಎಂದು ಕುಂದಾಪುರದ ವೆಂಕಟರಮಣ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಂದೀಪ್ ಗಾಣಿಗ ಅಭಿಪ್ರಾಯಪಟ್ಟರು.

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಸೋಮವಾರ ಜರಗಿದ ವಾರ್ಷಿಕ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಜೀವನದ ಸೋಲುಗಳು ಹೊಸ ಪಾಠವನ್ನು ಕೊಡುತ್ತದೆ. ಹೊಸ ಮೈಲಿಗಲ್ಲುಗಳನ್ನು ಸೃಷ್ಟಿಸುತ್ತವೆ. ತುಂಬಾ ಬದಲಾವಣೆಗಳಾಗುತ್ತವೆ. ನೀವು ಇಡುವ ಪ್ರತಿ ಒಳ್ಳೆಯ ಹೆಜ್ಜೆಗಳು ಎಲ್ಲವನ್ನೂ ಕೊಡುತ್ತದೆ. ನಿಮ್ಮ ಬದುಕಿನ ನೆಲೆಗಳನ್ನು ಕಲಿಸಿದ ಸಂಸ್ಥೆಯ ಕುರಿತು ಒಳ್ಳೆಯ ಅಭಿಪ್ರಾಯವನ್ನು ನೀಡಬೇಕು. ಪೋಷಕರನ್ನು ಗೌರವಿಸಬೇಕು ಎಂದರು.



ಭಂಡಾರ್ಕಾರ್ಸ್ ಕಾಲೇಜಿನ ಪ್ರಾಂಶುಪಾಲ ಡಾ.ಶುಭಕರಾಚಾರಿ ಅಧ್ಯಕ್ಷತೆ ವಹಿಸಿದ್ದರು. ಉತ್ತಮ ಅಂಕ ಪಡೆದವರು ಮತ್ತು ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸಲಾಯಿತು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ ಸತ್ಯನಾರಾಯಣ ಸ್ವಾಗತಿಸಿದರು. ಇತಿಹಾಸ ಉಪನ್ಯಾಸಕಿ ಸ್ನೇಹ ನಿರೂಪಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಶಂಕರನಾರಾಯಣ ಆಟೋಟ ಸ್ಪರ್ಧೆಗಳ ಬಹುಮಾನ ವಿಜೇತರ ಪಟ್ಟಿ ವಾಚಿಸಿದರು. ವಾಣಿಜ್ಯ ಉಪನ್ಯಾಸಕಿ ಸುಮಾ ವಿದ್ಯಾರ್ಥಿಗಳ ಪಟ್ಟಿ ವಾಚಿಸಿದರು. ಜೀವಶಾಸ್ತ್ರ ಉಪನ್ಯಾಸಕಿ ವಿದ್ಯಾರಾಣಿ ವಂದಿಸಿದರು.

ಆಜ್ರಿ ಕ್ಯಾಕೋಡಲ್ಲಿ ಕಾಲುಸಂಕಕ್ಕೆ ಭೂಮಿಪೂಜೆ | ಶಾಸಕ ಗಂಟಿಹೊಳೆ ಹೇಳಿಕೆ

ಬೈಂದೂರು ಕ್ಷೇತ್ರದಲ್ಲಿ ಸಿಎಸ್‌ಆರ್ ನಿಧಿ ಸದ್ಬಳಕೆ

ಕುಂದಾಪುರ: ಬೈಂದೂರು ಕ್ಷೇತ್ರ ವ್ಯಾಪ್ತಿಯಲ್ಲಿ ಸಿಎಸ್ ಆರ್ ನಿಧಿಯ ಸದ್ಬಳಕೆ ಕ್ಷೇತ್ರದಲ್ಲಿ ನಡೆಯುತ್ತಿದೆ ಎಂದು ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಹೇಳಿದರು.

ಸಮೃದ್ಧ ಬೈಂದೂರು ಪರಿಕಲ್ಪನೆಯ ಅರುಣಾಚಲಂ ಕಾಲುಸಂಕ ಯೋಜನೆಯಲ್ಲಿ ಬೆಂಗಳೂರಿನ ಸಮ್ಮತ ಫೌಂಡೇಶನ್ ಇವರ ಸಹಕಾರದಿಂದ ಇಂಡಸ್ಟ್ 555 ಟಿಎಂಟಿ ಇವರ ಸಿಎಸ್‌ಆರ್ ನಿಧಿಯಿಂದ ಆಜ್ರಿ ಗ್ರಾ.ಪಂ. ವ್ಯಾಪ್ತಿಯ ಕ್ಯಾಕೋಡು ಎಂಬಲ್ಲಿ ಎಸ್. ಆರ್. ಸತಾನಂತಮ್ ಕಾಲು ಸಂಕದ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈ ಕಾಲು ಸಂಕವನ್ನು ಕೊಡುಗೆಯಾಗಿ ನೀಡಿದ ಇಂಡಸ್ 555 ಟಿಎಂಟಿ ಸಂಸ್ಥೆಯ ಮಾಲಕ ಎಸ್. ಎಸ್. ಶ್ರೀಕಾಂತ್ ಹಾಗೂ ಸಹಕರಿಸಿದ ಸಮ್ಮತ ಫೌಂಡೇಶನ್ ಸ್ಥಾಪಕ ಮುರುಳಿ ಅವರಿಗೆ ಶಾಸಕರು ಧನ್ಯವಾದವನ್ನು ತಿಳಿಸಿದರು. ಪ್ರಮುಖರಾದ ಬಾಲಚಂದ್ರ ಭಟ್ ಹಾಗೂ ಪ್ರವೀಣ್ ಶೆಟ್ಟಿ ಕೊಡ್ಲಾಡಿ ಶುಭ ಹಾರೈಸಿದರು. ಗ್ರಾ.ಪಂ. ಮಾಜಿ ಸದಸ್ಯರಾದ ಅಶೋಕ್ ಕುಲಾಲ್, ಪ್ರದೀಪ್ ಹೆಗ್ಡೆ, ಗೋಪಾಲ್ ಕಾಂಚನ್, ಯಡಮೊಗೆ ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರಾಣೇಶ್ ಯಡಿಯಾಳ್, ವಿದ್ಯಾಧರ್ ಶೆಟ್ಟಿ ಕೊಡ್ಲಾಡಿ ಹಾಗೂ ವಾರ್ಡ್ ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು. ಗ್ರಾಮ ಪಂಚಾಯತ್ ನಿಕಟಪೂರ್ವ ಸದಸ್ಯ ವೇಣುಗೋಪಾಲ್ ಶೆಟ್ಟಿ ಆಜ್ರಿ ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿದರು.



ಯಕ್ಷಗಾನ ತರಬೇತಿ ಕೇಂದ್ರದ ವಾರ್ಷಿಕೋತ್ಸವ | ಸಂಸದ ಕೋಟ ಅಭಿಪ್ರಾಯ

ಯಕ್ಷ ಕಲೆಯ ಬೋಧನೆ ಯುವ ಜನತೆಗೆ ಅಗತ್ಯ

ಕೋಟ: ಇಲ್ಲಿನ ಡಾ.ಕಾರಂತ ಥೀಂ ಪಾರ್ಕ್‌ನಲ್ಲಿ ಯಕ್ಷಾಂತರಂಗ ವ್ಯವಸಾಯೀ ಯಕ್ಷ ತಂಡ ಕೋಟ ನೇತೃತ್ವದಲ್ಲಿ ಉಚಿತ ಯಕ್ಷಗಾನ ತರಬೇತಿ ಕೇಂದ್ರದ 2025–26ನೇ ಸಾಲಿನಲ್ಲಿ ತರಬೇತಿ ಪಡೆದ ವಿದ್ಯಾಥಿಗಳ ವಾರ್ಷಿಕೋತ್ಸವ ಜರಗಿತು.

ಕಾರ್ಯಕ್ರಮವನ್ನು ಸಂಸದ ಕೋಟ ಶ್ರೀನಿವಾಸ ಪೂಜಾರಿ ಉದ್ಘಾಟಿಸಿದರು. ಈ ವೇಳೆ ಮಾತನಾಡಿ, ಯಕ್ಷಗಾನದಂಥಾ ಶ್ರೇಷ್ಠ ಕಲೆಯ ಪರಿಚಯ ಮಾಹಿತಿಗಳನ್ನು ಇಂದಿನ ಯುವ ಜನತೆ, ವಿದ್ಯಾರ್ಥಿಗಳಿಗೆ ಕಲಿಸುವ ಕಾರ್ಯ ಅಗತ್ಯವಾಗಿದೆ ಎಂದರು.

ಯಕ್ಷಗಾನ ಅಕಾಡೆಮಿಯ 2025 26ರ ಸಾಲಿನ ದತ್ತಿ ಪ್ರಶಸ್ತಿ ಪುರಸ್ಕೃತ ಯಕ್ಷಗುರು ದೇವದಾಸ ರಾವ್ ಕೂಡ್ಲಿ ಅವರನ್ನು ಅಭಿನಂದಿಸಲಾಯಿತು. ಸಭಾಧ್ಯಕ್ಷತೆಯನ್ನು ಯಕ್ಷಾಂತರಂಗ ಸಂಸ್ಥೆಯ ಅಧ್ಯಕ್ಷ ಗೀತಾನಂದ ಫೌಂಡೇಶನ್‌ನ ಪ್ರವರ್ತಕ ಆನಂದ. ಸಿ.ಕುಂದರ್ ವಹಿಸಿದ್ದರು. ಮಣೂರು ಶ್ರೀ ಮಹಾಲಿಂಗೇಶ್ವರ ದೇಗುಲದ ಅಧ್ಯಕ್ಷ ಸತೀಶ ಕುಂದರ್, ಉದ್ಯಮಿ ಸದಾನಂದ ಜಿ., ಕೋಟತಟ್ಟು ಪಿಡಿಒ ರವೀಂದ್ರ ರಾವ್, ಕೋಟತಟ್ಟು ಗ್ರಾ.ಪಂ. ಮಾಜಿ ಅಧ್ಯಕ್ಷ ಸತೀಶ ಕುಂದರ್, ಸಂಸ್ಥೆಯ ಕಾರ್ಯಾಧ್ಯಕ್ಷ ಸುಬ್ರಾಯ ಆಚಾರ್ಯ ಮಣೂರು ಉಸ್ಥಿತರಿದ್ದರು. ಕಾರ್ಯದರ್ಶಿ ಗುರು ಚಿತ್ರಪಾಡಿ ಕೃಷ್ಣಮೂರ್ತಿ ಉರಾಳ ಸ್ವಾಗತಿಸಿದರು, ಉನ್ಯಾಸಕ ರಾಘವೇಂದ್ರ ತುಂಗ ಕೋಟ ನಿರೂಪಿಸಿದರು.

